
ಗುರುವಾರ, ಸೆಪ್ಟೆಂಬರ್ 25, 2025| ₹ 7.00
prajavani.net prajavani
www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



Cheil-28809/25

ಗುರುವಾರ, ಸೆಪ್ಟೆಂಬರ್ 25, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ




ಬದುಕಿನ ಪರ್ವ ಮುಗಿಸಿದ ಭೈರಪ್ಪ



ಪ್ರಜಾವಾಣಿ
ಗುರುವಾರ • ಸೆಪ್ಟೆಂಬರ್ 25, 2025


ಬಾನು ನೆನಪಿನಂಗಳದಲ್ಲಿ...



• ಬಾನು ಮುಷ್ತಾಕ್

ಆವರಣ ಕಾದಂಬರಿ ಬರೆಯುವುದಕ್ಕೂ ಮೊದಲು ಎಸ್.ಎಲ್.ಭೈರಪ್ಪನವರು ಹಾಸನದಲ್ಲಿ ಒಂದು ಸಾಹಿತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಾನು ಆ ಕಾರ್ಯಕ್ರಮಕ್ಕೆ ತಡವಾಗಿ ಹೋಗಿದ್ದೆ. ಅಲ್ಲಿದ್ದ ಕೆಲವರು, ಭೈರಪ್ಪ ಅವರು ನನ್ನ ಬಗ್ಗೆ ವಿಚಾರಿಸಿದರು ಎಂದರು. ಕಾರ್ಯಕ್ರಮದ ನಂತರ ಅವರನ್ನು ಭೇಟಿಯಾದೆ. ಆಗ ಅವರು, 'ನಾನು ನಿಮ್ಮ ಮನೆಗೆ ಬರಬೇಕು ಎಂದಿದ್ದೇನೆ. ಆದರೆ, ಈಗಲೇ ಬರುವುದಿಲ್ಲ. ನಿಮ್ಮ ಮನೆಗೆ ಬಂದು ಒಂದು ವಾರ ಉಳಿಯುತ್ತೇನೆ' ಎಂದರು. ಆಗ ನನಗೆ ಗಲಿಬಿಲಿಯಾದರೂ, ಕೆಲ ದಿನಗಳ ನಂತರ ಆ ವಿಷಯ ಮರೆತುಬಿಟ್ಟಿದ್ದೆ.

ತಿಂಗಳ ನಂತರ ನಮ್ಮ ಮನೆಯ ಲ್ಯಾಂಡ್‌ಲೈನ್ ಫೋನ್‌ಗೆ ಒಂದು ಕರೆ ಬಂತು. ಆಕಡೆಯಿಂದ ಎಸ್.ಎಲ್.ಭೈರಪ್ಪ ಅವರು ಮಾತನಾಡುತ್ತಿದ್ದರು. ಇಂತಹ ದಿನ ನಿಮ್ಮ ಮನೆಗೆ ಬರುತ್ತೇನೆ, ಇಷ್ಟು ದಿನ ಇರುತ್ತೇನೆ ಎಂದು ಮಾಹಿತಿ ನೀಡಿದರು. ನನಗೆ ಗಾಬರಿಯಾಯಿತು. ಅವರಿಗೆ ಉಪಚಾರದ ವ್ಯವಸ್ಥೆ ಹೇಗೆ ಮಾಡಿಕೊಳ್ಳಬೇಕು ಎಂಬುದು ಗೊತ್ತಾಗದೆ ಗಲಿಬಿಲಿಯಾದೆ. ಅವರಿಗೆ ಕರೆ ಮಾಡಿ, ಯಾವ ರೀತಿಯ ವ್ಯವಸ್ಥೆ ಬೇಕು ಎಂದು ಕೇಳಿದೆ. ಭೈರಪ್ಪ ಅವರು, 'ನಾನು ಮಾಂಸಾಹಾರಕ್ಕೆ ಒಗ್ಗಿಕೊಂಡಿಲ್ಲ. ಸಸ್ಯಾಹಾರವಾದರೆ ಸಾಕು. ನಿಮ್ಮ ಅಡುಗೆ ಮನೆಯಲ್ಲಿ ನಿಮಗೆ ಮಾಡಿಕೊಳ್ಳುವ ಸಸ್ಯಾಹಾರವನ್ನೇ ನನಗೂ ನೀಡಿದರೆ ಸಾಕು' ಎಂದರು.



ಭೈರಪ್ಪ ಅವರು ಬಾನು ಅವರಿಗೆ ಬರೆದ ಪತ್ರ

ದಿನವೂ ಮಾಂಸಾಹಾರ ತಿನ್ನುವ ನಮ್ಮ ಮನೆಯಲ್ಲಿನ ಫ್ರಿಜ್‌ನಲ್ಲಿದ್ದ ಎಲ್ಲ ಮಾಂಸಾಹಾರವನ್ನು ಬಳಸಿ, ಖಾಲಿ ಮಾಡಿದೆ. ಫ್ರಿಜ್ ಸ್ವಚ್ಛಗೊಳಿಸಿ, ತಾಜಾ ತರಕಾರಿಗಳನ್ನು ತುಂಬಿಸಿದೆ. 15 ದಿನ ಮಾಂಸಾಹಾರ ಸಿಗುವುದಿಲ್ಲ ಎಂದು ಮಗ ತಾಹೀರ್ ಬಹಳ ತಕರಾರು ಮಾಡಿದ. ಅಜ್ಜಿಯ ಮನೆಗೆ ಹೋಗುತ್ತೇನೆ ಎಂದು ಬೆದರಿಕೆ ಹಾಕಿದ. ಅದ್ಯಾವುದಕ್ಕೂ ನಾವು ಬಗ್ಗದ ಕಾರಣ, ಸುಮ್ಮನಾದ. ನಮ್ಮ ಮನೆಯಲ್ಲಿ ಇದ್ದಷ್ಟೂ ದಿನ, ನನ್ನ ಅಡುಗೆ ಸಹಾಯಕಿ ಶಬಾನಾ ಮಾಡಿದ ತರಕಾರಿ ಪಲ್ಯ, ಸೊಪ್ಪಿನ ಸಾರನ್ನು ಭೈರಪ್ಪ ಅವರು ಬಹಳವಾಗಿ ಮೆಚ್ಚಿಕೊಂಡರು.

'ಕಾದಂಬರಿ ಒಂದರ ವಸ್ತುವಿಗೆ ಮಾಹಿತಿ ಸಂಗ್ರಹಿಸಲು ಬಂದಿದ್ದೇನೆ. ಮುಸ್ಲಿಂ ಸಾಂಸ್ಕೃತಿಕ ಹಿನ್ನೆಲೆಯ ಮನೆಯ ವಾತಾವರಣ ಮತ್ತು ಮುಸ್ಲಿಂ ಕುಟುಂಬದ ನಡವಳಿಕೆಗಳನ್ನು ಅವಲೋಕಿಸಬೇಕಾಗಿದೆ' ಎಂದು ತಿಳಿಸಿದರು. ಅವರ ಮಾತಿಗೆ ನಾನು ನಕ್ಕು, 'ನಮ್ಮಲ್ಲಿ ಅಂತಹ ಸಾಂಸ್ಕೃತಿಕ ವಾತಾವರಣ ಸಿಗುವುದಿಲ್ಲ. ಅಂತಹ ನೈಜ ವಾತಾವರಣ ಸಿಗುವ ಮನೆಯಲ್ಲಿ ನಿಮಗೆ ಸ್ವಾಗತವಿರುವುದಿಲ್ಲ' ಎಂದು ತಿಳಿಸಿದೆ. ಅವರು ನಮ್ಮ ಮನೆಯಲ್ಲೇ ಉಳಿಯುವುದಾಗಿ ತಿಳಿಸಿದರು.

ಖಬರಸ್ಥಾನ, ಮಸೀದಿ, ಧಾರ್ಮಿಕ ಕೇಂದ್ರ ನೋಡಬೇಕು ಎಂದು ಭೈರಪ್ಪ ಅವರು ಕೇಳಿದರು. ಮುಷ್ತಾಕ್ (ಬಾನು ಅವರ ಪತಿ) ಅವರು ಭೈರಪ್ಪ ಅವರನ್ನು ಖಬರಸ್ಥಾನಕ್ಕೆ ಕರೆದುಕೊಂಡು ಹೋದರು. ಭೈರಪ್ಪ ಅವರು ಖಬರಸ್ಥಾನವನ್ನು ಹೊರಗಿನಿಂದಲೂ ನೋಡಿದರು, ಗೋರಿಗಳ ನಡುವಣ ಪ್ರತಿ ಸಾಲು ಮತ್ತು ಖಬರಸ್ಥಾನದ ಮೂಲೆ–ಮೂಲೆಯಲ್ಲೂ ಓಡಾಡಿದರು. ಒಂದು ಗೋರಿಯ ಬಳಿ ನಿಂತು, 'ಗೋರಿಯ ಕಲ್ಲಿನ ಮೇಲೆ ಉರ್ದುವಿನಲ್ಲಿ ಏಕೆ ಬರೆದಿದ್ದಾರೆ' ಎಂದು ಮುಷ್ತಾಕರನ್ನು ಕೇಳಿದರಂತೆ. ಅವರು ಬಹಳ ಗಲಿಬಿಲಿಯಾದರಂತೆ. ಮನೆಗೆ ಬಂದ ನಂತರ, 'ನೀನೇ ಅವರ ಪ್ರಶ್ನೆಗೆ ಉತ್ತರಿಸು' ಎಂದು ನನಗೆ ಹೊಣೆ ಹೊರಿಸಿದರು. ನಾವು ನೀಡುತ್ತಿದ್ದ ಪ್ರತಿ ವಿವರಣೆಯನ್ನೂ ಭೈರಪ್ಪ ಅವರು ನೋಟ್ ಮಾಡಿಕೊಳ್ಳುತ್ತಿದ್ದರು.

ಹೊಳೆನರಸೀಪುರದ ರಸ್ತೆಯಲ್ಲಿರುವ ಮಸೀದಿಯಲ್ಲಿ ಮಹಿಳೆಯರೂ ನಮಾಜ್ ಮಾಡಲು ಅವಕಾಶವಿತ್ತು. ನಾನು ಅಲ್ಲಿಗೆ ನಮಾಜ್ ಮಾಡಲು ಹೋಗುತ್ತಿದ್ದೆ. ಮುಷ್ತಾಕ್ ಅವರು ಭೈರಪ್ಪ ಅವರನ್ನು ಆ ಮಸೀದಿಗೆ ಕರೆದುಕೊಂಡು ಹೋದರು. ಎಲ್ಲರಂತೆ ಅವರೂ ಕೈಕಾಲು ತೊಳೆದು, ಮಸೀದಿಯೊಳಗೆ ಹೋದರು. ಒಂದೆಡೆ ಕೂತು, ಇತರರು ನಮಾಜ್ ಮಾಡುವ ಬಗೆಯನ್ನು ಗಮನವಿಟ್ಟು ನೋಡಿದರು. ತಾವು ಗಮನಿಸಿದ್ದೆಲ್ಲವನ್ನೂ ನೋಟ್ ಮಾಡಿಕೊಳ್ಳುತ್ತಿದ್ದರು. ಮುಸ್ಲಿಮರ ಧಾರ್ಮಿಕ ವಿದ್ಯಾಸಂಸ್ಥೆಯನ್ನು ನೋಡಬೇಕು ಎಂದು ಕೇಳಿದಾಗ, ಮುಷ್ತಾಕ್ ಅವರು ಆಲೂರಿನಲ್ಲಿದ್ದ ವಿದ್ಯಾಸಂಸ್ಥೆಗೆ ಅವರನ್ನು ಕರೆದೊಯ್ದರು. ಅಲ್ಲಿನ ಶಿಕ್ಷಣ, ಬೋಧನೆ, ಇತರ ವ್ಯವಸ್ಥೆಗಳ ಬಗ್ಗೆ ಮಾಹಿತಿ ಪಡೆದು ನೋಟ್ ಮಾಡಿಕೊಂಡರು.

ಆಗೆಲ್ಲಾ ಜನರು ಮೊಬೈಲ್‌ಗೆ ಈಗಿನಷ್ಟು ಅಂಟಿಕೊಂಡಿರಲಿಲ್ಲ. ಭೈರಪ್ಪನವರೂ ನಮ್ಮೊಂದಿಗೆ ಒಟ್ಟಿಗೇ ಊಟಕ್ಕೆ ಕೂರುತ್ತಿದ್ದರು. ಅಂದಂದು ಅವರು ಸಂಗ್ರಹಿಸಿದ ಮಾಹಿತಿಗಳ ಬಗ್ಗೆ ನಮ್ಮೊಂದಿಗೆ ಚರ್ಚಿಸುತ್ತಿದ್ದರು. ಚರ್ಚೆ ಬಹಳ ಗಂಭೀರವಾಗಿ, ದೀರ್ಘವಾಗಿರುತ್ತಿತ್ತು. ಐಎಎಸ್‌ಗೆ ತಯಾರಿ ನಡೆಸುತ್ತಿದ್ದ ಸಮೀನಾಳೊಂದಿಗೆ ಭಾರತದ ಇತಿಹಾಸದ ಬಗ್ಗೆ ಚರ್ಚಿಸುತ್ತಿದ್ದರು. ಹೀಗೆ ಒಂದು ವಾರ ಅವರು ನಮ್ಮೊಂದಿಗೆ ಇದ್ದರು. ಆದರೆ, ಮುಸ್ಲಿಮರ ನೈಜ ಸಾಂಸ್ಕೃತಿಕ ಬದುಕು ಅವರಿಗೆ ಅಗೋಚರವಾಗಿಯೇ ಉಳಿಯಿತು. ಒಂದು ವಾರದಲ್ಲಿ ಒಂದು ಸಮುದಾಯವನ್ನು ಅರಿತುಕೊಳ್ಳುವುದು ಕಷ್ಟದ ಕೆಲಸ. ಆದರೆ, ಅವರ ತೀವ್ರ ಕುತೂಹಲ, ವಿಷಯ ಸಂಗ್ರಹಣೆಯ ದಾಹ ಮತ್ತು ಅಪರಿಚಿತ ಲೋಕಗಳ ಅನುಭವ ಗಳಿಸುವ ತೀವ್ರತೆ ಬಹಳ ವಿಶಿಷ್ಟವಾದುದು.

ಲೇಖಕಿ ತಮ್ಮ ಫೇಸ್‌ಬುಕ್ ಗೋಡೆಯಲ್ಲಿ ಬರೆದುಕೊಂಡ ನೆನಪಿನ ಸಂಗ್ರಹರೂಪ

'ಕಾದಂಬರಿಯಲ್ಲಿ ಉಲ್ಲೇಖಿಸಿದ ಸೋದರಿ ನಾನೇ'



ಅವರು ಮುಸ್ಲಿಂ ಲೋಕದ ಹೊರ ತೊಗಟೆಯ ಅರಿವನ್ನಷ್ಟೇ ಪಡೆಯುತ್ತಿದ್ದಾರೆ. ಅದರ ಅನುಭವವನ್ನು ಪಡೆಯುವಲ್ಲಿ ಸೋಲುತ್ತಿದ್ದಾರೆ ಎಂದು ಅನಿಸುತ್ತಿತ್ತು. ಮುಸ್ಲಿಮರ ಬಗೆಗೆ ಅವರ ಗ್ರಹಿಕೆ, ಬರವಣಿಗೆಗಳಲ್ಲಿ ಮುಸ್ಲಿಂ ವಿರೋಧಿ ನಿಲುವು ನೆನಪಾಗಿ, ಅವರು ನಮ್ಮೊಂದಿಗೆ ಸಂಗ್ರಹಿಸಿದ ಮಾಹಿತಿಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂದು ಯೋಚಿಸುತ್ತಿದ್ದೆ. ಆನಂತರ 'ಆವರಣ' ಪ್ರಕಟವಾಯಿತು. ಭೈರಪ್ಪ ಅವರು ತಮ್ಮ ಕೆಲವು ಪೂರ್ವನಿರ್ಧರಿತ ಪ್ರಮೇಯಗಳಿಗೆ ಅನುಕೂಲವಾಗುವ ಮತ್ತು ಅವಕ್ಕೆ ತಕ್ಕುದಾದ ನಿದರ್ಶನಗಳನ್ನು ಆಯ್ಕೆಮಾಡಿಕೊಂಡು, ಮುಸ್ಲಿಂ ಸಮುದಾಯದ ರಾಕ್ಷಸೀಕರಣದ ಬಿಂಬಕ್ಕೆ ಪೂರಕವಾದ ಚಿತ್ರಣವನ್ನು 'ಆವರಣ'ದಲ್ಲಿ ಕೊಟ್ಟಿದ್ದರು. ಆ ಕಾದಂಬರಿ ಬಹಳ ವಿವಾದವಾಗುತ್ತದೆ ಎಂದು ಅವರು ಅಂದುಕೊಂಡಿದ್ದರು. ಆದರೆ ಆಗಲಿಲ್ಲ.

ಕಾದಂಬರಿಯ ಪೀಠಿಕೆಯಲ್ಲಿ, 'ಒಬ್ಬ ಸೋದರಿಯ ಮನೆಯಲ್ಲಿ ಉಳಿದಿದ್ದೆ' ಎಂದು ಬರೆದಿದ್ದರು. ಆದರೆ, ಅದು ಯಾರು ಎಂದು ಹೇಳಿರದ ಕಾರಣ ಊಹಾಪೋಹಕ್ಕೆ ಕಾರಣವಾಗಿತ್ತು. ಅವರು ನಮ್ಮ ಮನೆಯಲ್ಲಿದ್ದ ಅವಧಿಯಲ್ಲಿ ಅನೇಕ ಲೇಖಕರು ಬಂದು, ಅವರೊಟ್ಟಿಗೆ ಫೋಟೊ ತೆಗೆಸಿಕೊಂಡಿದ್ದರು. ಹೀಗಾಗಿ ಭೈರಪ್ಪ ಅವರು ಇದ್ದದ್ದು ನಮ್ಮ ಮನೆಯಲ್ಲೇ ಎಂಬುದು ಎಲ್ಲರಿಗೂ ಗೊತ್ತಾಯಿತು.

ಭೈರಪ್ಪ: ಯಶಸ್ಸಿನ ಮೆಟ್ಟಿಲುಗಳು

1931 ಆಗಸ್ಟ್ 20:	ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇಶಿವರದಲ್ಲಿ ಜನನ
1958-60:	ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಅಧ್ಯಾಪಕ
1962:	ಬರೋಡದ ಸಯ್ಯಾಜಿರಾವ್ ವಿಶ್ವವಿದ್ಯಾಲಯದಕ್ಕೆ ಸಲ್ಲಿಸಿದ 'ಸತ್ಯ ಮತ್ತು ಸೌಂದರ್ಯ' ಮಹಾ ಪ್ರಬಂಧಕ್ಕೆ ಪಿಎಚ್.ಡಿ ಪದವಿ
1960-66:	ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ
1961:	'ಧರ್ಮಶ್ರೀ' ಮೊದಲ ಕಾದಂಬರಿ ಪ್ರಕಟ
1966:	'ವಂಶವೃಕ್ಷ' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
1967-1971	ನವದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಶಿಕ್ಷಣ ಸಂಸ್ಥೆಯಲ್ಲಿ ಸಹ ಪ್ರಾಧ್ಯಾಪಕ
1975:	'ದಾಟು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
1991:	ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತಿ
1996:	'ಭಿತ್ತಿ' ಆತ್ಮಕಥನ ಪ್ರಕಟ
1999:	ಕನಕಪುರದಲ್ಲಿ ನಡೆದ 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ
2005:	ಕರ್ನಾಟಕ ಸರ್ಕಾರ ನೀಡುವ ಪಂಪ ಪ್ರಶಸ್ತಿ
2007:	ಗುಲಬರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್
2010:	'ಸರಸ್ವತಿ ಸಮ್ಮಾನ್' ಪ್ರಶಸ್ತಿ
2011:	ಕನ್ನಡ ವಿಶ್ವ ವಿದ್ಯಾಲಯದ 'ನಾಡೋಜ' ಗೌರವ ಪದವಿ
2014:	ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ
2014:	ನ್ಯಾಷನಲ್ ರೀಸರ್ಚ್ ಪ್ರೊಫೆಸರ್
2017:	ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ ಪ್ರಶಸ್ತಿ'
2015:	ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಗೌರವಕ್ಕೆ ಭಾಜನ
2016:	'ಪದ್ಮಶ್ರೀ ಪ್ರಶಸ್ತಿ'ಗೆ ಭಾಜನ
2023:	'ಪದ್ಮಭೂಷಣ ಪ್ರಶಸ್ತಿ' ಗೌರವ

ಪ್ರಮುಖ ಕಾದಂಬರಿಗಳು

ಮತದಾನ, ವಂಶವೃಕ್ಷ (1965), ಜಲಪಾತ (1967), ನಾಯಿನೆರಳು (1968), ತಬ್ಬಲಿಯು ನೀನಾದೆ ಮಗನೆ (1970), ಗೃಹಭಂಗ (1970), ನಿರಾಕರಣ (1971), ಗ್ರಹಣ (1972), ದಾಟು (1973), ಅನ್ವೇಷಣ (1976), ಪರ್ವ (1979), ನೆಲೆ (1983), ಸಾಕ್ಷಿ (1986), ಅಂಚು (1990), ತಂತು (1993), ಸಾರ್ಥ (1998), ಮಂದ್ರ (2002), ಆವರಣ (2007), ಕವಲು (2010), ಯಾನ (2014), ಉತ್ತರಕಾಂಡ (2017)

ಚಲನಚಿತ್ರವಾಗಿರುವ ಕಾದಂಬರಿಗಳು

- ವಂಶವೃಕ್ಷ - 1972
- ತಬ್ಬಲಿಯು ನೀನಾದೆ ಮಗನೆ- 1977
- ಮತದಾನ- 2001
- ನಾಯಿ ನೆರಳು- 2006

ಕಿರುತೆರೆ ಧಾರಾವಾಹಿಯಾದ ಕಾದಂಬರಿಗಳು

- ಗೃಹಭಂಗ
- ದಾಟು (ಹಿಂದಿ)

ಸ್ವಗ್ರಾಮ ಸಂತೇಶಿವರದೊಂದಿಗೆ ಅವಿನಾಭಾವದ ನಂಟು

ಹುಟ್ಟೂರಿನ 'ಭಗೀರಥ'

ಪ್ರಜಾವಾಣಿ ವಾರ್ತೆ

ಹಾಸನ: 'ಈ ಭಾಗದ ರೈತರ ದಶಕದ ಕನಸು ಈಡೇರಿದೆ. ನಾನು ನನ್ನ ಹುಟ್ಟೂರಿನ ಜನರಿಗೆ ಶಾಶ್ವತ ಯೋಜನೆ ಮಾಡಬೇಕೆನ್ನುವ ಉದ್ದೇಶದಿಂದ ಈ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಹಂಗಾಮಿನಿಂದಲೇ ಗ್ರಾಮದ ಕೆರೆಗೆ ನೀರು ಬರುತ್ತಿದೆ. ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ'.

– ಎಸ್.ಎಲ್. ಭೈರಪ್ಪನವರು ಚನ್ನರಾಯಪಟ್ಟಣ ತಾಲ್ಲೂಕಿನ ತಮ್ಮ ಹುಟ್ಟೂರು ಸಂತೇಶಿವರದಲ್ಲಿ ಆಡಿದ್ದ ಮಾತುಗಳಿವು.

ಊರಿನ ಬಗ್ಗೆ ಭೈರಪ್ಪ ಹೊಂದಿದ್ದ ಅಭಿಮಾನವನ್ನು ಇಂದಿಗೂ ಜನ ಸ್ಮರಿಸುತ್ತಿದ್ದಾರೆ. ರೈತಾಪಿ ಜನರ ಅನುಕೂಲಕ್ಕಾಗಿ ಹಟ ಹಿಡಿದು ಹುಟ್ಟೂರಿನ ಕೆರೆ ತುಂಬಿಸಿದ ಭಗೀರಥ ಎನ್ನುವ ಬಿರುದನ್ನೂ ಅವರು ಪಡೆದಿದ್ದಾರೆ.

ದಶಕಗಳ ಕಾಲ ಈ ಭಾಗದ ಕೆರೆಗಳು ತುಂಬದೇ ರೈತರು ಸಂಕಷ್ಟದಲ್ಲಿದ್ದರು. ಇದನ್ನು ಮನಗಂಡ ಭೈರಪ್ಪ, ಏತ ನೀರಾವರಿ ಅನುಷ್ಠಾನಕ್ಕೆ ಅನುದಾನ ತರುವ ಪ್ರಯತ್ನ ಆರಂಭಿಸಿದರು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರಲ್ಲಿ ಮನವಿ ಮಾಡಿ ₹25 ಕೋಟಿ ಬಿಡುಗಡೆ ಮಾಡಿಸುವಲ್ಲಿ ಪರಿಶ್ರಮ ಪಟ್ಟಿದ್ದರು.

ನಂತರ ಮುಖ್ಯಮಂತ್ರಿಯಾದ ಬಸವರಾಜ ಬೊಮ್ಮಾಯಿ ಅವರ ಸಹಕಾರದಿಂದ ಯೋಜನೆಗೆ ಅನುಮೋದನೆ ದೊರೆಯಿತು. ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಣ ಬಿಡುಗಡೆ ಮಾಡುವ ಮೂಲಕ ಯೋಜನೆ ಅನುಷ್ಠಾನಗೊಂಡಿದೆ. ಈ ಹಂಗಾಮಿನಲ್ಲಿ ಸಂತೇಶಿವರ ಹಾಗೂ ಅಗ್ರಹಾರ ಬೆಳಗುಲಿ ಕೆರೆಗಳಿಗೆ ನೀರು ಹರಿಸಲಾಗಿದೆ.

ಹೇಮಾವತಿ ಮುಖ್ಯನಾಲೆಯ ಕಾರೇಹಳ್ಳಿ ಬಳಿಯ ಜಾಬ್‌ಘಟ್ಟ ಗ್ರಾಮದ ನಾಗಮಂಗಲ ಉಪ ನಾಲೆಯಿಂದ ಸುಮಾರು 11 ಕಿ.ಮೀ. ಪೈಪ್‌ಲೈನ್ ಮಾಡಲಾಗಿದೆ. ಅಲ್ಲಿಂದ ನೀರು ತರುವ ಮೂಲಕ ರಾಂಪುರ ಗೇಟ್ ಬಳಿ ಇರುವ ವಿತರಣಾ ತೊಟ್ಟಿಯಿಂದ ಸಂತೇಶಿವರ ಹಾಗೂ ಅಗ್ರಹಾರ ಬೆಳಗುಲಿ ಗ್ರಾಮದ ಕೆರೆಗಳಿಗೆ ನೀರು ಹರಿಸಲಾಗಿದೆ. ಯೋಜನೆಯಿಂದ 20ಕ್ಕೂ ಹೆಚ್ಚು ಗ್ರಾಮಗಳಿಗೆ ಅನುಕೂಲವಾಗುತ್ತಿದೆ.

ರೈತರ ಮನವೊಲಿಸಿದ ಭೈರಪ್ಪ: ಕಾರೇಹಳ್ಳಿ ಸಮೀಪ ಪೈಪ್‌ಲೈನ್ ಕಾಮಗಾರಿ ನಡೆಸಲು ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಆದರೆ ಭೈರಪ್ಪನವರೇ ಸ್ವತಃ ರೈತರನ್ನು ಭೇಟಿಯಾಗಿ ಮನವೊಲಿಸಿದ್ದರು.

ಸಂತೇಶಿವರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಬಂದಿದ್ದ ಭೈರಪ್ಪ, ಕುಟುಂಬದವರೊಂದಿಗೆ ಕೆರೆ ವೀಕ್ಷಿಸಿ ಸಂತಸಪಟ್ಟಿದ್ದರು.

ನಾನು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಭೈರಪ್ಪನವರ ಮನವಿಯಂತೆ ಸಂತೇಶಿವರ ಹಾಗೂ ಅಗ್ರಹಾರ ಬೆಳಗುಲಿ ಕೆರೆಗಳನ್ನು ತುಂಬಿಸುವ ಯೋಜನೆಗೆ ಅನುಮೋದನೆ ನೀಡಲಾಗಿತ್ತು

ಬಸವರಾಜ್ ಬೊಮ್ಮಾಯಿ, ಸಂಸದ

ಇದು ಶಾಶ್ವತ ಯೋಜನೆಯಾಗಿದ್ದು, ಮುಂದಿನ ತಲೆಮಾರಿನವರೂ ನೆನೆಯುತ್ತಾರೆ. ಈ ಯೋಜನೆಗೆ ಎಸ್.ಎಲ್. ಭೈರಪ್ಪ ಏತ ನೀರಾವರಿ ಯೋಜನೆ ಎಂದು ಹೆಸರಿಡುವಂತೆ ಸರ್ಕಾರವನ್ನು ಕೋರಿದ್ದೇನೆ

ಸಿ.ಎನ್. ಬಾಲಕೃಷ್ಣ, ಶಾಸಕ



ಕಾದಂಬರಿಗಳಲ್ಲಿ ತವರೂರ ಚಿತ್ರಣ

'ಕಾದಂಬರಿಗಳಲ್ಲಿ ಯಾವುದಾದರೂ ಒಂದು ಹಳ್ಳಿಯ ಚಿತ್ರಣ ಕೊಡಬೇಕು. ಹಳ್ಳಿ ಭಾಷೆ ಬಳಸಬೇಕು ಎಂದರೆ ನಾನು ಹುಟ್ಟಿದ ಹಾಸನ ಜಿಲ್ಲೆಯ ಹಳ್ಳಿ, ಭಾಷೆ ಚಿತ್ರಣ ಕೊಟ್ಟಿದ್ದೇನೆ. ನನಗೆ ಪಕ್ಕದ ಜಿಲ್ಲೆಯ ಹಳ್ಳಿ, ಭಾಷೆಯ ಚಿತ್ರಣ ಗೊತ್ತಿಲ್ಲ.'

– 2022ರಲ್ಲಿ ನಗರದಲ್ಲಿ ಆಯೋಜಿಸಿದ್ದ ಹೊಯ್ಸಳ ಸಾಹಿತ್ಯೋತ್ಸವದಲ್ಲಿ ಭೈರಪ್ಪ ಅವರು ಹೇಳಿದ್ದ ಈ ಮಾತುಗಳು, ತವರೂರಿನ ಅಭಿಮಾನ ತೋರಿಸಿದ್ದವು.

'ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋದರೆ ಭಾಷೆಯ ಛಾಯೆ ಬದಲಾಗುತ್ತದೆ. ಭಾಷಾ ತಜ್ಞರ ಪ್ರಕಾರ, 16 ಮೈಲಿಯವರೆಗೆ ಒಂದು ಭಾಷೆ ಇದ್ದರೆ, ನಂತರ ಅದರ ಛಾಯೆ ಬದಲಾಯಿಸುತ್ತದೆ. ಆದರೆ ಈಗ ಸೀಮೆಯ ಅಂತರ, ಭಾಷೆ ಒಂದಾಗಿದೆ' ಎಂದಿದ್ದರು.

'ನನ್ನ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಹುಟ್ಟೂರು ಸಂತೇಶಿವರ, ನುಗ್ಗೇಹಳ್ಳಿ, ಬಾಗೂರು ಹಾಗೂ ಗೊರೂರಿನಲ್ಲಿ ಪೂರ್ಣಗೊಳಿಸಿದೆ. ನಾನು ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟೇ ಸಾಧನೆ ಮಾಡಿದ್ದರೂ ಹುಟ್ಟೂರು ಎಂಬ ಅಭಿಮಾನ ನನ್ನನ್ನು ಬಿಡಲಿಲ್ಲ. ಇಂದಿಗೂ ನನ್ನನ್ನು ಸಂತೇಶಿವರದ ಎಸ್.ಎಲ್. ಭೈರಪ್ಪ ಎಂದೇ ಕರೆಯುತ್ತಾರೆ' ಎಂದು ಹೆಮ್ಮೆಯಿಂದ ಹೇಳಿದ್ದರು.

ತೀವ್ರ ದುಃಖವಾಗಿದೆ: ಮುರ್ಮು



ನವದೆಹಲಿ (ಪಿಟಿಐ): ಸಾಹಿತ್ಯ, ತತ್ವಶಾಸ್ತ್ರ, ಸಂಸ್ಕೃತಿ ಹಾಗೂ ಬೌದ್ಧಿಕ ವಲಯಕ್ಕೆ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರು ಗಮನಾರ್ಹ ಕೊಡುಗೆ ನೀಡಿದ್ದಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಭೈರಪ್ಪ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಅವರು, ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಜಾಗತಿಕ ಮಟ್ಟದಲ್ಲಿಯೂ ಪ್ರಸಿದ್ಧಿಗೆ ತಂದಿದ್ದರು ಎಂದು 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.


ಕನ್ನಡ ಸಾಹಿತ್ಯ ಲೋಕದ ಶ್ರೇಷ್ಠ ವ್ಯಕ್ತಿಯ ನಿಧನದಿಂದ ತೀವ್ರ ದುಃಖವಾಗಿದೆ. ಅವರ ಕೊಡುಗೆ ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡಲಿದೆ ಎಂದಿದ್ದಾರೆ.

'ಜನರ ಅಂತಃಸಾಕ್ಷಿ ಕಲಕಿದ್ದ ಧೀಮಂತ'

ನವದೆಹಲಿ (ಪಿಟಿಐ): 'ಕನ್ನಡದ ಖ್ಯಾತ ಕಾದಂಬರಿಕಾರ ಹಾಗೂ ತತ್ವಜ್ಞಾನಿ ಎಸ್.ಎಲ್.ಭೈರಪ್ಪ ಅವರದು ಅಸಾಧಾರಣ ವ್ಯಕ್ತಿತ್ವ. ಜನರ ಅಂತಃಸಾಕ್ಷಿಯನ್ನು ಕಲಕಿದ್ದ ಮೇರು ವ್ಯಕ್ತಿಯಾಗಿದ್ದ ಭೈರಪ್ಪ ಅವರು ಭಾರತದ ಆತ್ಮವನ್ನು ಆಳವಾಗಿ ಪರಿಶೋಧಿಸಿದ ಧೀಮಂತ' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಎಸ್.ಎಲ್.ಭೈರಪ್ಪ ಅವರ ನಿಧನಕ್ಕೆ ಸಂತಾಪ ಸೂಚಿಸಿ 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಈ ಮಾತು ಹೇಳಿರುವ ಅವರು, 'ಭೈರಪ್ಪ ಅವರು ನಿರ್ಭೀತ ಹಾಗೂ ಕಾಲಾತೀತ ಚಿಂತಕ. ವಿಚಾರ ಪ್ರಚೋದಕ ಕೃತಿಗಳ ಮೂಲಕ ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದರು' ಎಂದಿದ್ದಾರೆ.

'ಅವರ ಬರಹಗಳು ಅನೇಕ ಪೀಳಿಗೆಗಳಿಗೆ ಸ್ಫೂರ್ತಿಯಾಗಿದ್ದವು. ಸಮಾಜದೊಂದಿಗೆ ಮುಖಾಮುಖಿಯಾಗುವಂತೆ ಪ್ರೇರೇಪಿಸಿದ್ದವು' ಎಂದು ಶೋಕಿಸಿದ್ದಾರೆ.



ಸಾಹಿತ್ಯ ಪ್ರಪಂಚಕ್ಕೆ ಉತ್ಕೃಷ್ಟ ಕಾದಂಬರಿಗಳ ನೀಡಿ, ಲಕ್ಷಾಂತರ ಓದುಗರ ಮನಗೆದ್ದಿದ್ದ, ಭೈರಪ್ಪನವರ ಅಗಲಿಕೆ ಸಾರಸ್ವತ ಲೋಕಕ್ಕೆ ಭರಿಸಲಾಗದ ನಷ್ಟ

ಎಚ್.ಡಿ. ದೇವೇಗೌಡ, ರಾಜ್ಯ ಸಭೆ ಸದಸ್ಯ

ಭೈರಪ್ಪನವರ ನಿಧನ ನೋವು ತಂದಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ತಮ್ಮ ಆಪ್ತವೆನಿಸುವ ಬರಹ ಶೈಲಿಯಿಂದಾಗಿ ಅಪಾರ ಓದುಗರನ್ನು ಹೊಂದಿದ್ದರು.

ಸಿದ್ದರಾಮಯ್ಯ, ಮುಖ್ಯಮಂತ್ರಿ


ಸಾಹಿತ್ಯದ ಸಾಕ್ಷಿಪ್ರಜ್ಞೆಯಾಗಿದ್ದ ಭೈರಪ್ಪನವರು, ನಾಡಿನ ಶ್ರೀಮಂತ ಇತಿಹಾಸ ಹಾಗೂ ಸಂಸ್ಕೃತಿಯನ್ನು ಪರಿಚಯಿಸುವ ಮೂಲಕ ತಮ್ಮದೇ ಛಾಪು ಮೂಡಿಸಿದ್ದಾರೆ.

ದತ್ತಾತ್ರೇಯ ಹೊಸಬಾಳೆ, ಸರಕಾರ್ಯವಾಹ, ಆರ್‌ಎಸ್‌ಎಸ್

ಭೈರಪ್ಪ ಅವರು ಕನ್ನಡದ ಬಹುಮಾನ್ಯ ಲೇಖಕರು. ಕನ್ನಡ ಸಾಹಿತ್ಯ ಲೋಕದಲ್ಲಿ ಓದುಗ ಪ್ರಪಂಚವನ್ನು ಬಹು ದೊಡ್ಡ ಪ್ರಮಾಣದಲ್ಲಿ ಬೆಳೆಸಿದರು. ತಾತ್ವಿಕವಾಗಿ ಭಿನ್ನ ನೆಲೆಯಲ್ಲಿ ಬರೆಯುತ್ತಿದ್ದ ಲೇಖಕರಾದರೂ, ಮಾನವೀಯ ಸಂಬಂಧಗಳನ್ನು ಗೌರವದಲ್ಲಿ ನಡೆಸಿಕೊಳ್ಳುತ್ತಿದ್ದ ಅಪ್ಪಟ ಮಾನವತಾವಾದಿ. 'ಗೃಹಭಂಗ' ಅವರ ಅನುಭವಾತ್ಮಕ ನೆಲೆಯ ಬಹುಮಾನ್ಯ ಕಾದಂಬರಿ.

ಎಸ್.ಜಿ. ಸಿದ್ಧರಾಮಯ್ಯ, ಸಾಹಿತಿ


ಚಿತ್ರಪಟದಲ್ಲಿ...





















1. ಯೌವನದ ದಿನಗಳಲ್ಲಿ ಎಸ್.ಎಲ್ ಭೈರಪ್ಪ
2. ಪತ್ನಿ ಸರಸ್ವತಿ ಅವರೊಂದಿಗೆ
3. ಸಂಗೀತ ದಿಗ್ಗಜೆ ಗಂಗಜ್ಜಿಯ ಕುಶಲೋಪರಿ
4. ತತ್ವಶಾಸ್ತ್ರದ ಪ್ರಾಧ್ಯಾಪಕ
5. ಕವಿ ಚೆನ್ನವೀರ ಕಣವಿ ಅವರೊಂದಿಗೆ
6. 'ಪ್ರಜಾವಾಣಿ' ಓದಿನಲ್ಲಿ ನಿರತ
7. ಚಿತ್ರ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ಸಮಾರಂಭದಲ್ಲಿ ಪಾಲ್ಗೊಂಡಾಗ
8. ಧಾರವಾಡ ಸಾಹಿತ್ಯ ಸಂಭ್ರಮದಲ್ಲಿ ಯು.ಆರ್. ಅನಂತಮೂರ್ತಿ ಅವರೊಂದಿಗೆ ಹಸ್ತಲಾಘವ
9. ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಅವರಿಂದ ಮಾಸ್ತಿ ಪ್ರಶಸ್ತಿ ಪಡೆದಾಗ... ಹಾ.ಮಾ. ನಾಯಕ ಅವರು ಚಿತ್ರದಲ್ಲಿದ್ದಾರೆ

ಮೂರು ಸಾಕ್ಷ್ಯಚಿತ್ರ; ನೂರಾರು ಅನುಭವ

• ಪಿ.ಶೇಷಾದ್ರಿ

ಕಳೆದ 25 ವರ್ಷಗಳಲ್ಲಿ ಅವರ ಕುರಿತ ಸಾಕ್ಷ್ಯಚಿತ್ರಗಳಿಗಾಗಿ ಮೂರು ಬಾರಿ ಸಂದರ್ಶಿಸಿದ್ದೇನೆ. ಆ ಭೇಟಿ ಮನಸ್ಸಿನಲ್ಲಿ ಇನ್ನೂ ಸ್ಫುಟವಾಗಿದೆ. ಅವರದ್ದು ನಿಗೂಢವಾದ ವ್ಯಕ್ತಿತ್ವ. ಅವರೊಂದು ಜ್ಞಾನಭಂಡಾರ. ಒಬ್ಬ ಮನುಷ್ಯನ ತಲೆಯೊಳಗೆ ಅಷ್ಟೆಲ್ಲಾ ವಿಚಾರಗಳು ಇರಲು ಸಾಧ್ಯವೇ ಎಂದು ಅಚ್ಚರಿಹುಟ್ಟಿಸುವವರು. ಅವರ ವ್ಯಕ್ತಿತ್ವವೇ ಸೋಜಿಗ. ಭೈರಪ್ಪನವರು ಬದುಕಿನಲ್ಲಿ, ಬಾಲ್ಯದಲ್ಲಿ ತುಂಬಾ ಕಷ್ಟಪಟ್ಟವರು ಎನ್ನುವುದು ಅವರ ಓದುಗರಿಗೆ ಗೊತ್ತು. ಎಲ್ಲರೂ ಕಷ್ಟ ಅನುಭವಿಸಿರುತ್ತಾರೆ. ಆದರೆ ಅವರು ಆ ಕಷ್ಟವನ್ನು ಕ್ರಿಯಾಶೀಲತೆಯಿಂದ ಬಳಸಿಕೊಂಡರು. ಎಲ್ಲರಿಗೂ ಇದು ಏಕೆ ಸಾಧ್ಯವಿಲ್ಲ?

ನಾನು ಹಾಗೂ ಅವರು ಬಯಲುಸೀಮೆಯಿಂದ ಬಂದವರು. ನನ್ನ ಊರು ದಂಡಿನಶಿವರ. ಅವರ ಊರು ಸಂತೇಶಿವರ. ಇವೆರಡೂ 12 ಕಿ.ಮೀ. ಅಂತರದಲ್ಲಿವೆ. 'ನಿಮ್ಮೂರು ಭೈರಪ್ಪನವರ ಊರಿಗೆ ಹತ್ತಿರವೇ' ಎಂದರೆ ಹೆಮ್ಮೆಯಿಂದ 'ಹೌದು' ಎನ್ನುತ್ತಿದ್ದೆ. ಹೈಸ್ಕೂಲ್ ದಿನಗಳಲ್ಲಿ ಮೇಷ್ಟ್ರು ಅವರ ಬಗ್ಗೆ ಹೇಳುತ್ತಾ ನಮ್ಮೂರಿನವರು ಎಂದಾಗ, ಖ್ಯಾತ ಸಾಹಿತಿಯೊಬ್ಬರು ನಮ್ಮೂರಿನ ಹತ್ತಿರದಲ್ಲೇ ಇದ್ದಾರೆ ಎಂದು ಖುಷಿಯಾಗಿತ್ತು. ಹೀಗೆ ಅವರ ಕೃತಿಗಳಿಗೆ ತೆರೆದುಕೊಂಡಿದ್ದೆ. ಅವರ ಕೃತಿಗಳಲ್ಲಿನ ಘಟನೆಗಳು ನಮ್ಮೂರಿನಲ್ಲೇ ನಡೆದಿವೆಯೋ ಎನ್ನುವಷ್ಟು ಆಪ್ತವಾದವು. ಆ ಭಾಷೆ, ಪಾತ್ರಗಳು, ಘಟನೆಗಳು ಎಲ್ಲವೂ ನಮ್ಮ ಸುತ್ತಮುತ್ತಲೇ ಇರುವಂಥ ಭಾವನೆ. ಹೀಗೆ ನಾನೂ ಬರೆಯಬಹುದು ಎನ್ನುವ ಭ್ರಮೆಯಲ್ಲಿ ಬರೆಯಲು ಆರಂಭಿಸಿ ಸೋತ ವ್ಯಕ್ತಿ ನಾನು.

ನನ್ನ 'ಮುನ್ನುಡಿ' ಚಿತ್ರವನ್ನು ಭೈರಪ್ಪನವರಿಗೆ ತೋರಿಸಬೇಕು ಎನ್ನುವ ಆಸೆ ಹುಟ್ಟಿತ್ತು. ಕೃಷ್ಣಮೂರ್ತಿ ಹನೂರು ಅವರನ್ನು ಕೇಳಿದಾಗ, ಅವರು ಕರೆದುಕೊಂಡು ಬಂದರು. ಸಿನಿಮಾ ನೋಡಿ ಆಚೆ ಬಂದು ನನ್ನ ಕಣ್ಣನ್ನು ಸುಮಾರು 10 ಸೆಕೆಂಡು ದಿಟ್ಟಿಸಿ ನೋಡಿ 'ಒಳ್ಳೆಯದಾಗಲಿ' ಎಂದಿದ್ದರು. 25 ವರ್ಷಗಳ ಹಿಂದೆ ಅವರ ಬಗ್ಗೆ ಒಂದು ಸಾಕ್ಷ್ಯಚಿತ್ರ ಮಾಡುವಂತೆ



ಮೈಸೂರಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೇಜಸ್ ಕೇಳಿಕೊಂಡಿತು. ಆ ಸಂದರ್ಭದಲ್ಲಿ ನನ್ನ 'ಮುನ್ನುಡಿ' ಸಿನಿಮಾಕ್ಕೆ ರಾಷ್ಟ್ರ ಪ್ರಶಸ್ತಿ ಬಂದಿತ್ತು. ಸಾಕ್ಷ್ಯಚಿತ್ರಕ್ಕೆ ಒಪ್ಪಿಕೊಳ್ಳುತ್ತಾರೆಯೇ ಇಲ್ಲವೇ ಎನ್ನುವ ಅನುಮಾನದಲ್ಲೇ ಅವಕಾಶ ಕೋರಿದ್ದೆ. ಒಪ್ಪಿಕೊಂಡ ದಿನ ರಾತ್ರಿ ನಿದ್ದೆಯಿಲ್ಲ. ಅವರ ಇಪ್ಪತ್ತೂ ಕಾದಂಬರಿಗಳನ್ನು ತರಿಸಿ ಓದಿದ್ದೆ. ನೂರು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು, ಅವರ ಊರಿಗೆ ಅವರೊಂದಿಗೆ ಕಾರಿನಲ್ಲಿ ನಾನು ಡ್ರೈವ್ ಮಾಡುತ್ತಾ ಪಯಣಿಸಿದೆ. ಆ ಪಯಣದಲ್ಲೂ ಸಂದರ್ಶನ. ಅವರು ಓಡಾಡಿದ, ಒಡನಾಡಿದ ಓಣಿಗಳು, ಜನರನ್ನು ಭೇಟಿಯಾಗಿ ಮಾತನಾಡಿಸಿದ್ದೆ.

2009ರಲ್ಲಿ ದೂರದರ್ಶನಕ್ಕಾಗಿ 10 ನಿಮಿಷದ ಸಾಕ್ಷ್ಯಚಿತ್ರ ಮಾಡಿದ್ದೆ. 2018ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಗೆ 57 ನಿಮಿಷದ ಸಾಕ್ಷ್ಯಚಿತ್ರ ಮಾಡಿದ್ದೆ. ಈ ಅವಧಿಯಲ್ಲಿ ಅವರು ಇನ್ನೂ ನಾಲ್ಕು ಕಾದಂಬರಿಗಳ ಎತ್ತರಕ್ಕೇರಿದ್ದರು. ಅವರ ಆಲೋಚನೆಗಳು ಮತ್ತಷ್ಟು ಸ್ಫುಟವಾಗುತ್ತಿದ್ದವು. ಅವರ ಮಾತು, ಆಲೋಚನೆಗಳಲ್ಲಿ ಮುಕ್ತತೆಯಿತ್ತು. ಯಾವುದಕ್ಕೂ ಗಂಟುಬಿದ್ದವರಲ್ಲ. ನಾನೂ ಬದಲಾಗಬಾರದೇಕೆ ಎಂದು ಪ್ರಶ್ನಿಸುತ್ತಿದ್ದರು.

ಅವರ ಕಾದಂಬರಿಗಳನ್ನು ಸಿನಿಮಾ ಮಾಡಬೇಕು ಎನ್ನುವ ಆಸೆಯೂ ಇತ್ತು. 'ನಾಯಿನೆರಳು' ಮಾಡಬೇಕು ಎಂದು ಚಿತ್ರಕಥೆ ಮಾಡಿಕೊಂಡು ನಟ ಶಿವರಾಜ್‌ಕುಮಾರ್ ಅವರಿಗೆ ಕಥೆ ಹೇಳಿದ್ದೆ. ಅವರೂ ಒಪ್ಪಿದ್ದರು. ಆದರೆ ನಿರ್ಮಾಪಕರು ಸಿಗದೆ ಪ್ರಾಜೆಕ್ಟ್ ಸೆಟ್ಟೇರಲಿಲ್ಲ. ಆ ಸಮಯದಲ್ಲೇ ಗಿರೀಶ ಕಾಸರವಳ್ಳಿಯವರು ಸಿನಿಮಾ ಘೋಷಿಸಿದರು. ಬಳಿಕ 'ನಿರಾಕರಣ' ಮಾಡಬೇಕು ಎಂಬ ಆಸೆಯಿತ್ತು. 2009ರಲ್ಲಿ ವಿಷ್ಣುವರ್ಧನ್ ಅವರು ಸಾಯುವುದಕ್ಕಿಂತ ಆರು ತಿಂಗಳ ಮೊದಲು ಅವರಿಗೆ ಕಥೆ ಹೇಳಿದ್ದೆ. 'ವಂಶವೃಕ್ಷ'ದ ಮೂಲಕ ವಿಷ್ಣುವರ್ಧನ್ ಅವರ ಪ್ರವೇಶವಾಗಿತ್ತು. 'ನಿರಾಕರಣ'ದ ಪಾತ್ರ ಮಾಡುವುದರ ಮೂಲಕ ಇನ್ನಷ್ಟು ಎತ್ತರಕ್ಕೆ ಹೋಗುತ್ತೀರಿ ಎಂದಿದ್ದೆ. ಚಿತ್ರಕಥೆ ಕೇಳಿ ಅವರೂ ಮೆಚ್ಚಿಕೊಂಡಿದ್ದರು. ದುರದೃಷ್ಟವಶಾತ್ ಇದೂ ಆಗಲಿಲ್ಲ.

'ನಿರಾಕರಣ' ಕಥೆಯನ್ನು 1970–80ರ ದಶಕದಲ್ಲಿ ರಾಜ್‌ಕುಮಾರ್ ಅವರೇ ಮಾಡಬೇಕಿತ್ತು. ಆದರೆ ಆಗ ಭೈರಪ್ಪನವರು ಕಥೆಗಳನ್ನು ಚಲನಚಿತ್ರಕ್ಕೆ ಕೊಡುವುದಿಲ್ಲ ಎಂದಿದ್ದರಂತೆ. ಅವರೊಂದಿಗೆ ಆಪ್ತತೆ ಬೆಳೆದ ನಂತರ ನಾನು 'ನಿರಾಕರಣ' ಸಿನಿಮಾ ಮಾಡಬಹುದೇ ಎಂದು ಕೇಳಿದ್ದೆ. ಇದಕ್ಕೆ ಒಪ್ಪಿಗೆ ನೀಡಿದ್ದರು. ಈ ಸಂದರ್ಭದಲ್ಲೇ 'ಅಂಚು'ವನ್ನು ಸಿನಿಮಾ ಮಾಡಿ ಎನ್ನುತ್ತಿದ್ದರು. ಇತ್ತೀಚೆಗೆ ಶಿವರಾಜ್‌ಕುಮಾರ್ ಅವರು ಕಥೆ ಏನಾದರೂ ಇದೆಯೇ ಎಂದು ಕೇಳಿದ ಸಂದರ್ಭದಲ್ಲಿ 'ನಿರಾಕರಣ' ಉಲ್ಲೇಖಿಸಿದ್ದೆ. ಬುಧವಾರವಷ್ಟೇ 'ನಿರಾಕರಣ' ಬಗ್ಗೆ ಯೋಚಿಸುತ್ತಿದ್ದೆ. ಇದು ಕಾಕತಾಳೀಯ. ಅವರ ಕಾದಂಬರಿಗಳನ್ನು ಸಿನಿಮಾ ಮಾಡದೇ ಇದ್ದರೂ ಸಾಕ್ಷ್ಯಚಿತ್ರಗಳ ಮೂಲಕ ಬಹಳ ಹತ್ತಿರದಿಂದ ಕಂಡೆ.

(ನಿರೂಪಣೆ: ಅಭಿಲಾಷ್ ಪಿ.ಎಸ್.)

prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಫೈನಲ್‌ಗೆ ಭಾರತ

ಭಾರತ ತಂಡದ ಅಭಿಷೇಕ್ ಶರ್ಮಾ (75; 37ಎಸೆತ) ಬುಧವಾರ ನಡೆದ ಏಷ್ಯಾ ಕಪ್ ಟಿ20 ಟೂರ್ನಿಯ ಸೂಪರ್ ಫೋರ್ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಅಬ್ಬರಿಸಿದರು. 41 ರನ್‌ಗಳಿಂದ ಗೆದ್ದ ಭಾರತ ಫೈನಲ್ ಪ್ರವೇಶಿಸಿತು




ಗೊಂಡಾಲ್ ನೃತ್ಯ

ದಸರಾ ಅಂಗವಾಗಿ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಮಹಾರಾಷ್ಟ್ರದ ರೋಹಿಣಿ ಪಟೇಲ್ ತಂಡ 'ಗೊಂಡಾಲ್ ಜಾನಪದ ನೃತ್ಯ' ಪ್ರಸ್ತುತಪಡಿಸಿದರು

ಸೆನ್ಸೆಕ್ಸ್ 81,715 | ನಿಫ್ಟಿ 25,056 | $/₹ 88.75 | ಚಿನ್ನ (Std. 10g) ₹1,19,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,42,600 (ಬೆಂಗಳೂರು)

ಭಿತ್ತಿ ಉಳಿಸಿ ದೂರ ಸರಿದರು



ಭೈರಪ್ಪ ಪರ್ವಾಂತ್ಯ
1931-2025

ಚಿತ್ರ: ಬಿ.ಎಂ.ಕೇದಾರನಾಥ

• ಶಶಾಂಕ ಪರಾಶರ

ಭೈರಪ್ಪನವರ ಜೊತೆಗೆ ಕನ್ನಡ ಸಾರಸ್ವತಲೋಕದ ಒಂದು ಮಹಾಧ್ಯಾಯ ಅಂತ್ಯಗೊಂಡಿದೆ. ಮಹಾಚೇತನಗಳು ತಮ್ಮ ಅಂತ್ಯದ ಜೊತೆಗೆ ತುಂಬಲು ಸಾಧ್ಯವಿಲ್ಲದ ನಿರ್ವಾತವನ್ನು ಸೃಷ್ಟಿಸಿಬಿಡುತ್ತವೆ. ಭೈರಪ್ಪನವರ ನಿರ್ಗಮನವೂ ಸಾಹಿತ್ಯಲೋಕದಲ್ಲಿ ಅಂಥದೊಂದು ಖಾಲಿತನವನ್ನು ಸೃಷ್ಟಿಸಿದೆ. ಭೈರಪ್ಪ ಅವರು ತಮ್ಮ ಸುದೀರ್ಘ ಬದುಕಿನಲ್ಲಿ ಕನ್ನಡ ಸಾಹಿತ್ಯಲೋಕಕ್ಕೆ ಮತ್ತು ಸಹೃದಯರಿಗೆ ರಸಾನಂದದ ಜಲಪಾತವನ್ನೇ ಒದಗಿಸಿದ್ದಾರೆ.

ಕೇವಲ ಕಾದಂಬರಿಗಳನ್ನು ರಚಿಸುತ್ತೇನೆ ಎಂದು ಭೀಷ್ಮನಿಷ್ಠೆಯಿಂದ ಸಂಕಲ್ಪ ಮಾಡಿ ಬರೆದವರು ಭೈರಪ್ಪನವರು. ಸಾಹಿತ್ಯಕೃಷಿಯ ಪ್ರಾರಂಭದ ಅವಧಿಯಲ್ಲಿ ಸಣ್ಣಕತೆಗಳನ್ನು ಬರೆದರಾದರೂ ನಂತರ ತಮ್ಮ ಶಕ್ತಿ ಮತ್ತು ವಿಸ್ತಾರ ದೃಷ್ಟಿಗೆ ಅನುಕೂಲವಾಗುವಂತಹ ಕಾದಂಬರಿಯ ಪ್ರಕಾರವನ್ನೇ ಅವರ ಅಭಿವ್ಯಕ್ತಿಗೆ ಆರಿಸಿಕೊಂಡರು.

ತಾವು ಅಪಾರ ಪ್ರೀತಿ ಇಟ್ಟುಕೊಂಡಿದ್ದ ಹಿಂದೂಸ್ಥಾನಿ ಶೈಲಿಯ ಸಂಗೀತದಂತೆಯೇ ಮಾನವ ಸ್ವಭಾವದ ಹಲವು ಮಗ್ಗಲುಗಳನ್ನು ವಿಸ್ತಾರವಾಗಿ ಅನ್ವೇಷಿಸುವಂತಹ ರೀತಿಯಲ್ಲಿ ಕಾದಂಬರಿಗಳನ್ನು ರಚಿಸಿದರು. ಇವು ಭಾರತೀಯತೆಯ ಶ್ರುತಿಗೂ, ಜೀವನದ ಸತ್ಯ, ಶಿವ, ಸೌಂದರ್ಯಗಳ ಲಯಸಂಚಾರಕ್ಕೂ ಬದ್ಧವಾಗಿವೆ.

▸8

ಎಸ್.ಎಲ್.ಭೈರಪ್ಪ ಇನ್ನಿಲ್ಲ

ಮೈಸೂರು: 'ಪದ್ಮಭೂಷಣ', 'ಸರಸ್ವತಿ ಸಮ್ಮಾನ್' ಪುರಸ್ಕೃತ ಕಾದಂಬರಿಕಾರ ಪ್ರೊ.ಎಸ್.ಎಲ್.ಭೈರಪ್ಪ (94) ಅವರು ಹೃದಯಾಘಾತದಿಂದ ಬೆಂಗಳೂರಿನ ರಾಜರಾಜೇಶ್ವರಿನಗರದ ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಬುಧವಾರ ಮಧ್ಯಾಹ್ನ 2.38ಕ್ಕೆ ನಿಧನರಾದರು.

▸8

ಮತಕಳವು ವಿರುದ್ಧ ಹೋರಾಟಕ್ಕೆ ಪಣ • ಸಿಡಬ್ಲ್ಯುಸಿ ಸಮಿತಿಯ ನಿರ್ಣಯ

'ಎಸ್‌ಐಆರ್ ದೇಶಕ್ಕೆ ಮಾರಕ'

ಪಟ್ನಾ (ಪಿಟಿಐ): 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಒಂದು ಪಿತೂರಿಯಾಗಿದ್ದು, ನಮ್ಮ ಪ್ರಜಾಪ್ರಭುತ್ವಕ್ಕೆ ದೊಡ್ಡ ಬೆದರಿಕೆಯಾಗಿದೆ. ಈ ಪ್ರಕ್ರಿಯೆಯು ಅಧಿಕಾರಕ್ಕೆ ಅಂಟಿಕೊಳ್ಳುವ ಬಿಜೆಪಿಯ 'ಟೂಲ್‌ಕಿಟ್'ನ ಮತ್ತೊಂದು ಕೊಳಕು ತಂತ್ರವಾಗಿದೆ' ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳಲ್ಲಿ ಈ ಪ್ರತಿಪಾದನೆ ಮಾಡಿದೆ.

ಬಡವರು, ಕಾರ್ಮಿಕರು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಗುರಿಯನ್ನು ಎಸ್‌ಐಆರ್ ಮೂಲಕ ಸಾಧಿಸಲು ಬಿಜೆಪಿ ಹೊರಟಿದೆ. ಹೀಗಾಗಿ ಬಿಹಾರದಿಂದ ಎನ್‌ಡಿಎ ಅನ್ನು ಹೊರಹಾಕಲು ಜನರು ದೃಢ ನಿಶ್ಚಯ ಮಾಡಬೇಕಿದೆ. ಚುನಾವಣೆಯಲ್ಲಿ ಜನರು ತಮ್ಮ ಮತದಾನದ ಶಕ್ತಿಯನ್ನು ಪ್ರದರ್ಶಿಸಬೇಕಿದೆ ಎಂದು ತಿಳಿಸಿದೆ.

'ಈ ವಿಷಯ ಕುರಿತು ಕಾಂಗ್ರೆಸ್, ಸಂಸತ್ತಿನ ಒಳಗೆ ಮತ್ತು ಹೊರಗೆ ಹೋರಾಟವನ್ನು ಮುಂದುವರಿಸುತ್ತದೆ. ಈ ಮೂಲಕ ನಮ್ಮ ಮೂಲಭೂತ ಸಾಂವಿಧಾನಿಕ ಹಕ್ಕುಗಳ ರಕ್ಷಣೆ, ಮೀಸಲಾತಿ, ಸಾಮಾಜಿಕ ನ್ಯಾಯ ಮತ್ತು ಪ್ರತಿ ನಾಗರಿಕರಿಗೂ ಸವಲತ್ತುಗಳನ್ನು ತಲುಪಿಸುವುದನ್ನು ಖಚಿತಪಡಿಸಿಕೊಳ್ಳುತ್ತದೆ' ಎಂದು ಅದು ನಿರ್ಣಯದಲ್ಲಿ ಉಲ್ಲೇಖಿಸಿದೆ.

ಮತಕಳವಿನ ವಿರುದ್ಧ ಕಿಡಿ: ಮತಕಳವಿನ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ಸಿಡಬ್ಲ್ಯುಸಿ, 'ಇದು ಬಹುಮತ ಪಡೆಯಲು ಬಿಜೆಪಿ ನಡೆಸಿದ ವ್ಯವಸ್ಥಿತ ಮತ್ತು ಉದ್ದೇಶಪೂರ್ವಕ ಪಿತೂರಿಯಾಗಿದೆ. ಕದ್ದ ಮತಗಳಿಂದ ರಚನೆಯಾದ ಸರ್ಕಾರ ಯಾವುದೇ ನೈತಿಕತೆ ಹೊಂದಿರುವುದಿಲ್ಲ' ಎಂದು ದೂರಿದೆ.

'ಈ ಬಹುಮತವು ಸಾರ್ವಜನಿಕರ ನಂಬಿಕೆಯನ್ನು ಆಧರಿಸಿರಬೇಕು' ಎಂದು ಹೇಳಿದೆ.

▸7



ಸಿಡಬ್ಲ್ಯುಸಿ ಸಭೆಗೂ ಮುನ್ನ ನಡೆದ ಪಕ್ಷದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಧ್ವಜ ವಂದನೆ ಸಲ್ಲಿಸಿದರು –ಪಿಟಿಐ ಚಿತ್ರ

ಕಾಂಗ್ರೆಸ್‌ಗೆ ಇಂದೇಕೆ ಪಟ್ನಾ ನೆನಪಾಯಿತು? 85 ವರ್ಷಗಳ ನಂತರ ಅದು ಇಲ್ಲಿ ಸಿಡಬ್ಲ್ಯುಸಿ ಸಭೆ ನಡೆಸಿದ್ದರ ಹಿಂದೆ ರಾಜಕೀಯ ಲಾಭ ಪಡೆಯುವುದಲ್ಲದೆ ಮತ್ತೇನು ಉದ್ದೇಶವಿದೆ?

ರವಿಶಂಕರ್ ಪ್ರಸಾದ್, ಬಿಜೆಪಿ ನಾಯಕ

'ರಾಹುಲ್‌ರಿಂದ ಇನ್ನಷ್ಟು ಮಾಹಿತಿ ಸ್ಫೋಟ'

ರಾಹುಲ್ ಗಾಂಧಿ ಅವರು ಮತಕಳವಿಗೆ ಸಂಬಂಧಿಸಿದಂತೆ ಒಂದು ತಿಂಗಳಲ್ಲಿ ಇನ್ನಷ್ಟು ಮಾಹಿತಿಯನ್ನು ಬಹಿರಂಗಪಡಿಸಲಿದ್ದಾರೆ. ಅದು 'ಹೈಡ್ರೋಜನ್ ಬಾಂಬ್', 'ಮಿನಿ ಹೈಡ್ರೋಜನ್ ಬಾಂಬ್' ಮತ್ತು 'ಪ್ಲುಟೋನಿಯಂ ಬಾಂಬ್'ಗಳ ಸ್ಫೋಟದಂತಿರುತ್ತವೆ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಎನ್‌ಡಿಎ ಸರ್ಕಾರದ ಪತನಕ್ಕೆ ಕ್ಷಣಗಣನೆ ಆರಂಭವಾಗಿದೆ' ಎಂದ ಅವರು, ಬಿಹಾರದಲ್ಲಿ ಮಹಾಘಟಬಂಧನ್ ಸರ್ಕಾರ ರಚನೆಯಾಗಲಿದೆ ಎಂದು ಪ್ರತಿಪಾದನೆ ಮಾಡಿದರು.

'ಮತಕಳ್ಳತನ ಮತ್ತು ಮತದಾರರ ಪಟ್ಟಿಯಲ್ಲಿನ ಅಕ್ರಮಗಳು ಪ್ರಜಾಪ್ರಭುತ್ವದ ಅಡಿಪಾಯವನ್ನು ಮತ್ತು ಸಾರ್ವಜನಿಕರ ನಂಬಿಕೆಗಳನ್ನು ಅಲುಗಾಡಿಸಿವೆ. ಈ ಕೃತ್ಯವನ್ನು ಧೈರ್ಯದಿಂದ ಬಹಿರಂಗಪಡಿಸಿ, ಹೋರಾಡಿದ್ದಕ್ಕಾಗಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಮೆಚ್ಚುಗೆ ವ್ಯಕ್ತಪಡಿಸಿ ಸಿಡಬ್ಲ್ಯುಸಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು' ಎಂದು ವಿವರಿಸಿದರು.

ಭ್ರೂಣಹತ್ಯೆ ಜಾಲ ಆಂಧ್ರದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭ್ರೂಣ ಲಿಂಗ ಪತ್ತೆ ಮತ್ತು ಹತ್ಯೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳ ತಂಡವು ಆಂಧ್ರ ಪ್ರದೇಶದಲ್ಲಿ ರಹಸ್ಯ ಕಾರ್ಯಾಚರಣೆ ನಡೆಸಿದ್ದು, ಕರ್ನಾಟಕದ ಗರ್ಭಿಣಿಯರು ನೆರೆಯ ರಾಜ್ಯದಲ್ಲಿ ಗರ್ಭಪಾತ ಮಾಡಿಸಿಕೊಳ್ಳುತ್ತಿರುವುದು ಪತ್ತೆಯಾಗಿದೆ.

ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಕೊಡಮುರು ತಾಲ್ಲೂಕಿನ ಬಾಷಾ ನರ್ಸಿಂಗ್ ಹೋಂ ಮೇಲೆ ಕರ್ನಾಟಕ ಮತ್ತು ಆಂಧ್ರದ ವೈದ್ಯರ ತಂಡ ಕಾರ್ಯಾಚರಣೆ ನಡೆಸಿದಾಗ, ಭ್ರೂಣ ಹತ್ಯೆ ನಡೆಸುತ್ತಿರುವುದು ಖಚಿತಪಟ್ಟಿದೆ.

▸9

ಚಿನಕುರುಳಿ

ಪ್ರಕಾಶ್ ಶೆಟ್ಟಿ



39 ಮಂದಿಗೆ ನಿಗಮ– ಮಂಡಳಿ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ವಿನಯ್ ಕುಲಕರ್ಣಿ ಅವರ ಪತ್ನಿ ಶಿವಲೀಲಾ, ಮಾಜಿ ಶಾಸಕ ಎನ್. ಸಂಪಂಗಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಅಗಾ ಸುಲ್ತಾನ್, ಎಂ.ಎ. ಗಫೂರ್, ವಿಧಾನ ಪರಿಷತ್ ಮಾಜಿ ಸದಸ್ಯ ಕೆ. ಹರೀಶ್ ಕುಮಾರ್ ಸೇರಿದಂತೆ ಒಟ್ಟು 39 ಮಂದಿಗೆ ವಿವಿಧ ನಿಗಮ-ಮಂಡಳಿಗಳ ಅಧ್ಯಕ್ಷ –ಉಪಾಧ್ಯಕ್ಷ ಸ್ಥಾನವನ್ನು ಕಾಂಗ್ರೆಸ್ ಹೈಕಮಾಂಡ್ ಕರುಣಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ಬುಧವಾರ ಪಟ್ಟಿ ಪ್ರಕಟಿಸಿದ್ದಾರೆ.

ಧಾರವಾಡ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಯೋಗೀಶ್ ಗೌಡ ಕೊಲೆ ಆರೋಪದ ಮೇಲೆ ಶಾಸಕ ವಿನಯ್ ಕುಲಕರ್ಣಿ ಜೈಲಿನಲ್ಲಿರುವ ಕಾರಣಕ್ಕೆ ಅವರ ಪತ್ನಿಗೆ ವಿನಯ್ ಅವರು ನಿಭಾಯಿಸುತ್ತಿದ್ದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ಸ್ಥಾನ ನೀಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಚರ್ಚೆ ನಡೆಸಿ ಪಟ್ಟಿ ಅಂತಿಮಗೊಳಿಸಿ ಕೆ.ಸಿ. ವೇಣುಗೋಪಾಲ್ ಅವರಿಗೆ ಸಲ್ಲಿಸಿದ್ದರು. ಅವರು ಇತ್ತೀಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪಟ್ಟಿ ರವಾನಿಸಿದ್ದರು.

ಖರ್ಗೆ ಅವರಿಂದ ಅನುಮೋದನೆ ಪಡೆದ ಪಟ್ಟಿಯನ್ನು ಕೆ.ಸಿ.ವೇಣುಗೋಪಾಲ್ ಅವರು ಮುಖ್ಯಮಂತ್ರಿಗೆ ರವಾನಿಸಿದ್ದಾರೆ. ಬಿಹಾರ ಪ್ರವಾಸದಿಂದ ಮುಖ್ಯಮಂತ್ರಿ ಹಿಂದಿರುಗಿದ ತಕ್ಷಣ ಅವರ ಸೂಚನೆಯಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ನೇಮಕಾತಿ ಆದೇಶ ಹೊರಡಿಸಲಿದೆ.

ನಿಗಮ, ಮಂಡಳಿ, ಪ್ರಾಧಿಕಾರಗಳು ಹಾಗೂ ಆಯೋಗಗಳಿಗೆ ಪಕ್ಷದ ಕಾರ್ಯಕರ್ತರನ್ನು ನಾಮನಿರ್ದೇಶನ ಮಾಡಲು ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಮಿತಿ ರಚಿಸಿದ್ದರು.

ನೇಮಕ ಪಟ್ಟಿ ▸7

ಸಂರಕ್ಷಿತ ಕಾಡಲ್ಲಿ ಜೋಡಿ ಮಾರ್ಗ

ವನ್ಯಜೀವಿ ಮಂಡಳಿಯಿಂದ ತಾಂತ್ರಿಕ ಸಮಿತಿ ರಚನೆ

• ಎಸ್.ರವಿಪ್ರಕಾಶ್

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ತಿನ್ನೈಘಾಟ್‌ನಿಂದ ಗೋವಾದ ಕರಂ ಜೋಲ್ ವರೆಗಿನ ರೈಲು ಮಾರ್ಗವನ್ನು ಜೋಡಿ ಮಾರ್ಗವಾಗಿ ಮಾರ್ಪಡಿಸುವ ನೈಋತ್ಯ ರೈಲ್ವೆಯ ಹೊಸ ಪ್ರಸ್ತಾವಕ್ಕೆ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರು ಅನುಮತಿ ನಿರಾಕರಿಸಿದ್ದರೂ ಉದ್ದೇಶಿತ ಯೋಜನೆ ಬಗ್ಗೆ ಪರಿಶೀಲನೆ ನಡೆಸಿ ವರದಿ ಪಡೆಯಲು ಕರ್ನಾಟಕ ವನ್ಯಜೀವಿ ಮಂಡಳಿ ತಾಂತ್ರಿಕ ಸಮಿತಿಯೊಂದನ್ನು ರಚಿಸಿದೆ.

ಇತ್ತೀಚೆಗೆ ನಡೆದ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಭೆಯ ನಡಾವಳಿ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಈ ಯೋಜನೆಗೆ ಹಸಿರು ನಿಶಾನೆ ನೀಡಿದರೆ 5,413 ಮರಗಳು ಹನನವಾಗುತ್ತವೆ. ಅಪರೂಪದ ವನ್ಯಜೀವಿಗಳ ವ್ಯವಸ್ಥೆಗೆ ಧಕ್ಕೆ ಉಂಟಾಗಲಿದೆ ಎನ್ನಲಾಗುತ್ತಿದೆ.

ಈ ರೈಲು ಮಾರ್ಗ ತಿನ್ನೈಘಾಟ್‌ನಿಂದ ಕ್ಯಾಸಲ್‌ರಾಕ್ ಮೂಲಕ ಗೋವಾದ ಕರಂಜೋಲ್ ತಲುಪುತ್ತದೆ. 2022ರಲ್ಲಿ ಈ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ನೀಡಿದ್ದ ಹಸಿರು ನಿಶಾನೆಯನ್ನು ಸುಪ್ರೀಂಕೋರ್ಟ್ ರದ್ದುಪಡಿಸಿತ್ತು. ಆ ಬಳಿಕ ಯೋಜನೆ ನನೆಗುದಿಯಲ್ಲಿತ್ತು.

ಇದೀಗ ಮತ್ತೆ ನೈಋತ್ಯ ರೈಲ್ವೆ ಮತ್ತು ರೈಲ್ವೆ ವಿಕಾಸ್ ನಿಗಮವು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿವೆ. 8.8 ಕಿ.ಮೀ ದೂರದ ಜೋಡಿ ಮಾರ್ಗದ ನಿರ್ಮಾಣಕ್ಕೆ 9.564 ಹೆಕ್ಟೇರ್ ಭೂಮಿಯ ಅಗತ್ಯವಿದೆ ಎಂದು ಹೇಳಿದೆ. ಈ ಪ್ರದೇಶವು ದಾಂಡೇಲಿ ವನ್ಯಜೀವಿಧಾಮ ಮತ್ತು ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಕ್ಯಾಸಲ್ ರಾಕ್ ವನ್ಯಜೀವಿ ವಲಯದ ವ್ಯಾಪ್ತಿಗೆ ಬರುತ್ತದೆ.

▸6



ಕುಲೇಂ–ಕ್ಯಾಸಲ್‌ರಾಕ್ ನಿಲ್ದಾಣಗಳ ಮಧ್ಯೆ ಹಳಿಗಳ ಮೇಲೆ ಕುಸಿದಿರುವ ಬಂಡೆಗಳು (ಸಾಂದರ್ಭಿಕ ಚಿತ್ರ)

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಆಗಲಿದೆ.


ಬುಧವಾರ ಕಾಮಾಕ್ಯ ಚಿತ್ರ ಮಂದಿರ ಬಳಿ ಶಾಸಕರಾದ ಆರ್.ಅಶೋಕ್, ರವಿಸುಬ್ರಹ್ಮಣ್ಯ ಗುಂಡಿ ಮುಚ್ಚಿದರು.


ನಗರದ ಹೊರ ವರ್ತುಲ ರಸ್ತೆ ಫೋರ್‌ಮನ್ ತರಬೇತಿ ಸಂಸ್ಥೆ (ಎಫ್ ಟಿ ಐ) ವೃತ್ತದ ಬಳಿ ಗುಂಡಿ ಮುಚ್ಚಲಾಯಿತು


ಚಿಕ್ಕಪೇಟೆಯಲ್ಲಿ ಶಾಸಕ ರಾಮಮೂರ್ತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ರಸ್ತೆ ಗುಂಡಿ ಕಾಮಗಾರಿಯ ಗುಣಮಟ್ಟ ಪರಿಶೀಲಿಸಿ: ಶಾಲಿನಿ ರಜನೀಶ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಗರದ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಗುಣಮಟ್ಟದಿಂದ ಕೂಡಿಲ್ಲ. ಗುತ್ತಿಗೆದಾರರು ಕಳಪೆ ಸಾಮಗ್ರಿಗಳನ್ನು ಬಳಸಿ ಕಾಮಗಾರಿ ನಡೆಸುತ್ತಿದ್ದಾರೆ ಎಂಬ ಆರೋಪಗಳಿದ್ದು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದರು' ಎಂದು ಮೂಲಗಳು ತಿಳಿಸಿವೆ.

ವಿಧಾನಸೌಧದಲ್ಲಿ ಬುಧವಾರ ನಡೆದ ವಿವಿಧ ಇಲಾಖೆಯ ಅಧಿಕಾರಿಗಳ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, 'ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ ಸೂಪರಿಂಟೆಂಡೆಂಟ್ ಎಂಜಿನಿಯರ್‌ಗಳು ಪರಿಶೀಲಿಸುವಂತೆ ನಿರ್ದೇಶನ ನೀಡಿದ್ದಾರೆ' ಎಂದು ಹೇಳಿವೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ನಗರ ಯೋಜನಾ ತಜ್ಞ ಆರ್.ಕೆ. ಮಿಶ್ರಾ, 'ಬೆಂಗಳೂರು ನಗರದಲ್ಲಿ ₹ 694 ಕೋಟಿ ವೆಚ್ಚದಲ್ಲಿ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಹಾಗೂ ವೈಟ್ ಟಾಪಿಂಗ್ ಕಾಮಗಾರಿಗಳನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರ 90 ದಿನಗಳ ಕ್ರಿಯಾ ಯೋಜನೆ ಹಾಕಿಕೊಂಡಿದೆ' ಎಂದು ತಿಳಿಸಿದರು.

'ಜಿಬಿಎ ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳನ್ನಾಗಿ ವಿಭಜನೆ ಮಾಡಿರುವ ಸರ್ಕಾರದ ನಿರ್ಧಾರ ಸರಿಯಾಗಿದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಆಯಾ ಪಾಲಿಕೆಯ ಆಯುಕ್ತರು ತ್ವರಿತವಾಗಿ ನಿರ್ಧಾರ ಕೈಗೊಳ್ಳಲು ಇದು ಸಹಕಾರಿ ಆಗಿದೆ' ಎಂದು ಹೇಳಿದರು.

ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಬೆಂಗಳೂರು ಜಲ ಮಂಡಳಿಯ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್, ಬೆಂಗಳೂರು ನಗರ ಪೊಲೀಸ್ ಕಮೀಷನರ್ ಸೀಮಾಂತ್ ಕುಮಾರ್ ಸಿಂಗ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಗುಂಡಿ ಮುಚ್ಚಿ ಬಿಜೆಪಿ ವಿನೂತನ ಪ್ರತಿಭಟನೆ

'ರಸ್ತೆ ಸರಿಪಡಿಸಿ ಇಲ್ಲವೇ ಅಧಿಕಾರ ಬಿಟ್ಟು ತೊಲಗಿ' ಎಂದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ ಗುಂಡಿ ಇದ್ದ ಸ್ಥಳಗಳನ್ನು ಗುರುತಿಸಿ ಬಿಜೆಪಿ ಶಾಸಕರು ಹಾಗೂ ಮುಖಂಡರು ಬುಧವಾರ ಅಲ್ಲಿಯೇ ಪ್ರತಿಭಟನೆ ನಡೆಸಿದರು. ಜಲ್ಲಿಕಲ್ಲು, ಸಿಮೆಂಟ್ ಮಿಶ್ರಣದಿಂದ ಗುಂಡಿಗಳನ್ನು ಮುಚ್ಚಿ ಆಕ್ರೋಶ ಹೊರಹಾಕಿದರು.

'ರಸ್ತೆ ಸರಿಪಡಿಸಿ ಇಲ್ಲವೇ ಅಧಿಕಾರ ಬಿಟ್ಟು ತೊಲಗಿ', 'ಸಿದ್ದರಾಮಯ್ಯ ಸರ್ಕಾರ ಬೆಂಗಳೂರು ಜನತೆಗೆ ಗುಂಡಿ ಭಾಗ್ಯ ಕಲ್ಪಿಸಿದೆ' ಎನ್ನುವ ಘೋಷಣೆಗಳ ಮೂಲಕ ನಗರದ 15ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಪ್ರತಿಭಟನೆ ನಡೆಸಿದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕ ಎಲ್.ಎ. ರವಿಸುಬ್ರಹ್ಮಣ್ಯ ನೇತೃತ್ವದಲ್ಲಿ ಬಸವನಗುಡಿ ಹಾಗೂ ಪದ್ಮನಾಭನಗರ ಕ್ಷೇತ್ರಕ್ಕೆ ಹೊಂದಿಕೊಂಡ ಕಾಮಾಕ್ಯ ಚಿತ್ರಮಂದಿರ ಬಳಿ ಹೊರ ವರ್ತುಲ ರಸ್ತೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

'ಬೆಂಗಳೂರಿನಲ್ಲಿ ಯಾವುದೇ ಬಡಾವಣೆಗೆ ಹೋದರೂ ಗುಂಡಿ ಬಿದ್ದ ರಸ್ತೆಗಳೇ ಮೃತ್ಯುಕೂಪಗಳಾಗಿವೆ. ಸರ್ಕಾರ ಗುಂಡಿ ಮುಚ್ಚುವುದಾಗಿ ಹೇಳಿದರೂ ಕಾರ್ಯರೂಪಕ್ಕೆ ಬಂದಿಲ್ಲ. ಜನರೇ ಗುಂಡಿ ಮುಚ್ಚುವಂತೆ ಕರೆ ನೀಡುವ ಸನ್ನಿವೇಶ ಸೃಷ್ಟಿಯಾಗಬಹುದು' ಎಂದು ಅಶೋಕ ಹೇಳಿದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ.ಮೋಹನ್, ಬಿಜೆಪಿ ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿಗೌಡ ಅವರ ನೇತೃತ್ವದಲ್ಲಿ ಗಾಂಧಿನಗರ ಕ್ಷೇತ್ರದಲ್ಲಿ 'ಗುಂಡಿಗಳ ಊರು ಬೆಂಗಳೂರು' ಎನ್ನುವ ಘೋಷಣೆ ಕೂಗಲಾಯಿತು. ಸದಾಶಿವನಗರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಿವಾಸದ ಎದುರು ಗುಂಡಿಗಳನ್ನು ಮುಚ್ಚಿ ಪ್ರತಿಭಟಿಸಿದರು.

ಚಿಕ್ಕಪೇಟೆಯಲ್ಲಿ ಶಾಸಕರಾದ ಉದಯ್ ಗರುಡಾಚಾರ್, ರಾಮಮೂರ್ತಿ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. 'ಸರ್ಕಾರ ಗುಂಡಿ ಮುಚ್ಚಲು ₹1180 ಕೋಟಿ ಬಿಡುಗಡೆ ಮಾಡಿರುವುದಾಗಿ ಹೇಳಿದ್ದರೂ ಹಣ ಎಲ್ಲಿ ಹೋಯಿತು ಎನ್ನುವುದು ತಿಳಿಯುತ್ತಿಲ್ಲ. ಪ್ರತಿ ಶಾಸಕರ ಕ್ಷೇತ್ರಕ್ಕೆ ಈವರೆಗೂ ₹25 ಕೋಟಿ ಸಿಕ್ಕಿಲ್ಲ' ಎಂದು ರಾಮಮೂರ್ತಿ ಆಕ್ರೋಶ ವ್ಯಕ್ತಪಡಿಸಿದರು. ಯಲಹಂಕ ನ್ಯೂಟೌನ್‌ನಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್, ಕೆ.ಆರ್.ಪುರ ಕ್ಷೇತ್ರದ ಬಸವನಪುರದಲ್ಲಿ ಶಾಸಕ ಭೈರತಿ ಬಸವರಾಜು ನೇತೃತ್ವದಲ್ಲಿ, ಯಶವಂತಪುರ ಕ್ಷೇತ್ರದ ಹೆರೋಹಳ್ಳಿ, ರಾಬರ್ಟ್ ಟೌನ್, ವಿಜಯನಗರ, ಶಿವಾಜಿನಗರ, ಆರ್.ಆರ್.ನಗರ ಕ್ಷೇತ್ರದಲ್ಲೂ ಪ್ರತಿಭಟನೆ ನಡೆದವು. ಶಾಂತಿನಗರ ಕ್ಷೇತ್ರದ ದೊಮ್ಮಲೂರಿನಲ್ಲಿ ಮಾಜಿ ಮೇಯರ್ ಗೌತಮ್, ನೀಲಸಂದ್ರದಲ್ಲಿ ಶಿವಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

> ಗುಂಡಿ ಮುಚ್ಚಿ ಎಂದರೆ ಪ್ರಧಾನಿ ಮೋದಿ ಅವರ ಮನೆಯ ರಸ್ತೆ ಉದಾಹರಣೆ ನೀಡುವ ಡಿ.ಕೆ. ಶಿವಕುಮಾರ್ ಟ್ರಂಪ್ ಅವರ ಮನೆಯ ರಸ್ತೆಯನ್ನೂ ನೋಡಿಕೊಂಡು ಬರಲಿ
>
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

ಬಂಧನ, ಬಿಡುಗಡೆ

ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತಿಭಟನೆ ನಡೆಸುವಾಗ ಬಿಜೆಪಿ ಮುಖಂಡ ಉಮೇಶ್ ಶೆಟ್ಟಿ ಮತ್ತಿತರರನ್ನು ಪೊಲೀಸರು ಬಂಧಿಸಿ, ಬಳಿಕ ಬಿಡುಗಡೆ ಮಾಡಿದರು.

ರಸ್ತೆ ಗುಂಡಿ ಮುಚ್ಚಿ ನೂರಕ್ಕೂ ಹೆಚ್ಚು ಮಂದಿ ಪ್ರತಿಭಟನೆ ನಡೆಸುವಾಗ ರಸ್ತೆ ಸಂಚಾರಕ್ಕೆ ಅಡ್ಡಿಪಡಿಸಿದಂತೆ ಪೊಲೀಸರು ಮನವಿ ಮಾಡಿದರು. ಪ್ರತಿಭಟನೆ ಮುಂದುವರಿಸಿದಾಗ 25 ಮಂದಿಯನ್ನು ಗೋವಿಂದರಾಜನಗರ ಪೊಲೀಸರು ಬಂಧಿಸಿದರು.

'ನಾಲ್ಕೈದು ಕಡೆ ಗುಂಡಿ ಮುಚ್ಚಿದ್ದೇವೆ'

ನಗರದ ಮಹಾಲಕ್ಷ್ಮಿ ಲೇಔಟ್ ಹಾಗೂ ಆರ್.ಆರ್.ನಗರ ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಂತೆ ಇರುವ ಡಾ.ರಾಜಕುಮಾರ್ ಅವರ ಸಮಾಧಿಗೆ ಹೋಗುವ ರಸ್ತೆ, ಎಫ್‌ಟಿಐ ವೃತ್ತದಲ್ಲಿ ಗುಂಡಿಗಳು ಬಿದ್ದಿದ್ದು ಅವುಗಳನ್ನು ಬಿಜೆಪಿ ಪ್ರಮುಖರು ಮುಚ್ಚಿದರು. 'ಸಮಾಧಿಗೆ ಹೋಗುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದರೂ ಅದನ್ನು ಮುಚ್ಚದೇ ನಿರ್ಲಕ್ಷ್ಯ ವಹಿಸಲಾಗಿದೆ. ನಾಲ್ಕೈದು ಕಡೆ ನಾವು ಗುಂಡಿ ಮುಚ್ಚಿದ್ದೇವೆ' ಎಂದು ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಹರೀಶ್ ತಿಳಿಸಿದರು.

'ಆನೇಪಾಳ್ಯ ರಸ್ತೆ ಡಾಂಬರೀಕರಣ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಆನೇಪಾಳ್ಯ ಮುಖ್ಯರಸ್ತೆ ಹದಗೆಟ್ಟಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ರಸ್ತೆಗೆ ವೆಟ್‌ಮಿಕ್ಸ್ ಹಾಕಿ, ಡಾಂಬರೀಕರಣ ಮಾಡಬೇಕು ಎಂದು ಆಯುಕ್ತ ರಾಜೇಂದ್ರ ಚೋಳನ್ ಸೂಚಿಸಿದರು.

ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ರಸ್ತೆಗಳಿಗೆ ಭೇಟಿ ನೀಡಿ, ಪರಿಶೀಲಿಸಿದ ಅವರು, 'ಪಾಲ್ಮ್ ಗ್ರೂವ್ ಪ್ರದೇಶದಲ್ಲಿ 1 ಕಿ.ಮೀ ಉದ್ದದ ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಈಗಾಗಲೇ 450 ಮೀ. ಉದ್ದದ ರಸ್ತೆಗೆ ಕಾಂಕ್ರೀಟ್ ಹಾಕಲಾಗಿದೆ. ಪಾದಚಾರಿ ಮಾರ್ಗ, ರಸ್ತೆ ಅಂಚಿನ ಕಾಮಗಾರಿ ಬಾಕಿ ಇದ್ದು, ತ್ವರಿತವಾಗಿ ಪೂರ್ಣಗೊಳಿಸಬೇಕು. ರೆಸಿಡೆನ್ಸಿ ರಸ್ತೆ ಗುಂಡಿಗಳನ್ನು ಆದ್ಯತೆ ಮೇರೆಗೆ ಮುಚ್ಚಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. 'ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 3 ದಿನಗಳಲ್ಲಿ 28 ರಸ್ತೆಗಳ 445 ಗುಂಡಿಗಳು, 24,905 ಚದರ ಮೀ. ವಿಸ್ತೀರ್ಣದ ಪ್ಯಾಚ್‌ವರ್ಕ್ ಕಾರ್ಯ ಮಾಡಲಾಗಿದೆ ಎಂದರು.


ಸಾರ್ವಜನಿಕರಿಗೆ ತೊಂದರೆಯಾಗದಂತೆ ಗುಂಡಿ ಮುಚ್ಚಿ: ರಸ್ತೆಗುಂಡಿ ಮುಚ್ಚುವಾಗ ಸಾರ್ವಜನಿಕರಿಗೆ ತೊಂದರೆ ಆಗದಂತೆ ವ್ಯವಸ್ಥಿತವಾಗಿ ನಿರ್ವಹಿಸಬೇಕು ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ 35ರ ಆರನೇ ಹಾಗೂ ಏಳನೇ ಮುಖ್ಯ ರಸ್ತೆ ಎಂಎಸ್‌ಆರ್ ನಗರ ಮತ್ತಿಕೆರೆ ಉಪವಿಭಾಗದ ಸ್ಥಳಕ್ಕೆ ಭೇಟಿ ನೀಡಿ, ರಸ್ತೆ ಗುಂಡಿ ಮುಚ್ಚುವ ಕಾರ್ಯವನ್ನು ಪರಿಶೀಲಿಸಿದ ನಂತರ ಮಾತನಾಡಿದರು.


'ಜಲಮಂಡಳಿ ಜೊತೆ ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಒಂದು ರಸ್ತೆ ಗುಂಡಿ ಮುಚ್ಚುವ ಕಾರ್ಯವನ್ನು ತೆಗೆದುಕೊಂಡಾಗ, ಆ ರಸ್ತೆಯ ಎಲ್ಲ ಗುಂಡಿಗಳನ್ನು ಮುಚ್ಚಬೇಕು' ಎಂದರು.


ವಸಂತನಗರದ ಬಂಜಾರ ಭವನ ಮುಂಭಾಗದ ರಸ್ತೆಯಲ್ಲಿ ಕಾರ್ಮಿಕರು ಡಾಂಬರೀಕರಣ ಮಾಡಿದರು

ಎಲ್ಲೆಲ್ಲೂ ಗುಂಡಿ


ಕೆಂಗೇರಿ ಉಪನಗರಕ್ಕೆ ಸಂಪರ್ಕಿಸುವ ಕೊಮ್ಮಘಟ್ಟ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ

ಎನ್. ನಂಜುಂಡಸ್ವಾಮಿ, ಕೆಂಗೇರಿ ಉಪನಗರ


ಟಿ. ದಾಸರಹಳ್ಳಿಯ ಎಂ.ಟಿ.ಎಸ್ ಕಾಲೊನಿ, ಕಲ್ಯಾಣ ನಗರದ ಮುತ್ತುರಾಯ ಸ್ವಾಮಿ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿ ಗುಂಡಿ ಬಿದ್ದಿದೆ

ಪ್ರದೀಪ್, ಟಿ. ದಾಸರಹಳ್ಳಿ


ಕುಮಾರಪಾರ್ಕ್ ಪಶ್ಚಿಮದಲ್ಲಿ ಇರುವ ಬಿಡಿಎ ಹಿಂಭಾಗದ ಆನೆ ಉದ್ಯಾನದ ಬಳಿಯ ರಸ್ತೆಯಲ್ಲಿ ಗುಂಡಿ ಬಿದ್ದಿದೆ. ವಾಹನ ಸವಾರರ ಸುರಕ್ಷತೆ ದೃಷ್ಟಿಯಿಂದ ಈ ಗುಂಡಿಯಲ್ಲಿ ಹೂವಿನ ಕುಂಡ ಇಡಲಾಗಿದೆ

ಎಚ್.ಎಸ್. ಚಂದ್ರಶೇಖರ, ಕುಮಾರಪಾರ್ಕ್ ಪಶ್ಚಿಮ

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು 'ಪ್ರಜಾವಾಣಿ'ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.

ವಾಟ್ಸ್ಆ್ಯಪ್
9606038256


ನಗರದ ಹೊರ ವರ್ತುಲ ರಸ್ತೆಯ ಫೋರ್‌ಮೆನ್ ತರಬೇತಿ ಸಂಸ್ಥೆ (ಎಫ್ ಟಿ ಐ) ವೃತ್ತದ ಬಳಿ ಹೊಂಡಗುಂಡಿಗಳಿಂದ ಕೂಡಿದ ರಸ್ತೆಯಲ್ಲಿ ಜನರು ದ್ವಿಚಕ್ರ ವಾಹನಗಳನ್ನು ಸವಾರಿ ಮಾಡಲು ಹರಸಾಹಸ ಪಟ್ಟರು. ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್.ಜಿ.

ಪೌರಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ

ಬೆಂಗಳೂರು: ಕೆನರಾ ಬ್ಯಾಂಕ್ ವತಿಯಿಂದ ಪದ್ಮನಾಭನಗರದಲ್ಲಿ ಮಂಗಳವಾರ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಬ್ಯಾಂಕ್ ಮಹಾ ಪ್ರಬಂಧಕ ರಾಮನಾಯಕ್ ಮತ್ತು ಇತರರ ಮಾರ್ಗದರ್ಶನದಲ್ಲಿ ನಡೆದ ಸ್ವಚ್ಛತಾ ಅಭಿಯಾನದಲ್ಲಿ 100ಕ್ಕೂ ಹೆಚ್ಚು ಬ್ಯಾಂಕ್ ಸಿಬ್ಬಂದಿ, ಸಾರ್ವಜನಿಕರು ಮತ್ತು ಪೌರ ಕಾರ್ಮಿಕರು ಭಾಗಿಯಾಗಿದ್ದರು. ಪೌರ ಕಾರ್ಮಿಕರಿಗೆ ಸುರಕ್ಷತಾ ಕಿಟ್‌ಗಳನ್ನು ನೀಡಲಾಯಿತು.



ಪದ್ಮನಾಭನಗರದಲ್ಲಿ ಕೆನರಾ ಬ್ಯಾಂಕ್ ವತಿಯಿಂದ ಹಮ್ಮಿಕೊಂಡಿದ್ದ ಸ್ವಚ್ಛತಾ ಅಭಿಯಾನದಲ್ಲಿ ಪೌರಕಾರ್ಮಿಕರಿಗೆ ಕಿಟ್ ವಿತರಿಸಲಾಯಿತು.

‘ಎಕ್ಸ್’ ಕಾರ್ಪ್ ಅರ್ಜಿ ವಜಾ

ಮಾಹಿತಿ ಹಂಚಿಕೆ ನಿರ್ಬಂಧ ಉದ್ದೇಶದ ‘ಸಹಯೋಗ್ ಪೋರ್ಟಲ್’ಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಹಿತಿ ಹಂಚಿಕೆಯನ್ನು ನಿರ್ಬಂಧಿಸಲು ಜಾರಿಗೆ ತರಲಾಗಿರುವ ಸಹಯೋಗ್ ಪೋರ್ಟಲ್ ಕಾನೂನಿನ ವೈರುಧ್ಯಗಳಿಗೆ ಸಾಕ್ಷಿಯಾಗಿದೆ’ ಎಂದು ಆಕ್ಷೇಪಿಸಿ ‘ಎಕ್ಸ್’ ಕಾರ್ಪ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ದೇಶದಲ್ಲಿನ ಸಾಮಾಜಿಕ ಜಾಲತಾಣ ಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಕಲಂ 79(3) (ಬಿ) ಅಡಿಯಲ್ಲಿ ಸಹಯೋಗ್ ಪೋರ್ಟಲ್ ಪ್ರಾರಂಭಿಸಿದ್ದ ಕೇಂದ್ರ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಎಕ್ಸ್ ಕಾರ್ಪ್‌ನ (ಈ ಹಿಂದಿನ ಟ್ವಿಟರ್) ಸ್ಥಳೀಯ ಪ್ರತಿನಿಧಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

> **ಮಾಹಿತಿ ಮತ್ತು ಸಂಹವನವು ನಿಯಂತ್ರಣಕ್ಕೆ ಒಳಪಟ್ಟಿದ್ದು, ಈಗಿನ ವಾಟ್ಸ್ ಆ್ಯಪ್, ಇನ್‌ಸ್ಟಾಗ್ರಾಂ ಮತ್ತು ಸ್ನ್ಯಾಪ್ ಚಾಟ್ ಎಲ್ಲವೂ ಸ್ಥಳೀಯ ಮತ್ತು ಜಾಗತಿಕವಾಗಿ ನಿಯಂತ್ರಣಕ್ಕೆ ಒಳಪಟ್ಟಿವೆ**
> **ನ್ಯಾ. ಎಂ.ನಾಗಪ್ರಸನ್ನ**

‘ಸಂವಿಧಾನದ 19ನೇ ವಿಧಿ ವಿಶಾಲವಾದ ಅರ್ಥವನ್ನು ಹೊಂದಿದೆ. ಇದರ ಅಡಿಯಲ್ಲಿ ಲಭ್ಯವಾಗಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಕೇವಲ ನಾಗರಿಕರಿಗೆ ಮಾತ್ರ ಲಭ್ಯವಾಗಿದೆ. ಆದರೆ, ಇದೇ ವಿಧಿಯ ಅಡಿಯಲ್ಲಿ ಒಂದು ಸಂಸ್ಥೆಯಾಗಿರುವ ಎಕ್ಸ್ ಕಾರ್ಪ್‌ಗೆ ಈ ಅಧಿಕಾರ ಲಭ್ಯವಾಗುವುದಿಲ್ಲ’ ಎಂದು ಪೀಠ ಸ್ಪಷ್ಟಪಡಿಸಿದೆ.

ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪರ ವಾದ ಮಂಡಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಸಹಯೋಗ್ ಪೋರ್ಟಲ್ ಅನ್ನು ಆಡಳಿತಾತ್ಮಕ ಅನುಕೂಲಕ್ಕಾಗಿ ಸ್ಥಾಪಿಸಲಾಗಿದೆ. ಇದರಿಂದ ಎಲ್ಲಾ ಆನ್‌ಲೈನ್ ಮಧ್ಯಸ್ಥಿಕೆ ಸಂಸ್ಥೆಗಳು ತಮ್ಮ ವೇದಿಕೆಗಳಲ್ಲಿ ಯಾವುದೇ ಕಾನೂನು ಬಾಹಿರ ವಿಷಯದ ಕುರಿತು ಅಧಿಕೃತ ಅಧಿಕಾರಿಗಳಿಂದ ಬರುವ ಸೂಚನೆಗಳ ಮೇಲೆ ಸುಲಭವಾಗಿ ನಿಗಾ ಇಡಬಹುದು’ ಎಂದು ಪ್ರತಿಪಾದಿಸಿದ್ದರು.

‘ಸಾಮಾಜಿಕ ಮಾಧ್ಯಮಗಳ-ಲ್ಲಿ ಅನಾಮಧೇಯರ ಅಪಾಯಗಳು ಮತ್ತು ಸಂಪಾದಕೀಯ ಬಳಗದ ಹೊಣೆಗಾರಿಕೆಯ ಕೊರತೆ ಇದೆ. ಈ ವೇದಿಕೆಗಳಲ್ಲಿ ನಕಲಿ ಖಾತೆ ಸೃಷ್ಟಿಸುವುದು ಸುಲಭವಾಗಿದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದ್ದರು.

ನ್ಯಾಯಪೀಠದ ಕಳವಳ

‘ಈ ಅರ್ಜಿದಾರರ ಮೂಲ ಸ್ಥಾನ ಅಮೆರಿಕ. ಅಮೆರಿಕದಲ್ಲಿ ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸಲಾಗುತ್ತಿದೆ. ಅಲ್ಲದೆ, ಪ್ರತಿಯೊಂದು ಸಾರ್ವಭೌಮ ರಾಷ್ಟ್ರಗಳೂ ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸುತ್ತಿವೆ. ನಿಯಂತ್ರಣವಿಲ್ಲದ ವಾಕ್ ಸ್ವಾತಂತ್ರ್ಯವು ಕಾನೂನು ಬಾಹಿರ ನಡವಳಿಕೆಗಳಿಗೆ ದಾರಿ ಮಾಡಿಕೊಡಲಿದೆ’ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.

‘ಪ್ರಸಕ್ತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಅಖಾಡದಂತಿದ್ದು ಇವುಗಳು ಅರಾಜಕತಾ ವಾದ ಬಿತ್ತುವುದಕ್ಕೆ ಸ್ವಾತಂತ್ರ್ಯ ನೀಡಲಾಗದು. ಈ ಕ್ಷೇತ್ರವನ್ನು ನಿಯಂತ್ರಣ ಮಾಡುವುದು ಹೊಸದೂ ಅಲ್ಲ, ವಿಶಿಷ್ಟವೂ ಅಲ್ಲ. ನಮ್ಮ ರಾಷ್ಟ್ರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಬಯಸುವ ಪ್ರತಿಯೊಂದು ವೇದಿಕೆಯೂ ತನಗಿರುವ ಸ್ವಾತಂತ್ರ್ಯವನ್ನು ಜವಾಬ್ದಾರಿಯೊಂದಿಗೆ ನಿಭಾಯಿಸಬೇಕು ಮತ್ತು ದೇಶದಲ್ಲಿ ಕಾರ್ಯನಿರ್ವಹಣೆಗೆ ಅಧಿಕಾರ ಪಡೆದಲ್ಲಿ ಹೊಣೆಗಾರಿಕೆಯನ್ನು ಅನುಸರಿಸುವುದು ಗಂಭೀರ ಕರ್ತವ್ಯ ಎಂಬುದನ್ನು ಒಪ್ಪಿಕೊಳ್ಳಬೇಕು’ ಎಂದು ನ್ಯಾಯಪೀಠ ಹೇಳಿದೆ.



ಕಣ್ಣೂರು ಗ್ರಾ. ಪಂ ಅಧ್ಯಕ್ಷ, ಉಪಾಧ್ಯಕ್ಷರ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮೂರು ತಿಂಗಳಿಂದ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ಕರೆಯದ ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ವಜಾಗೊಳಿಸಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಡಾ.ಎಸ್. ಜೆ.ಮಧು ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ

‘ಅಧ್ಯಕ್ಷ ಅಶೋಕ್ ಹಾಗೂ ಉಪಾಧ್ಯಕ್ಷೆ ಲಲಿತಾ ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿ ಜವಾಬ್ದಾರಿ ಮರೆತಿದ್ದಾರೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸುವ ವಿಚಾರವಾಗಿ ಸಭೆಯಲ್ಲಿ ಚರ್ಚಿಸಿ ಅನುಷ್ಠಾನಕ್ಕೆ ತರಲು ಪ್ರತಿ ತಿಂಗಳಿಗೊಮ್ಮೆ ಪಂಚಾಯಿತಿ ಸದಸ್ಯರೊನ್ನಗೊಳ್ಳಗೊಂಡ ಕಾರ್ಯ-ಕಲಾಪಗಳನ್ನು ನಡೆಸಲು ಸಭೆ ಕರೆಯಬೇಕು. ಆದರೆ, ಸಭೆ ಕರೆಯದ ಕಾರಣ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆ ಉಂಟಾಗಿದೆ’ ಎಂದು ಅವರು ದೂರಿದ್ದಾರೆ.



ಡಾ.ಎಸ್.ಜೆ. ಮಧು

2024ನೇ ಸಾಲಿನಲ್ಲಿ ಫೆಬ್ರವರಿಯಿಂದ ಜೂನ್‌ವರೆಗೆ ಹಾಗೂ 2025ನೇ ಸಾಲಿನಲ್ಲಿ ಜೂನ್ ನಿಂದ ಇಲ್ಲಿಯವರೆಗೆ ಸಭೆ ಕರೆದಿಲ್ಲ. ಇಬ್ಬರನ್ನು ಅವರ ಸ್ಥಾನದಿಂದ ವಜಾಗೊಳಿಸಿ, ಗ್ರಾಮ ಸ್ವರಾಜ್ ಅಧಿನಿಯಮ 43ಎ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

‘ಹಣ ದುರುಪಯೋಗ ಹಾಗೂ ಅಧಿಕಾರ ದುರ್ಬಳಕೆ ವಿಚಾರದಲ್ಲಿ ನ್ಯಾಯಾಲಯ ಯಾವುದೇ ಹಣಕಾಸು ವಹಿವಾಟು ನಡೆಸದಂತೆ ಮಧ್ಯಂತರ ಆದೇಶ ನೀಡಿದೆ. ಆದರೂ ಅಶೋಕ್ ಅವರು ಆದೇಶ ಉಲ್ಲಂಘಿಸಿ ಲಕ್ಷಾಂತರ ರೂಪಾಯಿ ಚೆಕ್ ಗಳಿಗೆ ಸಹಿ ಮಾಡಿ ನಿರಂತರವಾಗಿ ವಿತರಣೆ ಮಾಡುತ್ತಿದ್ದಾರೆ’ ಎಂದು ಮಧು ಆರೋಪಿಸಿದ್ದಾರೆ.



ಸ್ಥಳೀಯ ತಯಾರಿಕೆಯನ್ನು ಬಲಗೊಳಿಸಲು ಹಾಗೂ ರಾಷ್ಟ್ರದ ಆರ್ಥಿಕತೆಯನ್ನು ಬೆಂಬಲಿಸಲು ಭಾರತ ಶಪಥ ಮಾಡಿದೆ.

ನಾಲ್ವರು ನಕಲಿ ಅಧಿಕಾರಿಗಳ ಬಂಧನ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಸಿಂಗರಾಜಪುರ ಗ್ರಾಮದ ಎರಡು ಮೆಡಿಕಲ್ ಸ್ಟೋರ್ ಗಳಲ್ಲಿ ಮಂಗಳವಾರ ಅಧಿಕಾರಿಗಳು ಎಂದು ಹೇಳಿಕೊಂಡು ಹಣ ವಸೂಲಿ ಮಾಡುತ್ತಿದ್ದ ಮಹಿಳೆ ಸೇರಿ ನಾಲ್ವರನ್ನು ಗ್ರಾಮಸ್ಥರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಬೆಂಗಳೂರಿನ ತುಂಗಾನಗರದ ಅಪ್ಪಣ್ಣಪ್ಪ ಬಡಾವಣೆಯ ಅರ್ಚನಾ (39), ಬೆಂಗಳೂರಿನ ಶಿವನಗರದ ನಿವಾಸಿ, ಚನ್ನಪಟ್ಟಣ ತಾಲ್ಲೂಕಿನ ನೀಲ ಕಂಠನಹಳ್ಳಿಯ ರವಿಶಂಕರ್(45), ಹೊಸಗುಡ್ಡದಹಳ್ಳಿಯ ವಿಶ್ವನಾಥ್ ರಾಜೇ ಅರಸ್(42), ಕಾರು ಚಾಲಕ ರೋಹಿತ್ (22) ಬಂಧಿತ ಆರೋಪಿಗಳು.

ತಮ್ಮನ್ನು ಭ್ರಷ್ಟಾಚಾರ ವಿರೋಧಿ ಹಾಗೂ ಮಾನವ ಹಕ್ಕುಗಳ ಪ್ರತಿಷ್ಠಾನ ಇಲಾಖೆಯ ಅಧಿಕಾರಿಗಳು ಎಂದು ನಕಲಿ ಗುರುತಿನ ಪತ್ರಗಳನ್ನು ತೋರಿಸಿ ಇವರು ಹಣ ವಸೂಲಿ ಮಾಡುತ್ತಿದ್ದರು.

ಬೆಳಿಗ್ಗೆ ಅರ್ಚಕ, ರಾತ್ರಿ ಕಳ್ಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ, ಉಡುಪಿ ಹಾಗೂ ನಗರದ ಬನಶಂಕರಿ ದೇವಸ್ಥಾನವೊಂದರಲ್ಲಿ ಚಿನ್ನ ಹಾಗೂ ನಗದು ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಬನಶಂಕರಿ ಪೊಲೀಸರು ಆರೋಪಿಗಳ ವಿಚಾರಣೆ ತೀವ್ರಗೊಳಿಸಿದ್ದಾರೆ.

ಅರ್ಚಕ ಪ್ರವೀಣ್ ಭಟ್ ಮತ್ತು ಸಂತೋಷ್ ಅವರ ವಿಚಾರಣೆ ವೇಳೆ ಆರೋಪಿಗಳು ಹೇಗೆ ಕೃತ್ಯ ಎಸಗುತ್ತಿದ್ದರು ಎಂಬ ಸಂಗತಿ ಗೊತ್ತಾಗಿದೆ.

ಪ್ರವೀಣ್ ಭಟ್ ಎಂಬಾತ ದೇವಸ್ಥಾನದಲ್ಲಿ ಬೆಳಿಗ್ಗೆ ಪೂಜೆ ಮಾಡುವುದು, ರಾತ್ರಿ ವೇಳೆ ಅದೇ ದೇವಸ್ಥಾನದಲ್ಲಿ ಚಿನ್ನ, ಬೆಳ್ಳಿ ಆಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಎಂಬ ಸಂಗತಿ ಗೊತ್ತಾಗಿದೆ.

ಕಳ್ಳತನ ಪ್ರಕರಣವೊಂದರಲ್ಲಿ ಪ್ರವೀಣ್ ಭಟ್ ಕಾರಾಗೃಹಕ್ಕೆ ಹೋಗಿದ್ದ. ಅದೇ ಜೈಲಿನಲ್ಲಿ ಪರಿಚಯವಾಗಿದ್ದ ಮತ್ತೊಬ್ಬ ಕಳ್ಳನ ನೆರವಿನಿಂದ ಚಿನ್ನಾಭರಣ ಕದ್ದು ಮಾರಾಟ ಮಾಡುತ್ತಿದ್ದ. ಪ್ರತಿಸಲ ಕಳ್ಳತನ ಮಾಡಿದ ನಂತರ ಆರೋಪಿಗಳು ದೇವರ ಮುಂದೆ ಕ್ಷಮಿಸಿ ಎಂಬುದಾಗಿ ಕೈಮುಗಿಯುತ್ತಿದ್ದರು ಎಂದು ಮೂಲಗಳು ಹೇಳಿವೆ.

‘ಪ್ರವೀಣ್ ಭಟ್ ಶಿವಮೊಗ್ಗ, ಉಡುಪಿಯಲ್ಲಿ ಅರ್ಚಕನಾಗಿದ್ದ. ಅಲ್ಲಿ ಹೋಮ, ಹವನ, ಪೂಜೆ ಮಾಡಿಕೊಂಡಿದ್ದ. ರಾತ್ರಿ ಅದೇ ದೇವಾಲಯದಲ್ಲಿ ದೇವರ ಬೆಳ್ಳಿ ಸಾಮಗ್ರಿಗಳು, ಹಿತ್ತಾಳೆ ವಸ್ತುಗಳು, ಚಿನ್ನಾಭರಣ ಕದ್ದು ಮಾರಾಟ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಬನಶಂಕರಿ ದೇವಾಲಯದಲ್ಲಿ ಅರ್ಚಕನಾಗಿದ್ದ ವೇಳೆ ಕಳ್ಳತನ ಮಾಡಿದ್ದ. ದೇವಾಲಯದ ಆಡಳಿತ ಮಂಡಳಿ ಸದಸ್ಯರು, ಪರಿಶೀಲನೆ ನಡೆಸಿ ಬಳಿಕ ದೂರು ನೀಡಿದ್ದರು. ದೂರು ಆಧರಿಸಿ ಬನ್ನೇರುಘಟ್ಟ ಸಮೀಪದ ಗೊಟ್ಟಿಗೇರೆ ಬಳಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಆರೋಪಿಯನ್ನು ಬಂಧಿಸಲಾಗಿತ್ತು’ ಎಂದು ಮೂಲಗಳು ಹೇಳಿವೆ.

₹14 ಲಕ್ಷ ಮೌಲ್ಯದ ಸಾಮಗ್ರಿಗಳು ವಶ: ಆರೋಪಿಗಳಿಂದ ₹14 ಲಕ್ಷ ಮೌಲ್ಯದ ವಿವಿಧ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಇಬ್ಬರ ವಿರುದ್ಧವೂ ಬನಶಂಕರಿ, ಜಯನಗರ, ಕುಮಾರಸ್ವಾಮಿ, ಜೆ.ಪಿ ನಗರ ಸೇರಿ 11 ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಸಾಲ ತೀರಿಸಲು ಸ್ನೇಹಿತನ ಮನೆಗೆ ಕನ್ನ

ಕಾಡುಗೋಡಿ ಠಾಣೆ ಪೊಲೀಸರಿಂದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ತೀರಿಸಲು ಬೇಕಿದ್ದ ಹಣಕ್ಕಾಗಿ ಸ್ನೇಹಿತನ ಮನೆಗೆ ಕನ್ನ ಹಾಕಿದ್ದ ಸಿವಿಲ್ ಎಂಜಿನಿಯರ್‌ನನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ

ಕಲಬುರಗಿ ಜಿಲ್ಲೆಯ ಮಂಜುನಾಥ್ (38) ಬಂಧಿತ ಆರೋಪಿ. ಆರೋಪಿಯಿಂದ ₹6 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಕೆ.ಆರ್.ಪುರದ ಅಯ್ಯಪ್ಪ ನಗರದಲ್ಲಿ ವಾಸವಾಗಿದ್ದ ಆರೋಪಿ, ಐಟಿಪಿಎಲ್ ಬಳಿಯ ಖಾಸಗಿ ಕಂಪನಿಯಲ್ಲಿ ಸಿವಿಲ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ. ಬೇರೆ ಬೇರೆ ಕಾರಣಕ್ಕೆ ಸಾಲ ಮಾಡಿಕೊಂಡಿದ್ದ ಆರೋಪಿಯು ತನ್ನ ಸ್ನೇಹಿತ ನವೀನ್ ಎಂಬುವರ ಮನೆಗೆ ಕನ್ನ ಹಾಕಿದ್ದ ಎಂದು ಪೊಲೀಸರು ಹೇಳಿದರು.

‘ಮಂಜುನಾಥ್ ಮತ್ತು ನವೀನ್, ಬಾಲ್ಯದಿಂದಲೂ ಸ್ನೇಹಿತರು. ಕೊಡಿಗೇಹಳ್ಳಿಯಲ್ಲಿರುವ ನವೀನ್ ಅವರ ಮನೆಗೆ ಆರೋಪಿ ಮಂಜುನಾಥ್ ಆಗಾಗ್ಗೆ ಹೋಗುತ್ತಿದ್ದ. ಸ್ನೇಹಿತನ ಮನೆಯಲ್ಲಿ ಸಾಕಷ್ಟು ಚಿನ್ನಾಭರಣ ಇರುವುದನ್ನು ಗಮನಿಸಿದ್ದ. ಆಭರಣ ಕದ್ದು ಸಾಲ ತೀರಿಸಲು ಆರೋಪಿ ಸಂಚು ರೂಪಿಸಿದ್ದ. ನವೀನ್ ಮತ್ತು ಅವರ ಪತ್ನಿ ಸುಷ್ಮಾ ಅವರು ಆಗಸ್ಟ್ 29ರಂದು ಮನೆಯಿಂದ ಹೊರ ಹೋಗುವುದನ್ನು ಗಮನಿಸಿದ್ದ ಆರೋಪಿ, ಅಂದೇ ಸಂಜೆ ಮನೆಯ ಬಾಗಿಲು ಒಡೆದು ಚಿನ್ನಾಭರಣ ಕಳ್ಳತನ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

ಸಿಸಿಟಿವಿ ಪರಿಶೀಲನೆ ವೇಳೆ ಕೃತ್ಯ ಬಯಲು: ‘ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಆರಂಭದಲ್ಲಿ ಯಾವುದೇ ಸುಳಿವು ಸಿಕ್ಕಿರಲಿಲ್ಲ. ನವೀನ್ ಅವರ ಮನೆಯ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿದಾಗ, ಬೈಕ್‌ನ ನೋಂದಣಿ ಸಂಖ್ಯೆಯ ಸುಳಿವು ಸಿಕ್ಕಿತ್ತು. ಬೈಕ್‌ನ ನೋಂದಣಿ ಸಂಖ್ಯೆ ಯಾರದ್ದು ಎಂದು ಪರಿಶೀಲಿಸಿದಾಗ, ಮಂಜುನಾಥ್ ಆರೋಪಿ ಎಂದು ಪತ್ತೆ ಆಗಿತ್ತು. ಬಳಿಕ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಕದ್ದ ಆಭರಣಗಳನ್ನು ಆರೋಪಿ ಗಿರವಿ ಅಂಗಡಿಗೆ ಮಾರಾಟ ಮಾಡಿದ್ದ. ಉಳಿದ ಆಭರಣಗಳನ್ನು ಅಯ್ಯಪ್ಪ ನಗರದ ತನ್ನ ಮನೆಯಲ್ಲೇ ಇಟ್ಟುಕೊಂಡಿದ್ದ. ಸದ್ಯ ಬಂಧಿತನಿಂದ 58 ಗ್ರಾಂ ಆಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

82 ಗ್ರಾಂ ಆಭರಣ ಜಪ್ತಿ

ಬೆಂಗಳೂರು: ಕನ್ನ ಕಳವು ಪ್ರಕರಣದಲ್ಲಿ ವರ್ತೂರಿನ ಶ್ರೀನಿವಾಸ್ ಮತ್ತು ಅರುಣ್ ಎಂಬುವವರನ್ನು ಬಂಧಿಸಿ ₹8.25 ಲಕ್ಷ ಮೌಲ್ಯದ 82 ಗ್ರಾಂ ಚಿನ್ನಾಭರಣವನ್ನು ಕಾಡುಗೋಡಿ ಠಾಣೆಯ ಪೊಲೀಸರು ಜಪ್ತಿ ಮಾಡಿದ್ದಾರೆ.

ಕಾಡುಗೋಡಿಯ ಪಟಾಲಮ್ಮ ಲೇಔಟ್‌ನ ಅಮರನಾಥ್ ಅವರ ಮನೆಯಲ್ಲಿ ಆರೋಪಿಗಳು ಕಳವು ಮಾಡಿದ್ದರು. ಆರೋಪಿಗಳ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಎಂಟು ಕನ್ನ ಕಳವು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.



ಡ್ರಾಪ್ ಕೊಡುವ ಸೋಗಿನಲ್ಲಿ ವ್ಯಕ್ತಿಯ ಅಪಹರಣ

ಪಿಸ್ತೂಲ್ ತೋರಿಸಿ ಸುಲಿಗೆ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಾಪ್ ಕೊಡುವ ಸೋಗಿನಲ್ಲಿ ವ್ಯಕ್ತಿಯೊಬ್ಬರನ್ನು ಕಾರಿನಲ್ಲಿ ಕರೆದೊಯ್ದು ಪಿಸ್ತೂಲ್‌ನಿಂದ ಬೆದರಿಸಿ ಹಣ ಹಾಗೂ ಮೊಬೈಲ್ ಸುಲಿಗೆ ಮಾಡಿದ್ದ ನಾಲ್ವರು ದರೋಡೆಕೋರರನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಜಯಪುರ ಜಿಲ್ಲೆಯ ಕನಕಮೂರ್ತಿ(25), ಆತನ ಸಹೋದರ ಶ್ರೀಕಾಂತ್(22), ಸಂಬಂಧಿ ಕಿರಣ್ (29) ಹಾಗೂ ಸಿಕಂದರ್(38) ಬಂಧಿತ ಆರೋಪಿಗಳು.

ಬಂಧಿತರಿಂದ ಪಿಸ್ತೂಲ್, ಕೃತ್ಯಕ್ಕೆ ಬಳಸಿದ್ದ ಕಾರು ಹಾಗೂ ಐದು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ವಿಜಯಪುರದ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಸೆಂಟ್ರಿಂಗ್ ಕೆಲಸ ಮಾಡುವ ವ್ಯಕ್ತಿಯನ್ನು ಅಪಹರಿಸಿ ಆರೋಪಿಗಳು ಸುಲಿಗೆ ಮಾಡಿದ್ದರು.

ಆಗಸ್ಟ್ 14ರಂದು ಕೆಲಸದ ನಿಮಿತ್ತ ದೂರುದಾರ ನಗರಕ್ಕೆ ಬಂದಿದ್ದರು. ಕೆಲಸ ಮುಗಿಸಿಕೊಂಡು ವಿಜಯಪುರಕ್ಕೆ ವಾಪಸ್ ತೆರಳಲು ಜಾಲಹಳ್ಳಿ ಕ್ರಾಸ್‌ನಲ್ಲಿ ಬಸ್‌ಗಾಗಿ ಕಾಯುತ್ತಿದ್ದರು. ಅಲ್ಲಿಗೆ ಕಾರಿನಲ್ಲಿ ಬಂದಿದ್ದ ಆರೋಪಿಗಳು, ತಾವು ಕಾರಿನಲ್ಲಿ ವಿಜಯಪುರಕ್ಕೆ ತೆರಳುತ್ತಿದ್ದೇವೆ. ಕಾರಿನಲ್ಲೇ ಬರುವಂತೆ ಕೋರಿದ್ದರು. ಆರೋಪಿಗಳ ಮಾತು ನಂಬಿದ್ದ ದೂರುದಾರ ಕಾರು ಹತ್ತಿದ್ದರು. ಕಾರಿಗೆ ಹತ್ತಿಸಿಕೊಂಡು ದಾಬಸ್‌ಪೇಟೆಗೆ ಕರೆದೊಯ್ದು ಪಿಸ್ತೂಲ್‌ನಿಂದ ಬೆದರಿಸಿ ₹5 ಸಾವಿರ ನಗದು ಹಾಗೂ ₹ 75 ಸಾವಿರ ಮೌಲ್ಯದ ಎರಡು ಮೊಬೈಲ್‌ಗಳನ್ನು ದೋಚಿದ್ದರು. ಬಳಿಕ ಅವರ ಮೇಲೆ ಹಲ್ಲೆ ನಡೆಸಿ, ಕಾರಿನಿಂದ ಕೆಳಗೆ ತಳ್ಳಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ದೂರುದಾರ ನೀಡಿದ ಕಾರಿನ ನೋಂದಣಿ ಸಂಖ್ಯೆಯ ಸುಳಿವು ಆಧರಿಸಿ, ಆರೋಪಿಗಳನ್ನು ಪತ್ತೆ ಮಾಡಿ ಮಾರತ್‌ಹಳ್ಳಿ ಬಳಿಯ ದೊಡ್ಡನೆಕ್ಕುಂದಿಯಲ್ಲಿ ಬಂಧಿಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಸ್ತೂಲ್ ನೀಡಿದ್ದ ಆರೋಪಿ

ಆರೋಪಿಗಳಾದ ಕನಕಮೂರ್ತಿ, ಶ್ರೀಕಾಂತ್ ಮತ್ತು ಕಿರಣ್ ಅವರು ದೊಡ್ಡನೆಕ್ಕುಂದಿಯ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಮೂವರು ಕ್ಯಾಬ್ ಚಾಲಕರಾಗಿ ನಗರದಲ್ಲಿ ಕೆಲಸ ಮಾಡುತ್ತಿದ್ದರು. ನಾಲ್ಕನೇ ಆರೋಪಿ ಸಿಕಂದರ್ ಎಂಬಾತ ಸುಲಿಗೆ ಮಾಡುವುದಕ್ಕೆ ಪಿಸ್ತೂಲ್ ಕೊಟ್ಟಿದ್ದ. ಕನಕಮೂರ್ತಿ ಮತ್ತು ಕಿರಣ್ ವಿರುದ್ಧ ಈ ಹಿಂದೆಯೂ ಹಲ್ಲೆ, ಸುಲಿಗೆ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಗ್ಯಾಸ್ ಸಿಲಿಂಡರ್, ದ್ವಿಚಕ್ರ ವಾಹನ ಕಳ್ಳತನ

ಬೆಂಗಳೂರು: ದ್ವಿಚಕ್ರ ವಾಹನ ಮತ್ತು ಗ್ಯಾಸ್ ಸಿಲಿಂಡರ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋರಮಂಗಲದ ವೆಂಕಟಾಪುರ ನಿವಾಸಿ ಟಿ.ಮುನಿರಾಜು(33) ಬಂಧಿತ ಆರೋಪಿ.

ಬಂಧಿತನಿಂದ ₹8.5 ಲಕ್ಷ ಮೌಲ್ಯದ 20 ಗ್ಯಾಸ್ ಸಿಲಿಂಡರ್ ಮತ್ತು 11 ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.



ಗುಂಜೂರು ಗ್ರಾಮದ ಹೊಸಹಳ್ಳಿ ರಸ್ತೆಯ ಶ್ರೀರಾಮ ದೇವಸ್ಥಾನದ ಬಳಿ ಸುರೇಶ್ ಅವರು ನಿಲುಗಡೆ ಮಾಡಿದ್ದ ಬೈಕ್ ಕಳವು ಮಾಡಿದ್ದ. ಕದ್ದ ಬೈಕ್‌ನಲ್ಲಿ ಕಮರ್ಷಿಯಲ್ ಸಿಲಿಂಡರ್ ಕಳವು ಮಾಡುತ್ತಿದ್ದ. ಆರೋಪಿಯ ಬಂಧನದಿಂದ ನಗರದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು. ವರ್ತೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಮಣಶ್ರೀ ಶರಣ ಪ್ರಶಸ್ತಿ: ಸಾಧಕರ ಶಿಫಾರಸಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮಣಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನೀಡುವ ‘ರಮಣಶ್ರೀ ಶರಣ ಪ್ರಶಸ್ತಿ’ಗೆ ಸಾಧಕರ ಹೆಸರನ್ನು ಶಿಫಾರಸು ಮಾಡಲು ಅವಕಾಶ ಕಲ್ಪಿಸಲಾಗಿದೆ.

ತಲಾ ನಾಲ್ಕು ಹಿರಿಯ ಶ್ರೇಣಿ ಮತ್ತು ಉತ್ತೇಜನ ಶ್ರೇಣಿಯಲ್ಲಿ ‘ರಮಣಶ್ರೀ ಶರಣ ಪ್ರಶಸ್ತಿ’ ನೀಡಲಾಗುತ್ತಿದೆ. ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆ, ಆಧುನಿಕ ವಚನ ರಚನೆ, ವಚನ ಸಂಗೀತ, ಶರಣ ಸಂಸ್ಕೃತಿ ಪ್ರಸಾರ ಮತ್ತು ಸೇವಾ ಸಂಸ್ಥೆ ವಿಭಾಗದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಹಿರಿಯ ಶ್ರೇಣಿ ಪ್ರಶಸ್ತಿಗಳು ತಲಾ ₹40 ಸಾವಿರ ಮತ್ತು ಉತ್ತೇಜನ ಶ್ರೇಣಿ ಪ್ರಶಸ್ತಿಗಳು ತಲಾ ₹20 ಸಾವಿರ ಒಳಗೊಂಡಿವೆ.

ಉತ್ತೇಜನ ಶ್ರೇಣಿಗೆ 45 ವರ್ಷದೊಳಗಿನವರು ಮಾತ್ರ ಅರ್ಹರಾಗಿರುತ್ತಾರೆ. ನಿಗದಿಪಡಿಸಲಾದ ನಾಲ್ಕು ವಿಭಾಗಗಳಲ್ಲಿ ಉನ್ನತಮಟ್ಟದ ಸಾಧನೆಗೈದಿರುವ ವ್ಯಕ್ತಿಗಳ ಹೆಸರನ್ನು ಇದೇ 30ರೊಳಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ, 1ನೇ ಮುಖ್ಯರಸ್ತೆ, ಜಯನಗರ 8ನೇ ವಿಭಾಗ, ಬೆಂಗಳೂರು 560070 ಅಥವಾ ಎಸ್. ಷಡಕ್ಷರಿ, ಅಧ್ಯಕ್ಷರು ರಮಣಶ್ರೀ ಪ್ರತಿಷ್ಠಾನ, ನಂ.16 ರಾಜಾರಾಮ್ ಮೋಹನ್ ರಾಯ್ ರಸ್ತೆ, ಬೆಂಗಳೂರು 560025 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಂಪರ್ಕಕ್ಕೆ: 9845032813

ಕೆಪಿಎಸ್‌ಸಿ ವಿರುದ್ಧ ಆಕ್ರೋಶ

ಅದು ಇರುವವರೆಗೆ ಜನರಿಗೆ ಉದ್ಯೋಗ ಸಿಗದು: ಸಚಿವ

ಪ್ರಜಾವಾಣಿ ವಾರ್ತೆ



ಅಮೆರಿಕ ಹೆಚ್ಚುವರಿ ತೆರಿಗೆ ವಿಧಿಸಿ, ತನ್ನ ಜನರ ಒಳಿತಿಗೆ ಕ್ರಮ ಕೈಗೊಳ್ಳುತ್ತಿದೆ. ಅದು ನಮ್ಮ ಹಿಡಿತದಲ್ಲಿ ಇಲ್ಲ. ಆದರೆ, ಅದರ ಪರಿಣಾಮ ತಡೆಯಲು ನಮ್ಮ ದೇಶದ ಪ್ರಧಾನಿ ಏನು ಮಾಡುತ್ತಿದ್ದಾರೆ

ಪ್ರಿಯಾಂಕ್ ಖರ್ಗೆ, ಸಚಿವ

ಮಂಗಳೂರು: 'ಕೆಪಿಎಸ್‌ಸಿ ಇರುವವರೆಗೆ ರಾಜ್ಯದ ಜನರಿಗೆ ಉದ್ಯೋಗ ಸಿಗುವುದಿಲ್ಲ, ನನಗೆ ಅವಕಾಶ ಕೊಟ್ಟರೆ ಕೆಪಿಎಸ್‌ಸಿ ವಿಸರ್ಜಿಸಲು ಸಿದ್ಧ' ಎಂದು ಎಲೆಕ್ಟ್ರಾನಿಕ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಬುಧವಾರ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಂಚಾಯತ್ ರಾಜ್ ಇಲಾಖೆಯ ಸಿಬ್ಬಂದಿ ನೇಮಕಾತಿ ಹೊಣೆಯನ್ನು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಹಂಚಿಕೆ ಮಾಡಿದ್ದೆವು. ಪ್ರಕ್ರಿಯೆಯನ್ನು ಕೆಇಎ ಪೂರ್ಣಗೊಳಿಸಿದೆ. ಕೆಪಿಎಸ್‌ಸಿ ಇನ್ನೂ ಪೂರ್ಣಗೊಳಿಸಿಲ್ಲ. ಸಾಂವಿಧಾನಿಕ ಸಂಸ್ಥೆ ಎಂಬ ಕಾರಣಕ್ಕೆ ಅದರ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶ ಮಾಡುವುದಕ್ಕೂ ಆಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಖಾಲಿ ಇರುವ 2.5 ಲಕ್ಷ ಹುದ್ದೆಗಳ ಭರ್ತಿಗೆ ಸರ್ಕಾರ ಬದ್ಧವಾಗಿದೆ. ಒಳ ಮೀಸಲಾತಿ ಸಲುವಾಗಿ ನೇಮಕಾತಿ ಪ್ರಕ್ರಿಯೆ ತಡವಾಗಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಂಗಳೂರಿನಲ್ಲಿ ಟೆಕ್ನೊ ಪಾರ್ಕ್‌ಗೆ ಅನುಮೋದನೆ: 'ಮಂಗಳೂರಿನ ಅತಿ ದೊಡ್ಡ ಟೆಕ್ನಾಲಜಿ ಪಾರ್ಕ್ ಸ್ಥಾಪಿಸುವ ಪ್ರಸ್ತಾವವಿದ್ದು, ಇದಕ್ಕೆ ಸಚಿವ ಸಂಪುಟವು ಶೀಘ್ರವೇ ಅನುಮೋದನೆ ನೀಡಲಿದೆ' ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ (ಕೆಡಿಇಎಂ) 'ಬಿಯಾಂಡ್ ಬೆಂಗಳೂರು' ಕಾರ್ಯಕ್ರಮದಡಿ ಇಲ್ಲಿ ಏರ್ಪಡಿಸಿದ್ದ 'ಮಂಗಳೂರು ಟೆಕ್ನೊವಾಂಜಾ'ದ ಐದನೇ ಆವೃತ್ತಿಯಲ್ಲಿ ಪ್ರಿಯಾಂಕ್ ಖರ್ಗೆ ಮಾತನಾಡಿದರು.

ರಾಜ್ಯದಲ್ಲಿ 23 ಸಾವಿರ ಸಕ್ರಿಯ ರೌಡಿಗಳು

ಅಕ್ರಮ ಚಟುವಟಿಕೆಗೆ ಕಡಿವಾಣ: ರೌಡಿಗಳ ಚಲನವಲನದ ಮಾಹಿತಿ ಸಂಗ್ರಹ

• ಕೆ.ಎಸ್.ಸುನಿಲ್

ಬೆಂಗಳೂರು: ರೌಡಿಗಳ ಅಕ್ರಮ ಚಟುವಟಿಕೆ, ಗೂಂಡಾ ವರ್ತನೆಗೆ ಕಡಿವಾಣ ಹಾಕುವ ಕಠಿಣ ಕ್ರಮಕ್ಕೆ ಮುಂದಾಗಿರುವ ಪೊಲೀಸರು, ರೌಡಿಗಳ ಮನೆಗಳ ಮೇಲೆ ದಾಳಿ ನಡೆಸಿ, ಪ್ರಸ್ತುತ ಮಾಡುತ್ತಿರುವ ಕೆಲಸ ಹಾಗೂ ಅವರ ಚಲನವಲನಗಳ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಒಟ್ಟು 23,016 ಸಕ್ರಿಯ ರೌಡಿಗಳಿದ್ದಾರೆ. ಬೆಂಗಳೂರಿನಲ್ಲಿ ಅತಿ ಹೆಚ್ಚು 8,245 ರೌಡಿಗಳು ಇದ್ದು, ಈ ಪೈಕಿ 7,338 ಮಂದಿ ಸಕ್ರಿಯವಾಗಿದ್ದಾರೆ. ಕಲಬುರಗಿಯಲ್ಲಿ 1,934, ಬೆಂಗಳೂರು ದಕ್ಷಿಣದಲ್ಲಿ 952, ತುಮಕೂರಿನಲ್ಲಿ 856 ಮತ್ತು ಹಾಸನದಲ್ಲಿ 553 ರೌಡಿಗಳು ಸಕ್ರಿಯವಾಗಿದ್ದಾರೆ.

ಗೂಂಡಾ ಕಾಯ್ದೆಯಡಿ 2023ನೇ ಸಾಲಿನಲ್ಲಿ 677 ರೌಡಿಗಳನ್ನು ಗಡಿಪಾರು ಮಾಡಿ 52 ಮಂದಿಯನ್ನು ಬಂಧಿಸಲಾಗಿದೆ. 2024ರಲ್ಲಿ 906 ರೌಡಿಗಳನ್ನು ಗಡಿಪಾರು ಮಾಡಿ 41 ಜನರನ್ನು ಬಂಧಿಸಿದ್ದು, 2025ನೇ ಸಾಲಿನಲ್ಲಿ ಜುಲೈ ಅಂತ್ಯದವರೆಗೆ 300 ರೌಡಿಗಳನ್ನು ಗಡಿಪಾರು ಮಾಡಿ, 21 ಮಂದಿಯನ್ನು ಬಂಧಿಸಲಾಗಿದೆ. ಒಟ್ಟು 1,883 ಮಂದಿಯನ್ನು ಗಡಿಪಾರು ಮಾಡಲಾಗಿದೆ.

ವಿವಿಧ ಜಿಲ್ಲೆಗಳ ರೌಡಿಗಳ ವಿರುದ್ಧ ಈಗಾಗಲೇ 21,456 ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವ ಪೊಲೀಸರು, ಹಲವು ರೌಡಿಗಳ ಮನೆ ಮತ್ತು ಖಾಸಗಿ ವ್ಯವಹಾರಗಳ ಕಚೇರಿಗಳ ಮೇಲೆ ದಾಳಿ ನಡೆಸಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ರೌಡಿಗಳು ಕೃತ್ಯವೆಸಗಿ ಹೊರ ರಾಜ್ಯಗಳಲ್ಲಿ ತಲೆಮರೆಸಿಕೊಳ್ಳುತ್ತಿರುವ ಪ್ರಕರಣ ಹೆಚ್ಚಾಗುತ್ತಿವೆ. ಇತ್ತೀಚೆಗೆ ಬೆಂಗಳೂರಿನಲ್ಲಿ ರೌಡಿಶೀಟರ್ ಬಿಕ್ಲು ಶಿವನನ್ನು ಕೊಚ್ಚಿ ಕೊಲೆ ಮಾಡಲಾಗಿತ್ತು. ಪ್ರಮುಖ ಆರೋಪಿ ವಿದೇಶದಲ್ಲಿ ತಲೆಮರೆಸಿಕೊಂಡಿದ್ದ. ಅನೇಕ ಪ್ರಕರಣಗಳಲ್ಲಿ ಜೈಲು ಪಾಲಾಗಿ ಹೊರ ಬಂದು ಮತ್ತೆ ರೌಡಿ ಚಟುವಟಿಕೆಯಲ್ಲಿ ತೊಡಗಿರುವವರ ಮೇಲೆ ಪೊಲೀಸರು ಕಣ್ಗಾವಲು ಇರಿಸಿದ್ದಾರೆ.

ಸರ ಕಳ್ಳತನ, ದರೋಡೆ, ರೌಡಿಗಳ ಪುಂಡಾಟ ಹೆಚ್ಚುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಮುಖ್ಯವಾಗಿ ರೌಡಿಗಳು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ್ದರು. ಹಾಗಾಗಿ ರೌಡಿ ಚಟುವಟಿಕೆಗಳನ್ನು ನಿಗ್ರಹಿಸಲು ಅಪರಾಧ ಹಿನ್ನೆಲೆಯುಳ್ಳವರ ಮೇಲೆ ನಿಗಾ ಇಡಲಾಗುತ್ತಿದೆ.

ರೌಡಿ ಚಟುವಟಿಕೆಗಳನ್ನು ಮಟ್ಟ ಹಾಕಲು ಬೆಂಗಳೂರಿನಲ್ಲಿ ಕೇಂದ್ರ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ಆಗ್ನೇಯ, ನೈರುತ್ಯ, ವಾಯವ್ಯ, ಎಲೆಕ್ಟ್ರಾನಿಕ್ಸ್ ಸಿಟಿ ಹಾಗೂ ವೈಟ್‌ಫೀಲ್ಡ್ ವಿಭಾಗ ವ್ಯಾಪ್ತಿಯ ಠಾಣೆಗಳ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. 1,476 ರೌಡಿಗಳ ಮನೆ ಮೇಲೆ ದಾಳಿ ಮಾಡಿ, ಶೋಧ ನಡೆಸಿದರು. ಅವರ ವೈಯಕ್ತಿಕ ವಿವರ, ಉದ್ಯೋಗ, ಬಳಸುತ್ತಿರುವ ಮೊಬೈಲ್ ಸಂಖ್ಯೆ, ಅವರ ಚಲನವಲನಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು.

ರೌಡಿಗಳ ವೈಯಕ್ತಿಕ ದಾಖಲೆಗಳನ್ನು ಪರಿಶೀಲಿಸಿ, ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗದೆ ವಾರಂಟ್ ಮತ್ತು ಪ್ರೊಕ್ಲಮೇಷನ್ ಆಗಿರುವ ಬಗ್ಗೆ ಪರಿಶೀಲನೆ ನಡೆಸಿದರು. ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ರೌಡಿಗಳಿಗೆ ಎಚ್ಚರಿಕೆ ನೀಡಿ, ಮುಚ್ಚಳಿಕೆ ಬರೆಯಿಸಿಕೊಂಡರು.

ರಾಜ್ಯದಲ್ಲಿ ಅತಿ ಹೆಚ್ಚು ರೌಡಿಗಳು ಹೊಂದಿರುವ ಪಟ್ಟಿಯಲ್ಲಿ ಬೆಂಗಳೂರು ನಗರ ಮೊದಲ ಸ್ಥಾನದಲ್ಲಿದ್ದರೆ, ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಎರಡನೇ ಸ್ಥಾನದಲ್ಲಿದೆ. ಬೆಂಗಳೂರಿನಲ್ಲಿ 2023ರಲ್ಲಿ 2,301 ರೌಡಿಗಳ ಪರಿಶೀಲನೆ ಮಾಡಲಾಗಿತ್ತು. ಆ ಪೈಕಿ 2,062 ರೌಡಿಗಳು ಸಕ್ರಿಯರಾಗಿದ್ದರು. 2025ರ ಜುಲೈವರೆಗೆ 2,847 ಮಂದಿ ರೌಡಿಗಳ ತಪಾಸಣೆ ವೇಳೆ, 2,558 ರೌಡಿಗಳು ಅಕ್ರಮ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವುದು ಗೊತ್ತಾಗಿದೆ. 288 ರೌಡಿಗಳ ವಿರುದ್ಧ ಜಾಮೀನು ರಹಿತ ಪ್ರಕರಣಗಳು ದಾಖಲಾಗಿವೆ. ಶಸ್ತ್ರಾಸ್ತ್ರ ಕಾಯ್ದೆಯಡಿ 17 ಹಾಗೂ ಎನ್‌ಡಿಪಿಎಸ್ (ಡ್ರಗ್ಸ್) ಪ್ರಕರಣದಲ್ಲಿ 14 ಮಂದಿಯ ಬಂಧನವಾಗಿದೆ.

ಬೆಂಗಳೂರಿನಲ್ಲಿರುವ ರೌಡಿಗಳ ವಿವರ

ವರ್ಷ	ರೌಡಿಗಳು	ಸಕ್ರಿಯ	ಜಾಮೀನು ರಹಿತ
2023	2,301	2,062	84
2024	3,097	2,718	113
2025	2,847	2,558	65*

*ಜುಲೈವರೆಗೆ

ಮತ್ತೆ ಪ್ರಕರಣ ದಾಖಲು

'ಬೆಂಗಳೂರು ನಗರದಲ್ಲಿ ಸಾವಿರಕ್ಕೂ ಹೆಚ್ಚು ರೌಡಿಗಳ ಮನೆ ಮೇಲೆ ಆಯಾ ಠಾಣೆಯ ಪೊಲೀಸರು ದಾಳಿ ನಡೆಸಿದ್ದಾರೆ. ಪದೇ ಪದೇ ಅಪರಾಧಗಳಲ್ಲಿ ತೊಡಗಿರುವ ಎಂಒಬಿಗಳ (ಅಪರಾಧ ಹಿನ್ನೆಲೆಯುಳ್ಳವರು) 165 ಮನೆಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ನ್ಯಾಯಾಲಯದ ಹಾಗೂ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಕೆಲವು ರೌಡಿಗಳನ್ನು ಗಡಿಪಾರು ಮಾಡಲಾಗುತ್ತಿದೆ. ಈ ಪೈಕಿ ಮೂವರು ನಗರಕ್ಕೆ ವಾಪಸ್ ಬಂದು ನೆಲೆಸಿರುವುದು ದಾಳಿ ವೇಳೆ ಗೊತ್ತಾಗಿದೆ. ಅವರ ವಿರುದ್ಧ ಮತ್ತೆ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಶೇ 40 ಕಮಿಷನ್: ಆಯೋಗದ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಶೇ 40 ರಷ್ಟು ಕಮಿಷನ್ ಕುರಿತ ಆರೋಪದ ತನಿಖೆಗಾಗಿ ನೇಮಿಸಲಾಗಿದ್ದ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ವಿಚಾರಣಾ ಆಯೋಗದ ಅವಧಿಯನ್ನು ಇದೇ 30ರವರೆಗೆ ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಹಿಂದಿನ ಅಧ್ಯಕ್ಷ ಡಿ.ಕೆಂಪಣ್ಣ ಅವರ ಆರೋಪ ಆಧರಿಸಿ, 2023ರ ಆಗಸ್ಟ್‌ನಲ್ಲಿ ಈ ಆಯೋಗವನ್ನು ರಚಿಸಲಾಗಿತ್ತು. ಬಳಿಕ, ಅನೇಕ ಬಾರಿ ಅವಧಿಯನ್ನು ವಿಸ್ತರಿಸಲಾಗಿತ್ತು. ಆಯೋಗದ ಅವಧಿ ಇದೇ ಆಗಸ್ಟ್ 30 ಕ್ಕೆ ಕೊನೆಗೊಂಡಿತ್ತು.

ನಾರಾಯಣಪುರ ಉಪ/ಸೀಳು ಕಾಲುವೆಗೆ ಸಂಬಂಧಿಸಿದ ಗೋಪ್ಯ ಕಡತಗಳು ಮತ್ತು ವಿಚಾರಣಾ ಆಯೋಗದ ಪೀಠೋಪಕರಣ ಹಾಗೂ ಸಾಮಗ್ರಿಗಳನ್ನು ಹಸ್ತಾಂತರಿಸುವುದು ಬಾಕಿ ಇದೆ. ಇದೇ 1ರಂದು ಸಲ್ಲಿಸಿರುವ ತನಿಖಾ ವರದಿಗೆ ಸಂಬಂಧಿಸಿದ ಗೋಪ್ಯ ಕಡತಗಳನ್ನು ಹಸ್ತಾಂತರಿಸುವುದು ಬಾಕಿ ಇದೆ. ಈ ಕಾರಣದಿಂದ ಅವಧಿ ಮುಂದುವರಿಸುವಂತೆ ಸರ್ಕಾರಕ್ಕೆ ಆಯೋಗ ಬೇಡಿಕೆ ಸಲ್ಲಿಸಿತ್ತು.

'ಅನಸೂಯಾ ಚರಿತ್ರೆ' ಅ.18ಕ್ಕೆ ಬಿಡುಗಡೆ

ಮಂಗಳೂರು: ಪುರಂದರದಾಸರು ರಚಿಸಿದ್ದ 'ಅನಸೂಯಾಚರಿತ್ರೆ' ಎಂಬ ಯಕ್ಷಗಾನವನ್ನು ಈಚೆಗೆ ಯಕ್ಷಗಾನದ ಸಂಶೋಧಕ ಕಬ್ಬಿನಾಲೆ ವಸಂತ ಭಾರದ್ವಾಜ ಅವರು ಸಂಶೋಧಿಸಿದ್ದು, ಇದನ್ನು ಕಾಸರಗೋಡಿನ 'ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ'ವು ಪ್ರಕಟಿಸಿದೆ.ಅಕ್ಟೋಬರ್ 18ರಂದು ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಭವನದಲ್ಲಿ ಕೃತಿ ಬಿಡುಗಡೆ ನಡೆಯಲಿದೆ ಎಂದು ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ಪ್ರಕಟಣೆ ತಿಳಿಸಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿ ನವವರ್ಣ

ನೀಲಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಗುರುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


RSPA ಸಿಬ್ಬಂದಿ, ಬೆಂಗಳೂರು


ಅನುರಾಧ & ಫ್ರೆಂಡ್ಸ್, ಬೆಂಗಳೂರು


ಓಂ ಯೋಗ ಕೇಂದ್ರ, ಬೆಂಗಳೂರು


ವಿನೋದ ಮತ್ತು ಕುಟುಂಬ, ಪ್ರಕಾಶ್ ನಗರ


ಕಲ್ಪನಾ & ಫ್ರೆಂಡ್ಸ್, ವಿಜಯನಗರ


ಕವಿತಾ & ಸ್ನೇಹಿತರು


ನಗೆ ಯೋಗ ಕೂಟ, ಬಸವೇಶ್ವರ ನಗರ


ಲತಾ & ಫ್ರೆಂಡ್ಸ್, ಜೆಪಿ ನಗರ


ಜಯಶೀಲ ಮತ್ತು ಸ್ನೇಹಿತರು, ಜೆಪಿ ನಗರ


ಐಶ್ವರ್ಯ, ಅನ್ನಪೂರ್ಣೇಶ್ವರಿನಗರ


ಕೃಪಾನಿಧಿ ಕಾಲೇಜು, ಕೋರಮಂಗಲ


ಜ್ಯೋತಿ ಸಜ್ಜನ ಯೋಗ ತಂಡ, ಬೆಂಗಳೂರು


ಸರ್ಕಾರಿ ಶಾಲಾ ಸಿಬ್ಬಂದಿ, ಚಿಕ್ಕಜಾಲ


ಸುಚಿತ್ರಾ & ಫ್ರೆಂಡ್ಸ್, ಕೆಂಗೇರಿ


ದೀಪಾ & ಸ್ನೇಹಿತರು, ಬೆಂಗಳೂರು


ರಾಮ ಭಜನಾ ಮಂಡಲಿ, ಬೆಂಗಳೂರು


ನಾಗರತ್ನ & ಕುಟುಂಬ, ಬೆಂಗಳೂರು


ಜಯ & ಸ್ನೇಹಿತರು, ನಿಸರ್ಗ ಲೇಔಟ್


ಭಾಗ್ಯಶ್ರೀ & ಸ್ನೇಹಿತರು, ಬೆಂಗಳೂರು


ಆಶಾ & ಫ್ರೆಂಡ್ಸ್, ಕೊಮ್ಮಘಟ್ಟ


ವಿದ್ಯಾ & ಸ್ನೇಹಿತರು, ಬೆಂಗಳೂರು


ಶ್ರೀದೇವಿ & ಸ್ನೇಹಿತರು, ಆರ್‌ಟಿ ನಗರ

ಇಂದಿನ ಬಣ್ಣ - ನೀಲಿ


ಮಣೂರ್ ಸಹೋದರಿಯರು, ಬೆಂಗಳೂರು


ಎಸ್ ವಿ ಪಾಲಿಟೆಕ್ನಿಕ್ ಸಿಬ್ಬಂದಿ, ಬನ್ನೇರುಘಟ್ಟ


ಶೇಷಾದ್ರಿಪುರಂ ಕಾನೂನು ವಿಶ್ವವಿದ್ಯಾಲಯ, ಬೆಂಗಳೂರು


ಹಿತಾ, ಜಕ್ಕೂರು


SourceHub ಸಿಬ್ಬಂದಿ, ವಿಜಯನಗರ


ತುಮಕೂರು ವಿಶ್ವವಿದ್ಯಾಲಯದ ಗ್ರಂಥಾಲಯ ಸಿಬ್ಬಂದಿ


ಲೀಲಾ & ಫ್ರೆಂಡ್ಸ್, ಜಗಜ್ಯೋತಿ ಲೇಔಟ್


ಬುವನೇಶ್ವರಿ ಮಹಿಳಾ ಸಂಘ, ಬೆಂಗಳೂರು

‘ಕೃಷಿ ಪರಿಸರದ ಕಡೆಗೆ ನಮ್ಮ ನಡಿಗೆ’

ಜಿಕೆವಿಕೆ ಆವರಣದಲ್ಲಿ ಮಾರ್ಗದರ್ಶಿ ಪ್ರವಾಸ: ಇದೇ 27ಕ್ಕೆ ಚಾಲನೆ

• ಖಲೀಲಅಹ್ಮದ ಶೇಖ


ಬೆಂಗಳೂರು: ‘ಸಿಲಿಕಾನ್ ಸಿಟಿ’ಯ ಜನರಿಗೆ ಜಿಕೆವಿಕೆ ಆವರಣದಲ್ಲಿರುವ ಹಸಿರು ಪರಿಸರ, ವಿಭಿನ್ನ ಜಾತಿಯ ಗಿಡ-ಮರಗಳು, ಪ್ರಾಣಿ, ಪಕ್ಷಿ ಸಂಕುಲಗಳನ್ನು ಸಾರ್ವಜನಿಕರಿಗೆ ಪರಿಚಯಿಸುವುದು. ಅದರ ಜೊತೆಗೆ ಕೃಷಿ ಮತ್ತು ಪರಿಸರದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ‘ಕೃಷಿ ಪರಿಸರದ ಕಡೆಗೆ ನಮ್ಮ ನಡಿಗೆ’ ಎಂಬ ಮಾರ್ಗದರ್ಶಿ ಪ್ರವಾಸ ಪ್ರಾರಂಭಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಿದ್ಧತೆ ನಡೆಸಿದೆ.

ಜಿಕೆವಿಕೆ ಆವರಣವು 1,320 ಎಕರೆ ಪ್ರದೇಶ ಹೊಂದಿದೆ. ಇಲ್ಲಿ ಸಾವಿರಾರು ಸಸ್ಯ ಪ್ರಭೇದಗಳು, ವೈವಿಧ್ಯಮಯ ಕೃಷಿ ಬೆಳೆಗಳಿವೆ. ಇದು ಜೀವವೈವಿಧ್ಯದ ತಾಣವಾಗಿದೆ. ನಗರದ ಒತ್ತಡದ ಬದುಕು, ಸಂಚಾರ ದಟ್ಟಣೆ, ಶಬ್ದ ಮಾಲಿನ್ಯ, ವಾಯು ಮಾಲಿನ್ಯದಂತಹ ಸಮಸ್ಯೆಗಳನ್ನು ಮರೆತು ಈ ಹಸಿರು ಪರಿಸರದಲ್ಲಿ ನಡಿಗೆ ಮಾಡಿದರೆ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಗಿಡ-ಮರಗಳು ಹಾಗೂ ಕೃಷಿಯ ಬಗ್ಗೆ ಕುತೂಹಲ ಇರುವವರು, ಜೀವ ವೈವಿಧ್ಯ ಅಧ್ಯಯನಕಾರರು, ವಿದ್ಯಾರ್ಥಿಗಳು, ನಗರವಾಸಿಗಳು ಸೇರಿ ಸಾರ್ವಜನಿಕರು ಈ ನಡಿಗೆಯಲ್ಲಿ ಭಾಗವಹಿಸಬಹುದು.

‘ಹೆಬ್ಬಾಳದ ಜಿಕೆವಿಕೆ ಆವರಣದಲ್ಲಿ ಸೆ.27ರಂದು ಪರಿಸರದ ಕಡೆಗೆ ನಮ್ಮ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದ್ದು, ಬೆಳಿಗ್ಗೆ 6ರಿಂದ 10.30ರವರೆಗೆ ಈ ನಡಿಗೆ ನಡೆಯಲಿದೆ. ಇದರಲ್ಲಿ ಭಾಗವಹಿಸುವವರಿಗೆ ಇಲ್ಲಿನ ಗಿಡ-ಮರಗಳು ಸೇರಿ ಕೃಷಿ ಬೆಳೆಗಳ ಪರಿಚಯ, ಅವುಗಳನ್ನು ಬೆಳೆಯುವ ವಿಧಾನ ಮುಂತಾದ ವಿಷಯಗಳ ಕುರಿತು ತಜ್ಞರು ಮಾಹಿತಿ ನೀಡಲಿದ್ದಾರೆ. ಈ ನಡಿಗೆಯಲ್ಲಿ 200 ಜನರು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಮೊದಲು ನೋಂದಣಿ ಮಾಡಿಕೊಂಡವರಿಗೆ ಆದ್ಯತೆ ನೀಡಲಾಗುತ್ತದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್ ತಿಳಿಸಿದರು.



‘ಕೃಷಿ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶ’



ಎಸ್.ವಿ. ಸುರೇಶ

ನಗರ ಪ್ರದೇಶದಲ್ಲಿರುವ ಜನರಿಗೆ ಕೃಷಿ ಬಗ್ಗೆ ಆಸಕ್ತಿ ಮೂಡಿಸುವುದು ಹಾಗೂ ಪ್ರಕೃತಿಯ ಜೊತೆಗೆ ಒಡನಾಟ ಹೆಚ್ಚಿಸುವ ಉದ್ದೇಶದಿಂದ ಪರಿಸರದ ಕಡೆಗೆ ನಮ್ಮ ನಡಿಗೆ ಎಂಬ ಕಾರ್ಯಕ್ರಮ ರೂಪಿಸಲಾಗಿದೆ. ವೈಜ್ಞಾನಿಕ ಕೃಷಿಯ ಬಗ್ಗೆ ಮಾಹಿತಿ ನೀಡಲಾಗುತ್ತದೆ. ತಿಂಗಳಿಗೆ ಒಂದು ಬಾರಿ ಈ ನಡಿಗೆ ಆಯೋಜಿಸಲಾಗುತ್ತದೆ. ಇದರ ಜೊತೆಗೆ ಜಿಕೆವಿಕೆ ಆವರಣದಲ್ಲಿ ಐದು ಕಿ.ಮೀ ನಡಿಗೆ ಇರಲಿದೆ. ಕೃಷಿ ಸಂತೆ ಇರಲಿದ್ದು, ಆಸಕ್ತರು ತಮಗೆ ಬೇಕಾದ ವಸ್ತು ಖರೀದಿಸಬಹುದು ಎಂದು ಎಸ್.ವಿ. ಸುರೇಶ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪರಿಸರದ ನಡಿಗೆಯಲ್ಲಿ ಪ್ರಕೃತಿ ಸೊಬಗಿನ ಜೊತೆಗೆ ಕೃಷಿ ಬೆಳೆಗಳು, ಕೃಷಿ ವಸ್ತು ಸಂಗ್ರಹಾಲಯ, ಮಧುವನ, ಪಶುಸಂಗೋಪನೆ, ಕುರಿ, ಮೇಕೆ, ಹಂದಿ, ಕೋಳಿ ಸಾಕಾಣಿಕೆ, ಎರೆಹುಳು ಗೊಬ್ಬರ ತಯಾರಿಕೆ, ಜಲ ಕೃಷಿಯ ಕುರಿತು ನುರಿತ ತಜ್ಞರು ಸ್ಥಳದಲ್ಲಿಯೇ ತಾಂತ್ರಿಕ ಮಾಹಿತಿ ನೀಡಲಿದ್ದಾರೆ. ರಾಷ್ಟ್ರದ ಪ್ರಮುಖ 12 ಸಸ್ಯ ಉದ್ಯಾನಗಳಲ್ಲಿ ಒಂದಾದ ಮಹಾತ್ಮ ಗಾಂಧಿ ಸಸ್ಯ ಉದ್ಯಾನಕ್ಕೂ ಭೇಟಿ ನೀಡಬಹುದು. ಎತ್ತಿನ ಬಂಡಿಯ ಸವಾರಿಯನ್ನು ಮಾಡುವ ಅವಕಾಶ ಒದಗಿಸಲಾಗುವುದು’ ಎಂದರು.

₹200 ಶುಲ್ಕ ನಿಗದಿ

ಪರಿಸರದ ಕಡೆಗೆ ನಮ್ಮ ನಡಿಗೆಯಲ್ಲಿ ಪಾಲ್ಗೊಳ್ಳಲು ₹200 ಶುಲ್ಕ ನಿಗದಿಪಡಿಸಲಾಗಿದ್ದು, 10 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶವಿದೆ. ನಡಿಗೆ ಮುಗಿದ ನಂತರ ಸಿರಿಧಾನ್ಯಗಳಿಂದ ತಯಾರಿಸಿದ ಲಘು ಉಪಾಹಾರದ ವ್ಯವಸ್ಥೆ ಇರಲಿದೆ. ಆಸಕ್ತರು ಇದೇ 25ರೊಳಗೆ https://forms.gle/jE4vzh5GDiM4pEk59 ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 63604 66004, 94822 30588ಗೆ ಸಂಪರ್ಕಿಸಬಹುದು.

ಸಾಂಸ್ಕೃತಿಕ ಮುನ್ನೋಟ

‘ಅತಿಕಾಯ’ ಯಕ್ಷಗಾನ ತಾಳಮದ್ದಳೆ ಪ್ರದರ್ಶನ

ಬೆಂಗಳೂರು: ಸಪ್ತಕ ಬೆಂಗಳೂರು ಸಹಯೋಗದಲ್ಲಿ ಫಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್ ಇದೇ 26ರಂದು ಸಂಜೆ 6 ಗಂಟೆಗೆ ವಿಜಯನಗರದ ಜೈಮಿನಿರಾವ್ ವೃತ್ತದಲ್ಲಿರುವ ಹೋಟೆಲ್ ಸೌಥ್ ರುಚಿಸ್ ಸಭಾಂಗಣದಲ್ಲಿ ‘ಅತಿಕಾಯ’ ಯಕ್ಷಗಾನ ತಾಳಮದ್ದಳೆ ಪ್ರದರ್ಶನ ಹಮ್ಮಿಕೊಂಡಿದೆ.

ಇದನ್ನು ಹಟ್ಟಿಯಂಗಡಿ ರಾಮ ಭಟ್ಟ ಅವರು ರಚಿಸಿದ್ದಾರೆ. ಹಿಮ್ಮೇಳದಲ್ಲಿ ಅನಂತ ಹೆಗಡೆ ದಂತಳಿಗೆ (ಭಾಗವತಿಕೆ), ಎಸ್.ಪಿ. ಫಾಟಕ್ ಕಾರ್ಕಳ (ಮದ್ದಳೆ), ಮುಮ್ಮೇಳದಲ್ಲಿ ನಾರಾಯಣ ಯಾಜಿ ಸಾಲೆಬೈಲು, ದಿವಾಕರ ಹೆಗಡೆ ಕೆರೆಹೊಂಡ, ಶಶಾಂಕ ಅರ್ನಾಡಿ, ಪ್ರಸನ್ನ ಭಟ್ ಮಾಗೋಡು ಮತ್ತು ಸುಹಾಸ್ ಮರಾಠೆ ಪಾಲ್ಗೊಳ್ಳಲಿದ್ದಾರೆ.

ಈ ಪ್ರದರ್ಶವನ್ನು ಎಸ್.ಎಂ.ಹೆಗಡೆ ಬಣಗಿ ಉದ್ಘಾಟಿಸಲಿದ್ದು, ಸಪ್ತಕ ಬೆಂಗಳೂರಿನ ಜಿ.ಎಸ್.ಹೆಗಡೆ ಅವರು ಉಪಸ್ಥಿತರಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 7899830606

ಕಲಾಕೃತಿಗಳ ಪ್ರದರ್ಶನ, ಮಾರಾಟ 27ಕ್ಕೆ ಆರಂಭ

ಬೆಂಗಳೂರು: ಸಮುದಾಯ ಕರ್ನಾಟಕ ಸಂಘಟನೆಯು ‘ಮನುಷ್ಯತ್ವದೆಡೆಗೆ ಸಮುದಾಯ 50’ ಶೀರ್ಷಿಕೆಯಡಿ ಕಲಾ ಶಿಬಿರದ ಕಲಾಕೃತಿಗಳ ಪ್ರದರ್ಶನ ಹಾಗೂ ಮಾರಾಟವನ್ನು ಇದೇ 27ರಿಂದ 29ರವರೆಗೆ ಕುಮಾರ ಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನ ದೇವರಾಜ ಅರಸು ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

‘ಸ್ವರ ಸಂಧ್ಯಾ’ ಸಂಗೀತ ಸಂಜೆ

ಬೆಂಗಳೂರು: ಶ್ರೀರಾಮ ಕಲಾ ವೇದಿಕೆಯು ಇದೇ 27ರಂದು ಸಂಜೆ 5.30ಕ್ಕೆ ‘ಸ್ವರ ಸಂಧ್ಯಾ’ ಶೀರ್ಷಿಕೆಯಡಿ ಸಂಗೀತ ಸಂಜೆ ಕಾರ್ಯಕ್ರಮವನ್ನು ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಇಎಸ್‌ವಿ ಹಾಲ್‌ನಲ್ಲಿ ಹಮ್ಮಿಕೊಂಡಿದೆ.

ಮಿಲಿಂದ್ (ತಬಲಾ), ವಿಶ್ವಜಿತ್ ಕಿಣಿ (ಹಾರ್ಮೋನಿಯಂ), ರಾಮ್ ದೇಶಪಾಂಡೆ (ಗಾಯನ), ಉದಯರಾಜ್ ಕರ್ಪೂರ್ (ತಬಲಾ) ಹಾಗೂ ರವೀಂದ್ರ ಕಟೋಟಿ (ಹಾರ್ಮೋನಿಯಂ) ಅವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಅಣ್ಣನ ನೆನಪು’ ಸಾಕ್ಷ್ಯ ನಾಟಕ ಪ್ರದರ್ಶನ

ಬೆಂಗಳೂರು: ಪ್ರವರ ಥಿಯೇಟರ್ ಇದೇ 27ರಂದು ಸಂಜೆ 7 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ‘ಅಣ್ಣನ ನೆನಪು’ ಸಾಕ್ಷ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಈ ನಾಟಕವನ್ನು ಹನು ರಾಮಸಂಜೀವ್ ನಿರ್ದೇಶಿಸಿದ್ದಾರೆ. ಮಾಹಿತಿಗೆ 9686869676 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.



‘ಅಣ್ಣನ ನೆನಪು’ ನಾಟಕದ ದೃಶ್ಯ

‘ಹುತ್ತದಲ್ಲಿ ಹುತ್ತ’ ನಾಟಕ ಪ್ರದರ್ಶನ




ಟಿ.ಪಿ.ಕೈಲಾಸಂ

ಬೆಂಗಳೂರು: ಅಂತರಂಗ ತಂಡವು ಇದೇ 27 ಮತ್ತು 28ರಂದು ಸಂಜೆ 7.15ಕ್ಕೆ ಎನ್.ಆರ್. ಕಾಲೊನಿಯಲ್ಲಿರುವ ಡಾ.ಸಿ.ಅಶ್ವಥ್ ಕಲಾ ಭವನದಲ್ಲಿ ‘ಹುತ್ತದಲ್ಲಿ ಹುತ್ತ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಟಿ.ಪಿ. ಕೈಲಾಸಂ ಅವರು ರಚಿಸಿದ್ದಾರೆ. ಇದು ಹಾಸ್ಯ ನಾಟಕವಾಗಿದ್ದು, ಮೂಲದಲ್ಲಿ ಬಿ.ವಿ. ರಾಜಾರಾಂ ಅವರು ನಿರ್ದೇಶಿಸಿದ್ದಾರೆ. ಈಗ ಅರ್ಚನಾ ಶ್ಯಾಮ್ ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನ ಕಾಣಲಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವೆಂದು ಪ್ರಕಟಣೆ ತಿಳಿಸಿದೆ. **ಸಂಪರ್ಕಕ್ಕೆ: 9880914509**

‘ಕೃಷ್ಣಸಂಧಾನ’ ಯಕ್ಷಗಾನ ತಾಳಮದ್ದಳೆ



ಪ್ರಕಾಶ್ ಬೆಳವಾಡಿ

ಬೆಂಗಳೂರು: ಸೆಂಟರ್ ಫಾರ್ ಫಿಲ್ಮ್ ಆ್ಯಂಡ್ ಡ್ರಾಮಾ ವತಿಯಿಂದ ಇದೇ 28ರಂದು ಮಧ್ಯಾಹ್ನ 3 ಗಂಟೆಗೆ ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾದಲ್ಲಿ ‘ಕೃಷ್ಣಸಂಧಾನ’ ಯಕ್ಷಗಾನ ತಾಳಮದ್ದಳೆ ಹಮ್ಮಿಕೊಳ್ಳಲಾಗಿದೆ.

ಈ ಪ್ರಸಂಗವನ್ನು ದೇವಿದಾಸ್ ಅವರು ರಚಿಸಿದ್ದಾರೆ. ರಂಗಕರ್ಮಿ ಪ್ರಕಾಶ್ ಬೆಳವಾಡಿ ಅವರ ಸಾರಥ್ಯದಲ್ಲಿ ನಡೆಯಲಿದೆ. ಮಧೂರು ವಿಷ್ಣುಪ್ರಸಾದ ಕಲ್ಲೂರಾಯ (ಭಾಗವತಿಕೆ), ಅಮೋಘ ಕುಂಟಿನಿ (ಮದ್ದಳೆ ಮತ್ತು ಮೃದಂಗ), ಪವನರಾಜ ಕಲ್ಲೂರಾಯ (ಚಡೆ), ಗೋಪಾಲಕೃಷ್ಣ ಕುಂಜತ್ತಾಯ (ಚಕ್ರತಾಳ) ಹಿಮ್ಮೇಳದಲ್ಲಿ ಭಾಗವಹಿಸಲಿದ್ದಾರೆ. ನಾರಾಯಣ ಯಾಜಿ, ಕೆ.ಈ. ರಾಧಾಕೃಷ್ಣ, ಮಟ್ಟಿ ರಾಮಚಂದ್ರ ರಾವ್ (ವಿದುರ) ಮುಮ್ಮೇಳದಲ್ಲಿ ರಂಜಿಸಲಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ


ಚಿಟಿಕೆ ಸುದ್ದಿ

ಇಂದು ಬಿಡಿಎ ಸಭೆ

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪಿಆರ್‌ಆರ್) ಯೋಜನೆಗೆ ಸಂಬಂಧಿಸಿದಂತೆ ಸೆ.25ರಂದು ಬೆಳಿಗ್ಗೆ 11ಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಚೇರಿಯಲ್ಲಿ ರೈತರು ಹಾಗೂ ನಿವೇಶನದಾರರ ಸಂಘದ ಪದಾಧಿಕಾರಿಗಳು ಹಾಗೂ ಭೂಮಾಲೀಕರ ಸಭೆ ಕರೆಯಲಾಗಿದೆ.

ಯೋಜನೆಗೆ ಸಂಬಂಧಿಸಿದಂತೆ ಆಗಿರುವ ಪ್ರಗತಿಯ ಬಗ್ಗೆ ಸಭೆ ನಡೆಸಿ ಮಾಹಿತಿ ನೀಡಲು ಮನವಿಗಳು ಬಂದಿರುವ ಕಾರಣ ಈ ಸಭೆ ಕರೆಯಲಾಗಿದೆ ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಜಲಮಂಡಳಿ ಫೋನ್ ಇನ್ ನಾಳೆ



ರಾಮಪ್ರಸಾತ್ ಮನೋಹರ್

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಸೆ.26ರ ಶುಕ್ರವಾರ ಬೆಳಿಗ್ಗೆ 9.30 ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ದೂರವಾಣಿ ಸಂಖ್ಯೆ: 080-22945119, 080-22229639. ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯೊಂದಿಗೆ ದೂರು ನೀಡಬಹುದು.

ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ನೇಮಕ



ಎಂ.ಕೆ. ನಾಗರಾಜು

ನೆಲಮಂಗಲ: ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಎಂ.ಕೆ. ನಾಗರಾಜು ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಎಂ.ವೆಂಕಟೇಶ್, ಎಲ್.ಎಸ್. ಪ್ರಕಾಶ್, ಎಚ್. ಆಂಜಿನಮೂರ್ತಿ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ

‘ಶಿಕ್ಷಕರ ಪ್ರಶಸ್ತಿಗೂ ಪದ್ಮಶ್ರೀ ಗೌರವ ಬರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಭಾವ ಬಳಸಿ ಪ್ರಶಸ್ತಿಗಳನ್ನು ಪಡೆಯುವುದರಿಂದ ಶಿಕ್ಷಕರು ದೂರ ಉಳಿಯಬೇಕು. ಇದರಿಂದ ಶಿಕ್ಷಕರಿಗೆ ನೀಡುವ ಪ್ರಶಸ್ತಿಗಳಿಗೂ ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿಗೆ ಇರುವ ಗೌರವ ಬರಲಿದೆ’ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರ ಕೇಂದ್ರ ಸಂಘ ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಹಾಗೂ ಹಿರಿಯ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹಿಂದೆ ಸರ್ಕಾರ ಜನಮೆಚ್ಚಿದ ಶಿಕ್ಷಕ ಎನ್ನುವ ಪ್ರಶಸ್ತಿ ನೀಡುತ್ತಿತ್ತು. ಅರ್ಹರ ಬದಲು ಪ್ರಭಾವ ಬಳಸಿ ಪ್ರಶಸ್ತಿ ಪಡೆಯುವವರ ಸಂಖ್ಯೆ ಹೆಚ್ಚಿ ಮಾರ್ಗಸೂಚಿಗಳನ್ನು ಬದಲಾಯಿಸಿದರೂ ಪ್ರಯೋಜನವಾಗದೇ ಪ್ರಶಸ್ತಿಯನ್ನೇ ನಿಲ್ಲಿಸುವಂತಹ ಸನ್ನಿವೇಶ ನಿರ್ಮಾಣವಾಯಿತು’ ಎಂದು ತಿಳಿಸಿದರು.

‘ಈಗ ಪ್ರತಿ ವರ್ಷ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ನೀಡುತ್ತಿದೆ. ಅರ್ಹರಿಗೆ ಪ್ರಶಸ್ತಿ ಸಿಗಬೇಕು ಎಂದು ಮಾನದಂಡಗಳನ್ನು ರೂಪಿಸಿ ಪ್ರಭಾವಕ್ಕೆ ಒಳಗಾಗದೇ ಆಯ್ಕೆ ಮಾಡಲಾಗುತ್ತಿದೆ. ಆಡಳಿತದಲ್ಲಿರುವವರು ಪ್ರಭಾವಕ್ಕೆ ಒಳಗಾಗದೆ ಅರ್ಹರಿಗೆ ಪ್ರಶಸ್ತಿ ಸಿಗುವಂತಾಗಬೇಕು’ ಎಂದರು.

ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕಿ (ಪ್ರಾಥಮಿಕ) ಅನಿತಾ.ವಿ. ನಾಜರೆ ಮಾತನಾಡಿ, ‘ಶಿಕ್ಷಕರ ಬೇಡಿಕೆಗಳನ್ನು ಈಡೇರಿಸಲು ಇಲಾಖೆ ಸಿದ್ದವಿದೆ. ಆದರೆ, ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಿಸಬೇಕು. ಬದಲಾದ ಕಾಲಘಟ್ಟದಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವ ಸವಾಲು ಇರುವುದರಿಂದ ಅವರಲ್ಲಿ ಶಿಸ್ತನ್ನು ರೂಢಿಸಲು ವಿಶೇಷ ಗಮನ ನೀಡಲೇಬೇಕು. ಶಿಕ್ಷಣ ಗುಣಮಟ್ಟ ಹೆಚ್ಚಿಸಲು ಒತ್ತು ನೀಡಬೇಕು’ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ‘ನಾವು ವಿದ್ಯಾರ್ಥಿಗಳಾಗಿದ್ದಾಗ ಶಿಕ್ಷಕರು ನೀಡುತ್ತಿದ್ದ ಶಿಕ್ಷೆ, ನಮ್ಮನ್ನು ತಿದ್ದಿ, ತೀಡಿ ಸರಿದಾರಿಗೆ ತರಲು ಹಾಕುತ್ತಿದ್ದ ಶ್ರಮ ನೆನಪಿಸಿಕೊಂಡಾಗ ಅವರ ಬಗ್ಗೆ ಗೌರವ ಬರುತ್ತದೆ. ನಾವು ಈ ಹಂತಕ್ಕೆ ಬಂದಿರುವುದರ ಹಿಂದೆ ಶಿಕ್ಷಕರ ಪಾತ್ರವೇ ಹೆಚ್ಚಿನದು’ ಎಂದು ಹೇಳಿದರು.

ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯ ಅಧ್ಯಕ್ಷತೆ ವಹಿಸಿದ್ದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಧಾನ ಕಾರ್ಯದರ್ಶಿ ಕೆ.ಗಂಗಪ್ಪಗೌಡ, ಸಂಘದ ಅಧ್ಯಕ್ಷ ಕೆ.ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ ವಿ.ಪಿ.ಕುಮಾರಸ್ವಾಮಿ, ಚಿನ್ನಪ್ಪರೆಡ್ಡಿ ಹಾಜರಿದ್ದರು 23 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ, 31 ಹಿರಿಯ ಶಿಕ್ಷಕರರಿಗೆ ಹಿರಿಯ ನಾಗರಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ನಗರದಲ್ಲಿ ಬುಧವಾರ ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರ ಕೇಂದ್ರ ಸಂಘ ಆಯೋಜಿಸಿದ್ದ ‘ಉತ್ತಮ ಶಿಕ್ಷಕ’ ಪ್ರಶಸ್ತಿ ಪ್ರದಾನ ಮತ್ತು ನಿವೃತ್ತ ಶಿಕ್ಷಕರಿಗೆ ಅಭಿನಂದನಾ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಜಿ.ಎನ್ ನೇತ್ರಾವತಿ, ಬಿ. ಶಿವಲಿಂಗರಾಜು, ಮಾಲಾ ಸಣ್ಣಕ್ಕಿ, ಕೆ.ಬಿ ನಾಗರಾಜು ಮತ್ತು ಗಾಯತ್ರಿ ದೇವಿ ಅವರಿಗೆ ರಾಜ್ಯ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

‘ತ್ವರಿತವಾಗಿ ಸಮೀಕ್ಷೆ ಪ್ರಾರಂಭಿಸಲು ಸೂಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ತ್ವರಿತವಾಗಿ ಪ್ರಾರಂಭಿಸಬೇಕು’ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಆಯೋಗದಿಂದ ಕೈಗೊಳ್ಳುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಬುಧವಾರ ನಡೆದ ವರ್ಚ್ಯುವಲ್ ಸಭೆಯಲ್ಲಿ ಅವರು ಮಾತನಾಡಿದರು.

‘ಸಮೀಕ್ಷೆ ನಡೆಸಲು ವಿವಿಧ ಇಲಾಖೆಗಳಿಂದ ನಿಯೋಜಿಸಿರುವ ಸಮೀಕ್ಷಾದಾರರಿಗೆ ಆಯಾ ನಗರ ಪಾಲಿಕೆಗಳಲ್ಲಿ ತರಬೇತಿ ನೀಡಬೇಕು. ಎಲ್ಲಾ ಇಲಾಖೆಗಳ ಸಮನ್ವಯದೊಂದಿಗೆ ಸಮೀಕ್ಷಾ ಕಾರ್ಯವನ್ನು ನಡೆಸಬೇಕು. ಆಶಾ ಕಾರ್ಯಕರ್ತೆಯರನ್ನು ಈ ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಬೇಕು. ಈ ಬಗ್ಗೆ ಅವರಿಗೆ ತರಬೇತಿ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

‘ಸಮೀಕ್ಷೆಯ ಮೇಲ್ವಿಚಾರಣೆಗಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಆಯಾ ನಗರ ಪಾಲಿಕೆಗಳ ಆಯುಕ್ತರು ತರಬೇತಿ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಸಮೀಕ್ಷಾ ಕಾರ್ಯಕ್ಕೆ ಗೈರು ಹಾಜರಾದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದರು.

‘ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಸಮೀಕ್ಷೆಯ ಕಾರ್ಯವನ್ನು ಪರಿಣಾಮಕಾರಿಯಾಗಿ ಹಾಗೂ ಯಶಸ್ವಿಯಾಗಿ ನಡೆಸಬೇಕು. ಅದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಜಿಬಿಎ ವತಿಯಿಂದ ಸಹಕಾರ ನೀಡಲಾಗುವುದು’ ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ತುಳಸಿ ಮದ್ದಿನೇನಿ ಅವರು ಮಾತನಾಡಿ, ‘ನಗರದಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗಾಗಿ ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. ಸಮೀಕ್ಷೆಗಾಗಿ ಜಿಪಿಎಸ್ ಆಧಾರಿತ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದ್ದು, ಮನೆಗೆ ಅಂಟಿಸುವ ಸ್ಟಿಕ್ಕರ್‌ಗಳಲ್ಲಿ ಯುಎಚ್‌ಐಡಿ ಸಂಖ್ಯೆ ನೀಡಲಾಗುತ್ತಿದೆ’ ಎಂದರು.

‘ನಗರದಲ್ಲಿ ಎಸ್‌ಐಆರ್ ಮುಂದೂಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ (ಜಿಬಿಎ) ರಚನೆ ಆಗಿರುವ 5 ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ಹೊಸದಾಗಿ ಮತದಾರರ ಪಟ್ಟಿ ಸಿದ್ಧಪಡಿಸ ಬೇಕಾಗಿರುವುದರಿಂದ ಬೆಂಗಳೂರು ನಗರದಲ್ಲಿ ‘ವಿಶೇಷ ಸಮಗ್ರ ಪರಿಷ್ಕರಣೆ’ಯನ್ನು (ಎಸ್‌ಐಆರ್) ಮುಂದೂಡಬೇಕು ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ ಅವರು ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ.

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಬರೆದ ಪತ್ರದಲ್ಲಿ ಈ ಮನವಿ ಮಾಡಿದ್ದಾರೆ.


ಸುಪ್ರೀಂಕೋರ್ಟ್ ನಿರ್ದೇಶನದ ಅನ್ವಯ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಬೇಕಾಗಿದೆ. ಇವುಗಳ ಗಡಿ ಗುರುತಿಸುವ ಪ್ರಕ್ರಿಯೆಯನ್ನು ಇದೇ ನವೆಂಬರ್ 1 ರೊಳಗೆ ಪೂರ್ಣಗೊಳಿಸ ಬೇಕಾಗಿದೆ. ಅಲ್ಲದೆ, ನ.30 ರೊಳಗೆ ವಾರ್ಡ್ ಮೀಸಲಾತಿ ಪಟ್ಟಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಬೇಕಾಗಿದೆ. ಅಲ್ಲದೇ, ನ 1ರೊಳಗೆ ಮತದಾರರ ಪಟ್ಟಿಯನ್ನು ತಯಾರಿಸ ಬೇಕಿದೆ ಎಂದು ಸಂಗ್ರೇಶಿ ತಿಳಿಸಿದ್ದಾರೆ.

ಸಂಗ್ರೇಶಿ ಪತ್ರ

ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಮತ್ತು ಮತದಾರರ ಪಟ್ಟಿ ತಯಾರಿಸುವ ಜವಾಬ್ದಾರಿ ಮತ್ತು ಅಧಿಕಾರ ರಾಜ್ಯ ಚುನಾವಣಾ ಆಯೋಗಕ್ಕಿದೆ. ಕೇಂದ್ರ ಚುನಾವಣಾ ಆಯೋಗ ಅಕ್ಟೋಬರ್, ನವೆಂಬರ್ ಡಿಸೆಂಬರ್‌ನಲ್ಲಿ ವಿಶೇಷ ಸಮಗ್ರ ಪರಿಷ್ಕರಣೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ರಾಜ್ಯ ಸರ್ಕಾರದ ಸಿಬ್ಬಂದಿಯನ್ನು ಬಳಸಿ ಕೊಳ್ಳಲಿದೆ. ಇದರಿಂದ ರಾಜ್ಯ ಚುನಾವಣಾ ಆಯೋಗಕ್ಕೆ ಮತದಾರರ ಪಟ್ಟಿಯನ್ನು ತಯಾರಿಸಲು ಸಮಸ್ಯೆಯಾಗುತ್ತದೆ ಎಂದು ಹೇಳಿದ್ದಾರೆ. ಈ ಕಾರಣದಿಂದ ಎಸ್‌ಐಆರ್ ಮುಂದೂಡಬೇಕು ಎಂದಿದ್ದಾರೆ.

ನಿಶಾಲಿಗೆ ಪ್ರೈಡ್ ಆಫ್ ಇಂಡಿಯಾ ಗರಿ

ಪ್ರಜಾವಾಣಿ ವಾರ್ತೆ



ನಿಶಾಲಿ

ಬೆಂಗಳೂರು: ದೆಹಲಿಯ ಪ್ರತಿಷ್ಠಿತ ಡಿ ಕೆ ಪೆಜೆಂಟ್ಸ್ ಸಂಸ್ಥೆಯವರು ಆಯೋಜಿಸಿದ್ದ ಪ್ರೈಡ್ ಆಫ್ ಇಂಡಿಯಾ- ಮಿಸ್ ಇಂಡಿಯಾ– 2025 ಕಿರೀಟವು ಕುಂದಾಪುರದ ನಿಶಾಲಿ ಅವರ ಮುಡಿಗೇರಿದೆ.

ದೇಶದ ವಿವಿಧ ಭಾಗಗಳಿಂದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಆಯ್ಕೆಯಾಗಿ ಬಂದಿದ್ದ 44 ಸ್ಪರ್ಧಿಗಳನ್ನು ಎದುರಿಸಿ ನಿಶಾಲಿ ಅವರು ಈ ಪ್ರತಿಷ್ಠಿತ ಟೈಟಲ್ ತಮ್ಮದಾಗಿಸಿಕೊಂಡರು. ನಿಶಾಲಿ ಟ್ಯಾಲೆಂಟ್ ಸುತ್ತಿನಲ್ಲಿ ಯಕ್ಷಗಾನ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದ್ದರು.

ನಿಶಾಲಿ, ಬೆಂಗಳೂರಿನ ಶ್ರೀನಿಧಿ ಕಾರ್ಪೋರೇಷನ್ ಸಂಸ್ಥೆಯ ಆಡಳಿತ ನಿರ್ದೇಶಕ ಉಮೇಶ್ ಕುಂದರ್ ಮತ್ತು ಜಾನಕಿ ಅವರ ಪುತ್ರಿ.

ನಗರದಲ್ಲಿ ಇಂದು

ಯಲಹಂಕ ದಿನಪತ್ರಿಕೆ ವಿತರಕರ ಕಚೇರಿ ಉದ್ಘಾಟನೆ ಹಾಗೂ 12ನೇ ವಾರ್ಷಿಕೋತ್ಸವ: ಅಧ್ಯಕ್ಷತೆ: ಎಸ್.ಆರ್. ವಿಶ್ವನಾಥ್, ಎಂ. ಸತೀಶ್, ಆಯೋಜನೆ: ಯಲಹಂಕ ದಿನಪತ್ರಿಕೆ ವಿತರಕರ ಸಂಘ, ಸ್ಥಳ: ಎನ್‌ಇಎಸ್ ಆಫೀಸ್ ಹತ್ತಿರ, ಮಿನಿ ವಿಧಾನಸೌಧ ರಸ್ತೆ, ಯಲಹಂಕ, ಬೆಳಿಗ್ಗೆ 10

ಅಭಿಯಂತರರ ದಿನಾಚರಣೆ: ಅತಿಥಿಗಳು: ಅರುಣ್ ಪೈ, ಬಿ.ಎಸ್. ದಲಾಯತ್, ಅಧ್ಯಕ್ಷತೆ: ರಾಮ್ ಪ್ರಸಾತ್ ಮನೋಹರ್ ವಿ., ಆಯೋಜನೆ: ಬೆಂಗಳೂರು ಜಲಮಂಡಳಿ ಅಭಿಯಂತರರ ಸಂಘ, ಸ್ಥಳ: ಜಲಮಂಡಳಿ ಸಭಾಂಗಣ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಳಿಗ್ಗೆ 10.30

ಶಿಕ್ಷಕರ ದಿನಾಚರಣೆ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಚ್.ವಿ. ಸುರೇಶ, ಆಯೋಜನೆ: ಕೃಷಿ ವಿಶ್ವವಿದ್ಯಾಲಯ, ಸ್ಥಳ: ಕುವೆಂಪು ಸಭಾಂಗಣ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಳಿಗ್ಗೆ 10.30

‘ಆಪರೇಷನ್ ಸಿಂಧೂರ ಮಿತ್ರ’ ಸಮಾರಂಭ: ಉದ್ಘಾಟನೆ: ನಿಶ್ಚಲಾನಂದನಾಥ ಸ್ವಾಮೀಜಿ, ಸಾನ್ನಿಧ್ಯ: ಶಿವರುದ್ರ ಶಿವಾಚಾರ್ಯ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ವೂಡೇ ಪಿ. ಕೃಷ್ಣ, ಬೇಸಗರಹಳ್ಳಿ ಶಿವಲಿಂಗಯ್ಯ ಸತೀಶ್, ರಮೇಶ್ ಬಾಬು, ಆಯೋಜನೆ: ಯುವಚೇತನ ಯುವಜನ ಸಂಘ, ಸ್ಥಳ: ಎನ್‌ಜಿಒ ಸಭಾಂಗಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ಸಬಲೀಕರಣ ಮತ್ತು ಜಾಗೃತಿ ಕಾರ್ಯಕ್ರಮ: ಉದ್ಘಾಟನೆ: ಡಿ.ವೈ. ಚಂದ್ರಚೂಡ್, ಅತಿಥಿಗಳು: ಭಾಸ್ಕರ್ ರಾವ್, ಎಂ.ಜಿ. ಬಾಲಕೃಷ್ಣ, ದಯಾನಂದ, ಆಯೋಜನೆ: ಅಖಿಲ ಭಾರತ ಹಣಕಾಸು ಸಾಲಗಾರರ ಒಕ್ಕೂಟ (ಎಐಎಫ್‌ಬಿಎಫ್), ಸ್ಥಳ: ಎಫ್‌ಕೆಸಿಸಿಐ ಸಭಾಂಗಣ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 3.15



ಡಿ.ವೈ. ಚಂದ್ರಚೂಡ್

42ನೇ ಅಂತರ ವಿಭಾಗ ನಾಟಕಸ್ಪರ್ಧೆ: ‘ದಿವ್ಯ ದರ್ಶನ’ ನಾಟಕ ಪ್ರದರ್ಶನ: ನಿರ್ದೇಶನ: ಪ್ರವೀಣ ಬಿ.ಪಿ., ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಊಂಜಲ್ ಸಂಗೀತೋತ್ಸವ: ಗಾಯನ: ಅನುಷಾ ರಾಘವೇಂದ್ರ, ಪಿಟೀಲು: ಮಧುಸೂದನ್, ಮೃದಂಗ: ಸುಧೀಂದ್ರ ಆಪ್ಟೆ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), ವೈಯಾಲಿಕಾವಲ್, ಸಂಜೆ 6

ನವರಾತ್ರಿ ವಿಶೇಷ

ನವರಾತ್ರಿ ಮಹೋತ್ಸವದ ಅಂಗವಾಗಿ ‘ಧಾತು’ ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ಗಾಯನ: ಶಿವರುದ್ರಮ್ಮ ಮತ್ತು ತಂಡ, ಅನಸೂಯ ಮತ್ತು ತಂಡ, ಬಿಲ್ವಶ್ರೀ ಸತ್ಸಂಗ ಮತ್ತು ತಂಡ, ಅತಿಥಿಗಳು: ರು.ಫ. ದೇಸಾಯಿ, ಚಂದ್ರಿಕಾ ಗುರುಪ್ರಸಾದ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, # 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಯುವ ದಸರಾ: ಯಕ್ಷಗಾನ: ‘ತ್ಯಾಗ ತಪೋನಿಧಿ ದಧೀಚಿ’, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ಗಂಧದ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ.ನಗರ 3ನೇ ಹಂತ, ಸಂಜೆ 6

ದೇವಿಗೆ ವಿಭೂತಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಗಂಧದ ಅಲಂಕಾರ: ನೃತ್ಯ: ಶ್ವೇತಾ ಬಾಬು ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರೋತ್ಸವ: ವಿದ್ವಾಂಸರಿಂದ ಉಪನ್ಯಾಸ: ‘ಶ್ರೀನಿವಾಸ ಕಲ್ಯಾಣದಲ್ಲಿ ಪತ್ರ ವಿಚಾರ’ ವಿಷಯದ ಬಗ್ಗೆ: ಕರಣಂ ವಾದಿರಾಜಾಚಾರ್ಯ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಅಲಂಕಾರ: ಅಕ್ಷತೆ, ಹರಿನಾಮ ಸಂಕೀರ್ತನೆ: ವಿದ್ಯಾಭೂಷಣ ಮತ್ತು ತಂಡ, ಆಯೋಜನೆ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ, ಆಯೋಜನೆ,ಸ್ಥಳ: ದೇವಿ ಸಲ್ಲಾಪುರಮ್ಮ, ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಅಲಂಕಾರ: ವಾರಾಹಿ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ಶಾಂತಲಾ ತಂಡ, ಗಾಯನ: ಲಕ್ಷ್ಮಿ ವರುಣ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶಾಂತಲಾ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

‘ನವದುರ್ಗೆಯರ ಅವತಾರಗಳು’ ಉಪನ್ಯಾಸ: ರೂಪ ಹೊಸದುರ್ಗ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ, ಸ್ಥಳ: ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

ಮಹಾ ಗಣಪತಿ ಉತ್ಸವ: ಭಾವಗೀತೆ ಮತ್ತು ಜಾನಪದ ಗೀತೆಗಳ ಗಾಯನ: ಎಂ.ಡಿ. ಪಲ್ಲವಿ, ಸ್ಥಳ: ಕಮಲಮ್ಮನ ಗುಂಡಿ ಆಟದ ಮೈದಾನ, ಮಹಾಲಕ್ಷ್ಮಿ ಬಡಾವಣೆ, ಸಂಜೆ 6.30

ದೇವಿಗೆ ಅಲಂಕಾರ ಮತ್ತು ವಿಶೇಷ ಪೂಜೆ: ಆಯೋಜನೆ ಹಾಗೂ ಸ್ಥಳ: ಅಕ್ಕಯ್ಯಮ್ಮ ದೇವಾಲಯ ಟ್ರಸ್ಟ್, 1ನೇ ಅಡ್ಡರಸ್ತೆ, ಲಕ್ಕಸಂದ್ರ, ಸಂಜೆ 7

ದೇವಿಗೆ ಅಲಂಕಾರ: ದ್ರಾಕ್ಷಿ–ಗೊಡಂಬಿ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಕಪ್ಪಣ್ಣ ಅಂಗಳ ದಶಮಾನೋತ್ಸವ: ‘ಹರಿವ ನದಿಗೆ ಮೈಯೆಲ್ಲಾ ಕಾಲು’ ಚಲನಚಿತ್ರ ಪ್ರದರ್ಶನ, ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

‘ತ್ಯಾಗ ತಪೋನಿಧಿ ದಧೀಚಿ’ ಯಕ್ಷಗಾನ ಪ್ರಸಂಗ: ಹಿಮ್ಮೇಳ: ಅನಂತ ಹೆಗಡೆ ದಂತಳಿಗೆ, ಎಸ್.ಪಿ. ಫಾಟಕ್, ಪನ್ನಗ ಮಯ್ಯ, ಮುಮ್ಮೇಳ: ರವಿ ಮಡೋಡಿ, ಅಶ್ವಿನಿ ಕೊಂಡದಕುಳಿ, ಆದಿತ್ಯ ಹಲ್ಕೋಡು, ರವೀಶ ಐನಬೈಲು, ದಿನೇಶ್ ಕನ್ನಾರು, ಸುಜಯ್ ಕೋಳಿಗಾರು, ಆಯೋಜನೆ: ಸಪ್ತಕ ಬೆಂಗಳೂರು, ಯುವಕ ಸಂಘ, ಫಾಟಕ್ ಯಕ್ಷ ಸಂಸ್ಕೃತಿ, ಸ್ಥಳ: ಯುವಕ ಸಂಘ, ಯುವ ಪಥ, ಜಯನಗರ 4ನೇ ಬ್ಲಾಕ್, ಸಂಜೆ 6.30

‘ಯಕ್ಷ ಷಡಾನನ’ 5 ಪೌರಾಣಿಕ ಪ್ರಸಂಗ: ‘ಧರ್ಮಾಂಗದ’, ‘ಮಾಗಧ’, ‘ರುದ್ರಕೋಪ’, ‘ಗದಾಯುದ್ಧ’, ಆಯೋಜನೆ: ಮನೋಜ್ ಭಟ್ ಹೆಗ್ಗಾರಳ್ಳಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ ರಾತ್ರಿ 9.45

ಪ್ರಜಾವಾಣಿ

ನವವರ್ಣ

ನೀಲಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಗುರುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಸುಮತಿ & ಹೇಮಲತಾ, ತುಮಕೂರು


ಸುಮಲತಾ & ಶಕುಂತಲಾ, ದೇವನಹಳ್ಳಿ


ಭೂಮಿಕಾ & ಗೆಳತಿ, ಕೆಂಗೇರಿ


ಕವನ & ಗೆಳತಿಯರು, ರಾಜಾಜಿನಗರ


ಐಶ್ವರ್ಯ & ಮಾಲಾ, ರಾಜಾಜಿನಗರ


ನಾಗರತ್ನ & ಕುಟುಂಬ, ಬೆಂಗಳೂರು


ಅನುಸೂಯಾ & ಗೆಳತಿಯರು, ಬೆಂಗಳೂರು


ಮೋನಿಕಾ & ಮಾನ್ವಿತಾ, ಬೆಂಗಳೂರು


ಸರ್ಕಾರಿ ಕಾಲೇಜು ಸಿಬ್ಬಂದಿ, ವರತೂರು



ವಾತ್ಸಲ್ಯ & ಗೆಳತಿಯರು, ಬೆಂಗಳೂರು


ಪ್ರಗತಿ ಶಾಲಾ ಸಿಬ್ಬಂದಿ, ದೇವನಹಳ್ಳಿ


ಸಂಗೀತಾ & ಗೆಳತಿಯರು, ಹಿರಿಯಡ್ಕ


ಎಸ್‌ಟಿಜೆ ಸರ್ಕಾರಿ ಕಾಲೇಜು ಸಿಬ್ಬಂದಿ, ಪಾಂಡವಪುರ


ವಿಜಯ ಕಾಲೇಜು ಸಿಬ್ಬಂದಿ, ತುಮಕೂರು


ರೂಪಾ, ಬೆಂಗಳೂರು


ಪುಷ್ಪಾ & ಗೆಳತಿಯರು, ಕೆಂಗೇರಿ


ಕಾವ್ಯ & ಗೆಳತಿಯರು, ಚಳ್ಳಕೆರೆ


ಸರೋಜಾ & ಗೆಳತಿಯರು, ಹೊಸಕೋಟೆ

ಇಂದಿನ ಬಣ್ಣ - ನೀಲಿ


ಸ್ಮಿತಾ & ಗೆಳತಿಯರು, ಶಿವಮೊಗ್ಗ



ಜ್ಞಾನ ಅಕಾಡೆಮಿ, ಬೆಂಗಳೂರು


ಉಮಾ & ತಂಡ, ಬೆಂಗಳೂರು


ಗೀತಾ & ಗೆಳತಿಯರು, ನಾಗರಭಾವಿ


ತೇಜಸ್ವಿನಿ & ಗೆಳತಿಯರು, ಸಹಕಾರನಗರ


ಅಕ್ಷತಾ & ತಂಡ, ಇಂದಿರಾನಗರ


ಕಡಂಬಿ ಶಾಲಾ ಸಿಬ್ಬಂದಿ, ಬಸವೇಶ್ವರ ನಗರ

ಚಿಟಿಕೆ ಸುದ್ದಿ

‘ದೇಶದ ಆತ್ಮ ಅಳಿಸಲು ಅವಕಾಶ ನೀಡಲ್ಲ’

ಬೆಂಗಳೂರು: ‘ಈ ದೇಶದ ಆತ್ಮವನ್ನು ಅಳಿಸಿ ಹಾಕಲು ಬಿಜೆಪಿ- ಆರ್‌ಎಸ್‌ಎಸ್ ಒಕ್ಕೂಟ ಬಯಸಿದೆ. ಆದರೆ, ನಾವು (ಕಾಂಗ್ರೆಸ್) ಅದಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪಟ್ನಾದಲ್ಲಿ ಬುಧವಾರ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ಮಾತನಾಡಿದ ಅವರು, ‘ನಾವು ಕೇವಲ ಚುನಾವಣೆಗಾಗಿ ಹೋರಾಡುತ್ತಿಲ್ಲ, ಭಾರತವನ್ನು ಉಳಿಸಲು ಹೋರಾಡುತ್ತಿದ್ದೇವೆ’ ಎಂದರು.

‘ಕರ್ನಾಟಕದಲ್ಲಿ ನಾವು ಮೊದಲು ಜಾರಿಗೆ ತಂದ ‘ಗ್ಯಾರಂಟಿ’ ಯೋಜನೆಗಳನ್ನು ಬಿಜೆಪಿ ನೇತೃತ್ವದ ಸರ್ಕಾರಗಳು ಕೂಡ ನಿರ್ಲಜ್ಜವಾಗಿ ನಕಲು ಮಾಡುತ್ತಿರುವುದನ್ನು ನಾವು ಮರೆಯಬಾರದು. ಹಿಂದೆ ನಮ್ಮನ್ನು ಅಪಹಾಸ್ಯ ಮಾಡಿದವರೇ, ಇಂದು ನಮ್ಮನ್ನೇ ಅನುಕರಿಸುತ್ತಿದ್ದಾರೆ. ನಮ್ಮ ಆಡಳಿತದ ಮಾದರಿಯನ್ನು ಜನರು ನಂಬುತ್ತಾರೆ ಎಂಬುದು ಅವರಿಗೆ ತಿಳಿದಿದೆ’ ಎಂದರು.

‘ಭಾರತವು ಇಂದು ಆತ್ಮವಂಚನೆಯ ನೆರಳಿನಲ್ಲಿ ಬದುಕುತ್ತಿದೆ. ಸ್ವಾತಂತ್ರ್ಯವನ್ನು ಕಡಿತಗೊಳಿಸಲಾಗುತ್ತಿದ್ದು, ಜನಾದೇಶವನ್ನು ಕದಿಯಲಾಗುತ್ತಿದೆ’ ಎಂದು ಆರೋಪಿಸಿದರು.

ಹಾಸ್ಟೆಲ್ ಶೌಚಾಲಯದಲ್ಲಿ ವಿದ್ಯಾರ್ಥಿ ಸಾವು

ಶಿರಾ: ನಗರದ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದಲ್ಲಿ ಬುಧವಾರ ಮುಂಜಾನೆ ಮಹಮದ್ ರಫಿ (19) ಎಂಬ ವಿದ್ಯಾರ್ಥಿ ಶೌಚಾಲಯದಲ್ಲಿ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಮಹಮದ್ ರಫಿ ನಗರದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಸಿವಿಲ್ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿ.

ಅನಾರೋಗ್ಯದಿಂದ ಬಳಲುತ್ತಿದ್ದ ಮಹಮದ್ ರಫಿ ವಾರದ ಹಿಂದೆ ಸ್ವಗ್ರಾಮಕ್ಕೆ ತೆರಳಿ ಚಿಕಿತ್ಸೆ ಪಡೆದು ಮಂಗಳವಾರ ವಿದ್ಯಾರ್ಥಿ ನಿಲಯಕ್ಕೆ ಮರಳಿದ್ದರು. ರಾತ್ರಿ ಊಟ ಮಾಡಿ ಮಲಗಿದ್ದರು. ಬುಧವಾರ ಮುಂಜಾನೆ ಶೌಚಾಲಯಕ್ಕೆ ಹೋಗಿ ಬಾಗಿಲು ಹಾಕಿಕೊಂಡಿದ್ದು ಅಲ್ಲಿಯೇ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಎಷ್ಟು ಸಮಯವಾದರೂ ಶೌಚಾಲಯದಿಂದ ಹೊರಕ್ಕೆ ಬಾರದ ಕಾರಣ ಇತರ ವಿದ್ಯಾರ್ಥಿಗಳು ಕೂಗಿದರು ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಬಾಗಿಲನ್ನು ಹತ್ತಿ ನೋಡಿದಾಗ ಮಹಮದ್ ರಫಿ ಬಿದ್ದಿರುವುದನ್ನು ನೋಡಿ ವಾರ್ಡನ್‌ಗೆ ತಿಳಿಸಿದ್ದಾರೆ. ಬಾಗಿಲು ತೆರೆದು ನೋಡುವ ವೇಳೆಗೆ ರಫಿ ಮೃತಪಟ್ಟಿದ್ದರು.

ಸಮೀಕ್ಷೆ: ವಿಚಾರಣೆ ಮತ್ತೆ ಮುಂದಕ್ಕೆ

ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಮೀಕ್ಷೆಗೆ ಈಗಾಗಲೇ ₹20.31 ಕೋಟಿ ವ್ಯಯಿಸಲಾಗಿದೆ– ಆಯೋಗ
- ಸಮೀಕ್ಷೆ ನಡೆಸುವವರ ಸಂಬಳಕ್ಕೆ ₹350 ಕೋಟಿ
- ಸಮೀಕ್ಷೆ ಮಾಡುವವರಿಗೆ ಪ್ರತಿ ಮನೆಗೆ ₹100

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪ್ರಶ್ನಿಸಲಾದ ಅರ್ಜಿಗಳ ವಿಚಾರಣೆ ಬುಧವಾರವೂ ಅಪೂರ್ಣಗೊಂಡಿದ್ದು, ಗುರುವಾರ ಪುನಃ ಮುಂದುವರಿಯಲಿದೆ.

ಸರ್ಕಾರದ ನಡೆಯನ್ನು ಪ್ರಶ್ನಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್, ಅಖಿಲ ಭಾರತ ವೀರಶೈವ ಮಹಾಸಭೆಯ ಬಿ.ಆರ್.ಉದಯಶಂಕರ್ ಸೇರಿದಂತೆ 9 ಜನರು, ರಾಜ್ಯ ಒಕ್ಕಲಿಗರ ಸಂಘ ಮತ್ತು ಕೆ.ಎನ್.ಸುಬ್ಬಾರೆಡ್ಡಿ ಸೇರಿದಂತೆ ನಾಲ್ವರು ಸಲ್ಲಿಸಿರುವ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ಮುಂದುವರಿಸಿತು.

ರಾಜ್ಯ ಸರ್ಕಾರದ ಪರ ವಾದ ಮುಂದುವರಿಸಿದ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ಅರ್ಜಿದಾರರು, ಸಂವಿಧಾನದ 342 ಎ(3)ನೇ ವಿಧಿ ಪ್ರಶ್ನಿಸಿಲ್ಲ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ–1995ರ ಕಲಂ 9 ಮತ್ತು 11ಕ್ಕೆ ತಡೆ ನೀಡುವಂತೆಯೂ ಕೋರಿಲ್ಲ. ಸಮೀಕ್ಷೆಯಲ್ಲಿ ಯಾವ ತಪ್ಪಿದೆ ಎಂಬುದನ್ನು ಸಹ ಕಾಣಿಸಿಲ್ಲ. ಹೀಗಾಗಿ, ಸಮೀಕ್ಷೆಗೆ ಮಧ್ಯಂತರ ತಡೆ ನೀಡಬಾರದು’ ಎಂದು ಮನವಿ ಮಾಡಿದರು.



> ಸೈಬರ್ ಅಪರಾಧ ಹೆಚ್ಚುತ್ತಿರುವ ಈ ದಿನಗಳಲ್ಲಿ ಎಲ್ಲರ ಆಧಾರ್ ಸಂಖ್ಯೆ ಪಡೆಯುವುದು ವ್ಯಕ್ತಿಯೊಬ್ಬರ ಖಾಸಗಿತನದ ಉಲ್ಲಂಘನೆಯಾಗುವುದಿಲ್ಲವೇ? ಇಂತಹ ಭೀತಿ ಅವರ ಮನದಲ್ಲಿ ಮೂಡುವುದಿಲ್ಲವೇ?
>
> **ವಿಭು ಬಖ್ರು,** ಮುಖ್ಯ ನ್ಯಾಯಮೂರ್ತಿ

ಹಿಂದುಳಿದ ವರ್ಗಗಳ ಆಯೋಗದ ಪರ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್, ‘ಸಮೀಕ್ಷೆಯ ಅನುಕೂಲಕ್ಕಾಗಿ ಮಾತ್ರವೇ 1,561 ಜಾತಿಗಳನ್ನು ಗುರುತಿಸಲಾಗಿದೆ. ನಮ್ಮ ಜಾತಿ ಸೇರಿಸಿಲ್ಲವೆಂಬ ಕೆಲವರ ಮನವಿ ಮೇರೆಗೆ ಹೊಸ ಜಾತಿಗಳನ್ನು ಸೇರ್ಪಡೆ ಮಾಡಲಾಗಿದೆ. ಸಮಾಲೋಚನೆ ನಡೆಸಿ ಈ ಮನವಿಗಳನ್ನು ಪರಿಗಣಿಸಲಾಗಿದೆ. ಸಮೀಕ್ಷೆಯಲ್ಲಿ ಜನರು ಹೇಳುವ ಜಾತಿಗಳನ್ನು ನಮೂದಿಸಿಕೊಳ್ಳುತ್ತೇವೆ’ ಎಂದರು.

ಕೇಂದ್ರ ಸರ್ಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್, ‘ಕೇಂದ್ರ ಸರ್ಕಾರವೇ 2027ರಲ್ಲಿ ಜನಗಣತಿ ಜತೆಗೆ ಜಾತಿಗಣತಿ ನಡೆಸಲಿದೆ. ಎಲ್ಲ ರಾಜ್ಯಗಳೂ ಪ್ರತ್ಯೇಕ ಸಮೀಕ್ಷೆಗೆ ಮುಂದಾದರೆ ಸಮಸ್ಯೆ ಎದುರಾಗಲಿದೆ. ಕೇಂದ್ರ, ರಾಜ್ಯದ ಸಮೀಕ್ಷೆಗಳಲ್ಲಿ ವಿರೋಧಾಭಾಸ ಇರಬಾರದು’ ಎಂದರು.

ಹಿಂದುಳಿದ ವರ್ಗಗಳ ಒಕ್ಕೂಟದ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ, ‘ಆಧಾರ್ ಸಂಖ್ಯೆಯನ್ನು ಸಿಸ್ಟಂಗೆ ಹಾಕಿದ ಬಳಿಕ ಅದು ಉಳಿದವರಿಗೆ ಲಭ್ಯವಾಗುವುದಿಲ್ಲ. ಹೀಗಾಗಿ, ದುರುಪಯೋಗವಾಗುವ ಪ್ರಶ್ನೆಯೇ ಇಲ್ಲ. ಸುಪ್ರೀಂ ಕೋರ್ಟ್ ಕೂಡಾ ಹಿಂದುಳಿದ ವರ್ಗಗಳ ಸಮೀಕ್ಷೆಗೆ ಸೂಚಿಸಿದೆ. ರಾಜಕೀಯ ಮೀಸಲಾತಿಗೂ ಸಮೀಕ್ಷೆ ಅಗತ್ಯ ಎಂದಿದೆ’ ಎಂದರು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ, ಅಶೋಕ ಹಾರನಹಳ್ಳಿ, ಜಯಕುಮಾರ್ ಎಸ್.ಪಾಟೀಲ್, ವಿವೇಕ್ ರೆಡ್ಡಿ, ಎಸ್.ಶ್ರೀರಂಗ ಮತ್ತು ಎಸ್.ಎಂ.ಚಂದ್ರಶೇಖರ್ ಹಾಜರಿದ್ದರು.

ನ್ಯಾಯಪೀಠ ಕೇಳಿದ್ದೇನು?

ಸರ್ಕಾರಕ್ಕೆ ಪ್ರಶ್ನೆ:

- ಸರ್ಕಾರಕ್ಕೆ ಸಮೀಕ್ಷೆ ನಡೆಸುವ ಅಧಿಕಾರ ಇಲ್ಲವೆಂದು ಅರ್ಜಿದಾರರು ಹೇಳಿಲ್ಲ. ಆದರೆ, ಸಮೀಕ್ಷೆ ನಡೆಸುತ್ತಿರುವ ಪರಿಯನ್ನು ಪ್ರಶ್ನಿಸಿದ್ದಾರೆ. ಜಾತಿಗಳ ನಡುವೆ ಧರ್ಮವನ್ನು ಸೇರಿಸಿದ್ದೀರಿ ಮತ್ತು ಜಾತಿಗಳ ಪಟ್ಟಿ ಪ್ರಕಟಿಸುವ ಮುನ್ನ ಪೂರ್ವಭಾವಿ ಸಮಾಲೋಚನೆ ನಡೆಸಿಲ್ಲ ಎಂಬ ಆರೋಪವಿದೆಯಲ್ಲಾ?

ಅರ್ಜಿದಾರರಿಗೆ ಪ್ರಶ್ನೆ:

- ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಅನುಸಾರ ಜಾತಿಗಳ ಪಟ್ಟಿ ತಯಾರಿಸಲು ಅವಕಾಶ ನೀಡಲಾಗಿದೆ. ಮೀಸಲಾತಿಗೆ ಅಲ್ಲದಿದ್ದರೂ ಸವಲತ್ತು ನೀಡಲು ಸಮೀಕ್ಷೆ ಅಗತ್ಯವಲ್ಲವೇ? ಈಗಿನ ಸಮೀಕ್ಷೆಯಲ್ಲಿ ಪ್ರಶ್ನೆಗಳನ್ನು 60 ರಿಂದ 5ಕ್ಕೆ ಇಳಿಸಬೇಕು ಎಂಬುದು ನಿಮ್ಮ ಬೇಡಿಕೆಯೇ? ಪ್ರತಿ ಮನೆಯ ಸಮೀಕ್ಷೆ ಮಾಡಬಾರದು ಎಂದು ಕೇಳುತ್ತಿದ್ದೀರಾ?

ಹಿಂದುಳಿದ ವರ್ಗಗಳ ಆಯೋಗಕ್ಕೆ ಪ್ರಶ್ನೆ:

- ಸರ್ಕಾರ 1,561 ಜಾತಿಗಳನ್ನು ಹೇಗೆ ನಿಗದಿಪಡಿಸಿದೆ? ಜಾತಿ ವರ್ಗೀಕರಣಕ್ಕೆ ಅನುಸರಿಸಿದ ಕ್ರಮಗಳೇನು? ಆಧಾರ್ ನಂಬರ್‌ಗಳನ್ನು ಪಡೆಯಲು ಕಾರಣವೇನು? ಸ್ಟಿಕ್ಕರ್‌ಗಳನ್ನು ಹಾಕಲು ನಿಮಗಿರುವ ಅಧಿಕಾರವೇನು? ಮಾಹಿತಿ ನೀಡುವುದು ಬಿಡುವುದು ಜನರ ಆಯ್ಕೆಯೆಂದು ತಿಳಿಸಿದ್ದೀರಿ. ಸಮೀಕ್ಷೆ ಮಾಡುವಾಗ ಅವರಿಗೆಲ್ಲಾ ಮುಂಚಿತವಾಗಿಯೇ ಈ ಮಾಹಿತಿ ನೀಡಿದ್ದೀರಾ? ಪ್ರತಿ ಮನೆಯ ಸಮೀಕ್ಷೆ ಮಾಡಲೇಬೇಕೆಂದು ಕೈಪಿಡಿಯಲ್ಲಿದೆ. ಕೈಪಿಡಿಯಲ್ಲಿ ಸಮೀಕ್ಷೆ ನಿರಾಕರಿಸುವ ಆಯ್ಕೆಯನ್ನು ನೀಡಿಲ್ಲವಲ್ಲ? ಉತ್ತರ ನೀಡುವುದು ಕಡ್ಡಾಯ ಇಲ್ಲವೆಂದು ಎಲ್ಲಿ ಹೇಳಿದ್ದೀರ? ಸಮೀಕ್ಷೆಗೂ ಮೊದಲೇ ಸೂಕ್ತ ಸಮಾಲೋಚನೆ ಮಾಡಿಲ್ಲವೇಕೆ?

ಸುದ್ದಿ 2 ನಿಮಿಷ

‘ಬಸವತತ್ವದಲ್ಲಿ ನಂಬಿಕೆ ಇಟ್ಟವರು ಮೀಸಲಾತಿ ಕೇಳಕೂಡದು’

ಸಿರಿಗೆರೆ (ಚಿತ್ರದುರ್ಗ): ‘ಬಸವ ತತ್ವದಲ್ಲಿ ನಂಬಿಕೆ ಇರುವವರು ಸರ್ಕಾರ ನೀಡುವ ಮೀಸಲಾತಿ ಕೇಳಕೂಡದು. ಅದನ್ನು ಸಮಾಜದ ದುರ್ಬಲ ಸಮುದಾಯಗಳಿಗೆ ಹಂಚಬೇಕು’ ಎಂದು ತರಳಬಾಳು ಮಠದ ಪೀಠಾಧ್ಯಕ್ಷ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬುಧವಾರ ಸಲಹೆ ನೀಡಿದರು.

ಗ್ರಾಮದಲ್ಲಿ ನಡೆದ ಲಿಂ.ಶಿವಕುಮಾರ ಶ್ರೀಗಳ ಶ್ರದ್ಧಾಂಜಲಿ ಸಮಾರಂಭದಲ್ಲಿ ಮಾತನಾಡಿದ ಅವರು, ‘ಕೆಲವು ಮಠಾಧೀಶರು ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಸರ್ಕಾರದ ಮೀಸಲಾತಿ ಸೌಲಭ್ಯ ಇಲ್ಲದೇ ಇದ್ದಿದ್ದರೆ ಅವರ ನಿಲುವು ಏನಿರುತ್ತಿತ್ತು? ಧರ್ಮದ ಕಾಲಂನಲ್ಲಿ ಅವರು ಏನು ಬರೆಸುತ್ತಿದ್ದರು? ದುರ್ಬಲ ಜಾತಿಗಳಿಗೆ ಸೇರಿದವರನ್ನು ಮೇಲಕ್ಕೆ ತರಲು ಬಸವಣ್ಣ ಯತ್ನಿಸಿದರು. ಅವರಿಗೆ ಮಠದ ಹಂಗಿರಲಿಲ್ಲ. ಬಸವಣ್ಣ ಮಾಡಿದ ಚಳವಳಿ ಈಗ ಜಾತಿ ಆಗಿ ಹೋಗಿದೆ’ ಎಂದು ವಿಷಾದಿಸಿದರು.



‘ಈಗ ನಡೆಯುತ್ತಿರುವ ಸಮೀಕ್ಷೆಯ ಗುರಿಯು ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯಾಗಿರದೇ ಜಾತಿ ಸಮೀಕ್ಷೆಯೇ ಆಗಿದೆ. ಜಾತಿ, ಉಪಜಾತಿ, ಅದರೊಳಗಿನ ಜಾತಿಗಳನ್ನು ಗುರುತಿಸಿ ಜನರ ಮಾನಸಿಕ ಆರೋಗ್ಯವನ್ನು ಕೆಡಿಸುವ ಕೆಲಸ ಆಗುತ್ತಿದೆ. ಸಮೀಕ್ಷೆಯನ್ನು ಎ.ಬಿ.ಸಿ.ಡಿ ಎಂದು ವರ್ಗೀಕರಿಸಿ ಅದರ ಆಧಾರದ ಮೇಲೆ ಮಾಡಿ ಮೀಸಲಾತಿ ನೀಡಿದರೆ ಅದು ಬಸವತತ್ವಗಳಿಗೆ ಹತ್ತಿರವಾಗುತ್ತದೆ’ ಎಂದು ಹೇಳಿದರು.

ಸಮೀಕ್ಷೆ: ಗೊಂದಲ ಶೀಘ್ರ ಪರಿಹಾರ

ಬೆಂಗಳೂರು: ‘ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಗೊಂದಲಗಳನ್ನು ಶೀಘ್ರದಲ್ಲೇ ಸರಿಪಡಿಸಲಾಗುವುದು. ನಿಗದಿತ ಗಡುವಿನೊಳಗೆ ಸಮೀಕ್ಷೆ ಪೂರ್ಣಗೊಳಿಸುತ್ತೇವೆ’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಕೆಲವೆಡೆ ಸಮೀಕ್ಷೆಗೆ ಸರ್ವರ್ ಸಮಸ್ಯೆಯಾಗುತ್ತಿದೆ. ಅಧಿಕಾರಿಗಳ ಜೊತೆ ಚರ್ಚಿಸಿ ಸಮಸ್ಯೆಗಳನ್ನು ಸರಿಪಡಿಸಲಾಗುವುದು. ಗುರುವಾರ ಎಲ್ಲವೂ ಸರಿ ಹೋಗಲಿದೆ’ ಎಂದರು.

‘ಬೆಂಗಳೂರಿನ ಕೆಲವು ಕಡೆ ಸಮೀಕ್ಷೆ ಇನ್ನೂ ಆರಂಭವಾಗಿಲ್ಲ. ಸಮೀಕ್ಷೆ ಪ್ರಶ್ನಿಸಿ ಕೆಲವರು ಕೋರ್ಟ್ ಮೆಟ್ಟಿಲೇರಿದ್ದು, ಆದೇಶ ಬರದೇ ಏನೂ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದರು.

‘ಸಮೀಕ್ಷೆಗೆ ಸಂಬಂಧಿಸಿದಂತೆ ನನ್ನ ಮುಂದೆ ಯಾವ ಸಚಿವರು ವಿರೋಧ ವ್ಯಕ್ತಪಡಿಸಿಲ್ಲ. ಕೆಲವರು ಸಲಹೆ ನೀಡಿದ್ದಾರೆ’ ಎಂದ ಅವರು, ‘ಆಯೋಗದ ವಿಚಾರಗಳಲ್ಲಿ ನಾನು ಮಧ್ಯಪ್ರವೇಶಿಸುವುದಿಲ್ಲ. ಸಮೀಕ್ಷೆ ವೇಳೆ ಎದುರಾಗಿರುವ ಗೊಂದಲಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಸಮಾಲೋಚಿಸುತ್ತೇನೆ’ ಎಂದರು.

ಸಾಮಾಜಿಕ, ಆರ್ಥಿಕ ಸಮೀಕ್ಷೆ: ಬೀದರ್‌ನಲ್ಲಿ ನಿವಾರಣೆಯಾಗದ ತೊಡಕು

ನೆಟ್‌ವರ್ಕ್‌ಗಾಗಿ ಮರ ಏರಿದರು

ಪ್ರಜಾವಾಣಿ ವಾರ್ತೆ

ಬೀದರ್: ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನೆಟ್‌ವರ್ಕ್ ಸಮಸ್ಯೆ ಮುಂದುವರಿದಿದೆ. ಸಮೀಕ್ಷಕರೊಬ್ಬರು ನೆಟ್‌ವರ್ಕ್‌ಗಾಗಿ ಜಿಲ್ಲೆಯ ಹುಲಸೂರ ತಾಲ್ಲೂಕಿನ ಮಿರಖಲ್ ಗ್ರಾಮದಲ್ಲಿ ಬುಧವಾರ ಮರವೇರಿದ್ದಾರೆ.

ಸಮೀಕ್ಷಕ, ಶಿಕ್ಷಕ ಗೋವಿಂದ ಮಹಾರಾಜ ಅವರು ಸಮೀಕ್ಷೆಗಾಗಿ ಗ್ರಾಮಕ್ಕೆ ತೆರಳಿದ್ದರು. ಆದರೆ, ನೆಟ್‌ವರ್ಕ್ ಸಿಗಲಿಲ್ಲ. ಆಗ ಬೇವಿನ ಮರವೇರಿದ್ದಾರೆ. ಆದರೆ, ಅವರಿಗೆ ಕರ್ನಾಟಕದ ಬದಲು ನೆರೆಯ ಮಹಾರಾಷ್ಟ್ರದ ನೆಟ್‌ವರ್ಕ್ ದೊರೆತಿದೆ. ಮರದಿಂದ ಕೆಳಗಿಳಿದು ಸಮೀಕ್ಷೆಗೆ ಮುಂದಾದಾಗ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದೆ. ಇದರಿಂದ ಅವರು ಸಮೀಕ್ಷೆ ಕೈಗೊಳ್ಳಲು ಸಾಧ್ಯವಾಗಲಿಲ್ಲ.

ಹುಲಸೂರ ತಾಲ್ಲೂಕಿನ ಬೇಲೂರಿನಲ್ಲಿ ಶಿಕ್ಷಕರೊಬ್ಬರು ನೀರಿನ ಟ್ಯಾಂಕ್ ಏರಿ ಪ್ರಯತ್ನಿಸಿದ್ದಾರೆ. ಆದರೂ ಸಮಸ್ಯೆ ಬಗೆಹರಿಯಲಿಲ್ಲ. ಜಿಲ್ಲೆಯಲ್ಲಿ ಮೂರನೇ ದಿನವೂ ಸರ್ವರ್ ಸಮಸ್ಯೆ ಕಾಡಿತು.

ಕಲಬುರಗಿ ಜಿಲ್ಲೆಯಲ್ಲಿ ತಾಂತ್ರಿಕ ತೊಂದರೆ ಮುಂದುವರಿದಿತ್ತು.



ಹುಲಸೂರ ತಾಲ್ಲೂಕಿನ ಬೇಲೂರ ಗ್ರಾಮದಲ್ಲಿ ನೀರಿನ ಟ್ಯಾಂಕ್ ಏರಿ ಸಮೀಕ್ಷೆಗೆ ಪ್ರಯತ್ನಪಟ್ಟ ಸಮೀಕ್ಷಕ

‘ಬೆಳಿಗ್ಗೆಯಿಂದ ಒಂದು ಮನೆಯಷ್ಟೇ ಸಮೀಕ್ಷೆ ಸಾಧ್ಯವಾಗಿದೆ. ಎರರ್, ಟೈಮ್ ಔಟ್, ಕುಟುಂಬದ ಚಿತ್ರ ಅಪ್‌ಲೋಡ್‌ನಲ್ಲಿ ತಾಂತ್ರಿಕ ತೊಂದರೆಯಂಥ ಸಮಸ್ಯೆ ಕಾಡಿತು’ ಎಂದು ನಗರದಲ್ಲಿ ಸಮೀಕ್ಷಕರೊಬ್ಬರು ಹೇಳಿದರು.



ಬೀದರ್ ಜಿಲ್ಲೆ ಹುಲಸೂರ ತಾಲ್ಲೂಕಿನ ಮಿರಖಲ್ ಗ್ರಾಮದಲ್ಲಿ ಸಮೀಕ್ಷಕರೊಬ್ಬರು ಮರವೇರಿದ್ದರು

ಜಿಲ್ಲಾಧಿಕಾರಿಗೆ ಮೊರೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲೂ ತಾಂತ್ರಿಕ ಸಮಸ್ಯೆ ಮುಂದುವರಿದಿದ್ದರಿಂದ ಸಮೀಕ್ಷಕರು ಕೊಡಗು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ.

ಇಲ್ಲಿ ನಡೆಯುತ್ತಿದ್ದ ಕಾಫಿ ದಸರೆ ವೇಳೆಯೇ ಕೆಲವು ಸಮೀಕ್ಷಕರು ಭೇಟಿ ಮಾಡಿ ಸಮಸ್ಯೆ ಕುರಿತು ಹೇಳಿಕೊಂಡರು. ನಂತರ, ಕೆಲವರು ಕಚೇರಿಯಲ್ಲಿ ಮನವಿ ಸಲ್ಲಿಸಿದರು.

‘ಒಟಿಪಿ ಬಾರದೇ ಸಮೀಕ್ಷೆ ಪೂರ್ಣಗೊಳ್ಳುತ್ತಿಲ್ಲ. ಒಂದೊಂದು ಮನೆಯಲ್ಲೂ ಸಮಯ ಆಗುತ್ತಿದೆ. ಮನೆಯವರೂ ಬೇಸರ ಮಾಡಿಕೊಳ್ಳುತ್ತಿದ್ದಾರೆ’ ಎಂದು ಸಮೀಕ್ಷಕರೊಬ್ಬರು ತಿಳಿಸಿದರು.

‘ಒಂದು ಜಿಲ್ಲೆ ಅಥವಾ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ನಡೆಸಿ, ಸಮಸ್ಯೆ ನಿವಾರಿಸಿ ನಂತರ ಇಡೀ ರಾಜ್ಯಕ್ಕೆ ಅನ್ವಯಿಸ ಬೇಕಾಗಿತ್ತು. ಆದರೆ, ಸಿದ್ಧತೆ ಇಲ್ಲದೇ ಸಮೀಕ್ಷೆಗೆ ಮುಂದಾಗಿದ್ದು ತೊಡಕಾಗಿದೆ’ ಎಂದು ನಾಗರಿಕ-ರೊಬ್ಬರು ಹೇಳಿದರು.

‘ಗಾಣಿಗ ಎಂದೇ ನಮೂದಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ‘ಹಿಂದೂ’ ಹಾಗೂ ಜಾತಿಯ ಕಾಲಂನಲ್ಲಿ ‘ಗಾಣಿಗ’ ಎಂದೇ ನಮೂದಿಸಬೇಕು ಎಂದು ಅಖಿಲ ಕರ್ನಾಟಕ ಗಾಣಿಗರ ಸಂಘ ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಆರ್. ರಾಜಶೇಖರ್, ‘ಉಪ ಜಾತಿಯ ಕಾಲಂನಲ್ಲಿ ಶಿವಜ್ಯೋತಿಪಣ ಗಾಣಿಗ, ಜ್ಯೋತಿನಗರ, ದೇವ ಗಾಣಿಗ/ ಒಂಟೆತ್ತು ಗಾಣಿಗ, ಸೋಮಕ್ಷತ್ರಿಯ, ಪಾಟಾಳಿ, ಜ್ಯೋತಿನಗರ ವೈಶ್ಯ, ಜ್ಯೋತಿಪಣ ಗಾಣಿಗ, ಗಾಂಡ್ಲಾ, ವನಿಯನ್/ ವಾಣಿಯರ್, ವಾಣಿವೈಶ್ಯ, ಸಪಲಿಗ, ಸಾಪಲ್ಯ, ತೇಲಿ, ತಿಲ್ವಾರ್ ತೇಲಿ ಎಂದೇ ಬರೆಯಿಸಬೇಕು’ ಎಂದರು.

‘ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು, ನಗರ, ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು, ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು, ಬಳ್ಳಾರಿ ಜಿಲ್ಲೆಗಳಲ್ಲಿ ನಮ್ಮ ಸಮುದಾಯದವರು ವಾಸವಾಗಿದ್ದಾರೆ’ ಎಂದು ಹೇಳಿದರು.

ಲೈಂಗಿಕ ದೌರ್ಜನ್ಯ: ಕೋಚ್ ವಿರುದ್ಧ ಎಫ್‌ಐಆರ್

ಮದುವೆ ಆಗುವುದಾಗಿ ನಂಬಿಸಿ ಮಹಿಳೆಗೆ ದೌರ್ಜನ್ಯ, ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೊ, ಫೋಟೊ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಆಗುವುದಾಗಿ ನಂಬಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಕ್ರಿಕೆಟ್ ತರಬೇತುದಾರ ಎ.ಬಿ.ಮ್ಯಾಥ್ಯು ವಿರುದ್ಧ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಮಂಗಳವಾರ ತಡರಾತ್ರಿ ಎಫ್‌ಐಆರ್ ದಾಖಲಾಗಿದೆ.

ಪ್ರಕರಣ ದಾಖಲಾಗುತ್ತಿದ್ದಂತೆಯೇ ಆರೋಪಿ ತಲೆಮರೆಸಿಕೊಂಡಿದ್ದು, ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಬನ್ನೇರುಘಟ್ಟ ರಸ್ತೆಯ ಬಡಾವಣೆಯೊಂದರ ಸಂತ್ರಸ್ತೆ, ರಾಜ್ಯ ಮಹಿಳಾ ಆಯೋಗಕ್ಕೆ ಸೆ.22ರಂದು ದೂರು ನೀಡಿದ್ದರು. ಆ ದೂರಿನ ಪ್ರತಿಯನ್ನು ನೈರುತ್ಯ ವಿಭಾಗದ ಡಿಸಿಪಿಗೆ ಕಳುಹಿಸಿದ್ದ ಆಯೋಗದ ಅಧಿಕಾರಿಗಳು, ಪ್ರಕರಣದ ತನಿಖೆ ನಡೆಸುವಂತೆ ಸೂಚಿಸಿದ್ದರು. ಆಯೋಗದ ಸೂಚನೆಯ ಬಳಿಕ ಪ್ರಕರಣ ದಾಖಲಾಗಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬನ್ನೇರುಘಟ್ಟ ರಸ್ತೆಯ ಶಾಲೆಯೊಂದರಲ್ಲಿ ಆರೋಪಿ ದೈಹಿಕ ಶಿಕ್ಷಣ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾರೆ. ಕ್ರಿಕೆಟ್ ಅಕಾಡೆಮಿಯನ್ನೂ ನಡೆಸುತ್ತಿದ್ದು ವಿದ್ಯಾರ್ಥಿಗಳಿಗೆ ಕ್ರಿಕೆಟ್ ತರಬೇತಿಯನ್ನೂ ನೀಡುತ್ತಿದ್ದಾರೆ.

ಪತಿಯಿಂದ ದೂರವಾಗಿದ್ದ ಮಹಿಳೆಯೊಬ್ಬರು ತಮ್ಮ ಪುತ್ರನನ್ನು ಅಕಾಡೆಮಿಗೆ ಕರೆದುಕೊಂಡು ಬರುತ್ತಿದ್ದರು. ಅವರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ, ಅವರೊಂದಿಗೆ ಸಲುಗೆ ಬೆಳೆಸಿಕೊಂಡಿದ್ದರು. ಅವರನ್ನು ಮದುವೆ ಆಗುವುದಾಗಿ ನಂಬಿಸಿ ಲೈಂಗಿಕ ದೌಜನ್ಯ ಎಸಗಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಆಯೋಗದ ಪತ್ರದ ವಿವರ: ‘ಮಹಿಳೆಯೊಬ್ಬರು ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಎ.ಬಿ.ಮ್ಯಾಥ್ಯು ದೂರುದಾರರನ್ನು ವಿವಾಹ ಆಗುವುದಾಗಿ ನಂಬಿಸಿ ಅವರ ಮನೆಯಲ್ಲೇ ಒಂದು ವರ್ಷದಿಂದ ನೆಲಸಿದ್ದರು. ದೂರುದಾರೆ ಗರ್ಭಿಣಿ ಎಂದು ತಿಳಿದ ಬಳಿಕ ಅವರ ಮೊಬೈಲ್ ಹಾಗೂ ಆಸ್ಪತ್ರೆ ವರದಿ ತೆಗೆದುಕೊಂಡು ಪರಾರಿ ಆಗಿದ್ದಾರೆ ಎಂಬುದಾಗಿ ದೂರು ಬಂದಿದೆ. ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಆಯೋಗದ ಕಾರ್ಯದರ್ಶಿ ಡಿಸಿಪಿ ಅವರಿಗೆ ಸೂಚನೆ ನೀಡಿ ಪತ್ರ ಬರೆದಿದ್ದರು.

ಹಲವರ ವಿಡಿಯೊ?: ಕ್ರಿಕೆಟ್ ಅಕಾಡೆಮಿಗೆ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದ ಮಹಿಳೆಯರನ್ನು ಪರಿಚಯ ಮಾಡಿಕೊಳ್ಳುತ್ತಿದ್ದ ಆರೋಪಿ, ಅವರೊಂದಿಗೆ ಸಲುಗೆ ಬೆಳೆಸಿಕೊಳ್ಳುತ್ತಿದ್ದರು. ನಂತರ, ದೈಹಿಕ ಸಂಪರ್ಕ ಬೆಳೆಸುತ್ತಿದ್ದರು. ಖಾಸಗಿ ಕ್ಷಣದ ಫೋಟೊ ಹಾಗೂ ವಿಡಿಯೊಗಳನ್ನು ರೆಕಾರ್ಡ್ ಮಾಡಿಕೊಂಡು ಮೊಬೈಲ್‌ನಲ್ಲಿ ಇಟ್ಟುಕೊಳ್ಳುತ್ತಿದ್ದರು. ಆರೋಪಿಯ ಮೊಬೈಲ್‌ನಲ್ಲಿ ನೂರಾರು ಅಶ್ಲೀಲ ವಿಡಿಯೊ ಹಾಗೂ ಫೋಟೊಗಳು ಇವೆ ಎನ್ನಲಾಗಿದೆ. ಆರೋಪಿಯನ್ನು ವಶಕ್ಕೆ ಪಡೆದ ಕೂಡಲೇ ಮೊಬೈಲ್ ಜಪ್ತಿ ಮಾಡಿಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗುವುದು ಎಂದು ಪೊಲೀಸರು ಹೇಳಿದರು.

ಸದ್ಯದಲ್ಲೇ ಆರೋಪಿ ವಶ

‘ಮಹಿಳೆ ನೀಡಿದ ದೂರು ಆಧರಿಸಿ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಮಂಗಳವಾರ ರಾತ್ರಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಯಿಂದ ಬೇರೆ ಮಹಿಳೆಯರಿಗೆ ಆಗಿರುವ ಅನ್ಯಾಯದ ಬಗ್ಗೆ ದೂರುದಾರೆ ತಮ್ಮ ಅರ್ಜಿಯಲ್ಲಿ ಪ್ರಸ್ತಾಪಿಸಿಲ್ಲ. ಆರೋಪಿಯನ್ನು ಸದ್ಯದಲ್ಲೇ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದು ನೈರುತ್ಯ ವಿಭಾಗದ ಡಿಸಿಪಿ ತಿಳಿಸಿದರು.

‘ಮಹಿಳೆಗೆ ಮೋಸ ಮಾಡಿಲ್ಲ’

‘ದೂರು ನೀಡಿದ ಮಹಿಳೆಗೆ ನಾನು ಮೋಸ ಮಾಡಿಲ್ಲ. ಅವರ ಜತೆಗೇ ಬದುಕುತ್ತೇನೆ. ಒಂದು ವರ್ಷದಿಂದ ಒಂದೇ ಮನೆಯಲ್ಲಿ ವಾಸವಿದ್ದೇವೆ. ಜಮೀನು ವಿಚಾರಕ್ಕೆ ನಾನು ಕೇರಳಕ್ಕೆ ಬಂದಿದ್ದೇನೆ. ಆದಷ್ಟು ಬೇಗ ಬೆಂಗಳೂರಿಗೆ ಬಂದು ಪೊಲೀಸರಿಗೆ ಮಾಹಿತಿ ನೀಡುತ್ತೇನೆ’ ಎಂಬುದಾಗಿ ಆರೋಪಿ ಮ್ಯಾಥ್ಯು ಪೊಲೀಸರಿಗೆ ತಿಳಿಸಿದ್ದಾನೆ ಎಂದು ಗೊತ್ತಾಗಿದೆ.



ಮ್ಯಾಥ್ಯು

ಇಂದು ಕೋರ್ಟ್‌ಗೆ ಸಾಕ್ಷಿ ದೂರುದಾರ

ಮಂಗಳೂರು: ಧರ್ಮಸ್ಥಳದ ಬೆಳವಣಿಗೆಗೆ ಸಂಬಂಧಿಸಿ ನ್ಯಾಯಾಧೀಶರ ಎದುರು ಸಾಕ್ಷಿ ದೂರುದಾರನ ಹೇಳಿಕೆ ದಾಖಲಿಸುವ ಪ್ರಕ್ರಿಯೆ ಗುರುವಾರ ಮುಂದುವರಿಯಲಿದೆ.

‘ಹೇಳಿಕೆ ದಾಖಲು ಪ್ರಕ್ರಿಯೆ ಮಂಗಳವಾರ ಪೂರ್ಣಗೊಂಡಿಲ್ಲ. ಆತನನ್ನು ಗುರುವಾರ ಬೆಳ್ತಂಗಡಿಯ ಜೆಎಂಎಫ್‌ಸಿ ಕೋರ್ಟ್‌ಗೆ ಹಾಜರುಪಡಿಸಲಾಗುವುದು’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಈ ಪ್ರಕರಣದಲ್ಲಿ ಇತರರು ನೀಡಿರುವ ಹೇಳಿಕೆಯ ದಾಖಲೀಕರಣ ಪ್ರಕ್ರಿಯೆ ಬೆಳ್ತಂಗಡಿಯ ಎಸ್‌ಐಟಿ ಕಚೇರಿಯಲ್ಲಿ ಬುಧವಾರವೂ ಮುಂದುವರಿಯಿತು.

ಜಾಮೀನು ಅರ್ಜಿ ವಿಚಾರಣೆ 27ರಂದು: ಮನೆಯಲ್ಲಿ ಶಸ್ತ್ರಾಸ್ತ್ರ ಪತ್ತೆಯಾದ ಪ್ರಕರಣದಲ್ಲಿ ಜಾಮೀನು ಕೋರಿ ಮಹೇಶ್ ಶೆಟ್ಟಿ ತಿಮರೋಡಿ ಪರ ವಕೀಲರು ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಕುರಿತ ವಿಚಾರಣೆ ಇದೇ 27ರಂದು ನಿಗದಿಯಾಗಿದೆ.

ತಿಮರೋಡಿ ಅವರನ್ನು ರಾಯಚೂರು ಜಿಲ್ಲೆಗೆ ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಆದೇಶ ಮಾಡಿದ್ದಾರೆ. ಆದೇಶದ ಪ್ರತಿಯನ್ನು ಇನ್ನೂ ತಿಮರೋಡಿ ಅವರಿಗೆ ತಲುಪಿಸಲು ಪೊಲೀಸರಿಗೆ ಸಾಧ್ಯವಾಗಿಲ್ಲ.

‘ತಿಮರೋಡಿ ಅವರು ಮನೆಯಲ್ಲೂ ಇಲ್ಲ, ಕಚೇರಿಯಲ್ಲೂ ಇಲ್ಲ. ಹಾಗಾಗಿ ಗಡಿಪಾರು ಆದೇಶ ಜಾರಿಗೊಳಿಸಲು ಸಾಧ್ಯವಾಗಿಲ್ಲ. ಹುಡುಕಾಟ ನಡೆಸಿದ್ದೇವೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಶಿಕ್ಷಣ ಸಂಸ್ಥೆಯಲ್ಲಿ ಐಟಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯೊಂದರ ಕಾಲೇಜುಗಳು, ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬುಧವಾರ ಶೋಧ ನಡೆಸಿದ್ದಾರೆ.

ಬೆಳಿಗ್ಗೆಯೇ ಆರಂಭವಾದ ಶೋಧ ರಾತ್ರಿಯವರೆಗೂ ಮುಂದುವರಿದಿತ್ತು. ಆದಾಯ ತೆರಿಗೆಗೆ ಸಂಬಂಧಿಸಿದಂತೆ ಈ ಕಾರ್ಯಾಚರಣೆ ನಡೆದಿದೆ ಎನ್ನಲಾಗಿದೆ.

ಸಂರಕ್ಷಿತ ಕಾಡಲ್ಲಿ ಜೋಡಿ ಮಾರ್ಗ

ಒಂದನೇ ಪುಟದಿಂದ...

ಕಾಳಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹಾಗೂ ಡಿಸಿಎಫ್ ಉದ್ದೇಶಿತ ಯೋಜನೆಯ ಬಗ್ಗೆ ಕೂಲಂಕಶವಾಗಿ ಪರಿಶೀಲನೆ ನಡೆಸಿ, ಯೋಜನೆಗೆ ಅನುಮತಿ ನೀಡಲು ಸಾಧ್ಯವಿಲ್ಲ ಎಂದು ವರದಿ ನೀಡಿದ್ದಾರೆ.

ಆದರೆ, ಪಟ್ಟು ಬಿಡದ ರೈಲ್ವೆ ವಿಕಾಸ್ ನಿಗಮದ ಮುಖ್ಯ ಯೋಜನಾ ಮ್ಯಾನೇಜರ್ ಅವರು ಯೋಜನೆಯ ಮಾಹಿತಿ ಮತ್ತು ಉದ್ದೇಶಿತ ಉಪಶಮನ ಕ್ರಮಗಳ ಬಗ್ಗೆ ವಿವರಗಳನ್ನು ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಸಭೆಯಲ್ಲಿ ಸಾದರ ಪಡಿಸಿದ್ದರು. ಆದರೆ, ಸಮಿತಿಯ ಸದಸ್ಯೆ ವೈಶಾಲಿ ಕುಲಕರ್ಣಿ ಅವರು ರೈಲ್ವೆ ಪ್ರಸ್ತಾವದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದು ಮಾತ್ರವಲ್ಲದೆ, ಸಂರಕ್ಷಿತ ಪ್ರದೇಶದಲ್ಲಿ ವನ್ಯಜೀವಿಗಳ ಸಾವನ್ನು ತಪ್ಪಿಸಲು ಮತ್ತು ಪ್ಲಾಸ್ಟಿಕ್ ತ್ಯಾಜ್ಯ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಸಭೆಯಲ್ಲಿ ಹೇಳಿಕೆ ನೀಡಿದ ಸದಸ್ಯ ಕಾರ್ಯದರ್ಶಿ, ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಪಾರ ಪ್ರಮಾಣದಲ್ಲಿ ಮರಗಳು ಹನನವಾಗುತ್ತವೆ. ಅಲ್ಲದೇ, ಡಿಸಿಎಫ್ ಅವರು ಯೋಜನೆಗೆ ಅನುಮತಿ ನೀಡಲು ಸಾಧ್ಯವಿಲ್ಲ ಎಂದು ವರದಿ ನೀಡಿದ್ದಾರೆ. ಆದ್ದರಿಂದ ಯೋಜನೆಯ ಸಾಧ್ಯತೆ ಮತ್ತು ಪರಿಣಾಮಗಳ ಬಗ್ಗೆ ನಿರ್ಣಯಿಸಲು ತಾಂತ್ರಿಕ ಸಮಿತಿ ರಚಿಸಬೇಕು ಎಂದು ಸಲಹೆ ನೀಡಿದ್ದರು. ಈ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದ ಬಳಿಕ ತಾಂತ್ರಿಕ ಸಮಿತಿ ರಚಿಸಲು ತೀರ್ಮಾನಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ತಾಂತ್ರಿಕ ಸಮಿತಿಯ ನೇತೃತ್ವವನ್ನು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ವಹಿಸಲಿದ್ದಾರೆ. ಕೆನರಾ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ, ಡಿಸಿಎಫ್ ಮತ್ತು ಕಾಳಿ ಹುಲಿ ಸಂರಕ್ಷಿತದ ನಿರ್ದೇಶಕ ಮತ್ತು ರೈಲ್ವೆ ವಿಕಾಸ್ ನಿಗಮದ ಮುಖ್ಯ ಯೋಜನಾ ನಿರ್ದೇಶಕರು ಸದಸ್ಯರಾಗಿದ್ದಾರೆ.

ಈ ಯೋಜನೆಯ ಕಾರ್ಯಗತಗೊಳಿಸಲು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ರಾಜ್ಯದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ಜತೆ ಚರ್ಚೆ ನಡೆಸಿದ್ದಾರೆ. ಆದರೆ, ಪಾಟೀಲ ಅವರ ಪುತ್ರ ಧ್ರುವ ಎಂ. ಪಾಟೀಲ ಅವರು ವನ್ಯಜೀವಿ ಮಂಡಳಿಯಲ್ಲಿ ಸದಸ್ಯ ಆಗಿರುವುದರಿಂದ, ಇದು ಹಿತಾಸಕ್ತಿಯ ಸಂಘರ್ಷ ಆಗುವುದಿಲ್ಲವೇ ಎಂದು ಪರಿಸರ ತಜ್ಞರು ಪ್ರಶ್ನಿಸಿದ್ದಾರೆ.


ಡಿಸಿಎಫ್ ವರದಿಯಲ್ಲೇನಿದೆ?

ಉದ್ದೇಶಿತ ಯೋಜನೆ ಪಶ್ಚಿಮಘಟ್ಟದ ಒಳಗೆ ಬರಲಿದ್ದು, ಇದು ಭಾರತದ ಜೀವವೈವಿಧ್ಯದ ತಾಣವಾಗಿದೆ. ಅಲ್ಲದೇ, ಈ ಪ್ರದೇಶದಲ್ಲಿ ಆಗಿಂದ್ದಾಗೆ ಭೂಕುಸಿತ ಸಂಭವಿಸುತ್ತಲೇ ಇರುತ್ತದೆ. ಈಗಿರುವ ರೈಲು ಹಳಿಗಳ ಸಮೀಪವೇ ಕಳೆದ ಕೆಲವು ವರ್ಷಗಳಿಂದ ಭೂಕುಸಿತ ಸಂಭವಿಸಿದೆ. ಈಗಿರುವ ಹಳಿಯ ಮೇಲೆ ರೈಲುಗಳು ಸಂಚಾರದಿಂದ ಸಾಕಷ್ಟು ವನ್ಯಜೀವಿಗಳು ಸಾವನ್ನಪ್ಪಿವೆ. ಈ ವಿಷಯವನ್ನು ಈ ಹಿಂದೆ ರೈಲ್ವೆ ಇಲಾಖೆಯ ಗಮನಕ್ಕೆ ತಂದಿದ್ದರೂ, ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಪ್ರಸ್ತಾವಿತ ಯೋಜನೆಯಿಂದ ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಒಟ್ಟು 5413 ಮರಗಳ ಹನನವಾಗುತ್ತದೆ. ಆದ್ದರಿಂದ ಜೋಡಿ ಮಾರ್ಗ ಪ್ರಸ್ತಾವನೆಗೆ ಶಿಫಾರಸು ಮಾಡಲು ಸಾಧ್ಯವಿಲ್ಲ ಎಂದು ಡಿಸಿಎಫ್ ತಮ್ಮ ವರದಿಯಲ್ಲಿ ಪ್ರತಿಪಾದಿಸಿದ್ದಾರೆ.

> ಅರಣ್ಯ ಹಾಗೂ ವನ್ಯಜೀವಿ ಕಾಯ್ದೆಗಳ ಕಟ್ಟುನಿಟ್ಟಿನ ನಿಬಂಧನೆಗಳ ಕಾರಣದಿಂದ ಅರಣ್ಯ ವಾಸಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡಲಾಗದೆ ಕ್ಯಾಸಲ್ ರಾಕ್ ವನ್ಯಜೀವಿ ವಲಯದಿಂದ 58 ಕುಟುಂಬಗಳು ಸೇರಿ ಕಾಳಿ ಹುಲಿ ಮೀಸಲು ವ್ಯಾಪ್ತಿಯಿಂದ 600 ಕ್ಕೂ ಹೆಚ್ಚಿನ ಕುಟುಂಬಗಳನ್ನು ಸ್ಥಳಾಂತರಿಸಿ ಹುಲಿಗಳಿಗೆ ಮಾನವ ಚಟುವಟಿಕೆ ರಹಿತ ಪ್ರದೇಶಗಳನ್ನು ನಿರ್ಮಿಸಿದ್ದೇವೆಂದು ರಾಜ್ಯ ಸರ್ಕಾರ ಹೇಳಿದೆ. ಆದರೆ ಇದೀಗ ಇದೇ ಅರಣ್ಯ ಪ್ರದೇಶದಲ್ಲಿ ರೈಲ್ವೆ ದ್ವಿಪಥ ಕಾಮಗಾರಿಗೆ ಹಸಿರು ನಿಶಾನೆ ತೋರಲು ಸರ್ಕಾರ ಹೊರಟಿರುವುದು ಸರಿಯಲ್ಲ
>
> **ಗಿರಿಧರ ಕುಲಕರ್ಣಿ,** ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ

ನಿಧನ ವಾರ್ತೆ

ಶ್ರೀನಿವಾಸ ಜೋಶಿ



ಹುಬ್ಬಳ್ಳಿ: ಸಿತಾರ ಮಾಂತ್ರಿಕ ಪಂಡಿತ್ ಶ್ರೀನಿವಾಸ ಜೋಶಿ (75) ಇಲ್ಲಿನ ವೆಂಕಟೇಶ್ವರ ನಗರದ ನಿವಾಸದಲ್ಲಿ ಬುಧವಾರ ನಿಧನರಾದರು. ಅವರಿಗೆ ಪತ್ನಿ ರಾಧಾ, ಪುತ್ರ ನಿಖಿಲ್, ಪುತ್ರಿ ಮೇಘಾ ಇದ್ದಾರೆ.

ನಗರದ ಕೇಶ್ವಾಪುರದ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಹಿರಿಯ ಸಹಾಯಕರಾಗಿದ್ದು, ಸ್ವಯಂ ನಿವೃತ್ತಿ ಪಡೆದಿದ್ದರು.

1951ರಲ್ಲಿ ಜನಿಸಿದ ಶ್ರೀನಿವಾಸ ಜೋಶಿ ಅವರಿಗೆ ಕಿರಿಯ ವಯಸ್ಸಿನಲ್ಲೇ ಸಂಗೀತದ ಬಗ್ಗೆ ಆಸಕ್ತಿ ಮೂಡಿತು. ಮೃಚ್ಛಕಟಿಕ, ಹಯವದನ, ನಂದ ಭೂಪತಿ, ಗುಲಾಮನ ಸ್ವಾತಂತ್ರ್ಯ ಯಾತ್ರೆ, ವಾಸಂಶಿ ಜೀರ್ಣಾನಿ, ಭಾಗ್ಯಶ್ರೀ ಸೇರಿದಂತೆ 50ಕ್ಕೂ ಹೆಚ್ಚು ಹವ್ಯಾಸಿ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದ್ದಾರೆ.

ನ್ಯಾಯಾಧೀಶರ ವಿರುದ್ಧವೇ ಮಾಜಿ ಸಂಸದರ ಆರೋಪ

ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆ ಮೇಲಿನ ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ಸೆಷನ್ಸ್ ಕೋರ್ಟ್‌ನಲ್ಲಿ ನಡೆಯುತ್ತಿರುವ ನನ್ನ ವಿರುದ್ಧದ ಇನ್ನೆರಡು ಕ್ರಿಮಿನಲ್ ಪ್ರಕರಣಗಳನ್ನು ಮತ್ತೊಂದು ಸೆಷನ್ಸ್ ಕೋರ್ಟ್‌ಗೆ ವರ್ಗಾಯಿಸಬೇಕು’ ಎಂದು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತ ಅರ್ಜಿಗಳನ್ನು



ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ನ್ಯಾಯಿಕ ಪ್ರಕ್ರಿಯೆಯಲ್ಲಿ ನಿಮಗೆ ಏನಾದರೂ ಆಕ್ಷೇಪಗಳು ಎದುರಾಗಿದ್ದರೆ ಅಂತಹ ಅಂಶಗಳನ್ನು ನ್ಯಾಯಿಕ ಪ್ರಕ್ರಿಯೆಯ ಮುಖಾಂತರವೇ ಪ್ರಶ್ನಿಸಿಕೊಳ್ಳಿ’ ಎಂದು ಕಾರಣ ನೀಡಿದೆ.

‘ಸೆಷನ್ಸ್ ನ್ಯಾಯಾಲಯ ದಿನನಿತ್ಯದ ಆಧಾರದಲ್ಲಿ ವಿಚಾರಣೆ ನಡೆಸುತ್ತಿದೆ. ಈ ಪ್ರಕ್ರಿಯೆಯಲ್ಲಿ ವಿಚಾರಣೆ ಮುಂದೂಡಬೇಕೆಂಬ ನಿಮ್ಮ ಮನವಿಗಳನ್ನು ನ್ಯಾಯಾಧೀಶರು ಸಕಾರಣದಿಂದಲೇ ತಿರಸ್ಕರಿಸಿರಬಹುದು. ಈ ಮೊದಲಿನ ಅತ್ಯಾಚಾರ ಆರೋಪದ ಪ್ರಕರಣದಲ್ಲಿ ನೀಡಲಾದ ತೀರ್ಪಿನಲ್ಲಿ ಕೆಲ ಅವಲೋಕನಗಳೂ ನಿಮಗೆ ಕಠಿಣ ಎಂದೆನಿಸಿರಬಹುದು. ಆದರೆ, ಇದನ್ನೇ ನ್ಯಾಯಾಧೀಶರ ನಡೆ ಪಕ್ಷಪಾತದಿಂದ ಕೂಡಿದೆ ಎಂದು ಅರ್ಥೈಸಲಾಗದು’ ಎಂದು ನ್ಯಾಯಪೀಠ ಹೇಳಿದೆ.

‘ಅರ್ಜಿದಾರರು ಪ್ರಕರಣದ ವಿಚಾರಣೆ ವಿಳಂಬ ಮಾಡಲು ಯತ್ನಿಸಿದ್ದು, ಇದನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಿದೆ. ಇದನ್ನೇ ವರ್ಗಾವಣೆಗೆ ಆಧಾರ ಎನ್ನುವುದಾದರೆ, ಬಹುತೇಕ ಎಲ್ಲ ಕ್ರಿಮಿನಲ್ ಪ್ರಕರಣಗಳಲ್ಲೂ ಇಂತಹ ಅರ್ಜಿಗಳು ಬರಲಾರಂಭಿಸುತ್ತವೆ. ಇಂತಹುದಕ್ಕೆಲ್ಲಾ ನ್ಯಾಯಾಲಯ ಅನುಮತಿ ನೀಡಲಾಗುವುದಿಲ್ಲ’ ಎಂಬ ಕಠಿಣ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಮೊದಲು ಪ್ರಜ್ವಲ್ ಸಲ್ಲಿಸಿದ್ದ ಇದೇ ಮನವಿಯ ಅರ್ಜಿಗಳನ್ನು ಬೆಂಗಳೂರು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಇದೇ 20ರಂದು ತಿರಸ್ಕರಿಸಿ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಪ್ರಜ್ವಲ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್ ಮತ್ತು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ವಾದ ಮಂಡಿಸಿದರು.

ಮನವಿ ಏನಿತ್ತು?: ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಈಗಾಗಲೇ ನನ್ನ ವಿರುದ್ಧ ಒಂದು ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ಪೂರ್ವಗ್ರಹ ಭಾವನೆ ಹೊಂದಿರುವ ಅಂಶಗಳನ್ನು ವ್ಯಕ್ತಪಡಿಸಿದ್ದಾರೆ. ಇದು ಅವರ ಅನ್ಯಾಯದ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 408ರ ಅಡಿಯಲ್ಲಿ ಸದ್ಯ ನಡೆಯುತ್ತಿರುವ ಮತ್ತೆರಡು ಪ್ರಕರಣಗಳ ವಿಚಾರಣೆಯನ್ನು ನಗರದ ಮತ್ತೊಂದು ಸೆಷನ್ಸ್ ಕೋರ್ಟ್‌ಗೆ ವರ್ಗಾವಣೆ ಮಾಡಲು ಆದೇಶಿಸಬೇಕು’ ಎಂದು ಪ್ರಜ್ವಲ್ ಕೋರಿದ್ದರು.

ನಿಗಮ- ಮಂಡಳಿ ನೇಮಕ ಪಟ್ಟಿ

ಶಿವಲೀಲಾ ಕುಲಕರ್ಣಿ	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಪಿ. ರಘು	ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ
ಅರುಣ್ ಪಾಟೀಲ್	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ
ವಡ್ನಾಳ್ ಜಗದೀಶ್	ಕರ್ನಾಟಕ ಜೀವವೈವಿಧ್ಯ ಮಂಡಳಿ
ಮುರಳಿ ಅಶೋಕ್	ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ
ಡಾ. ಮೂರ್ತಿ	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ
ಕರ್ನಲ್ ಮಲ್ಲಿಕಾರ್ಜುನ್	ಮಾಜಿ ಸೈನಿಕರ ಕಲ್ಯಾಣ ಮಂಡಳಿ
ಡಾ. ಬಿ. ಸಿ. ಮುದ್ದು ಗಂಗಾಧರ್	ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ
ಶಾಲೆಟ್ ಪಿಂಟೊ	ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ
ಮರಿಯೋಜಿ ರಾವ್	ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ
ಎಂ.ಎ. ಗಫೂರ್	ಕರಾವಳಿ ಅಭಿವೃದ್ಧಿ ಪ್ರಾಧಿಕಾರ
ಕೆ. ಹರೀಶ್ ಕುಮಾರ್	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಎನ್. ಸಂಪಂಗಿ	ಕರ್ನಾಟಕ ಗೋದಾಮು ನಿಗಮ
ವೈ. ಸಯೀದ್ ಅಹಮದ್	ದೇವರಾಜ ಅರಸು ಟ್ರಕ್ ಟರ್ಮಿನಲ್
ಮಹೇಶ್	ಕಾಡುಗೊಲ್ಲ ಅಭಿವೃದ್ಧಿ ನಿಗಮ
ಮಂಜಪ್ಪ	ಬಯಲು ಸೀಮೆ ಅಭಿವೃದ್ಧಿ ಮಂಡಳಿ
ಧರ್ಮಣ್ಣ ಉಪ್ಪಾರ	ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ
ಅಗಾ ಸುಲ್ತಾನ್	ಕೇಂದ್ರ ಪರಿಹಾರ ಸಮಿತಿ
ಎಸ್. ಜಿ. ನಂಜಯ್ಯನ ಮಠ	ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ
ಆಂಜನಪ್ಪ	ಕರ್ನಾಟಕ ಬೀಜ ಅಭಿವೃದ್ಧಿ ನಿಗಮ ನಿಯಮಿತ
ನೀಲಕಂಠ ಮುಳ್ಗೆ	ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಬಾಬು ಹೊನ್ನಾ ನಾಯ್ಕ್	ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ)
ಯುವರಾಜ್ ಕದಂ	ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು (ಕಾಡಾ), ಬೆಳಗಾವಿ
ಜಮಾದಾರ್ ಅನಿಲ್ ಕುಮಾರ್	ಕರ್ನಾಟಕ ರಾಜ್ಯ ತೊಗರಿ ಅಭಿವೃದ್ಧಿ ಮಂಡಳಿ, ಕಲಬುರಗಿ
ಪ್ರವೀಣ್ ಹರ್ವಾಲ್	ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ
ಮಂಜುನಾಥ್ ಪೂಜಾರಿ	ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ
ಸೈಯದ್ ಮೆಹಮೂದ್ ಚಿಸ್ತಿ	ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ
ಎಂ. ಎಸ್. ಮುತ್ತುರಾಜ್	ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ
ನಂಜಪ್ಪ	ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ
ವಿಶ್ವಾಸ ದಾಸ್	ಕರ್ನಾಟಕ ಗಾಣಿಗ ಅಭಿವೃದ್ಧಿ ನಿಗಮ
ಆರ್. ಸತ್ಯನಾರಾಯಣ	ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ
ಗಂಗಾಧರ್	ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ
ಶಿವಪ್ಪ	ಹಾಸನ ನಗರಾಭಿವೃದ್ಧಿ ಪ್ರಾಧಿಕಾರ
ಬಿ.ಎಸ್. ಕವಲಗಿ	ಕರ್ನಾಟಕ ರಾಜ್ಯ ಸುಣ್ಣ ಅಭಿವೃದ್ಧಿ ಮಂಡಳಿ
ಶ್ರೀನಿವಾಸ ವೇಲು	ಕುಂಬಾರ ಅಭಿವೃದ್ಧಿ ನಿಗಮ
ಟಿ.ಎಂ. ಶಾಹೀದ್ ತಕ್ಕಿಲ್	ಕರ್ನಾಟಕ ರಾಜ್ಯ ಕನಿಷ್ಠ ವೇತನ ಮಂಡಳಿ
ಚೇತನ್ ಕೆ. ಗೌಡ	ಕರ್ನಾಟಕ ರಾಜ್ಯ ಕೈಮಗ್ಗ ಮೂಲಸೌಕರ್ಯ (ಪವರ್ ಲೂಮ್ಸ್) ಮಂಡಳಿ
ಶರಣಪ್ಪ ಸಾರದ್ದುರ್	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ಮಂಡಳಿ
ಲಾವಣ್ಯ ಬಲ್ಲಾಳ್ ಜೈನ್	ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣೀಕರಣ ಏಜೆನ್ಸಿ

ಬಿಹಾರ: ಮೋದಿ ಸರ್ಕಾರದ ಅಂತ್ಯಕ್ಕೆ ಮುನ್ನುಡಿ: ಖರ್ಗೆ

ಪಟ್ನಾ (ಪಿಟಿಐ): 'ಮತಕಳವು' ಮತ್ತು ಕೋಮು ಧ್ರುವೀಕರಣದಲ್ಲಿ ತೊಡಗಿರುವ ಬಿಜೆಪಿಗೆ ಬಿಹಾರ ವಿಧಾನಸಭಾ ಚುನಾವಣೆ ತಕ್ಕ ಪಾಠ ಕಲಿಸಲಿದ್ದು, ಮೋದಿ ಸರ್ಕಾರದ ಭ್ರಷ್ಟ ಆಡಳಿತದ ಅಂತ್ಯಕ್ಕೆ ಮುನ್ನುಡಿ ಬರೆಯಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಪ್ರತಿಪಾದಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಮಾತನಾಡಿದ ಅವರು, '2025ರ ಕೊನೆಯಲ್ಲಿ ಬಿಹಾರದಲ್ಲಿ ನಡೆಯುವ ವಿಧಾನಸಭಾ ಚುನಾವಣೆಯು ಬಿಹಾರಕ್ಕಷ್ಟೇ ಅಲ್ಲದೆ ಇಡೀ ದೇಶಕ್ಕೆ ಮೈಲಿಗಲ್ಲಾಗಲಿದೆ' ಎಂದು ಹೇಳಿದರು.

'ಬಿಹಾರದಲ್ಲಿ ಮತದಾರರ ಪಟ್ಟಿಯನ್ನು ಅಧಿಕೃತವಾಗಿಯೇ ತಿರುಚಲಾಗಿದೆ. ಇದೇ ಕಾರಣಕ್ಕಾಗಿ ಬಿಹಾರದಲ್ಲಿ ಸಿಡಬ್ಲ್ಯುಸಿ ಸಭೆ ನಡೆಸಿದ್ದೇವೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಗೆ ಇಲ್ಲಿ ನಮ್ಮ ಬದ್ಧತೆಯನ್ನು ಪುನಃ ದೃಢೀಕರಿಸಿದ್ದೇವೆ' ಎಂದರು.

'ಮುಕ್ತ ಮತ್ತು ಪಾರದರ್ಶಕ ಚುನಾವಣೆಯು ಪ್ರಜಾಪ್ರಭುತ್ವದ ಬುನಾದಿ. ಆದರೆ ಇಂದು ಚುನಾವಣಾ ಆಯೋಗವು ಮುಕ್ತ ಮತ್ತು ಪಾರದರ್ಶಕವಾಗಿ ನಡೆದುಕೊಳ್ಳುತ್ತಿದೆಯೇ ಎಂಬ ಗಂಭೀರ ಪ್ರಶ್ನೆಗಳು ಎದುರಾಗಿವೆ' ಎಂದು ಬೇಸರ ವ್ಯಕ್ತಪಡಿಸಿದರು.

'ಮತಕಳವಿಗೆ ಸಂಬಂಧಿಸಿದಂತೆ ವಿವಿಧ ರಾಜ್ಯಗಳಿಂದ ಬಂದಿರುವ ಪ್ರಶ್ನೆಗಳಿಗೆ ಆಯೋಗ ಉತ್ತರಿಸಬೇಕು. ಅದನ್ನು ಬಿಟ್ಟು ಅದು ಪ್ರಮಾಣಪತ್ರ ಸಲ್ಲಿಸುವಂತೆ ನಮಗೆ ಸೂಚಿಸುತ್ತಿದೆ' ಎಂದು ಅವರು ಕಿಡಿಕಾರಿದರು.

'ಮತಕಳವು' ಎಂಬುದು ಪಡಿತರ ಕಳವು, ಪಿಂಚಣಿ, ಔಷಧಿ, ಮಕ್ಕಳವಿದ್ಯಾರ್ಥಿ ವೇತನ ಮತ್ತು ಪರೀಕ್ಷಾ ಶುಲ್ಕದ ಕಳವಿಗೆ ದಾರಿ ಮಾಡಿಕೊಡುತ್ತದೆ. ಈ ಮೂಲಕ ದಲಿತರು, ಬುಡಕಟ್ಟು ಜನರು, ಹಿಂದುಳಿದ ಮತ್ತು ಅತಿ ಹಿಂದುಳಿದ ವರ್ಗಗಳ ಜನರು ಹಾಗೂ ಅಲ್ಪಸಂಖ್ಯಾತರನ್ನು ದುರ್ಬಲ ಮತ್ತು ಬಡತನದಲ್ಲಿಯೇ ಮುಂದುವರಿಸುವಂತೆ ಮಾಡುವ ಹುನ್ನಾರ ಇದಾಗಿದೆ ಎಂದು ಅವರು ಟೀಕಿಸಿದರು.

ಈ ನಿಟ್ಟಿನಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬಿಹಾರದಲ್ಲಿ 'ಮತದಾರರ ಅಧಿಕಾರ ಯಾತ್ರೆ' ಹಮ್ಮಿಕೊಂಡು ಜನ ಜಾಗೃತಿ ಮೂಡಿಸಿದ್ದಾರೆ. ಯಾತ್ರೆಯಲ್ಲಿ ಅಸಂಖ್ಯಾತ ಜನರು ಭಾಗವಹಿಸಿ ಬೆಂಬಲ ಸೂಚಿಸಿದ್ದಾರೆ ಎಂದು ಅವರು ಹೇಳಿದರು.

'ಎನ್‌ಡಿಎಯಲ್ಲಿ ಬಿರುಕು': 'ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಆಂತರಿಕ ಕಲಹ ಇದೆ. ಜೆಡಿಯು ವರಿಷ್ಠ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಈಗಾಗಲೇ ಬಿಜೆಪಿಯಿಂದ ಮಾನಸಿಕವಾಗಿ ನಿವೃತ್ತರಾಗಿದ್ದಾರೆ. ಬಿಜೆಪಿಯು ಅವರನ್ನು ಹೊರೆ ಎಂದು ಭಾವಿಸುತ್ತಿದೆ' ಎಂದು ಖರ್ಗೆ ಆರೋಪಿಸಿದರು.

ಬಿಹಾರದಲ್ಲಿ ಶೇ 80ರಷ್ಟು ಜನರು ಒಬಿಸಿ, ಇಬಿಸಿ ಮತ್ತು ಎಸ್‌ಸಿ, ಎಸ್‌ಟಿ ಪ್ರವರ್ಗಗಳಿಗೆ ಸೇರಿದವರಾಗಿದ್ದಾರೆ. ಈ ಜನರು ಜಾತಿ ಗಣತಿ ಮತ್ತು ಮೀಸಲಾತಿ ಪಾರದರ್ಶಕವಾಗಿರಬೇಕು ಎಂದು ಬಯಸುತ್ತಾರೆ ಎಂದು ಅವರು ಪ್ರತಿಪಾದಿಸಿದರು.

'ಸ್ನೇಹಿತರ ಅವಧಿಯಲ್ಲಿ ಭಾರತಕ್ಕೆ ಸಂಕಷ್ಟ'

ಪ್ರಧಾನಿ ನರೇಂದ್ರ ಮೋದಿ ಅವರು 'ನನ್ನ ಸ್ನೇಹಿತರು' ಎಂದು ಹೆಮ್ಮೆಯಿಂದ ಹೇಳುವ ವ್ಯಕ್ತಿಗಳು ಭಾರತವನ್ನು ಹಲವು ಸಂಕಷ್ಟಗಳಿಗೆ ಸಿಲುಕಿಸಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಭಾರತದ ಮೇಲೆ ಹೆಚ್ಚುವರಿ ಸುಂಕ ವಿಧಿಸಿ, ಎಚ್1ಬಿ ವೀಸಾ ಶುಲ್ಕವನ್ನು ಅತಿಯಾಗಿ ಹೆಚ್ಚಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮಗಳನ್ನು ಉಲ್ಲೇಖಿಸಿ ಅವರು ಮಾತನಾಡಿದರು.

ಈ ಸ್ನೇಹಿತರ ಅವಧಿಯಲ್ಲಿ ಭಾರತವು ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸವಾಲು ಮತ್ತು ಸಂಕಷ್ಟಗಳನ್ನು ಎದುರಿಸಬೇಕಾಗಿದೆ ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನೆ
'ರಾಜೋನಾನನ್ನು ಏಕೆ ಗಲ್ಲಿಗೇರಿಸಿಲ್ಲ?'



ನವದೆಹಲಿ(ಪಿಟಿಐ): 'ಪಂಜಾಬ್ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರ ಹತ್ಯೆ ಪ್ರಕರಣದಲ್ಲಿ ಮರಣ ದಂಡನೆಗೆ ಗುರಿಯಾಗಿರುವ ಬಲ್ವಂತ್ ಸಿಂಗ್ ರಾಜೋನಾನನ್ನು ಇನ್ನೂ ಏಕೆ ಗಲ್ಲಿಗೇರಿಸಿಲ್ಲ' ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಬುಧವಾರ ಪ್ರಶ್ನಿಸಿದೆ.

ಕ್ಷಮಾದಾನ ಕೋರಿ ತಾನು ಸಲ್ಲಿಸಿದ್ದ ಅರ್ಜಿ ಕುರಿತು ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬವಾಗಿದೆ. ಹೀಗಾಗಿ, ತನಗೆ ವಿಧಿಸಿರುವ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸುವಂತೆ ಕೋರಿ ರಾಜೋನಾ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ವೇಳೆ, ಸುಪ್ರೀಂ ಕೋರ್ಟ್ ಈ ಪ್ರಶ್ನೆ ಕೇಳಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರು ಇದ್ದ ಪೀಠವು ಅರ್ಜಿ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, 'ಬಿಯಾಂತ್ ಸಿಂಗ್ ಹತ್ಯೆ ಗಂಭೀರ ಅಪರಾಧ' ಎಂದು ಕೇಂದ್ರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಪೀಠಕ್ಕೆ ತಿಳಿಸಿದರು.

ಆಗ, 'ಹಾಗಾದರೆ, ಈವರೆಗೆ ಆತನನ್ನು ಏಕೆ ಗಲ್ಲಿಗೇರಿಸಿಲ್ಲ? ಈ ಲೋಪಕ್ಕೆ ಯಾರನ್ನು ದೂರಬೇಕು' ಎಂದು ಪ್ರಶ್ನಿಸಿದ ಪೀಠ, 'ಆತನಿಗೆ ವಿಧಿಸಿರುವ ಗಲ್ಲು ಶಿಕ್ಷೆಗೆ ನ್ಯಾಯಾಲಯವಂತೂ ತಡೆ ನೀಡಿಲ್ಲ' ಎಂದು ಹೇಳಿತು.

'ನನ್ನ ಕಕ್ಷಿದಾರ ಸಲ್ಲಿಸಿರುವ ಕ್ಷಮಾದಾನ ಅರ್ಜಿ ಕುರಿತಂತೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ರಾಜೋನಾ ಭಾರತದ ಪ್ರಜೆ. ಈ ವಿಚಾರ ಭಾರತ ಮತ್ತು ಪಾಕಿಸ್ತಾನ ನಡುವಿನ ವ್ಯಾಜ್ಯವಲ್ಲ' ಎಂದು ರಾಜೋನಾ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಹೇಳಿದರು.

ಆಗ, ಸಂಬಂಧಪಟ್ಟವರಿಂದ ಮಾಹಿತಿ ಪಡೆದು, ಪೀಠಕ್ಕೆ ತಿಳಿಸುವುದಾಗಿ ನಟರಾಜ್ ಹೇಳಿದರು. ವಾದ, ಪ್ರತಿವಾದಗಳನ್ನು ಆಲಿಸಿದ ಪೀಠವು, ಅರ್ಜಿ ವಿಚಾರಣೆಯನ್ನು ಅಕ್ಟೋಬರ್ 15ಕ್ಕೆ ಮುಂದೂಡಿತು.

ಮರಣದಂಡನೆ ಮಾರ್ಗಸೂಚಿ ಅಕ್ಟೋಬರ್ 8ಕ್ಕೆ ಅರ್ಜಿ ವಿಚಾರಣೆ

ನವದೆಹಲಿ (ಪಿಟಿಐ): ಮರಣ ದಂಡನೆ ವಿಧಿಸಬಹುದಾದ ಘೋರ ಪ್ರಕರಣದಲ್ಲಿ 'ಸಂತ್ರಸ್ತ (ಬಲಿಪಶು) ಮತ್ತು ಸಮಾಜ ಕೇಂದ್ರಿತ'ವಾದ ಮಾರ್ಗ ಸೂಚಿಯನ್ನು ರೂಪಿಸುವ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಅಕ್ಟೋಬರ್ 8ರಂದು ವಿಚಾರಣೆ ನಡೆಸಲಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ.ಅಂಜಾರಿಯಾ ಅವರ ಪೀಠದ ಮುಂದೆ ಅರ್ಜಿ ವಿಚಾರಣೆಗೆ ಬರಲಿದೆ.

ಸದ್ಯ ಜಾರಿಯಲ್ಲಿರುವ ಮಾರ್ಗ ಸೂಚಿಯು 'ಆರೋಪಿ ಮತ್ತು ಅಪರಾಧಿ' ಕೇಂದ್ರಿತವಾಗಿದೆ ಎಂದು 2020ರ ಜನವರಿಯಲ್ಲಿ ಕೇಂದ್ರ ಸರ್ಕಾರ ಅರ್ಜಿ ಸಲ್ಲಿಸಿತ್ತು. ಅರ್ಜಿಯನ್ನು ಪುರಸ್ಕರಿಸಿದ್ದ ಸುಪ್ರೀಂ ಕೋರ್ಟ್, 2014ರಲ್ಲಿ ಮರಣ ದಂಡನೆಗೆ ಗುರಿಯಾದ ಶತ್ರುಘನ್ ಚವಾಣ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದ ಅರ್ಜಿದಾರರ ಅಭಿಪ್ರಾಯ ಕೇಳಿತ್ತು. ಬ್ಲ್ಯಾಕ್ ವಾರೆಂಟ್ ಹೊರಡಿಸಿದ ನಂತರ ಮರಣದಂಡನೆಗೆ ಗುರಿಯಾದ ಅಪರಾಧಿಯನ್ನು ಗಲ್ಲಿಗೇರಿಸಲು 7 ದಿನಗಳ ಗಡುವು ವಿಧಿಸಬೇಕು ಎಂದು ಸರ್ಕಾರ ಕೋರಿದೆ.

ಚೌಹಾಣ್ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): 'ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಅವರ ಅಧಿಕಾರಾವಧಿಯನ್ನು 2026ರ ಮೇ ತಿಂಗಳವರೆಗೆ ವಿಸ್ತರಿಸಲಾಗಿದೆ' ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ. ಇದೇ 30ರಂದು ಇವರು ನಿವೃತ್ತರಾಗಬೇಕಿತ್ತು.

ಈ ಬಗ್ಗೆ ರಕ್ಷಣಾ ಸಚಿವಾಲಯವು ಮಾಹಿತಿ ನೀಡಿದ್ದು, 'ಮುಂದಿನ ವರ್ಷದ ಮೇ ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಅವರು ಇದೇ ಹುದ್ದೆಯಲ್ಲಿ ಮುಂದುವರಿಯುತ್ತಾರೆ' ಎಂದು ಹೇಳಿದೆ. ಚೌಹಾಣ್ ಅವರು ಈ ಹುದ್ದೆಯಲ್ಲಿ 2022ರ ಸೆಪ್ಟೆಂಬರ್ 30ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಎಸ್‌ಐಆರ್ ದೇಶಕ್ಕೆ ಮಾರಕ

ಒಂದನೇ ಪುಟದಿಂದ...

'ಆದರೆ ಇಲ್ಲಿ ವಂಚನೆಯನ್ನು ಆಧರಿಸಿದೆ. ಹೀಗಾಗಿ ಆಡಳಿತ ನಡೆಸುವವರಲ್ಲಿ ಪ್ರಜಾಪ್ರಭುತ್ವದ ಹೊಣೆಗಾರಿಕೆಯ ಕೊರತೆಯಿದೆ' ಎಂದು ಕಳವಳ ವ್ಯಕ್ತಪಡಿಸಿದೆ.

'ಸರ್ಕಾರವು ಸೇವೆಯ ಮೂಲಕವಲ್ಲ, ವಂಚನೆ ಮತ್ತು ಬೆದರಿಸುವ ಮೂಲಕ ಉಳಿಯಬಹುದು ಎಂಬುದಾಗಿ ಬಿಜೆಪಿ ತಿಳಿದುಕೊಂಡಿದೆ. ಹೀಗಾಗಿ ಸರ್ಕಾರ ನಿರಾಸಕ್ತಿಯಿಂದ ಕೂಡಿದೆ' ಎಂದು ನಿರ್ಣಯದಲ್ಲಿ ಪ್ರಸ್ತಾಪಿಸಿದೆ.

'ಮತಕಳವನ್ನು ಸಂವಿಧಾನ, ಆರ್ಥಿಕ, ಸಾಮಾಜಿಕ ನ್ಯಾಯ ಮತ್ತು ರಾಷ್ಟ್ರೀಯ ಭದ್ರತೆಯ ಮೇಲಿನ ದಾಳಿಗಳಿಂದ ಬೇರ್ಪಡಿಸಲು ಆಗದು' ಎಂದೂ ಅದು ಹೇಳಿದೆ.

'ನಿರ್ಣಾಯಕ ಘಟ್ಟದಲ್ಲಿ ಬಿಹಾರ': ಬಿಹಾರದ ಚಂಪಾರಣ್‌ನಲ್ಲಿ 'ಇಂಡಿಗೊ (ನೀಲಿ) ಪ್ಲಾಂಟರು'ಗಳ ವಿರುದ್ಧ ಮಹಾತ್ಮ ಗಾಂಧಿ ಅವರು ಸತ್ಯಾಗ್ರಹ ಆರಂಭಿಸಿದ್ದರು. ಅವರು ಭಾರತದಲ್ಲಿ ನಡೆಸಿದ ಮೊದಲ ಸತ್ಯಾಗ್ರಹ ಅದಾಗಿತ್ತು. ಅದು ರಾಷ್ಟ್ರದ ದಿಕ್ಕನ್ನೇ ಬದಲಿಸಿತ್ತು. ಅಂತೆಯೇ ಮತ್ತೊಮ್ಮೆ ಬಿಹಾರವು ನಿರ್ಣಾಯಕ ಘಟ್ಟದಲ್ಲಿದೆ. ರಾಜ್ಯದ ಜನರು ಪ್ರಜಾಸತ್ತಾತ್ಮಕ ಹೋರಾಟವನ್ನು ಬಲಪಡಿಸಬೇಕು ಎಂದು ನಿರ್ಣಯದಲ್ಲಿ ಮನವಿ ಮಾಡಲಾಗಿದೆ.

ಬಿಹಾರದಲ್ಲಿ ದಲಿತರು, ಹಿಂದುಳಿದ ವರ್ಗಗಳು, ಬುಡಕಟ್ಟು ಜನರು, ಅಲ್ಪಸಂಖ್ಯಾತರು, ತಳ ಸಮುದಾಯಗಳ ಜನರ ಮತದಾನದ ಹಕ್ಕನ್ನು ವ್ಯವಸ್ಥಿತವಾಗಿ ದೋಚಲು ಹುನ್ನಾರ ನಡೆದಿದೆ ಎಂದು ಅದು ದೂರಿದೆ.

ಮತಕಳವು ಮತದಾನದ ಹಕ್ಕನ್ನು ನಿರಾಕರಿಸುವುದರ ಜತೆಗೆ, ಸರ್ಕಾರದ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಸವಲತ್ತುಗಳಿಂದ ವಂಚಿತರನ್ನಾಗಿ ಮಾಡುತ್ತದೆ. ಅಲ್ಲದೆ ಸಾಂವಿಧಾನಿಕವಾಗಿ ನೀಡಲಾಗಿರುವ ಮೀಸಲಾತಿಗೂ ಕುತ್ತು ತರುತ್ತದೆ. ಈ ಮೂಲಕ ಜನರ ಭವಿಷ್ಯ, ಘನತೆ ಮತ್ತು ಅವರ ಸಾಂವಿಧಾನಿಕ ಹಕ್ಕು, ಅರ್ಹತೆಗಳನ್ನೂ ಕದಿಯುತ್ತದೆ ಎಂದು ಹೇಳಿದೆ.

ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಖಜಾಂಚಿ ಅಜಯ್ ಮಾಕನ್, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್, ಸಚಿನ್ ಪೈಲಟ್ ಮತ್ತು ಬಿಹಾರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಜೇಶ್ ಕುಮಾರ್ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

'ಇಬಿಸಿ ದೌರ್ಜನ್ಯ ತಡೆ ಕಾಯ್ದೆ'

ಪಟ್ನಾ (ಪಿಟಿಐ): ಬಿಹಾರದಲ್ಲಿ 'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ದೌರ್ಜನ್ಯ ತಡೆ ಕಾಯ್ದೆಯಂತೆಯೇ ಅತಿ ಹಿಂದುಳಿದ ವರ್ಗಗಳ (ಇಬಿಸಿ) ಜನರ ಮೇಲಿನ ದೌರ್ಜನ್ಯ ತಡೆಗೆ ಕಾನೂನು ರೂಪಿಸುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಭರವಸೆ ನೀಡಿದರು.

ಅತ್ಯಂತ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಸಮಾವೇಶದಲ್ಲಿ ಮಾತನಾಡಿದ ಅವರು, ಇಬಿಸಿಗಳ ಏಳಿಗೆಗಾಗಿ 10 ಸಂಕಲ್ಪಗಳನ್ನು ಕೈಗೊಂಡಿರುವುದಾಗಿ ಹೇಳಿದರು.

ನಿತೀಶ್ ಕುಮಾರ್ ಸರ್ಕಾರ ನಡೆಸಿದ ಜಾತಿ ಸಮೀಕ್ಷೆಯ ಪ್ರಕಾರ ರಾಜ್ಯದ ಜನಸಂಖ್ಯೆಯಲ್ಲಿ ಶೇ 36ರಷ್ಟು ಇಬಿಸಿಗಳು ಇದ್ದಾರೆ.

'ಇಬಿಸಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ' ಜಾರಿಗೊಳಿಸಲಾಗುವುದು. ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತಿಗಳಲ್ಲಿ ಇಬಿಸಿಗಳಿಗೆ ಹಾಲಿ ಚಾಲ್ತಿಯಿರುವ ಶೇ 20ರ ಮೀಸಲಾತಿ ಪ್ರಮಾಣವನ್ನು ಶೇ 30ಕ್ಕೆ ಏರಿಸಲಾಗುವುದು ಎಂದು ರಾಹುಲ್ ಅವರುತಿಳಿಸಿದರು.

ಶೇ 50ರಷ್ಟು ಮೀಸಲಾತಿ ಮಿತಿಯನ್ನು ರದ್ದುಪಡಿಸುವುದು, ಮೀಸಲಾತಿ ನಿಯಂತ್ರಣ ಪ್ರಾಧಿಕಾರ ಸ್ಥಾಪನೆ ಸೇರಿ ಹಲವು ಭರವಸೆಗಳನ್ನು ನೀಡಿದರು.

ಫೆಬ್ರುವರಿ 17ಕ್ಕೆ 10–12ನೇ ತರಗತಿ ಬೋರ್ಡ್ ಪರೀಕ್ಷೆ: ಸಿಬಿಎಸ್‌ಇ


ನವದೆಹಲಿ (ಪಿಟಿಐ): 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಮುಂದಿನ ವರ್ಷ ಫೆಬ್ರುವರಿ 17ರಂದು ಬೋರ್ಡ್ ಪರೀಕ್ಷೆ ನಡೆಸಲು ನಿರ್ಧರಿಸಿರುವುದಾಗಿ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಬುಧವಾರ ಅಧಿಕೃತ ಪ್ರಕಟಣೆ ಹೊರಡಿಸಿದೆ.

10ನೇ ತರಗತಿ ವಿದ್ಯಾರ್ಥಿಗಳಿಗೆ ಒಂದೇ ಶೈಕ್ಷಣಿಕ ವರ್ಷದಲ್ಲಿ ಎರಡು ಬೋರ್ಡ್ ಪರೀಕ್ಷೆಗಳನ್ನು ನಡೆಸುವುದಾಗಿ ಸಿಬಿಎಸ್‌ಇ ಈ ಹಿಂದೆ ಘೋಷಿಸಿತ್ತು. ಅದರಂತೆ 2026ರ ಫೆಬ್ರುವರಿ-17ರಿಂದ ಮಾರ್ಚ್ 26ರವರೆಗೆ ಮೊದಲ ಆವೃತ್ತಿಯ ಬೋರ್ಡ್ ಪರೀಕ್ಷೆ, ಮೇ15 ರಿಂದ ಜೂನ್ 1ರವರೆಗೆ ಎರಡನೇ ಆವೃತ್ತಿಯ ಬೋರ್ಡ್ ಪರೀಕ್ಷೆಗೆ ದಿನಾಂಕ ನಿಗದಿಪಡಿಸಿದೆ.

12ನೇ ತರಗತಿ ವಿದ್ಯಾರ್ಥಿಗಳಿಗೆ 2026ರ ಫೆಬ್ರುವರಿ 17ರಿಂದ ಏಪ್ರಿಲ್ 9ರವರೆಗೆ ಪರೀಕ್ಷೆಗಳು ನಡೆಯಲಿವೆ ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸನ್ಯಮ್ ಭಾರದ್ವಾಜ್ ಅವರು ತಿಳಿಸಿದ್ದಾರೆ.

10ನೇ ತರಗತಿ ವಿದ್ಯಾರ್ಥಿಗಳು ಒಂದೇ ಶೈಕ್ಷಣಿಕ ವರ್ಷದಲ್ಲಿ ಎರಡು ಬೋರ್ಡ್ ಪರೀಕ್ಷೆಗಳನ್ನು ಎದುರಿಸುತ್ತಿರುವುದು ಇದೇ ಮೊದಲಾಗಿದ್ದು, ಎರಡೂ ಪರೀಕ್ಷೆಗಳನ್ನು ಸಂಪೂರ್ಣ ಪಠ್ಯದ ಆಧಾರದಲ್ಲೇ ನಡೆಸಲಾಗುತ್ತದೆ ಎಂದು ಸಿಬಿಎಸ್‌ಇ ಹೇಳಿದೆ. ಜತೆಗೆ ಎರಡನೇ ಬೋರ್ಡ್ ಪರೀಕ್ಷೆಯು ವಿದ್ಯಾರ್ಥಿಗಳ ಆಯ್ಕೆಯಾಗಿದ್ದು, ಅಂಕವನ್ನು ಹೆಚ್ಚಿಸಿಕೊಳ್ಳಲು ಬಯಸಿದರೆ ಮಾತ್ರ ಆ ಪರೀಕ್ಷೆ ಬರೆಯಬಹುದು ಎಂದೂ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,169
ಇಂದಿನ ಅಂತ್ಯ: 25,056
ದಿನದ ಕನಿಷ್ಠ: 25,027
112

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹580
12 ಕ್ಕೆ ₹80
ಮೈಸೂರು: 100 ಕ್ಕೆ ₹585

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹399-665
ದ್ವಿತಳಿ (ಬಿ.ವಿ) ₹533-844

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1330 (1325)
ಸೋಯಾ (ರಿಫೈನ್ಡ್) ₹1270 (1270)
ಸೂರ್ಯಕಾಂತಿ (ರಿಫೈನ್ಡ್) ₹1420 (1410)
ಪಾಮೋಲಿನ್ ₹1265 (1265)

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹28,100
ಎಸಿ ₹14,700
ಆರ್‌ಪಿ ₹18,900
ಆರ್‌ಸಿ ₹10,580

ಕತಾರ್‌ನಲ್ಲಿ ಯುಪಿಐ ಸೇವೆ



ನವದೆಹಲಿ (ಪಿಟಿಐ): ಕ್ಯೂಆರ್ ಕೋಡ್ ಆಧಾರಿತ ಯುಪಿಐ ಪಾವತಿ ವ್ಯವಸ್ಥೆಯನ್ನು ಕತಾರ್‌ನ ಆದ್ಯಂತ ಬಳಕೆಗೆ ಲಭ್ಯವಾಗಿಸಲಾಗಿದೆ ಎಂದು ಎನ್‌ಪಿಸಿಐ ಹೇಳಿದೆ.

ಭಾರತದಿಂದ ಕತಾರ್‌ಗೆ ತೆರಳುವವರು ಅಲ್ಲಿನ ಪ್ರಮುಖ ಪ್ರವಾಸಿ ತಾಣಗಳಲ್ಲಿ ಇನ್ನು ಮುಂದೆ ಯುಪಿಐ ಬಳಸಿ ಹಣ ಪಾವತಿಸಬಹುದು ಎಂದು ಎನ್‌ಪಿಸಿಐ ಪ್ರಕಟಣೆ ತಿಳಿಸಿದೆ.

ಕತಾರ್‌ಗೆ ಭೇಟಿ ನೀಡುವ ವಿದೇಶಿಗರ ಪಟ್ಟಿಯಲ್ಲಿ ಭಾರತೀಯರು ಎರಡನೆಯ ಸ್ಥಾನದ-ಲ್ಲಿದ್ದಾರೆ. ಯುಪಿಐ ಪಾವತಿ ಸೌಲಭ್ಯವು ಕತಾರ್‌ನಲ್ಲಿ ಲಭ್ಯವಾಗಿರುವ ಕಾರಣದಿಂದಾಗಿ ಅಲ್ಲಿ ವಹಿವಾಟು ನಡೆಸುವುದು ಸುಲಭವಾಗುತ್ತದೆ, ಭಾರತೀಯರು ಅಲ್ಲಿ ನಗದು ಇರಿಸಿಕೊಳ್ಳಬೇಕಾದ ಅಗತ್ಯ ಇನ್ನಿಲ್ಲವಾಗುತ್ತದೆ, ಕರೆನ್ಸಿ ವಿನಿಮಯದ ರಗಳೆ ತಪ್ಪುತ್ತದೆ ಎಂದು ಪ್ರಕಟಣೆ ಹೇಳಿದೆ.

ಈ ವ್ಯವಸ್ಥೆಯಿಂದಾಗಿ ಕತಾರ್‌ನಲ್ಲಿನ ಚಿಲ್ಲರೆ ವಹಿವಾಟುಗಳು ಹಾಗೂ ಪ್ರವಾಸೋದ್ಯಮಕ್ಕೆ ಕೂಡ ಅನುಕೂಲ ಆಗಲಿದೆ ಎಂದು ಅದು ಹೇಳಿದೆ.

₹69 ಸಾವಿರ ಕೋಟಿ ಪ್ಯಾಕೇಜ್

‘ಹಡಗು ನಿರ್ಮಾಣ ಸೇವೆಗಾಗಿ ವಿದೇಶಿ ಕಂಪನಿಗಳಿಗೆ ₹6 ಲಕ್ಷ ಕೋಟಿ ಪಾವತಿ’



ನವದೆಹಲಿ (ಪಿಟಿಐ): ಭಾರತದಲ್ಲಿ ಹಡಗು ನಿರ್ಮಾಣ ಚಟುವಟಿಕೆಗಳಿಗೆ ಮತ್ತೆ ಜೀವ ನೀಡುವ ಉದ್ದೇಶದಿಂದ ಕೇಂದ್ರ ಸಚಿವ ಸಂಪುಟವು ₹69,725 ಕೋಟಿ ಮೊತ್ತದ ಪ್ಯಾಕೇಜ್‌ಗೆ ಬುಧವಾರ ಒಪ್ಪಿಗೆ ನೀಡಿದೆ.

ಸರ್ಕಾರದ ಅಧಿಕೃತ ಹೇಳಿಕೆ ಪ್ರಕಾರ ಈ ಪ್ಯಾಕೇಜ್ ಅಡಿಯಲ್ಲಿ ನಾಲ್ಕು ಅಂಶಗಳು ಇರಲಿವೆ. ದೇಶದಲ್ಲಿ ಹಡಗು ನಿರ್ಮಾಣ ಸಾಮರ್ಥ್ಯವನ್ನು ಹೆಚ್ಚಿಸುವುದು, ದೀರ್ಘಾವಧಿಯಲ್ಲಿ ಈ ಚಟುವಟಿಕೆಗಳಿಗೆ ಹಣಕಾಸಿನ ನೆರವು ಹೆಚ್ಚಿಸುವುದು, ಹೊಸ ಹಾಗೂ ಈಗಾಗಲೇ ಇರುವ ಹಡಗು ನಿರ್ಮಾಣ ಘಟಕಗಳಿಗೆ ಉತ್ತೇಜನ ನೀಡುವುದು, ತಾಂತ್ರಿಕ ಸಾಮರ್ಥ್ಯ ಮತ್ತು ಕೌಶಲವನ್ನು ಹೆಚ್ಚಿಸುವುದು ಆ ಅಂಶಗಳು.

ಹಡಗು ನಿರ್ಮಾಣ ವಲಯದಲ್ಲಿ ದೇಶವು ‘ಆತ್ಮನಿರ್ಭರ’ ಆಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಹೇಳಿದ್ದರು. ಭಾರತವು ವಿದೇಶಿ ಹಡಗು ನಿರ್ಮಾಣ ಕಂಪನಿಗಳಿಂದ ಸೇವೆ ಪಡೆಯುವುದಕ್ಕೆ ವಾರ್ಷಿಕ ಅಂದಾಜು ₹6 ಲಕ್ಷ ಕೋಟಿ ಪಾವತಿಸುತ್ತಿದೆ ಎಂದು ತಿಳಿಸಿದ್ದರು.

‘50 ವರ್ಷಗಳ ಹಿಂದೆ ನಾವು ನಡೆಸುತ್ತಿದ್ದ ವ್ಯಾಪಾರ ಚಟುವಟಿಕೆಗಳಲ್ಲಿ ಬಳಕೆಯಾಗುತ್ತಿದ್ದ ಹಡಗುಗಳ ಪೈಕಿ ಶೇ 40ರಷ್ಟು ಭಾರತದಲ್ಲೇ ತಯಾರಾದವಾಗಿದ್ದವು. ಆದರೆ ಈಗ ಅವುಗಳ ಪಾಲು ಶೇ 5ಕ್ಕೆ ಕುಸಿದಿದೆ’ ಎಂದು ಪ್ರಧಾನಿ ಹೇಳಿದ್ದರು.

ಜಾಗತಿಕ ಮಟ್ಟದಲ್ಲಿ ಹಡಗು ನಿರ್ಮಾಣ ಮಾರುಕಟ್ಟೆಯಲ್ಲಿ ಈಗ ಭಾರತದ ಪಾಲು ಶೇ 0.06ರಷ್ಟು ಮಾತ್ರವೇ ಇದೆ. ಈ ಉದ್ಯಮದಲ್ಲಿ ಭಾರತವು 20ನೇ ಸ್ಥಾನ ಪಡೆದಿದೆ. ಆದರೆ 2030ರೊಳಗೆ ಮೊದಲ 10 ಸ್ಥಾನಗಳ ಪೈಕಿ ಒಂದರಲ್ಲಿ ತಾನಿರಬೇಕು, 2047ರ ವೇಳೆಗೆ ಟಾಪ್–5 ದೇಶಗಳ ಪಟ್ಟಿಯಲ್ಲಿ ತಾನಿರಬೇಕು ಎಂದು ಭಾರತ ಬಯಸಿದೆ.

ಈಗ ಘೋಷಣೆ ಮಾಡಿರುವ ಪ್ಯಾಕೇಜ್‌ನಿಂದಾಗಿ ದೇಶದಲ್ಲಿ ಸರಿ ಸುಮಾರು 30 ಲಕ್ಷ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ, ದೇಶದಲ್ಲಿ ₹4.5 ಲಕ್ಷ ಕೋಟಿ ಹೂಡಿಕೆ ಆಗಲಿದೆ ಎಂದು ಸರ್ಕಾರದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಆರ್ಥಿಕ ಪರಿಣಾಮ ಮಾತ್ರವೇ ಅಲ್ಲದೆ, ಈ ಉಪಕ್ರಮವು ದೇಶದ ಇಂಧನ ಮತ್ತು ಆಹಾರ ಭದ್ರತೆಯನ್ನು ಹೆಚ್ಚಿಸುತ್ತದೆ, ಮಹತ್ವದ ಸಮುದ್ರ ಮಾರ್ಗಗಳಲ್ಲಿ ಸ್ಥಿರತೆ ತರುತ್ತದೆ ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ಜಾಫರ್ ಎಕ್ಸ್‌ಪ್ರೆಸ್ ಮೇಲೆ ದಾಳಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಜಾಫರ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಬಾಂಬ್ ದಾಳಿ ನಡೆದಿದ್ದು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 12ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಮಸ್ತುಂಗ್‌ನ ಸ್ಪಿಂಜೆಂಡ್ ಪ್ರದೇಶದಲ್ಲಿ ರೈಲಿನ ಮೇಲೆ ಮಂಗಳವಾರ ದಾಳಿ ನಡೆದಿದ್ದು, ಪ್ರಸಕ್ತ ವರ್ಷದ ಮಾರ್ಚ್‌ನಿಂದಲೂ ಈ ರೈಲನ್ನು ಗುರಿಯಾಗಿಸಿಕೊಂಡು ಸರಣಿ ದಾಳಿ ನಡೆಸಲಾಗುತ್ತಿದೆ.

ಪೆಶಾವರದಿಂದ ಬರುತ್ತಿದ್ದ ರೈಲಿನ ಮೇಲೆ ಸಂಜೆ ಬಾಂಬ್ ದಾಳಿ ನಡೆದಿದ್ದರಿಂದ ಆರು ಬೋಗಿಗಳು ಹಳಿ ತಪ್ಪಿದವು. ಒಂದು ಉರುಳಿ ಬಿದ್ದಿತು. ಬೋಗಿಯಲ್ಲಿದ್ದ ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

10 ಗಂಟೆಗಳ ಅವಧಿಯಲ್ಲಿ ಇದೇ ಪ್ರದೇಶದಲ್ಲಿ ನಡೆದ ಎರಡನೇ ಬಾಂಬ್ ಸ್ಫೋಟ ಇದಾಗಿದೆ. ಬಲೂಚಿಸ್ತಾನವನ್ನು ದೇಶದ ಉಳಿದ ಭಾಗಗಳಿಗೆ ಸಂಪರ್ಕಿಸುವ ರೈಲು ಹಳಿಗಳ ಬಳಿಯೇ ಬೆಳಿಗ್ಗೆ ಸ್ಫೋಟ ಸಂಭವಿಸಿತ್ತು.

ಜಿಎಸ್‌ಟಿ ಪರಿಷ್ಕರಣೆಯ ಪರಿಣಾಮ, ಬೆಲೆ ಸದ್ಯಕ್ಕೆ ಅಲ್ಪ ಇಳಿಕೆ

ಎಫ್‌ಎಂಸಿಜಿ: ತೂಕ ಹೆಚ್ಚಳಕ್ಕೆ ಒಲವು

ನವದೆಹಲಿ (ಪಿಟಿಐ): ಪರಿಷ್ಕೃತ ಜಿಎಸ್‌ಟಿ ದರವು ಜಾರಿಗೆ ಬಂದ ನಂತರದಲ್ಲಿ ಎಫ್‌ಎಂಸಿಜಿ ವಲಯದ ಕಂಪನಿಗಳನ್ನು ಸಮಸ್ಯೆಯೊಂದು ಕಾಡುತ್ತಿದೆ.

₹2, ₹5, ₹10 ಬೆಲೆಗೆ ಮಾರಾಟ ಆಗುತ್ತಿದ್ದ ವಿವಿಧ ಉತ್ಪನ್ನಗಳ ಬೆಲೆಯನ್ನು ಜಿಎಸ್‌ಟಿ ಇಳಿಕೆಗೆ ಅನುಗುಣವಾಗಿ ಕಂಪನಿಗಳು ತಗ್ಗಿಸಿವೆ. ಆದರೆ, ಜಿಎಸ್‌ಟಿ ಪರಿಷ್ಕರಣೆಯ ನಂತರದ ಬೆಲೆಯು ವಸ್ತುಗಳ ಖರೀದಿಗೆ, ಮಾರಾಟಕ್ಕೆ ಅನುಕೂಲಕರವಾದ ಹಂತದಲ್ಲಿ ಉಳಿದಿಲ್ಲ.

ಉದಾಹರಣೆಗೆ, ₹5ಕ್ಕೆ ಮಾರಾಟ ಆಗುತ್ತಿದ್ದ ಜನಪ್ರಿಯ ಪಾರ್ಲೆ–ಜಿ ಬಿಸ್ಕತ್ ಪ್ಯಾಕಿನ ಬೆಲೆಯು ಈಗ ₹4.50 ಆಗಿದೆ. ಈ ಹಿಂದೆ ₹2ಕ್ಕೆ ಮಾರಾಟ ಆಗುತ್ತಿದ್ದ ಶಾಂಪೂ ಪೌಚ್‌ನ ಬೆಲೆ ಈಗ ₹1.75 ಆಗಿದೆ. ಇಂತಹ ಪೌಚ್‌ಗಳಲ್ಲಿ, ಪೊಟ್ಟಣಗಳಲ್ಲಿ ಇರುವ ಉತ್ಪನ್ನಗಳ ತೂಕವನ್ನು ಹೆಚ್ಚು ಮಾಡಲು ತಕ್ಷಣಕ್ಕೆ ಸಾಧ್ಯವಾಗದೆ ಇರುವ ಕಾರಣಕ್ಕೆ, ಬೆಲೆಯನ್ನು ಈ ಬಗೆಯಲ್ಲಿ ಕಡಿಮೆ ಮಾಡಲಾಗಿದೆ ಎಂದು ಕಂಪನಿಯ ಪ್ರತಿನಿಧಿಗಳು ಹೇಳಿದ್ದಾರೆ.



ಸರ್ಕಾರದ ನಿರ್ದೇಶನವನ್ನು ಪಾಲಿಸುವ ಉದ್ದೇಶದಿಂದ ಜನಪ್ರಿಯ ಬೆಲೆ ಶ್ರೇಣಿಯ ಉತ್ಪನ್ನಗಳನ್ನು ಈ ಬಗೆಯಲ್ಲಿ ಅಸಾಂಪ್ರದಾಯಿಕ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂದು ಉದ್ಯಮದ ಪ್ರತಿನಿಧಿಗಳು ಹೇಳಿದ್ದಾರೆ. ಆದರೆ ಇದು ತಾತ್ಕಾಲಿಕ ಕ್ರಮ ಮಾತ್ರ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಇದು ನೂರಕ್ಕೆ ನೂರರಷ್ಟು ತಾತ್ಕಾಲಿಕ ಕ್ರಮ... ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಬಳಸುವ ಪೊಟ್ಟಣಗಳು ಮುದ್ರಣ ಆಗಿವೆ. ಈಗ ತೂಕದಲ್ಲಿ ಬದಲಾವಣೆ ತಂದು ಎಂಆರ್‌ಪಿಯನ್ನು ಮೊದಲಿನ ಹಂತದಲ್ಲಿ ಇರಿಸುವುದು ಕಷ್ಟ. ಹೀಗಾಗಿ, ನಾವು ಜಿಎಸ್‌ಟಿ ಪರಿಷ್ಕರಣೆಯ ಪ್ರಯೋಜನವನ್ನು ಈ ಬಗೆಯ ಅಸಾಂಪ್ರದಾಯಿಕ ಕ್ರಮದ ಮೂಲಕ ಗ್ರಾಹಕರಿಗೆ ವರ್ಗಾವಣೆ ಮಾಡುತ್ತಿದ್ದೇವೆ’ ಎಂದು ಪಾರ್ಲೆ ಪ್ರೊಡಕ್ಟ್ಸ್‌ನ ಉಪಾಧ್ಯಕ್ಷ ಮಯಾಂಕ್ ಶಾ ತಿಳಿಸಿದ್ದಾರೆ.

ಈ ಬೆಲೆಗೆ ಬಿಸ್ಕತ್ತಿನ ಪೊಟ್ಟಣ ಖರೀದಿಸುವಲ್ಲಿ ಗ್ರಾಹಕರು ಸಮಸ್ಯೆ ಅನುಭವಿಸುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಅವರು, ‘ಗ್ರಾಹಕರು ಒಂದಕ್ಕಿಂತ ಹೆಚ್ಚು ಪೊಟ್ಟಣ ಖರೀದಿಸಬಹುದು ಅಥವಾ ಯುಪಿಐ ಮೂಲಕ ಪಾವತಿ ಮಾಡಬಹುದು’ ಎಂದು ಉತ್ತರಿಸಿದರು.

‘ಇವು ಕಂಪನಿಗಳು ಅನುಸರಿಸುತ್ತಿರುವ ಅಲ್ಪಾವಧಿಯ ಕ್ರಮಗಳು. ಕಂಪನಿಗಳು ಉತ್ಪನ್ನಗಳ ತೂಕವನ್ನು ಹೆಚ್ಚು ಮಾಡಿ ಜನಪ್ರಿಯ ಬೆಲೆ ಶ್ರೇಣಿಯಾದ ₹2, ₹5 ಹಾಗೂ ₹10ನ್ನು ಮತ್ತೆ ಜಾರಿಗೆ ತರುತ್ತವೆ. ಏಕೆಂದರೆ ನಾಲ್ಕೂವರೆ ರೂಪಾಯಿ ಪಾವತಿ ಮಾಡುವುದು ವಾಸ್ತವದಲ್ಲಿ ಸುಲಭವಲ್ಲ’ ಎಂದು ನುವಾಮಾ ಇನ್‌ಸ್ಟಿಟ್ಯೂಷನ್ ಈಕ್ವಿಟಿಸ್ ಸಂಸ್ಥೆಯ ಅಬ್ನೀಶ್ ರಾಯ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ರೂಪಾಯಿ: ಕನಿಷ್ಠ ಮಟ್ಟಕ್ಕೆ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ ಮುಂದುವರಿದಿದೆ. ಬುಧವಾರದ ವಹಿವಾಟಿನಲ್ಲಿ ರೂಪಾಯಿಯು 2 ಪೈಸೆಯಷ್ಟು ಮೌಲ್ಯ ಕಳೆದುಕೊಂಡು ಡಾಲರ್ ಎದುರು ₹88.75ರ ಮಟ್ಟಕ್ಕೆ ಬಂದಿದೆ.

ಅಮೆರಿಕವು ಎಚ್–1ಬಿ ವೀಸಾ ಶುಲ್ಕವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿರುವುದರ ಪರಿಣಾಮವು ಭಾರತದ ಐ.ಟಿ. ಸೇವೆಗಳ ರಫ್ತಿನ ಮೇಲೆ ಹೇಗಿರಲಿದೆ ಎಂಬ ಬಗ್ಗೆ ಹೂಡಿಕೆದಾರರಿಗೆ ಕಳವಳ ಇದೆ. ಅಲ್ಲದೆ, ಜಾಗತಿಕ ವಾಣಿಜ್ಯ ಅನಿಶ್ಚಿತತೆಗಳು ಕೂಡ ಅವರಲ್ಲಿ ಕಳವಳ ಮೂಡಿಸಿವೆ. ಹೀಗಾಗಿ ಅವರು ದೇಶದ ಬಂಡವಾಳ ಮಾರುಕಟ್ಟೆಯಿಂದ ಹಣ ಹಿಂಪಡೆಯುವುದನ್ನು ಮುಂದುವರಿಸಿದ್ದಾರೆ. ಇದು ರೂಪಾಯಿ ಮೌಲ್ಯ ಕುಸಿತಕ್ಕೆ ಒಂದು ಕಾರಣ ಎಂದು ವರ್ತಕರು ತಿಳಿಸಿದ್ದಾರೆ. ರೂಪಾಯಿ ಮೌಲ್ಯವು 88.75ಕ್ಕೆ ಬಂದಿರುವುದು ಇದುವರೆಗಿನ ಕನಿಷ್ಠ ಮಟ್ಟ.

ಮಂಗಳವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 45 ಪೈಸೆಯಷ್ಟು ಕುಸಿದಿತ್ತು. ‘ಅಮೆರಿಕವು ಎಚ್–1ಬಿ ವೀಸಾ ಶುಲ್ಕವನ್ನು ಹೆಚ್ಚಿಸಿರುವುದರ ಪರಿಣಾಮವಾಗಿ ರೂಪಾಯಿಯು ಅಮೆರಿಕದ ಡಾಲರ್ ಎದುರು ದುರ್ಬಲವಾಗಿಯೇ ಇರಲಿದೆ ಎಂಬುದು ನಮ್ಮ ನಿರೀಕ್ಷೆ. ದೇಶಿ ಬಂಡವಾಳ ಮಾರುಕಟ್ಟೆಯಲ್ಲಿನ ಮಂದಗತಿ ಹಾಗೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರು ಮಾರಾಟದಲ್ಲಿ ತೊಡಗಿರುವುದು ರೂಪಾಯಿ ಮೌಲ್ಯದ ಮೇಲೆ ಇನ್ನಷ್ಟು ಒತ್ತಡ ಸೃಷ್ಟಿಸಬಹುದು’ ಎಂದು ಮಿರಾಯ್ ಅಸೆಟ್ ಶೇರ್‌ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.



ಎಚ್–1ಬಿ: ಸೂಚ್ಯಂಕ ಇಳಿಕೆ

ನವದೆಹಲಿ (ಪಿಟಿಐ): ಅಮೆರಿಕದ ಎಚ್–1ಬಿ ವೀಸಾ ಶುಲ್ಕ ಹೆಚ್ಚಳವು ದೇಶದ ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಷೇರಿನ ಮೌಲ್ಯದ ಮೇಲೆ ಪರಿಣಾಮ ಬೀರುವುದು ಮುಂದುವರಿದಿದೆ. ಹೀಗಾಗಿ, ಬುಧವಾರದ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 386 ಅಂಶ ಇಳಿಕೆಯಾಗಿ, 81,715ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 112 ಅಂಶ ಕಡಿಮೆಯಾಗಿ, 25,056ಕ್ಕೆ ಕೊನೆಗೊಂಡಿದೆ.

ಅಡಿಕೆ ಧಾರಣೆ

ಕಾರ್ಕಳ	
ಹೊಸತು	32500-49000
ಹಳತು	32500-53000
ಕುಮಟಾ	
ಚಾಲಿ	38699-44401
ಚಿಪ್ಪು	27269-33089
ಕೋಕ	8099-28999
ಫ್ಯಾಕ್ಟರಿ	4599-26899
ಹಳೆಚಾಲಿ	39569-44299
ಪುತ್ತೂರು	
ಕೋಕ	20000-28000

ಹೊಸತು	26000-49000
ಹಳತು	37500-52500
ಶಿವಮೊಗ್ಗ	
ಬೆಟ್ಟೆ	48240-64899
ಗೊರಬಲು	21890-40689
ಹೊಸತು	56136-57899
ರಾಶಿ	44999-62899
ಸರಕು	65210-74510
ಸಿದ್ದಾಪುರ	
ಬಿಳಿಗೋಟು	24900-31819

ಚಾಲಿ	37099-43709
ಕೋಕ	20699-28699
ರಾಶಿ	46899-51099
ತಟ್ಟಿಬೆಟ್ಟೆ	34000-34099
ಶಿರಸಿ	
ಬೆಟ್ಟೆ	34699-42899
ಬಿಳಿಗೋಟು	26019-36699
ಚಾಲಿ	39689-44799
ಕೆಂಪುಗೋಟು	16996-30799
ರಾಶಿ	45699-51909

ಮುಂಬೈ ಧಾರಣೆ (ಶೇಂಗಾ)

24-09-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1335)
ಒಂದು ವಾರದ ಡೆಲಿವರಿ	1335 (1330)
ಪಾಮ್ ವಾರದ ಡೆಲಿವರಿ	1263 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1335 (1335)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,13,000 (1,13,900)
ಬೆಳ್ಳಿ ಕೆ.ಜಿಗೆ	1,34,200 (1,35,250)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಭಿತ್ತಿ ಉಳಿಸಿ ದೂರ ಸರಿದರು

ಒಂದನೇ ಪುಟದಿಂದ...

ಅವರ ಸಾಹಿತ್ಯದ ಪರ್ವಕಾಲ ಸುಮಾರು ಏಳು ದಶಕಗಳಷ್ಟು ಸುದೀರ್ಘವಾಗಿತ್ತು ಎನ್ನುವುದು ಒಂದು ಸೋಜಿಗವೇ ಸರಿ. ಕನ್ನಡದ ವಿಮರ್ಶಾಲೋಕ ಅವರಿಂದ ದೂರ ಸರಿದರೂ, ಓದುಗರು ಮಾತ್ರ ಅವರ ಕಾದಂಬರಿಗಳ ಸತ್ಯ ಮತ್ತು ಸೌಂದರ್ಯವನ್ನು ಆದರಿಸುತ್ತಲೇ ಬಂದರು.

ಭೈರಪ್ಪನವರ ಕಾದಂಬರಿಗಳಲ್ಲಿ ಹಲವು ಮುಖಗಳ ಮತ್ತು ಹಲವು ಸ್ತರಗಳ ಮೌಲ್ಯಮೀಮಾಂಸೆಗಳು ಸ್ಥಾನ ಪಡೆದಿವೆ. ಎಲ್ಲ ಕಾದಂಬರಿಗಳಲ್ಲೂ ಭಾರತೀಯ ಪುರುಷಾರ್ಥಗಳ ಕುರಿತು ಅವರು ನಡೆಸಿದ ಜಿಜ್ಞಾಸೆ ಅನನ್ಯವಾದ-ದ್ದು. ಅವರ ಕಾದಂಬರಿಗಳು ಭಾರತೀಯ ಸಂಸ್ಕೃತಿಯ ಪುನರುತ್ಥಾನ ಯುಗಕ್ಕೂ ನಾಂದಿ ಹಾಡಿದವು ಎಂದರೆ ಅದೇನೂ ತಪ್ಪಾಗದು. ಭೈರಪ್ಪನವರ ಶಕ್ತಿ ಮತ್ತು ಪ್ರತಿಭೆ ಕಾಣುವುದು ಹೃದ್ಯವಾದ ಕತೆಯನ್ನು ಹೆಣೆಯುವುದರ ಜೊತೆಗೆ ಈ ಮೌಲ್ಯಮೀಮಾಂಸೆಯನ್ನು ಸಾಹಿತ್ಯದಲ್ಲಿ ಸಂದರ್ಭೋಚಿತವಾಗಿ ಬೆರೆಸುವುದರಲ್ಲಿ. ಇದೇ ಕಾರಣಕ್ಕಾಗಿಯೇ ಭೈರಪ್ಪನವರ ಕಾದಂಬರಿಗಳು ಶ್ರೀಸಾಮಾನ್ಯರನ್ನು ಮತ್ತು ಗಂಭೀರ ಓದುಗರನ್ನು ಒಂದೇ ರೀತಿಯಲ್ಲಿ ಸೆಳೆದಿವೆ. ಭೈರಪ್ಪನವರ ಕಾದಂಬರಿಗಳು ವರ್ಷಗಳು ಉರುಳಿದರೂ ಮರುಮುದ್ರಣಗಳನ್ನು ಕಾಣುತ್ತಲೇ ಇವೆ. ಕನ್ನಡದಲ್ಲಿ ನಾಲ್ಕು ತಲೆಮಾರಿನ ಸಾಹಿತ್ಯಾಸಕ್ತರ ಓದನ್ನು ಸಂಪಾದಿಸಿದ ಕೆಲವೇ ಸಾಹಿತಿಗಳ ಪಟ್ಟಿಗೆ ಭೈರಪ್ಪನವರು ಸೇರುತ್ತಾರೆ. ಭಾರತೀಯ ಮನಸ್ಸುಗಳಿಗೆ ಪಾತಾಳಗರಡಿ ಹಾಕುವ ಇವರ ಕೃತಿಗಳು ಭಾರತದ 20ಕ್ಕೂ ಹೆಚ್ಚು ಭಾಷೆಗಳು ಮಾತ್ರವಲ್ಲದೇ ರಷ್ಯಾ ಮತ್ತು ಚೀನೀ ಭಾಷೆಗಳಿಗೂ ಅನುವಾದಗೊಂಡು, ಆ ಭಾಷೆಗಳಲ್ಲಿಯೂ ಜನಮನ್ನಣೆಯನ್ನು ಗಳಿಸಿರುವುದು ಅತಿಶಯೋಕ್ತಿಯಲ್ಲ.

ಭೈರಪ್ಪನವರು ಕನ್ನಡದ ಕಾದಂಬರಿ-ಕಾರರಾಗಿ ಮಾತ್ರವೇ ಉಳಿಯಲಿಲ್ಲ, ಅವರು ಭಾರತೀಯ ಲೇಖಕರಾಗಿಯೂ ಮನ್ನಣೆಯನ್ನು ಪಡೆದವರು.

ಭಾರತದ ಒಂದು ಸಣ್ಣ ಹಳ್ಳಿಯಿಂದ ಹಿಡಿದು ರಾಷ್ಟ್ರದ ರಾಜಧಾನಿ ದೆಹಲಿಯವರೆಗೆ ಹಲವು ಪ್ರದೇಶಗಳ ಕಥೆಗಳನ್ನು ಭೈರಪ್ಪನವರು ಕಟ್ಟಿಕೊಟ್ಟಿದ್ದಾರೆ; ಸಾಮಾನ್ಯ ವ್ಯಕ್ತಿಯಿಂದ ಹಿಡಿದು ಸಮಾಜದ ಎಲ್ಲ ರೀತಿಯ ಮನುಷ್ಯರ ಮನೋವ್ಯಾಪಾರಗಳನ್ನು ಹಲವು ಮಜಲುಗಳಲ್ಲಿ ಕಂಡರಿಸಿದ್ದಾರೆ. ಸೃಜನಶೀಲಸಾಹಿತ್ಯದ ಭಾಷೆಗೇ ಹೊಸ ಆಯಾಮವನ್ನು ಕಾಣಿಸಿದರು ಅವರು. ಮಾತ್ರವಲ್ಲ, ಕಾದಂಬರಿ ಎಂದರೆ ಕಲ್ಪನೆ ಮಾತ್ರವೇ ಅಲ್ಲ, ಅದಕ್ಕೂ ಆಳವಾದ ಅಧ್ಯಯನ, ಜೊತೆಗೆ ಗಾಢವಾದ ಜೀವನಾನುಭವಗಳು ಅನಿವಾರ್ಯ ಎಂಬ ಸೂತ್ರವನ್ನು ಸ್ಥಾಪಿಸಿದರು; ಈ ಸೂತ್ರಕ್ಕೆ ಭಾಷ್ಯವಾಗಿಯೇ ಅವರು ತಮ್ಮ ಕೃತಿಗಳನ್ನು ರಚಿಸಿದರು. ಮನ್ನಣೆಯ ಆತುರದಲ್ಲಿ ಸಾಹಿತ್ಯಶಕ್ತಿಯನ್ನು ಲೇಖಕ ಕಳೆದುಕೊಳ್ಳುವ ಅಪಾಯವಿದೆ ಎಂಬ ತತ್ತ್ವದಂತೆ ಅವರು ಮಾಧ್ಯಮಗಳಿಂದ-ಲೂ ಪ್ರಶಸ್ತಿಗಳ ಹುಡುಕಾಟದಿಂದಲೂ ದೂರವೇ ಉಳಿದರು. ಆದರೆ, ಸಾರಸ್ವತ ತಪಸ್ಸು ಫಲವನ್ನು ಕೊಡದೇ ಹೋಗಲಿಲ್ಲ; ಹಲವು ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದವು. ಅದಕ್ಕಿಂತಲೂ ಹೆಚ್ಚಾಗಿ ಅಪಾರ ಸಂಖ್ಯೆಯ ಓದುಗರ ಪ್ರೀತಿ–ಅಭಿಮಾನಗಳು ಅವರಿಗೆ ದಕ್ಕಿದವು. ಹೀಗಿದ್ದರೂ ಭೈರಪ್ಪನವರಂಥ ಸಶಕ್ತ ಮಹಾಕಾದಂ-ಬರಿಕಾರನ್ನು ಕನ್ನಡ ವಿಮರ್ಶಾಲೋಕ ಅವಗಣನೆ ಮಾಡಿದ್ದು, ‘ಜನಪ್ರಿಯ ಸಾಹಿತ್ಯ’ ಎಂದು ಅವರ ಕೃಷಿಯನ್ನು ಅಗ್ಗ ಮಾಡಿದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸರಿಪಡಿಸಲಾಗದ ಲೋಪವಾಗಿ ಉಳಿದುಬಿಟ್ಟಿದೆ.

ಭೈರಪ್ಪನವರು ಬಾಲ್ಯದಲ್ಲಿ ಎದುರಿಸಿದ ಕಡುಬಡತನ ಮತ್ತು ಅವರ ಕುಟುಂಬದ ಆತ್ಮೀಯ ಸದಸ್ಯರ ಸಾವು ಅವರನ್ನು ತೀವ್ರವಾಗಿ ಪ್ರಭಾವಿಸಿದವು. ಈ ಕಷ್ಟಗಳ ಪರಂಪರೆ ಅವರನ್ನು ಜೀವನದ ಅರ್ಥವನ್ನು ಹುಡುಕುವಂತೆ ಪ್ರೇರಿಸಿದವು. ಜೀವನ ಎಂದರೇನು? ಸಾವು ಎಂದರೇನು? ಪ್ರೀತಿಗೂ ಜೀವನಕ್ಕೂ ಏನು ಸಂಬಂಧ? ನಮ್ಮ ಜೀವನಕ್ಕೂ ಧರ್ಮಕ್ಕೂ ನಂಟು ಇದೆಯೆ? ಇಂಥ ಪ್ರಶ್ನೆಗಳ ಜಿಜ್ಞಾಸೆಗೆ ಅವರನ್ನು ಸಿದ್ಧಗೊಳಿಸಿದವು. ಅವರನ್ನು ತತ್ತ್ವಶಾಸ್ತ್ರದ ಅಧ್ಯಯನದ ಕಡೆಗೆ ಹೊರಳುವಂತೆ ಮಾಡಿದವು. ಅವರು ತತ್ತ್ವಶಾಸ್ತ್ರದ ಪ್ರಾಧ್ಯಾಪಕರೂ ಆದರು. ತಾತ್ವಿಕ ಸಮಸ್ಯೆಗಳಿಗೆ ಕಲೆಯ ಮೂಲಕ ಉತ್ತರ ಹುಡುಕಬೇಕು ಎಂದು ತೀರ್ಮಾನಿಸಿಕೊಂಡು, ತತ್ತ್ವಶಾಸ್ತ್ರ ಮತ್ತು ಕಲೆಯ ಕಸಿಯನ್ನು ತಮ್ಮ ಕಾದಂಬರಿಗಳ ಮೂಲಕ ಮಾಡಿದರು. ಹೀಗಾಗಿ ಅವರು ಕಂಡುಕೊಂಡ ಹೊಳಹುಗಳಿಗೆ ಸೌಂದರ್ಯದ ಆಯಾಮವೂ ಒದಗಿತು. ಅವರ ಆ ಕಾಣ್ಕೆಗಳೇ ಅವರ ಕಾದಂಬರಿಗಳ ಹೂರಣವೂ ಆಯಿತು. ಈ ಕಾರಣದಿಂದಲೇ ಭೈರಪ್ಪನವರ ಕೃತಿಗಳು ಪಂಡಿತ ಚಿಂತನೆಗಳಿಗೂ, ಪಾಮರರ ಸಂತೋಷಕ್ಕೂ ಏಕಕಾಲದಲ್ಲಿ ಒದಗುವಂತಾಯಿತು.

ಭೈರಪ್ಪನವರಿಗೆ ಟೀಕೆಗಳೂ ಎದುರಾದವು. ಅವರನ್ನು ಬಲಪಂಥೀಯ ಲೇಖಕ ಎಂದೂ ವ್ಯಂಗ್ಯ ಮಾಡಲಾಯಿತು. ಅಧ್ಯಯನ, ಅಭಿವ್ಯಕ್ತಿ, ಜೀವನಪ್ರೀತಿ ಮತ್ತು ಜೀವನಮೌಲ್ಯ-ಗಳಲ್ಲಿ ಅಭೇದವನ್ನು ಸಾಧಿಸಿದವರು ಭೈರಪ್ಪ. ಬದುಕನ್ನೂ ಬರಹವನ್ನೂ ಶುದ್ಧವಾಗಿ ಉಳಿಸಿಕೊಂಡವರು ಅವರು. ಅವರ ನಿಲುವುಗಳನ್ನು ಟೀಕೆ ಮಾಡಿದವರಿಗೂ ಅವರ ವೈಯಕ್ತಿಕ ಜೀವನವನ್ನು ಟೀಕೆ ಮಾಡಲು ಸಾಧ್ಯವಾಗಲಿಲ್ಲ. ಒಬ್ಬ ಸಾಹಿತಿಯ ನಿಜವಾದ ಪರೀಕ್ಷೆ ಅವನ ಕೃತಿಗಳು ಕಾಲವನ್ನು ಎದುರಿಸುವುದರಲ್ಲಿದೆ ಎಂದು ಹಲವು ಸಂದರ್ಭ-ಗಳಲ್ಲಿ ಭೈರಪ್ಪನವರೇ ಹೇಳಿದ್ದಾರೆ. ಮೂರ್ನಾಲ್ಕು ತಲೆ ಮಾರುಗಳ ಓದುಗರನ್ನು ಪಡೆದ ಭೈರಪ್ಪ ಆಗಲೇ ಈ ವಿಷಯದಲ್ಲಿ ಗೆಲುವನ್ನು ಸಾಧಿಸಿದ್ದಾರೆ ಎನ್ನುವುದು ಸುಳ್ಳಲ್ಲ. ಭಾರತ ಕಂಡಿರುವ ಮಹಾಕಾದಂಬರಿಕಾರರಲ್ಲಿ ಒಬ್ಬರು ಎಸ್. ಎಲ್. ಭೈರಪ್ಪ ಎನ್ನುವು-ದರಲ್ಲಿ ಎರಡು ಮಾತಿಲ್ಲ. ಭೈರಪ್ಪನವರೇ ಗೌರವಿಸುವ, ಆದರಿಸುವ ಎಂ. ಹಿರಿಯಣ್ಣ, ಆನಂದ ಕುಮಾರಸ್ವಾಮಿ, ಕುಮಾರವ್ಯಾಸರಂಥವರು ಭಾರತೀಯ ಪ್ರಜ್ಞೆಯಲ್ಲಿ ಚಿರಸ್ಥಾಯಿಯಾಗಿರುವವರೆ-ಗೂ ಭೈರಪ್ಪನವರ ಸಾಹಿತ್ಯವೂ ಅಜರಾ-ಮರವಾಗಿರುತ್ತದೆ ಎನ್ನುವುದೂ ಸತ್ಯ.

ಎಸ್.ಎಲ್.ಭೈರಪ್ಪ ಇನ್ನಿಲ್ಲ

ಒಂದನೇ ಪುಟದಿಂದ...

ಕುವೆಂಪುನಗರದ ಉದಯರವಿ ರಸ್ತೆಯಲ್ಲಿರುವ ನಿವಾಸದಲ್ಲಿದ್ದ ಅವರನ್ನು 6 ತಿಂಗಳ ಹಿಂದೆ ವಯೋಸಹಜ ಅನಾರೋಗ್ಯದ ಕಾರಣದಿಂದ ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಪತ್ನಿ ಸರಸ್ವತಿ, ಪುತ್ರರಾದ ರವಿಶಂಕರ್ ಹಾಗೂ ಉದಯಶಂಕರ್ ಇದ್ದಾರೆ.

ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆಗೆ ರಾಜ್ಯ ಸರ್ಕಾರ ಆದೇಶಿಸಿದೆ. ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಗುರುವಾರ ಬೆಳಿಗ್ಗೆ 8ರಿಂದ ಮಧ್ಯಾಹ್ನ 1ರವರೆಗೆ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಒದಗಿಸಲಾಗಿದೆ. ಮೈಸೂರಿನ ಕಲಾಮಂದಿರದ ಆವರಣದಲ್ಲಿ ಮಧ್ಯಾಹ್ನ 3ರಿಂದ ಸಂಜೆ 6.30ರವರೆಗೆ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಚಾಮುಂಡಿ ಬೆಟ್ಟದ ತಪ್ಪಲಿನ-ಲ್ಲಿರುವ ಚಿತಾಗಾರದಲ್ಲಿ ಶುಕ್ರವಾರ ಬೆಳಿಗ್ಗೆ ಅಂತ್ಯಸಂಸ್ಕಾರ ನಡೆಯಲಿದೆ.

ಜಿಯೊ ಬ್ಲ್ಯಾಕ್‌ರಾಕ್: ಫಂಡ್ ಅನಾವರಣ

ಮುಂಬೈ (ಪಿಟಿಐ): ಜಿಯೊ ಫೈನಾನ್ಶಿಯಲ್ ಸರ್ವಿಸಸ್‌ನ ಮ್ಯೂಚುವಲ್ ಫಂಡ್ ಅಂಗಸಂಸ್ಥೆಯು ತನ್ನ ಮೊದಲ ಸಕ್ರಿಯ ನಿರ್ವಹಣೆಯ ಫಂಡ್ ಅನಾವರಣ ಮಾಡಿದೆ. ಅಲ್ಲದೆ, ಈ ಫಂಡ್‌ನ ವೆಚ್ಚಗಳು ಬಹಳ ಸ್ಪರ್ಧಾತ್ಮಕ ಆಗಿರಲಿವೆ ಎಂಬ ಮಾಹಿತಿ ನೀಡಿದೆ.

ಜಿಯೊ ಬ್ಲ್ಯಾಕ್‌ರಾಕ್ ಫ್ಲೆಕ್ಸಿ ಕ್ಯಾಪ್ ಫಂಡ್‌ನ ಎಕ್ಸ್‌ಪೆನ್ಸ್ ರೇಷ್ಯೊ (ವೆಚ್ಚಗಳು) ಶೇ 0.50ರಷ್ಟು ಇರಲಿದೆ ಎಂದು ಜಿಯೊ ಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ ತಿಳಿಸಿದೆ. ಈ ವೆಚ್ಚವು ಈ ವಿಭಾಗದ ಫಂಡ್‌ಗಳಲ್ಲಿ ಬಹಳ ಕಡಿಮೆಯದ್ದಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ಈ ಹಿಂದೆ ದೇಶದಲ್ಲಿ ಜಿಯೊ ಸೇವೆಗಳನ್ನು ಆರಂಭಿಸಿದಾಗ ಕಡಿಮೆ ಶುಲ್ಕ ನಿಗದಿ ಮಾಡಿ ತೀವ್ರ ಪೈಪೋಟಿ ಒಡ್ಡಿತ್ತು.

ಮುಂದಿನ ದಿನಗಳಲ್ಲಿ ಆರಂಭಿಸುವ ಇತರ ಹೂಡಿಕೆ ಉತ್ಪನ್ನಗಳಲ್ಲಿಯೂ ಇದೇ ಬಗೆಯಲ್ಲಿ ವೆಚ್ಚಗಳನ್ನು ನಿಗದಿಪಡಿಸುವ ಆಲೋಚನೆ ಇದೆ ಎಂಬ ಸೂಚನೆಯನ್ನು ಜಿಯೊ ಬ್ಲ್ಯಾಕ್‌ರಾಕ್‌ನ ವ್ಯವಸ್ಥಾಪಕ ನಿರ್ದೇಶಕ ಸಿದ್ ಸ್ವಾಮಿನಾಥನ್ ನೀಡಿದ್ದಾರೆ. ಅಷ್ಟೇ ಅಲ್ಲ, ಈ ಫಂಡ್‌ನಿಂದ ಒಂದು ವರ್ಷಕ್ಕೆ ಮೊದಲು ಹಣ ಹಿಂಪಡೆದರೆ ಶುಲ್ಕ ಪಾವತಿಸಬೇಕಾದ ಅಗತ್ಯ ಇಲ್ಲ ಎಂದು ಸ್ವಾಮಿನಾಥನ್ ಹೇಳಿದ್ದಾರೆ. ಹೊಸ ಫಂಡ್‌ನಲ್ಲಿ ಆರಂಭಿಕ ಹೂಡಿಕೆಗೆ ಅಕ್ಟೋಬರ್ 7ರವರೆಗೆ ಅವಕಾಶ ಇದೆ.

ಟ್ರಂಪ್ ಆರೋಪ ಅಲ್ಲಗಳೆದ ಚೀನಾ

ಬೀಜಿಂಗ್ (ಪಿಟಿಐ):‘ರಷ್ಯಾದಿಂದ ತೈಲ ಖರೀದಿಸುವ ಮೂಲಕ ಭಾರತ ಮತ್ತು ಚೀನಾ ಉಕ್ರೇನ್ ವಿರುದ್ಧದ ಯುದ್ಧಕ್ಕೆ ಹಣಕಾಸಿನ ನೆರವು ಒದಗಿಸುತ್ತಿವೆ’ ಎಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆರೋಪವನ್ನು ಚೀನಾ ತಳ್ಳಿಹಾಕಿದೆ.

‘ಭಾರತ –ಚೀನಾ ಮಾತ್ರವಲ್ಲ, ಅಮೆರಿಕ ಮತ್ತು ಯೂರೋಪ್ ಒಕ್ಕೂಟದ ರಾಷ್ಟ್ರಗಳು ಕೂಡ ರಷ್ಯಾದೊಂದಿಗೆ ವ್ಯಾಪಾರದಲ್ಲಿ ತೊಡಗಿಸಿಕೊಂಡಿವೆ’ ಎಂದು ಚೀನಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಹೇಳಿದ್ದಾರೆ.

ಮಂಗಳವಾರ ನಡೆದ ವಿಶ್ವಸಂಸ್ಥೆಯ ಸಭೆಯಲ್ಲಿ ಉಕ್ರೇನ್ ಯುದ್ಧಕ್ಕೆ ಭಾರತ ಮತ್ತು ಚೀನಾ ಪ್ರಾಥಮಿಕ ಹೂಡಿಕೆದಾರರು ಎಂದು ಟ್ರಂಪ್ ಆರೋಪಿಸಿದ್ದರು.

‘ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಮಾನದಂಡಗಳಿಗೆ ಅನುಗುಣವಾಗಿ ಚೀನಾ ಮತ್ತು ರಷ್ಯಾ ಕಂಪನಿಗಳು ವ್ಯಾಪಾರ ನಡೆಸುತ್ತಿವೆ. ಇದರಲ್ಲಿ ಮೂರನೆಯ ದೇಶದ ಹಸ್ತಕ್ಷೇಪಕ್ಕೆ ಮತ್ತು ಪ್ರಭಾವಕ್ಕೆ ಅವಕಾಶ ಇಲ್ಲ. ಚೀನಾವು ತನ್ನ ಕಂಪನಿಗಳ ಹಿತಾಸಕ್ತಿ ಸಂರಕ್ಷಿಸಲು ಪ್ರತಿಕ್ರಮಗಳನ್ನು ಕೈಗೊಳ್ಳಲಿದೆ’ ಗುವೊ ಹೇಳಿದ್ದಾರೆ.

‘ಭಾರತದ ಭೂ ಪ್ರದೇಶ ಖಾಲಿ ಮಾಡಿ: ಪಾಕ್‌ಗೆ ಭಾರತ ತರಾಟೆ’

ಜಿನಿವಾ (ಪಿಟಿಐ): ‘ಪಾಕಿಸ್ತಾನವು ಭಯೋತ್ಪಾದಕರಿಗೆ ಆಶ್ರಯ ನೀಡಿ, ತನ್ನ ಸ್ವಂತ ಜನರ ಮೇಲೆ ಬಾಂಬ್ ದಾಳಿ ನಡೆಸುವ ಬದಲು ಅಲ್ಲಿನ ಆರ್ಥಿಕ ಸುಧಾರಣೆಗೆ ಗಮನಹರಿಸಲಿ’ ಎಂದು ಭಾರತ ತೀಕ್ಷ್ಣವಾಗಿ ಹೇಳಿದೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ (ಯುಎನ್‌ಎಚ್‌ಆರ್‌ಸಿ) 60ನೇ ಅಧಿವೇಶನದಲ್ಲಿ ಮಾತನಾಡಿದ ಜಿನಿವಾದಲ್ಲಿರುವ ವಿಶ್ವಸಂಸ್ಥೆಯ ಭಾರತದ ಕಾಯಂ ಕಾನ್ಸುಲರ್ ಕ್ಷಿತಿಜ್ ತ್ಯಾಗಿ, ವಿಶ್ವಸಂಸ್ಥೆಯ ವೇದಿಕೆಯಲ್ಲಿ ಭಾರತದ ವಿರುದ್ಧ ಆಧಾರ ರಹಿತ ಮತ್ತು ಪ್ರಚೋದನಕಾರಿ ಹೇಳಿಕೆ ನೀಡಿದ ಪಾಕ್ ನಿಯೋಗವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

‘ವಿರೋಧಾಭಾಸವನ್ನೇ ಸಾರುವ ಪಾಕ್ ನಿಯೋಗವು ವಿಶ್ವಸಂಸ್ಥೆಯ ವೇದಿಕೆಯನ್ನು ಭಾರತದ ವಿರುದ್ಧ ಆಧಾರ ರಹಿತ ಆರೋಪ ಮಾಡಲು ದುರ್ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ತ್ಯಾಗಿ ಆಕ್ಷೇಪ ವ್ಯಕ್ತಪಡಿಸಿದರು. ವಾರದ ಹಿಂದೆ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ 24 ಜನರನ್ನು ಬಲಿ ಪಡೆದ ಸ್ಫೋಟವನ್ನು ನಿರ್ದಿಷ್ಟವಾಗಿ ಹೆಸರಿಸದೆ, ‘ಪಾಕ್ ಮೊದಲು ತನ್ನ ದೇಶದ ಆರ್ಥಿಕ ಸ್ಥಿತಿ ಮತ್ತು ಅಲ್ಲಿನ ಮಾನವ ಹಕ್ಕುಗಳ ಸುಧಾರಣೆಗೆ ಗಮನ ಹರಿಸಲಿ’ ಎಂದು ತಿರುಗೇಟು ನೀಡಿದರು.

ಪಾಕ್ ಆಕ್ರಮಿತ ಕಾಶ್ಮೀರವನ್ನು ಉಲ್ಲೇಖಿಸಿ, ‘ನೀವು ನಮ್ಮ ಭೂಪ್ರದೇಶವನ್ನು ಅಪೇಕ್ಷಿಸುವ ಬದಲು, ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಭಾರತದ ಭೂ ಪ್ರದೇಶವನ್ನು ಖಾಲಿ ಮಾಡುವುದೇ ಒಳ್ಳೆಯದು’ ಎಂದು ಅವರು ಎಚ್ಚರಿಸಿದರು.

ಪಾಕಿಸ್ತಾನವು ಭಯೋತ್ಪಾದನೆಯನ್ನು ರಫ್ತು ಮಾಡುವುದರಿಂದ ದೂರ ಇದ್ದು, ಕುಸಿದಿರುವ ಆರ್ಥಿಕತೆಯನ್ನು ಮೇಲೆತ್ತುವ ಕೆಲಸವನ್ನು ಮೊದಲು ಮಾಡಲಿ ಎಂದು ಅವರು ಹೇಳಿದ್ದಾರೆ.

ಶಾಂತಿಪಾಲನಾ ಪಡೆ ಕಚೇರಿಗೆ ಅಪ್ಪಳಿಸಿದ ಡ್ರೋನ್

ಬೈರೂತ್ (ಎಪಿ): ದಕ್ಷಿಣ ಲೆಬನಾನ್‌ನಲ್ಲಿ-ರುವ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಯ ಕೇಂದ್ರ ಕಚೇರಿಗೆ ಇಸ್ರೇಲ್ ಡ್ರೋನ್ ಒಂದು ಅಪ್ಪಳಿಸಿದೆ. ಆದರೆ, ಘಟನೆಯಿಂದ ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಲೆಬನಾನ್ ಗಡಿ ಪ್ರದೇಶ ನಕೌರಾದಲ್ಲಿರುವ ಶಾಂತಿಪಾಲನಾ ಪಡೆಯ ಕೇಂದ್ರ ಕಚೇರಿಗೆ ಮಂಗಳವಾರ ಮಧ್ಯಾಹ್ನದ ವೇಳೆ ಇಸ್ರೇಲ್ ಡ್ರೋನ್ ಅಪ್ಪಳಿಸಿದೆ. ಡ್ರೋನ್‌ನಲ್ಲಿ ಬರೀ ಕ್ಯಾಮೆರಾ ಅಳವಡಿಸಲಾಗಿದ್ದು, ಯಾವುದೇ ಸ್ಫೋಟಕ ತುಂಬಿರಲಿಲ್ಲ. ಹೀಗಾಗಿ ಯಾವುದೇ ಅಪಾಯ ಸಂಭವಿಸಿಲ್ಲ ಎಂದಿದ್ದಾರೆ.

ಜಾಗತಿಕ ಸವಾಲುಗಳನ್ನು ಎದುರಿಸಲು ವಿಶ್ವಸಂಸ್ಥೆ ಕರೆಗೆ ಎಲ್ಲ ದೇಶಗಳ ಬೆಂಬಲ

‘ಅಮೆರಿಕ ಮೊದಲು’: ಟ್ರಂಪ್ ವಾದ


ಆಂಟೊನಿಯೊ ಗುಟೆರಸ್

ವಿಶ್ವಸಂಸ್ಥೆ(ಎಪಿ): ವಿವಿಧ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಒಟ್ಟಾಗಿ ಎದುರಿಸಬೇಕು ಎಂಬುದು ಎಲ್ಲ ದೇಶಗಳ ಬಲವಾದ ಪ್ರತಿಪಾದನೆಯಾದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತ್ರ ತಮ್ಮ ‘ಅಮೆರಿಕವೇ ಮೊದಲು’ ವಿಚಾರಕ್ಕೆ ಒತ್ತು ನೀಡಬೇಕು ಎಂದು ಪ್ರತಿಪಾದಿಸಿದ ಘಟನೆಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಮಂಗಳವಾರ ಸಾಕ್ಷಿಯಾಯಿತು.

> ಹಲವು ಶಕ್ತಿಗಳಿರುವ ಜಾಗತಿಕ ವ್ಯವಸ್ಥೆಯಿಂದ ಹೆಚ್ಚು ವೈವಿಧ್ಯ, ಚಲನಶೀಲತೆ ಕಾಣಬಹುದು. ಆದರೆ, ಅಂತರರಾಷ್ಟ್ರೀಯ ಸಹಕಾರ ಇಲ್ಲದಿದ್ದರೆ ಅರಾಜಕತೆ ಕಂಡುಬರುತ್ತದೆ
> **ಆಂಟೊನಿಯೊ ಗುಟೆರಸ್**
> ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ

> ವಿಶ್ವಸಂಸ್ಥೆ ಅಸ್ತಿತ್ವಕ್ಕೆ ಬಂದು 80 ವರ್ಷ ಗತಿಸಿದೆ. ಆದರೆ, ನಮ್ಮಲ್ಲಿ ಒಗ್ಗಟ್ಟಿನ ಬದಲು ಪ್ರತ್ಯೇಕತೆ ಮನೆ ಮಾಡಿದೆ. ಜಾಗತಿಕ ವ್ಯವಸ್ಥೆಯಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಸವಾಲುಗಳನ್ನು ಎದುರಿಸುವುದು ಸಾಧ್ಯವಾಗುತ್ತಿಲ್ಲ
> **ಇಮ್ಯಾನುಯೆಲ್ ಮ್ಯಾಕ್ರನ್**
> ಫ್ರಾನ್ಸ್ ಅಧ್ಯಕ್ಷ

> ಎಲ್ಲ ರಾಷ್ಟ್ರಗಳು ಸಂಘಟಿತವಾಗಿರುವ ಈ ವ್ಯವಸ್ಥೆ ಮನುಕುಲದ ಮಹತ್ವದ ಸಾಧನೆ. ಬದಲಾದ ಸನ್ನಿವೇಶದಲ್ಲಿ ಇಂತಹ ವ್ಯವಸ್ಥೆಯನ್ನು ಸಂರಕ್ಷಿಸುವುದು ಇಂದಿನ ತುರ್ತು
> **ಜೆನ್ನಿಫರ್ ಗಿರ್ಲಿಂಗ್ಸ್ ಸೈಮನ್ಸ್**
> ಸುರಿನಾಮ್ ಅಧ್ಯಕ್ಷೆ

ಯುದ್ಧ, ಬಡತನ ಹಾಗೂ ಹವಾಮಾನ ಬದಲಾವಣೆಯಿಂದಾಗಿ ಉಂಟಾಗಿರುವ ತೊಂದರೆಗಳು ಸೇರಿ ಜಾಗತಿಕ ಸವಾಲುಗಳನ್ನು ಒಟ್ಟಾಗಿ ಎದುರಿಸಬೇಕು ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಕರೆ ನೀಡಿದರು.

ಇದಕ್ಕೆ, ಫ್ರಾನ್ಸ್‌ನಿಂದ ಹಿಡಿದು ದಕ್ಷಿಣ ಕೊರಿಯಾ, ದಕ್ಷಿಣ ಆಫ್ರಿಕಾದಿಂದ ಹಿಡಿಸು ಸುರಿನಾಮ್ವರೆಗಿನ ಎಲ್ಲ ದೇಶಗಳ ನಾಯಕರು ಬೆಂಬಲ ಸೂಚಿಸಿದರು. ಆದರೆ, ಟ್ರಂಪ್ ಮಾತ್ರ ತಮ್ಮ ಕಾರ್ಯಸೂಚಿಗೇ ಅಂಟಿಕೊಂಡರು.

ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳ ಅಧ್ಯಕ್ಷರು, ಪ್ರಧಾನಿಗಳು ಹಾಗೂ ಕೆಲ ದೇಶಗಳ ರಾಜರು ಪಾಲ್ಗೊಂಡಿದ್ದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಗುಟೆರಸ್,‘ಪ್ರತಿಯೊಂದು ದೇಶವೂ ಯುದ್ಧದ ಬದಲಾಗಿ ಶಾಂತಿಯನ್ನು ಆಯ್ಕೆ ಮಾಡಿಕೊಳ್ಳಬೇಕು, ಅರಾಜಕತೆ ಬದಲು ಕಾನೂನು–ಸುವ್ಯವಸ್ಥೆ ಎಲ್ಲರ ಆಯ್ಕೆಯಾಗಬೇಕು, ಸ್ವಹಿತಾಸಕ್ತಿ-ಗಳ ಬದಲಾಗಿ ದೇಶದ ಭವಿಷ್ಯಕ್ಕೆ ಗಮನ ನೀಡಬೇಕು’ ಎಂದು ಮನವಿ ಮಾಡಿದರು.

‘ಜಗತ್ತು ಬಹುಧ್ರುವೀಯ ವ್ಯವಸ್ಥೆಯತ್ತ ಹೊರಳುತ್ತಿದೆ’ ಎಂದ ಗುಟೆರಸ್, ಚೀನಾ ಹಾಗೂ ಭಾರತ ಬೃಹತ್ ಆರ್ಥಿಕ ಶಕ್ತಿಗಳಾಗಿ ಹೊರ-ಹೊಮ್ಮುತ್ತಿವೆ ಎಂದು ಸೂಚ್ಯವಾಗಿ ಹೇಳುವ ಮೂಲಕ ಪರೋಕ್ಷವಾಗಿ ಅಮೆರಿಕವನ್ನು ಕುಟುಕಿದರು.

ಆದರೆ, ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಟ್ರಂಪ್,‘ಅಮೆರಿಕ ಬಲಿಷ್ಠ ಗಡಿಗಳನ್ನು, ಮಿಲಿಟರಿ ವ್ಯವಸ್ಥೆಯ ಜೊತೆಗೆ ಇತರ ರಾಷ್ಟ್ರಗಳೊಂದಿಗೆ ಗಟ್ಟಿಯಾದ ಸ್ನೇಹ ಹೊಂದಿದೆ. ಭೂಮಿ ಮೇಲಿನ ಅತ್ಯಂತ ಬಲಿಷ್ಠ ರಾಷ್ಟ್ರವಾಗಿಯೂ ಅಮೆರಿಕ ಹೊರಹೊಮ್ಮಿದೆ. ನಿಜವಾಗಿಯೂ ಈಗಿನದು ಅಮೆರಿಕ ಪಾಲಿನ ಸುವರ್ಣಯುಗ’ ಎಂದು ಬಣ್ಣಿಸಿದರು.



ಮಣ್ಣಿನ ಮಕ್ಕಳಿದ್ದರೆ ಸಿನಿಮಾ ಅಚ್ಚುಕಟ್ಟು

‘ಕಾಂತಾರ’ ಸಿನಿಮಾವನ್ನು ಕನ್ನಡಿಗರೇ ಪ್ಯಾನ್ ಇಂಡಿಯಾ ಸಿನಿಮಾ ಮಾಡಿದರು. ಕಥೆ ಯಾರನ್ನು ಆಯ್ಕೆ ಮಾಡುತ್ತದೆ ಎನ್ನುವುದು ಮುಖ್ಯ. ಕಥೆಯೇ ಕಲಾವಿದರನ್ನು ಕೇಳಬೇಕು. ಇದನ್ನು ಹೊರತುಪಡಿಸಿ ಖ್ಯಾತನಾಮರನ್ನು ತಂದು ಪಾತ್ರಗಳನ್ನು ಮಾಡಿಸಿದರೆ ಅದು ಫಲಿಸುವುದಿಲ್ಲ’...

ಇದು ನಟ ರಿಷಬ್ ಶೆಟ್ಟಿ ಮಾತು. ‘ಕಾಂತಾರ’ದಲ್ಲಿರುವ ತಾರಾಬಳಗದ ಕುರಿತು ಇತ್ತೀಚೆಗೆ ಮಾತನಾಡಿದ ರಿಷಬ್, ‘‘ಕುಲಶೇಖರ’ ಎಂಬ ಪಾತ್ರದಲ್ಲಿ ನಟಿಸಿರುವ ನಟ ಗುಲ್ಶನ್ ದೇವಯ್ಯ ಕನ್ನಡಿಗರೇ. ಕಥೆ ಕೇಳದೇ ಇರುವಾಗ ಒಂದು ಪಾತ್ರಕ್ಕೆ ಖ್ಯಾತನಾಮರನ್ನು ತಂದರೆ ಸಿನಿಮಾಗೂ ಅನ್ಯಾಯವಾಗುತ್ತದೆ. ನಮ್ಮ ಸಿನಿಮಾದಲ್ಲಿ ಸ್ಥಳೀಯರ ಜೊತೆಗೆ ಬೇರೆ ಬೇರೆ ರಾಜ್ಯಗಳ ಜನರು ತಾಂತ್ರಿಕ ವರ್ಗದಲ್ಲಿ ಕೆಲಸ ಮಾಡಿದ್ದಾರೆ. ಈ ಸಿನಿಮಾದಲ್ಲಿ ಮನುಷ್ಯ ಮತ್ತು ಪ್ರಕೃತಿಯ ಸಂಘರ್ಷವನ್ನು ಸ್ವಲ್ಪ ಆಳವಾಗಿ ವಿಶ್ಲೇಷಿಸಿದ್ದೇವೆ. ಹೇಳುತ್ತಿರುವುದೇ ಮಣ್ಣಿನ ಕಥೆಯನ್ನಾದ ಕಾರಣ ಮಣ್ಣಿನ ಮಕ್ಕಳಷ್ಟೇ ಇದ್ದರೆ ಸಿನಿಮಾ ಅಚ್ಚುಕಟ್ಟಾಗಿ ಬರಲು ಸಾಧ್ಯ’ ಎಂದರು.

‘ಇದು ಕದಂಬರ ಕಥೆಯಲ್ಲ. ಆ ಕಾಲದಲ್ಲಿ ಕರಾವಳಿ ಭಾಗದಲ್ಲಿ ನಡೆಯುವ ಕಥೆ. ಆ ಕಾಲಘಟ್ಟದ ಕಥೆಯನ್ನು ಇವತ್ತಿನ ಪೀಳಿಗೆಗೆ ಹೇಳುತ್ತಿರುವುದರಿಂದ, ಅವರಿಗೆ ಅರ್ಥವಾಗಬೇಕು. ಹೀಗಾಗಿ ಕರಾವಳಿ ಕನ್ನಡ ಬಳಸಿಕೊಳ್ಳಲಾಗಿದೆ. ದೈವದ ನುಡಿಗಳು, ಜನಪದ ಹಾಡುಗಳು ತುಳುವಿನಲ್ಲೇ ಇರಲಿವೆ. ಇನ್ನು 50 ‘ಕಾಂತಾರ’ ಆದರೂ ಅದು ತುಳುವಿನಲ್ಲೇ ಇರಲಿದೆ. ಸಿನಿಮಾ ಆರಂಭಿಸುವ ಸಂದರ್ಭದಲ್ಲಿ ಕುಂದಾಪುರ ಕನ್ನಡದಲ್ಲಿ ಕಥೆ ಹೇಳಿದರೆ ಹೇಗೆ ಎಂಬ ಆಲೋಚನೆಯೂ ಇತ್ತು. ಆದರೆ ಹೆಚ್ಚು ಜನರಿಗೆ ಇದು ತಲುಪದೇ ಇರಬಹುದು ಎನ್ನುವ ಪ್ರಶ್ನೆಯೂ ಎದ್ದ ಕಾರಣ ಕರಾವಳಿ ಕನ್ನಡ ಬಳಕೆ ಮಾಡಿದ್ದೇವೆ’ ಎನ್ನುತ್ತಾರೆ ರಿಷಬ್.

‘ಕರಾವಳಿ ಎನ್ನುವುದು ಪರಶುರಾಮರ ಸೃಷ್ಟಿ ಹಾಗೂ ಬೆಮ್ಮೆರ್ ಸೃಷ್ಟಿ ಎನ್ನುವುದರ ಬಗ್ಗೆ ಚರ್ಚೆಗಳು ಇವೆ. ನಾನು ಎರಡರಲ್ಲಿಯೂ ನಂಬಿಕೆ ಇರುವವನು. ದೈವ ದೇವರನ್ನು ಬಹಳ ನಂಬುವವನು ನಾನು. ಪಾಡ್ದನಗಳಲ್ಲಿ ಕೇಳಿರುವ ವಿಚಾರವನ್ನು ಕಥೆಯಲ್ಲಿ ಬಳಸಿಕೊಂಡಿದ್ದೇನೆ. ನನಗೆ ಮೊದಲ ಬಾರಿ ಸಿನಿಮಾ ಮಾಡಿದಂತೆ ಅನಿಸುತ್ತಿದೆ. ಆರೇಳು ಭಾಷೆಗಳಲ್ಲಿ ಕಾಂಟೆಂಟ್ ಸಿದ್ಧಪಡಿಸುತ್ತಿದ್ದೇವೆ. ಟ್ರೇಲರ್ ಬಿಡುಗಡೆ ಮಾಡಬೇಕೋ ಬೇಡವೋ ಎನ್ನುವ ಪ್ರಶ್ನೆಯೂ ಇತ್ತು. ಹಾಡುಗಳನ್ನೂ ಶೀಘ್ರದಲ್ಲೇ ರಿಲೀಸ್ ಮಾಡುತ್ತೇವೆ’ ಎಂದರು.

‘ಚಿತ್ರರಂಗವನ್ನು ಒಬ್ಬರಿಂದ ಉಳಿಸಲು ಸಾಧ್ಯವಿಲ್ಲ. ಸಿನಿಮಾ ಜನರಿಗೆ ಇಷ್ಟವಾದರೆ ಚಿತ್ರರಂಗ ತಾನಾಗಿಯೇ ಬೆಳೆಯುತ್ತದೆ. ಒಳ್ಳೆಯ ಕಥೆಗಳು, ಹೊಸ ವಿಚಾರಗಳು ಬರಬೇಕು. ಜನರ ಅಭಿರುಚಿ ಬದಲಾಗಿದೆ, ಇದಕ್ಕೆ ತಕ್ಕ ಹಾಗೆ ಸಿನಿಮಾಗಳು ಇರಬೇಕು. ಸಿನಿಮಾ ಬಹಳ ಪ್ರಾಮಾಣಿಕವಾಗಿದ್ದಾಗ, ಜನರೇ ಸಿನಿಮಾವನ್ನು ತೆಗೆದುಕೊಂಡು ಹೋಗುತ್ತಾರೆ’ ಎನ್ನುತ್ತಾರೆ ರಿಷಬ್. ❖

ಬಿಡುಗಡೆಯಾಯಿತು ವಿಶೇಷ ಅಂಚೆ ಲಕೋಟೆ

‘ಕಾಂತಾರ’ ಸಿನಿಮಾದ ಚಿತ್ರವುಳ್ಳ ವಿಶೇಷ ಅಂಚೆ ಲಕೋಟೆ ಹಾಗೂ ಭೂತಕೋಲದ ಚಿತ್ರವುಳ್ಳ ಎರಡು ಪೋಸ್ಟ್‌ಕಾರ್ಡ್‌ಗಳನ್ನು ಭಾರತೀಯ ಅಂಚೆ ಬಿಡುಗಡೆಗೊಳಿಸಿದೆ. ಹೊಂಬಾಳೆ ಫಿಲ್ಮ್ಸ್ ಸಹಯೋಗದಲ್ಲಿ ಕರ್ನಾಟಕ ಪೋಸ್ಟಲ್ ವಿಭಾಗವು ಇದನ್ನು ಹೊರತಂದಿದೆ.



ವಿಶೇಷ ಲಕೋಟೆ

ಕಾಕ್ರೋಚ್ ಸುಧೀ ಈಗ ‘ಚೈಲ್ಡು’


ಸುಧೀ

ಕಾಕ್ರೋಚ್ ಸುಧೀ ನಾಯಕನಾಗಿ ನಟಿಸುತ್ತಿರುವ ‘ಚೈಲ್ಡು’ ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಅನಾವರಣಗೊಂಡಿದೆ. ಆ್ಯಕ್ಷನ್ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಪ್ರಕಾಶ್ ಹೆಬ್ಬಾಳ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

‘ಹಫ್ತಾ’ ಚಿತ್ರದ ನಂತರ ನಾನು ನಿರ್ದೇಶಿಸುತ್ತಿರುವ ಚಿತ್ರವಿದು. ಆ್ಯಕ್ಷನ್, ಕಾಮಿಡಿ, ಸೆಂಟಿಮೆಂಟ್, ಲವ್– ಹೀಗೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳನ್ನೊಳಗೊಂಡಿದೆ. ಚಿತ್ರೀಕರಣ ಪ್ರಾರಂಭಗೊಂಡಿದೆ. ತಾರಾ ಅನುರಾಧಾ, ಅಶ್ವಿನ್ ಹಾಸನ್, ವಲ್ಲಭ್, ಉದಯ್ ಪ್ರಸನ್ನ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿರುತ್ತಾರೆ. ರಂಗಾಯಣ ರಘು ಅವರ ಜೊತೆಗೂ ಮಾತುಕತೆ ನಡೆಯುತ್ತಿದೆ. ಸುಧೀ ಅವರು ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮುಂದಿನ ದಿನಗಳಲ್ಲಿ ಚಿತ್ರದ ಕುರಿತು ಹೆಚ್ಚಿನ ಮಾಹಿತಿ ನೀಡುತ್ತೇವೆ’ ಎಂದರು ನಿರ್ದೇಶಕ.

ಕಮಲ ಫಿಲ್ಮ್ಸ್ ಲಾಂಛನದಲ್ಲಿ ಚಂದ್ರಶೇಖರ್ ಕೆ. ಬಂಡವಾಳ ಹೂಡುತ್ತಿದ್ದಾರೆ. ‘ಇದು ನಾನು ನಾಯಕನಾಗಿ ನಟಿಸುತ್ತಿರುವ ಮೂರನೇ ಚಿತ್ರ. ನಿರ್ದೇಶಕ ಪ್ರಕಾಶ್ ಅವರು ಹೇಳಿದ ಕಥೆ ಬಹಳ ಇಷ್ಟವಾಯಿತು. ಅದಕ್ಕಿಂತ ನೀವು ಈ ಚಿತ್ರದ ನಾಯಕ ಅಂತ ಹೇಳಿದ್ದು ಖುಷಿಯಾಯಿತು. ನನಗೆ ತಕ್ಕಂತಹ ಕಥೆಯನ್ನು ನಿರ್ದೇಶಕರು ಮಾಡಿದ್ದಾರೆ. ರೌಡಿಸಂ ಚಿತ್ರವಾದರೂ, ಲವ್ ಕೂಡ ಇರುತ್ತದೆ. ನನ್ನ ಲುಕ್ ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ’ ಎಂದರು ಸುಧೀ. ❖

‘ಒಜಿ’ ಅಬ್ಬರ ಬಲು ಜೋರು

ಪವನ್ ಕಲ್ಯಾಣ್ ನಟನೆಯ ‘ಒಜಿ’ ಇಂದು (ಸೆ.25) ದೇಶದಾದ್ಯಂತ ತೆರೆ ಕಾಣುತ್ತಿದೆ. ಬುಧವಾರ ರಾತ್ರಿಯಿಂದಲೇ ಚಿತ್ರದ ಪೇಯ್ಡ್ ಪ್ರೀಮಿಯರ್ ಶೋ ಪ್ರಾರಂಭಗೊಂಡಿದ್ದು, ಇದರಲ್ಲಿ ‘ಪುಷ್ಪ–2’ ಚಿತ್ರಕ್ಕಿಂತ ಹೆಚ್ಚಿನ ಗಳಿಕೆ ಕಂಡಿದೆ. ವಿದೇಶಗಳಲ್ಲಿಯೂ ಬುಧವಾರವೇ ಚಿತ್ರ ತೆರೆ ಕಂಡಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬಾಲಿವುಡ್ ನಟ ಇಮ್ರಾನ್ ಹಶ್ಮಿ ಅವರ ಮೊದಲ ತೆಲುಗು ಚಿತ್ರವಿದು. ತೆಲುಗು ಚಿತ್ರೋದ್ಯಮದಲ್ಲಿ ಪವನ್ ಕಲ್ಯಾಣ್‌ಗೆ ಅಭಿಮಾನಿ ಬಳಗ ದೊಡ್ಡದಿದೆ. ವಿದೇಶಗಳಲ್ಲಿಯೂ ಇವರ ಕ್ರೇಜ್ ಸಾಕಷ್ಟಿದೆ. ಆದಾಗ್ಯೂ ಹಿಂದಿನ ‘ಹರಿ ಹರ ವೀರ ಮಲ್ಲು’ ನಿರೀಕ್ಷಿತ ಯಶಸ್ಸು ಕಂಡಿರಲಿಲ್ಲ. ಗ್ಯಾಂಗ್‌ಸ್ಟರ್ ಕಥೆಯ ‘ದೆ ಕಾಲ್ ಹಿಮ್ ಒಜಿ’ ಪ್ರಾರಂಭದಿಂದಲೂ ನಿರೀಕ್ಷೆ ಹುಟ್ಟಿಸಿತ್ತು.

ಸುಜಿತ್ ರೆಡ್ಡಿ ನಿರ್ದೇಶನದ ಚಿತ್ರ ಭರ್ಜರಿ ಆ್ಯಕ್ಷನ್ ದೃಶ್ಯಗಳನ್ನು ಹೊಂದಿದೆ. ಸುಜಿತ್ ಈ ಹಿಂದೆ ‘ಸಾಹೋ’ ಚಿತ್ರ ನಿರ್ದೇಶಿಸಿದ್ದರು. ಡಿವಿವಿ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿಯಲ್ಲಿ ಡಿವಿವಿ ದಾನಯ್ಯ ನಿರ್ಮಿಸಿರುವ ಚಿತ್ರಕ್ಕೆ ತಮನ್ ಎಸ್. ಸಂಗೀತ ಸಂಯೋಜಿಸಿದ್ದಾರೆ. ರವಿ ಕೆ. ಚಂದ್ರನ್ ಛಾಯಾಚಿತ್ರಗ್ರಹಣವಿದೆ. ಪ್ರಿಯಾಂಕಾ ಮೋಹನ್, ಪ್ರಕಾಶ್ ರಾಜ್, ಅರ್ಜುನ್ ದಾಸ್ ಮತ್ತು ಶ್ರೀಯಾ ರೆಡ್ಡಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖



ಪವನ್ ಕಲ್ಯಾಣ್

ಅಗ್ರಸ್ಥಾನದಲ್ಲಿ ಮುಂದುವರಿದ ಭಾರತದ ಮೂವರು

ದುಬೈ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ‘ವಿಸ್ಮಯ ಸ್ಪಿನ್ನರ್’ ವರುಣ್ ಚಕ್ರವರ್ತಿ ಮತ್ತು ಸ್ಫೋಟಕ ಆರಂಭ ಆಟಗಾರ ಅಭಿಷೇಕ್ ಚಕ್ರವರ್ತಿ ಅವರು ಬುಧವಾರ ಪ್ರಕಟವಾದ ಐಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ತಮ್ಮ ತಮ್ಮ ವಿಭಾಗಗಳಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.

ಚಕ್ರವರ್ತಿ ಅವರು 747 ಪಾಯಿಂಟ್‌ಗಳೊಂದಿಗೆ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡಿದ್ದಾರೆ. ಎರಡನೇ ಸ್ಥಾನದಲ್ಲಿರುವ ನ್ಯೂಜಿಲೆಂಡ್‌ನ ಜೇಕಬ್ ಡಫಿ (717) ಅವರು 30 ಪಾಯಿಂಟ್ಸ್ ಹಿಂದೆಯಿದ್ದಾರೆ.

ಪಾಕಿಸ್ತಾನದ ಲೆಗ್ ಸ್ಪಿನ್ನರ್ ಅಬ್ರಾರ್ ಅಹ್ಮದ್ ಅವರು 12 ಸ್ಥಾನ ಮೇಲೇರಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಬಾಂಗ್ಲಾದ ಎಡಗೈ ವೇಗಿ ಮುಸ್ತಫಿಜುರ್ ರಹಮಾನ್ ಸಹ ದಾಪುಗಾಲಿಟ್ಟಿದ್ದು 9ನೇ ಸ್ಥಾನಕ್ಕೇರಿದ್ದಾರೆ. ಏಷ್ಯಾ ಕಪ್‌ನಲ್ಲಿ ಅವರು ಆರು ವಿಕೆಟ್ ಕಬಳಿಸಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ಹಾರ್ದಿಕ್ ಪಾಂಡ್ಯ (238 ರೇಟಿಂಗ್ ಪಾಯಿಂಟ್ಸ್) ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಅಫ್ಗಾನಿಸ್ತಾನದ ಮೊಹಮ್ಮದ್ ನಬಿ (231) ಎರಡನೇ ಸ್ಥಾನದಲ್ಲಿದ್ದಾರೆ.

ಆರಂಭ ಆಟಗಾರ ಅಭಿಷೇಕ್ ಶರ್ಮಾ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ಗಟ್ಟಿಗೊಳಿಸಿದ್ದಾರೆ. ಪಾಕಿಸ್ತಾನ ವಿರುದ್ಧ ಭಾನುವಾರ ನಡೆದ ಏಷ್ಯಾ ಕಪ್‌ನ ಸೂಪರ್ ಫೋರ್ ಪಂದ್ಯದಲ್ಲಿ ನಿರ್ಣಾಯಕ 74 ರನ್ ಗಳಿಸಿದ್ದ ಅವರು 907 ರೇಟಿಂಗ್ ಪಾಯಿಂಟ್ಸ್ ಗಳಿಸಿದ್ದಾರೆ. ಎರಡನೇ ಸ್ಥಾನದಲ್ಲಿರುವ ಇಂಗ್ಲೆಂಡ್‌ನ ಫಿಲ್ ಸಾಲ್ಟ್ 844 ರನ್ ರೇಟಿಂಗ್ ಪಾಯಿಂಟ್ಸ್ ಪಡೆದಿದ್ದಾರೆ. ಎಡಗೈ ಬ್ಯಾಟರ್ ತಿಲಕ್ ವರ್ಮಾ (791) ಮೂರನೇ ಸ್ಥಾನದಲ್ಲಿದ್ದಾರೆ. ನಾಯಕ ಸೂರ್ಯಕುಮಾರ್ ಯಾದವ್ (729) ಆರನೇ ಸ್ಥಾನದಲ್ಲಿದ್ದಾರೆ.

ಏಷ್ಯಾ ಕಪ್: ಫೈನಲ್‌ಗೆ ಭಾರತ

ಅಭಿಷೇಕ್ ಶರ್ಮಾ ಮತ್ತೊಮ್ಮೆ ಅಬ್ಬರದ ಬ್ಯಾಟಿಂಗ್ • ಕುಲದೀಪ್, ಬೂಮ್ರಾ ಮಿಂಚು

75	37	6	5
ರನ್	ಎಸೆತ	ಬೌಂಡರಿ	ಸಿಕ್ಸರ್

ದುಬೈ (ಪಿಟಿಐ): ಸಿಡಿಲಮರಿ ಅಭಿಷೇಕ್ ಶರ್ಮಾ ಬೀಸಾಟದ ಬೆರಗು ಮತ್ತು ಸ್ಪಿನ್ನರ್‌ಗಳ ಬೌಲಿಂಗ್ ಸೊಬಗಿನಿಂದಾಗಿ ಭಾರತ ತಂಡಕ್ಕೆ ಬಾಂಗ್ಲಾದೇಶದ ಎದುರು ಜಯ ಒಲಿಯಿತು. ಇದರೊಂದಿಗೆ ಸೂರ್ಯಕುಮಾರ್ ಯಾದವ್ ಪಡೆಯು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಟ್ಟಿತು.

ಬುಧವಾರ ನಡೆದ ಸೂಪರ್ ಫೋರ್ ಪಂದ್ಯದಲ್ಲಿ ಭಾರತ ತಂಡವು 41 ರನ್‌ಗಳಿಂದ ಜೇಕರ್ ಅಲಿ ಬಳಗವನ್ನು ಮಣಿಸಿತು.

ಭಾರತ ನೀಡಿದ್ದ 169 ರನ್‌ಗಳ ಗುರಿ ಬೆನ್ನಟ್ಟಿದ ಬಾಂಗ್ಲಾ ತಂಡವು, ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ (18ಕ್ಕೆ3) ಹಾಗೂ ಬಲಗೈ ವೇಗಿ ಜಸ್‌ಪ್ರೀತ್ ಬೂಮ್ರಾ (18ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಎದುರು 19.3 ಓವರುಗಳಲ್ಲಿ 127 ರನ್‌ಗಳಿಗೆ ಆಲೌಟ್ ಆಯಿತು. ಆರಂಭಿಕ ಆಟಗಾರ ಸೈಫ್ ಹಸನ್ (69; 51 ಎಸೆತ, 4x3, 6x5) ಅವರ ಏಕಾಂಗಿ ಹೋರಾಟದ ನಡುವೆಯೂ ಭಾರತದ ಬೌಲರ್‌ಗಳು ಮೇಲುಗೈ ಸಾಧಿಸಿದರು.

ಇದಕ್ಕೆ ಮುನ್ನ, ಟಾಸ್ ಸೋತು ಬ್ಯಾಟಿಂಗ್ ಇಳಿಸಲ್ಪಟ್ಟ ಸೂರ್ಯಕುಮಾರ್ ಪಡೆಯು ಸಿಡಿಲಮರಿ ಅಭಿಷೇಕ್ ಶರ್ಮಾ (75; 37 ಎಸೆತ, 4x6, 6x5) ಅವರ ಅಬ್ಬರದ ಆಟದಿಂದಾಗಿ 6 ವಿಕೆಟ್‌ಗಳಿಗೆ 168 ರನ್ ಗಳಿಸಿತು.

ಈ ಟೂರ್ನಿಯ ಬಹುತೇಕ ಎಲ್ಲ ಪಂದ್ಯಗಳಲ್ಲಿಯೂ ಬೀಸಾಟವಾಡುತ್ತಿರುವ ಅಭಿಷೇಕ್ ಇಲ್ಲಿಯೂ ತಮ್ಮ ತೋಳ್ಬಲ ಪ್ರದರ್ಶಿಸಿದರು. ತಮ್ಮ ‘ಪಂಜಾಬಿ ಗೆಳೆಯ’ ಶುಭಮನ್ ಗಿಲ್ (29; 19 ಎಸೆತ) ಅವರೊಂದಿಗೆ ಅಮೋಘ ಆರಂಭ ನೀಡಿದರು. ಕೇವಲ 6 ಓವರ್‌ಗಳಲ್ಲಿ ತಂಡದ ಮೊತ್ತವು 77 ರನ್‌ಗಳಾದವು. ಅಭಿಷೇಕ್ ಆಟದ ಅಡಿಪಾಯದ ಮೇಲೆ ಭಾರತ ತಂಡವು 200 ರನ್‌ಗಳಿಗಿಂತಲೂ ಹೆಚ್ಚಿನ ಮೊತ್ತವನ್ನು ದಾಖಲಿಸುವ ನಿರೀಕ್ಷೆ ಮೂಡಿತ್ತು. ಆದರೆ ಹಾಗಾಗಲಿಲ್ಲ.

ಏಳನೇ ಓವರ್‌ನಲ್ಲಿ ಗಿಲ್ ವಿಕೆಟ್ ಗಳಿಸಿದ ರಿಷಾದ್ ಹುಸೇನ್ ಸಂಭ್ರಮಿಸಿದರು. ಈ ಹಂತದಲ್ಲಿ ಭಾರತ ತಂಡದ ಮ್ಯಾನೇಜ್‌ಮೆಂಟ್ ತೆಗೆದುಕೊಂಡ ಅಚ್ಚರಿಯ ನಿರ್ಧಾರದಲ್ಲಿ ಶಿವಂ ದುಬೆ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದರು. ಆದರೆ ಅವರು 2 ರನ್ ಗಳಿಸಿ ನಿರ್ಗಮಿಸಿದರು. ಅವರ ಹಿಂದೆಯೇ ಸೂರ್ಯಕುಮಾರ್ ಯಾದವ್ (5; 11 ಎಸೆತ) ಕೂಡ ಆಲ್‌ರೌಂಡರ್ ಜೇಕರ್ ಅಲಿ ಪಡೆದ ಅದ್ಭುತ ಕ್ಯಾಚ್‌ಗೆ ಔಟಾದರು.

ಆದರೆ ಇನ್ನೊಂದು ಬದಿಯಲ್ಲಿ ಅಭಿಷೇಕ್ ಬೀಸಾಟ ಮುಂದುವರಿದಿತ್ತು. ಸ್ಕೋರ್‌ಬೋರ್ಡ್‌ನಲ್ಲಿ ರನ್‌ಗಳ ನಾಗಾಲೋಟವೂ ಸಾಗಿತ್ತು. ಕೇವಲ 10 ಓವರ್‌ಗಳಲ್ಲಿ 96 ರನ್‌ಗಳೂ ಸೇರಿದ್ದವು. ಆದರೆ 12ನೇ ಓವರ್‌ನಲ್ಲಿ ಅಭಿಷೇಕ್ ಅವರನ್ನು ರನೌಟ್ ಮಾಡುವಲ್ಲಿ ರಿಷಾದ್ ಹುಸೇನ್ ಮತ್ತು ಮುಸ್ತಫಿಜುರ್ ರೆಹಮಾನ್ ಯಶಸ್ವಿಯಾದರು. ಇದು ತಂಡದ ರನ್ ಗಳಿಕೆಯ ವೇಗ ಕುಸಿಯಲು ಕಾರಣವಾಯಿತು. ಹಾರ್ದಿಕ್ ಪಾಂಡ್ಯ 29 ಎಸೆತಗಳಲ್ಲಿ 38 ರನ್ ಗಳಿಸಿದರು. ಕೊನೆಯ ಹಂತದ ಓವರ್‌ಗಳಲ್ಲಿ ರನ್‌ಗಳಿಗೆ ತಡೆಯೊಡ್ಡುವಲ್ಲಿ ಬಾಂಗ್ಲಾ ಬೌಲರ್‌ಗಳು ಯಶಸ್ವಿಯಾದರು.

ಪಾಕಿಸ್ತಾನ ಹಾಗೂ ಬಾಂಗ್ಲಾದೇಶ ತಂಡಗಳ ನಡುವಣ ಗುರುವಾರ ನಡೆಯಲಿರುವ ಸೂಪರ್ ಫೋರ್ ಪಂದ್ಯವು ಪ್ರಶಸ್ತಿ ಸುತ್ತು ಪ್ರವೇಶಿಸಲಿರುವ ಇನ್ನೊಂದು ತಂಡವನ್ನು ನಿರ್ಧರಿಸಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6ಕ್ಕೆ168 (ಅಭಿಷೇಕ್ ಶರ್ಮಾ 75, ಶುಭಮನ್ ಗಿಲ್ 29, ಹಾರ್ದಿಕ್ ಪಾಂಡ್ಯ 38, ಅಕ್ಷರ್ ಪಟೇಲ್ ಔಟಾಗದೆ 10, ರಿಷಾದ್ ಹುಸೇನ್ 27ಕ್ಕೆ2)

ಬಾಂಗ್ಲಾದೇಶ: 19.3 ಓವರುಗಳಲ್ಲಿ 127 (ಸೈಫ್ ಹಸನ್ 69, ಪರ್ವೇಜ್ ಹುಸೇನ್ 21, ಕುಲದೀಪ್ ಯಾದವ್ 18ಕ್ಕೆ3, ಜಸ್‌ಪ್ರೀತ್ ಬೂಮ್ರಾ 18ಕ್ಕೆ2, ವರುಣ್ ಚಕ್ರವರ್ತಿ 29ಕ್ಕೆ2)

ಫಲಿತಾಂಶ: ಭಾರತಕ್ಕೆ 41 ರನ್ ಗೆಲುವು, ಫೈನಲ್‌ಗೆ ಅರ್ಹತೆ

ಇಂದಿನ ಪಂದ್ಯ: ಬಾಂಗ್ಲಾದೇಶ– ಪಾಕಿಸ್ತಾನ

ಪಂದ್ಯ ಆರಂಭ: ರಾತ್ರಿ 8

ನೇರಪ್ರಸಾರ: ಸೋನಿ ಸ್ಪೋರ್ಟ್ಸ್





ಅಭಿಷೇಕ್ ಶರ್ಮಾ ಬ್ಯಾಟಿಂಗ್ ವೈಖರಿ ಎಎಫ್‌ಪಿ ಚಿತ್ರ

ಹೆಂಡರ್ಸನ್ ದುಬಾರಿ ಆಟಗಾರ

ನವದೆಹಲಿ (ಪಿಟಿಐ): ಲಿಯಾಮ್ ಹೆಂಡರ್ಸನ್ ಅವರು ಬುಧವಾರ ನಡೆದ ಹೀರೊ ಹಾಕಿ ಇಂಡಿಯಾ ಲೀಗ್ (ಎಚ್‌ಐಎಲ್) ಮಿನಿ ಹರಾಜಿನಲ್ಲಿ ₹42 ಲಕ್ಷ ಮೊತ್ತ ಪಡೆದು ಅತಿಹೆಚ್ಚು ಮೌಲ್ಯ ಪಡೆದ ಆಟಗಾರ ಎನಿಸಿದರು. ವೇದಾಂತ ಕಳಿಂಗ ಲ್ಯಾನ್ಸರ್ಸ್ ತಂಡ ಆಸ್ಟ್ರೇಲಿಯಾದ ಈ ರಕ್ಷಣೆ ಆಟಗಾರನನ್ನು ತನ್ನ ಪಾಲು ಮಾಡಿಕೊಂಡಿತು.

ಭಾರತದ ಪ್ರತಿಭಾನ್ವಿತ ಜೂನಿಯರ್ ಆಟಗಾರರಾದ ವಿವೇಕ್ ಲಾಕ್ರಾ ಮತ್ತು ಅದ್ರೋಹಿತ್ ಎಕ್ಕಾ ಕೂಡ ಹರಾಜಿನಲ್ಲಿ ಗಮನ ಸೆಳೆದರು. ₹2 ಲಕ್ಷದ ಮೂಲಬೆಲೆ ಹೊಂದಿದ್ದ ಹದಿಹರೆಯದ ಗೋಲ್‌ಕೀಪರ್ ಲಾಕ್ರಾ ₹23 ಲಕ್ಷ ಮೊತ್ತಕ್ಕೆ ಶ್ರಾಚಿ ರಾರ್ ಬೆಂಗಾಲ್ ಟೈಗರ್ಸ್ ಪಾಲಾದರು. ಮಿಡ್‌ಫೀಲ್ಡರ್ ಎಕ್ಕಾ ಅವರನ್ನು ತಮಿಳುನಾಡು ಡ್ರಾಗನ್ಸ್ ₹11 ಲಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿತು.

14 ವರ್ಷ ವಯಸ್ಸಿನ ಕೇತನ್ ಕುಶ್ವಾಹ ಅವರನ್ನು ಬೆಂಗಾಲ್ ಟೈಗರ್ಸ್ ₹2.5 ಲಕ್ಷ ಮೊತ್ತಕ್ಕೆ ಪಡೆಯಿತು.

ಅಂತರರಾಷ್ಟ್ರೀಯ ಆಟಗಾರರಲ್ಲಿ ಡಚ್ ರಕ್ಷಣೆ ಆಟಗಾರ ಸ್ಯಾಂಡರ್ ಡಿ ವಿಯ್ನ್ ಅವರು ₹36 ಲಕ್ಷಕ್ಕೆ ತಮಿಳುನಾಡು ಡ್ರಾಗನ್ಸ್ ಪಾಲಾದರು.

ಅನುಭವಿ ಡ್ರ್ಯಾಗ್ ಫ್ಲಿಕರ್ ರೂಪಿಂದರ್ ಪಾಲ್ ಸಿಂಗ್ ಅವರನ್ನು ಎಸ್‌ಜಿ ಪೈಪರ್ಸ್ ತಂಡವು ₹12 ಲಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿತು. ರೂಪಿಂದರ್ ಕಳೆದ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದ ಬೆಂಗಾಲ್ ಟೈಗರ್ಸ್ ತಂಡದ ನಾಯಕರಾಗಿದ್ದರು.

ಆರ್ಥಿಕ ಸಮಸ್ಯೆ ಕಾರಣ ಯುಪಿ ರುದ್ರಾ ಫ್ರಾಂಚೈಸಿ ಈ ವಾರದ ಆರಂಭದಲ್ಲಿ ಲೀಗ್‌ನಿಂದ ಹಿಂದೆ ಸರಿದಿತ್ತು. ಹೀಗಾಗಿ ಹಾಕಿ ಇಂಡಿಯಾ ಲೀಗ್, ಇದರ ಆಡಳಿತವನ್ನು ವಹಿಸಿಕೊಂಡಿದೆ. ಹೊಸ ಫ್ರಾಂಚೈಸಿ ಮಾಲೀಕರು ಬರುವವರೆಗೆ ಎಚ್‌ಐಎಲ್ ಇದರ ಆಡಳಿತ ನೋಡಿಕೊಳ್ಳಲಿದೆ.



ಮೈಸೂರು ರೇಸ್

ರಾಕ್ ಬ್ಯಾಂಕ್ ಗೆಲ್ಲುವ ನಿರೀಕ್ಷೆ

ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಕ್ ಬ್ಯಾಂಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2:30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಟ್ರೈಕಿಂಗ್ ಐಸ್ 7, ಡಬಲ್ ಸ್ಕ್ಯಾಚ್ 6, ಸ್ಲಿಂಗ್ ಶಾಟ್ 4
2ನೇ ರೇಸ್: ಎಕ್ಲಿಪ್ಸ್ ಪಲ್ಸ್ 2, ಟೋಟಲಿ ಎಪಿಕ್ 6, ವೈಲ್ಡ್ ಚೈಲ್ಡ್ 7
3ನೇ ರೇಸ್: ಸ್ಮಾಲ್ ಡ್ರೀಮ್ಸ್ 3, ವಿನ್‌ಫೀಲ್ಡ್ 5, ವಿರ್ಲ್‌ವಿಂಡ್ 7
4ನೇ ರೇಸ್: ರಾಕ್ ಬ್ಯಾಂಕ್ 4, ಮ್ಯಾಗ್ನೆಟಿಕ್ 3, ಟಚ್ ಆಫ್ ಗ್ರೇ 1
5ನೇ ರೇಸ್: ನಾಟಿ ಅಫೇರ್ 2, ಸಿಲಿಕಾನ್ ಸ್ಟಾರ್ 5, ವಿಂಡ್‌ಕ್ಲೀವರ್ 6
6ನೇ ರೇಸ್: ನಾಟಿ ಇನ್ ಬ್ಲೂ 3, ಫೆಲಿಸಿಟಾ 2, ದಿ ಲೇಡಿ ಎಂಪೋರಿಯೊ 11

ಉತ್ತಮ ಬೆಟ್: ನಾಟಿ ಅಫೇರ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
2,3,4,5,6	1,2,3	4,5,6

ಫೀಲ್ಡಿಂಗ್ ಅಭ್ಯಾಸಕ್ಕೆ ಹರ್ಮನ್ ಬಳಗ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಕ್ರಿಕೆಟ್ ತಂಡದ ಆಟಗಾರ್ತಿಯರು ಫೀಲ್ಡಿಂಗ್ ಕೌಶಲ ಸುಧಾರಣೆಯತ್ತ ಹೆಚ್ಚಿನ ಗಮನ ನೀಡಿದ್ದಾರೆ.

ಇದೇ 30ರಿಂದ ವಿಶ್ವಕಪ್ ಟೂರ್ನಿ ಆರಂಭವಾಗಲಿದೆ. ಇದಕ್ಕಾಗಿ ಅಭ್ಯಾಸವನ್ನು ತಂಡದ ಆಟಗಾರ್ತಿಯರು ಮಾಡುತ್ತಿದ್ದಾರೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬುಧವಾರ ತನ್ನ ವೆಬ್‌ಸೈಟ್‌ನಲ್ಲಿ ಅಭ್ಯಾಸದ ವಿಡಿಯೊ ಹಂಚಿಕೊಂಡಿದೆ.

ಫುಟ್‌ಬಾಲ್ ಮಾದರಿಯಲ್ಲಿ ಬಾಲ್ ಪಾಸಿಂಗ್ ಮಾಡುವ ಮೂಲಕ ವಾರ್ಮ್ ಅಪ್ ಮಾಡಿದರು. ಅದರ ನಂತರ ಕ್ಯಾಚ್ ಪಡೆಯುವ ಮತ್ತು ಸ್ಟಂಪ್‌ಗಳಿಗೆ ನೇರ ಥ್ರೋ ಮಾಡುವ ಅಭ್ಯಾಸಗಳನ್ನು ಹೆಚ್ಚು ಹೊತ್ತು ಮಾಡಿದರು.

ಬ್ಯಾಟರ್ ಹೊಡೆದ ಚೆಂಡನ್ನು ಚುರುಕಾಗಿ ಹಿಡಿದು ಸ್ಟಂಪ್‌ನತ್ತ ನೇರ ಥ್ರೋ ಮಾಡುವುದು. ವಿಕೆಟ್‌ಕೀಪರ್‌ಗೆ ಪಾಸ್ ಕೊಡುವುದರ ಅಭ್ಯಾಸವನ್ನು ಮಾಡಿದರು.

ಈಚೆಗೆ ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಭಾರತ 1–2ರಿಂದ ಸೋತಿತ್ತು. ಆ ಸಂದರ್ಭದಲ್ಲಿ ಆದ ಲೋಪಗಳನ್ನು ತಿದ್ದಿಕೊಳ್ಳುವುದು ತಂಡದ ಗುರಿ. ವಿಶ್ವಕಪ್ ಟೂರ್ನಿ ಇತಿಹಾಸದಲ್ಲಿ ಎರಡು ಬಾರಿ ರನ್ನರ್ಸ್ ಅಪ್ ಆಗಿರುವ ಭಾರತ ತಂಡದ ಬ್ಯಾಟಿಂಗ್ ವಿಭಾಗ ಉತ್ತಮವಾಗಿದೆ. ಅದರಲ್ಲೂ ಸ್ಮೃತಿ ಮಂದಾನ ಅವರು ಅಮೋಘ ಲಯದಲ್ಲಿದ್ದಾರೆ.

ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ 50 ಎಸೆತಗಳಲ್ಲಿ ಶತಕ ಗಳಿಸಿದ್ದ ಮಂದಾನ ಅವರು ಏಕದಿನ ಕ್ರಿಕೆಟ್‌ನಲ್ಲಿ ವೇಗದ ಶತಕ ಗಳಿಸಿದ ಎರಡನೇ ಬ್ಯಾಟರ್ ಎನಿಸಿದ್ದರು. ಮೊದಲ ಸ್ಥಾನದಲ್ಲಿ ಮೆಗ್ ಲ್ಯಾನಿಂಗ್ ಇದ್ದಾರೆ.


ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ವುಮ್‌ಲೆನ್‌ಲಾಲ್ ಹಾಂಗ್‌ಶಿಂಗ್ (ಕೆಂಪು ಜೆರ್ಸಿ) ಹಾಗೂ ಎಚ್‌ಎಎಲ್ ಸ್ಪೋರ್ಟ್ಸ್ ಕ್ಲಬ್ ತಂಡದ ಸೂರಜ್ ವಾಂಗ್‌ಖೆಮ್ ಅವರು ಚೆಂಡಿಗಾಗಿ ಸೆಣಸಿದರು ಚಿತ್ರ: ಬಿ.ಕೆ. ಜನಾರ್ದನ

ಬೆಂಗಳೂರು ಯುನೈಟೆಡ್ ತಂಡಕ್ಕೆ ಜಯ

ಬೆಂಗಳೂರು: ರೊಮಾರಿಯೊ ನಝುರೆತ್ (15ನೇ ನಿ.) ಹಾಗೂ ಜುನೈನ್ ಕೆ. (63ನೇ ನಿ.) ಅವರ ಗೋಲುಗಳ ನೆರವಿನಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0ರಿಂದ ಎಚ್‌ಎಎಲ್ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಮತ್ತೊಂದು ಪಂದ್ಯದಲ್ಲಿ ರೆಬೆಲ್ಸ್ ಫುಟ್‌ಬಾಲ್ ಕ್ಲಬ್ ತಂಡವು 2–0ಯಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ಹಾಗೂ ಸೌತ್ ಯುನೈಟೆಡ್ ನಡುವಣ ಪಂದ್ಯವು 1–1 ಡ್ರಾ ಆಯಿತು.

ಭ್ರೂಣಹತ್ಯೆ ಜಾಲ ಆಂಧ್ರದಲ್ಲಿ ಪತ್ತೆ

ಒಂದನೇ ಪುಟದಿಂದ...

ಮೂರು ಹೆಣ್ಣು ಮಕ್ಕಳನ್ನು ಹೊಂದಿದ್ದ ಮಂಡ್ಯ ಜಿಲ್ಲೆ ಮಳವಳ್ಳಿಯ 30 ವರ್ಷದ ಮಹಿಳೆ ಅಲ್ಲಿ ಭ್ರೂಣ ಹತ್ಯೆ ಮಾಡಿಸಿಕೊಳ್ಳಲು ಮುಂದಾಗಿದ್ದರು. ರಾಜ್ಯದ ‘ಪಿಸಿ ಆ್ಯಂಡ್ ಪಿಎನ್‌ಡಿಟಿ’ಯ ನೋಡಲ್ ಅಧಿಕಾರಿ ಡಾ. ವಿವೇಕ್ ದೊರೈ ಹಾಗೂ ಆಂಧ್ರಪ್ರದೇಶದ ಡಾ.ಕೆ.ವಿ.ಎನ್.ಎಸ್. ಅನಿಲ್ ಕುಮಾರ್ ನೇತೃತ್ವದ ತಂಡ ಇದೇ 21ರಂದು ಈ ಕಾರ್ಯಾಚರಣೆ ನಡೆಸಿದೆ.

ಈ ಕಾರ್ಯಾಚರಣೆ ಬಗ್ಗೆ ವಿವರ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಮಳವಳ್ಳಿಯ 30 ವರ್ಷದ ಮಹಿಳೆ ಮೂರು ಹೆಣ್ಣು ಮಕ್ಕಳನ್ನು ಹೊಂದಿದ್ದ ಕಾರಣ, ಅಕ್ರಮವಾಗಿ ಏಜೆಂಟ್ ಮೂಲಕ ಭ್ರೂಣ ಲಿಂಗ ಪತ್ತೆ ಮಾಡಿಸಿ ಕೊಂಡಿದ್ದರು. ಆ ವೇಳೆ ಐದು ತಿಂಗಳ ಗರ್ಭಿಣಿಯಾಗಿದ್ದರು. ಇನ್ನೊಂದು ಮಗುವು ಹೆಣ್ಣು ಎನ್ನುವುದು ತಿಳಿದ ಕಾರಣ, ಆಂಧ್ರ ಪ್ರದೇಶದ ಏಜೆಂಟ್ ಮೂಲಕ ಗರ್ಭಪಾತ ಮಾಡಿಸಿಕೊಳ್ಳಲು ಮುಂದಾಗಿದ್ದರು. ಈ ಏಜೆಂಟ್‌ನನ್ನು ಪತ್ತೆ ಮಾಡಿದ ಇಲಾಖೆ ಅಧಿಕಾರಿಗಳು, ರಹಸ್ಯ ಕಾರ್ಯಾಚರಣೆ ನಡೆಸಿದ್ದಾರೆ’ ಎಂದು ತಿಳಿಸಿದ್ದಾರೆ.



ಭ್ರೂಣ ಹತ್ಯೆ ತಡೆಗೆ ಕಾನೂನಿನಡಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇಲಾಖೆ ವತಿಯಿಂದಲೂ ರಹಸ್ಯ ಕಾರ್ಯಾಚರಣೆ ನಡೆಸಿ, ಭ್ರೂಣ ಹತ್ಯೆ ಮಾಡುವವರನ್ನು ಪತ್ತೆ ಮಾಡಲಾಗುತ್ತಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

‘ಈ ಕಾರ್ಯಾಚರಣೆಯಲ್ಲಿ ಕಟುಕರನ್ನು ಸೆರೆಹಿಡಿಯುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಹೆಣ್ಣು ಭ್ರೂಣ ಹತ್ಯೆ ತಡೆಯಲು ಸರ್ಕಾರ, ಇಲಾಖೆಯಿಂದ ಎಲ್ಲ ರೀತಿಯ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಲಾಗುತ್ತಿದೆ. ಹೆಣ್ಣು ಭ್ರೂಣ ಹತ್ಯೆ ಒಂದು ಸಾಮಾಜಿಕ ಪಿಡುಗು. ನಮ್ಮ ಸಮಾಜ ಈ ಬಗ್ಗೆ ಜಾಗೃತವಾಗುವುದು ಮುಖ್ಯ. ಸಂಪೂರ್ಣವಾಗಿ ಹೆಣ್ಣು ಭ್ರೂಣ ಹತ್ಯೆ ತೊಡೆದು ಹಾಕಲು ಸಾಮಾಜಿಕ ಬದಲಾವಣೆ ಮುಖ್ಯ’ ಎಂದಿದ್ದಾರೆ.

ಹೆಚ್ಚುವರಿ ನೆರವು ಸಿಬ್ಬಂದಿಗೆ ನಿರ್ಬಂಧ ವಿಧಿಸಿದ ಕ್ರೀಡಾ ಸಚಿವಾಲಯ

ಏಷ್ಯಾಡ್: ಕಠಿಣ ಮಾನದಂಡ ನಿಗದಿ

ನವದೆಹಲಿ (ಪಿಟಿಐ): ಪದಕಗಳನ್ನು ಗೆಲ್ಲುವ ಖಚಿತ ಅವಕಾಶ ಇರುವವರನ್ನು ಮಾತ್ರ ರಾಷ್ಟ್ರೀಯ ತಂಡದ ಆಯ್ಕೆಗೆ ಪರಿಗಣಿಸಲಾಗುವುದು ಎಂದು ಕ್ರೀಡಾ ಸಚಿವಾಲಯವು ಆಯ್ಕೆ ಮಾನದಂಡಗಳಿಗೆ ಸಂಬಂಧಿಸಿದ ಹೊಸ ಮಾರ್ಗಸೂಚಿಯಲ್ಲಿ ತಿಳಿಸಿದೆ. 2026ರ ಏಷ್ಯನ್ ಗೇಮ್ಸ್‌ಗೆ ಕ್ರೀಡಾ ಸಚಿವಾಲಯ ಕಠಿಣ ಆಯ್ಕೆ ಮಾನದಂಡಗಳನ್ನು ನಿಗದಿ ಮಾಡಿದೆ.

ಇದರಲ್ಲಿ ಕಾಂಟಿನೆಂಟಲ್ (ಖಂಡ ಮಟ್ಟದ) ರ‍್ಯಾಂಕಿಂಗ್‌ಅನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು. ಹೆಚ್ಚುವರಿ ತರಬೇತುದಾರರನ್ನು ಮತ್ತು ನೆರವು ಸಿಬ್ಬಂದಿಯನ್ನು ಕರೆದೊಯ್ಯುವುದನ್ನು ನಿರ್ಬಂಧಿಸಲಾಗಿದೆ. ಸರ್ಕಾರಕ್ಕೆ ಹೊರೆ ಬೀಳದಿದ್ದರೂ ಈ ನಿಯಮ ಪಾಲಿಸಲಾಗುವುದು.

ಐದು ಪುಟಗಳ ಕಡತವನ್ನು ಸಚಿವಾಲಯದ ವೆಬ್‌ಸೈಟ್‌ನಲ್ಲಿ ಬುಧವಾರ ಅಪ್‌ಲೋಡ್ ಮಾಡಲಾಗಿದೆ. ವೈಯಕ್ತಿಕ ವಿಭಾಗದಲ್ಲಿ ಅಗ್ರ ಆರು ರ‍್ಯಾಂಕ್ ಒಳಗಿರುವವರು ಮತ್ತು ತಂಡ ಕ್ರೀಡೆಗಳಲ್ಲಿ ಮೊದಲ ಎಂಟು ಕ್ರಮಾಂಕಗಳ ಒಳಗೆ ಇದ್ದರಷ್ಟೇ, ರಾಷ್ಟ್ರೀಯ ಫೆಡರೇಷನ್‌ಗಳು ನಾಮನಿರ್ದೇಶನ ಮಾಡಬಹುದಾಗಿದೆ.

ಏಷ್ಯನ್ ಕ್ರೀಡೆಗಳು ಮುಂದಿನ ವರ್ಷದ ಸೆಪ್ಟೆಂಬರ್ 19 ರಿಂದ ಅಕ್ಟೋಬರ್ 4ರವರೆಗೆ ಜಪಾನ್‌ನ ನಗೋಯಾದಲ್ಲಿ ನಡೆಯಲಿವೆ.

‘ಏಷ್ಯನ್, ಕಾಮನ್‌ವೆಲ್ತ್ ಹೀಗೆ ಬಹು ತಂಡಗಳ ಕ್ರೀಡೆಗಳಲ್ಲಿ ಪದಕಗಳನ್ನು ಗೆಲ್ಲುವ ಖಚಿತ ಅವಕಾಶ ಇರುವವರನ್ನು ಮಾತ್ರ ಆಯ್ಕೆಗೆ ಪರಿಗಣಿಸಬೇಕು ಎಂಬುದು ಇದರ ಉದ್ದೇಶ’ ಎಂದು ತಿಳಿಸಲಾಗಿದೆ. ಮೊದಲಿದ್ದ ಆಯ್ಕೆ ಮಾನದಂಡವು ಸ್ಪಷ್ಟತೆ ಹೊಂದಿಲ್ಲ ಎಂದು ಟೀಕೆಗೆ ಒಳಗಾಗಿತ್ತು.

‘ಮಾನದಂಡಗಳ ಪ್ರಕಾರ ಆಯ್ಕೆಯಾದ ಕ್ರೀಡಾಪಟುಗಳು, ಸಚಿವಾಲಯ ಅಯ್ಕೆ ಮಾಡಿರುವ ಕೋಚ್‌ಗಳು ಮತ್ತು ನೆರವು ಸಿಬ್ಬಂದಿ ಮಾತ್ರ ರಾಷ್ಟ್ರೀಯ ತಂಡದ (ಕಂಟಿನ್‌ಜೆಂಟ್) ಭಾಗವಾಗಿರಲಿದ್ದು, ಸರ್ಕಾರ ಇವರ ವೆಚ್ಚವನ್ನಷ್ಟೇ ಭರಿಸಲಿದೆ. ಇವರನ್ನು ಬಿಟ್ಟು ಯಾವುದೇ ಹೆಚ್ಚುವರಿ ಕೋಚ್, ಕ್ರೀಡಾಪಟುಗಳು ಅಥವಾ ನೆರವು ಸಿಬ್ಬಂದಿಗೆ ಅವಕಾಶ ಇರುವುದಿಲ್ಲ’ ಎಂದು ಸ್ಪಷ್ಟಪಡಿಸಲಾಗಿದೆ. ವೈಯಕ್ತಿಕ ವೆಚ್ಚದಲ್ಲಿ ಕೋಚ್‌ಗಳನ್ನು ಕರೆದೊಯ್ಯಲು ಅವಕಾಶ ನೀಡಬೇಕೆಂದು ಈ ಹಿಂದೆ ಕೆಲವು ಕ್ರೀಡಾಪಟುಗಳು ಪಟ್ಟುಹಿಡಿಯುತ್ತಿದ್ದು, ಇದು ವಿವಾದಗಳಿಗೆ ಕಾರಣವಾಗಿತ್ತು.

ಈ ಆಯ್ಕೆ ಮಾನದಂಡವು, ಕಾಮನ್‌ವೆಲ್ತ್ ಕ್ರೀಡೆಗಳು (2026ರ ಜುಲೈ– ಆಗಸ್ಟ್), ಪ್ಯಾರಾ ಏಷ್ಯನ್ ಗೇಮ್ಸ್, ಏಷ್ಯನ್ ಒಳಾಂಗಣ ಕ್ರೀಡೆಗಳು, ಏಷ್ಯನ್ ಬೀಚ್ ಗೇಮ್ಸ್, ಯೂತ್ ಒಲಿಂಪಿಕ್ಸ್, ಏಷ್ಯನ್ ಯೂತ್ ಗೇಮ್ಸ್‌ಗಳಿಗೆ ಅನ್ವಯ ಆಗಲಿದೆ. ಈ ಹಿಂದಿನ 12 ತಿಂಗಳು ಕ್ರೀಡಾಪಟುಗಳು/ ತಂಡಗಳು ನೀಡಿದ ನಿರ್ವಹಣೆ ಗಣನೆಗೆ ತೆಗೆದುಕೊಳ್ಳಲಾಗುವುದು.

ಈ ಕಠಿಣ ನಿಯಮಾವಳಿ ಭಾರತ ಫುಟ್‌ಬಾಲ್ ತಂಡದ ಪಾಲ್ಗೊಳ್ಳುವಿಕೆಗೆ ಸಮಸ್ಯೆ ತರಲಿದೆ. ಭಾರತ ತಂಡವು ಫಿಫಾ ರ‍್ಯಾಂಕಿಂಗ್‌ನಲ್ಲಿ ಏಷ್ಯಾ ಮಟ್ಟದಲ್ಲಿ 24ನೇ ಸ್ಥಾನದಲ್ಲಿದೆ.

ಭಾರತ, 2023ರ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ 28 ಚಿನ್ನ ಸೇರಿದಂತೆ 106 ಪದಕಗಳನ್ನು ಗೆದ್ದು ಇದುವರೆಗಿನ ಅತ್ಯುತ್ತಮ ಸಾಧನೆ ದಾಖಲಿಸಿತ್ತು.

ಮುಖ್ಯಾಂಶಗಳು

- ಪದಕ ಗೆಲ್ಲುವ ಖಚಿತ ಅವಕಾಶ ಇರುವವರಿಗೆ ಆದ್ಯತೆ
- ಕಾಂಟಿನೆಂಟಲ್ ರ‍್ಯಾಂಕಿಂಗ್ ಮಾತ್ರ ಗಣನೆಗೆ
- ಹೆಚ್ಚುವರಿ ತರಬೇತುದಾರರ ಕರೆದೊಯ್ಯಲು ನಿರ್ಬಂಧ

‘ಟೆಸ್ಟ್’: ಆಸ್ಟ್ರೇಲಿಯಾ ಎ ತಂಡ ಮೇಲುಗೈ

ಲಖನೌ (ಪಿಟಿಐ): ವೇಗದ ಬೌಲರ್ ಹೆನ್ರಿ ಥಾರ್ನ್‌ಟನ್ (36ಕ್ಕೆ4) ಮತ್ತು ಆಫ್ ಸ್ಪಿನ್ನರ್ ಟಾಡ್ ಮರ್ಫಿ (48ಕ್ಕೆ2) ದಾಳಿಗೆ ಸಿಲುಕಿದ ಭಾರತ ಎ ತಂಡ, ನಾಲ್ಕು ದಿನಗಳ ಎರಡನೇ ‘ಟೆಸ್ಟ್’ ಪಂದ್ಯದ ಎರಡನೇ ದಿನವಾದ ಬುಧವಾರ 194 ರನ್‌ಗಳಿಗೆ ಆಲೌಟ್ ಆಯಿತು.

226 ರನ್‌ಗಳ ದೊಡ್ಡ ಮುನ್ನಡೆ ಕಟ್ಟಿಕೊಂಡ ಆಸ್ಟ್ರೇಲಿಯಾ ಎ, ಎರಡನೇ ಇನಿಂಗ್ಸ್‌ನಲ್ಲಿ ಆರಂಭದ ಕುಸಿತ ಅನುಭವಿಸಿದ್ದು 3 ವಿಕೆಟ್‌ಗೆ 16 ರನ್ ಗಳಿಸಿತ್ತು. ಆದರೆ ಒಟ್ಟಾರೆ 242 ರನ್ ಮುನ್ನಡೆಯಲ್ಲಿದೆ.



ಸಾಯಿ ಸುದರ್ಶನ್

ಬೆಳಿಗ್ಗೆ ಪ್ರವಾಸಿ ಆಸ್ಟ್ರೇಲಿಯಾ ಎ ತಂಡ ಮೊದಲ ಇನಿಂಗ್ಸ್‌ನಲ್ಲಿ (ಮಂಗಳವಾರ: 9ಕ್ಕೆ350) ತನ್ನ ಮೊತ್ತವನ್ನು 420 ರನ್‌ಗಳಿಗೆ ಬೆಳೆಸಿತ್ತು. ಟಾಡ್ ಮರ್ಫಿ (76) ಮತ್ತು ಥಾರ್ನ್‌ಟನ್ (ಔಟಾಗದೇ 32) ಅವರು ಕೊನೆಯ ವಿಕೆಟ್‌ಗೆ 91 ರನ್ ಸೇರಿಸಿದ್ದರು.

ಇದಕ್ಕೆ ಉತ್ತರವಾಗಿ ಭಾರತ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ನಾರಾಯಣ ಜಗದೀಶನ್ (38, 45ಎ) ಮತ್ತು ಸಾಯಿ ಸುದರ್ಶನ್ (75, 140ಎ) ಬಿಟ್ಟರೆ ಉಳಿದವರು ವಿಫಲರಾದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 97.2 ಓವರುಗಳಲ್ಲಿ 420 (ಟಾಡ್ ಮರ್ಫಿ 76; ಗುರ್ನೂರ್ ಬ್ರಾರ್ 75ಕ್ಕೆ3, ಮಾನವ್ ಸುತಾರ್ 107ಕ್ಕೆ5); ಭಾರತ ಎ: 52.5 ಓವರುಗಳಲ್ಲಿ 194 (ನಾರಾಯಣ ಜಗದೀಶನ್ 38, ಸಾಯಿ ಸುದರ್ಶನ್ 75; ಹೆನ್ರಿ ಥಾರ್ನ್‌ಟನ್ 36ಕ್ಕೆ4, ಟಾಡ್ ಮರ್ಫಿ 48ಕ್ಕೆ2); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ ಎ: 7.5 ಓವರುಗಳಲ್ಲಿ 3ಕ್ಕೆ17 (ನಥಾನ್ ಮೆಕ್‌ಸ್ವೀನಿ ಔಟಾಗದೇ 11.)

ಕಂಕಷನ್‌ಗೆ ಒಳಗಾದ ಪ್ರಸಿದ್ಧ ಕೃಷ್ಣ



ಭಾರತ ಎ ತಂಡದ ಬ್ಯಾಟಿಂಗ್ ವೇಳೆ, ವೇಗದ ಬೌಲರ್ ಥಾರ್ನ್‌ಟನ್ ಬೌಲಿಂಗ್‌ನಲ್ಲಿ ಪ್ರಸಿದ್ಧ ಕೃಷ್ಣ ಅವರ ಹೆಲ್ಮೆಟ್‌ಗೆ ಚೆಂಡು ಅಪ್ಪಳಿಸಿತು. ಅವರು ಕಂಕಷನ್‌ಗೆ ಒಳಗಾದರು. ಅವರ ಬದಲು ವಿದರ್ಭ ವೇಗಿ ಯಶ್ ಠಾಕೂರ್ ಬದಲಿ ಆಟಗಾರನಾಗಿ ಆಡಲಿಳಿದರು.

ಹೆಲ್ಮೆಟ್‌ಗೆ ಚೆಂಡು ಬಡಿದ ತಕ್ಷಣ ವೈದ್ಯಕೀಯ ಸಿಬ್ಬಂದಿ ಧಾವಿಸಿದರು. ಪರೀಕ್ಷೆಯ ನಂತರ ಅವರು ಮತ್ತೆ ಮೂರು ಓವರ್ ಆಡಿ, ನಂತರ ಮರಳಿದರು. ಆಗ 16 ರನ್ (ತಂಡ: 8ಕ್ಕೆ161) ಗಳಿಸಿದ್ದರು.

ಕೊರಿಯಾ ಮಾಸ್ಟರ್ಸ್: ಭಾರತದ ಸವಾಲು ಅಂತ್ಯ

ಸುವೊನ್ (ಪಿಟಿಐ): ಭಾರತದ ಎಚ್‌.ಎಸ್‌. ಪ್ರಣಯ್ ಅವರು ಬಲ ಪಕ್ಕೆಲುಬಿನ ನೋವಿನಿಂದಾಗಿ ಕೊರಿಯಾ ಮಾಸ್ಟರ್ಸ್ 500 ಟೂರ್ನಿಯ ಟೂರ್ನಿಯ ಮೊದಲ ಸುತ್ತಿನ ಪಂದ್ಯವನ್ನು ಅರ್ಧದಲ್ಲೇ ತ್ಯಜಿಸಿದರು. ಆಯುಷ್ ಶೆಟ್ಟಿ ಮತ್ತು ಇತರ ಆಟಗಾರರೂ ಬುಧವಾರ ಹೊರಬೀಳುವುದರೊಂದಿಗೆ ಭಾರತದ ಸವಾಲು ಈ ಟೂರ್ನಿಯ ಬೇಗ ಅಂತ್ಯಗೊಂಡಿತು.


ಪ್ರಣಯ್

33 ವರ್ಷ ವಯಸ್ಸಿನ ಪ್ರಣಯ್, ಇಂಡೊನೇಷ್ಯಾದ ಚಿಕೊ ಆರಾ ದ್ವಿ ವಾರ್ದೋಯೊ ಎದುರು 5–8 ಹಿನ್ನಡೆಯ ವೇಳೆ ಕ್ರಾಸ್ ಕೋರ್ಟ್ ಸ್ಮ್ಯಾಶ್ ಆಡಿದಾಗ ಅವರಿಗೆ ನೋವು ಕಾಣಿಸಿಕೊಂಡಿತು. ಚಿಕಿತ್ಸೆ ಪಡೆದು ಆಟಕ್ಕೆ ಮರಳಿದರೂ ಅವರು ಸರಾಗವಾಗಿ ಆಡಲಾಗದೇ 8–16ರಲ್ಲಿದ್ದಾಗ ಪಂದ್ಯ ಬಿಟ್ಟುಕೊಟ್ಟರು. ಕನ್ನಡಿಗ ಆಯುಷ್ 18–21, 18–21ರಲ್ಲಿ ತೈವಾನ್‌ನ ಸು ಲಿ ಯಾಂಗ್ ಎದುರು ಸೋತರು.

ಗುರುವಾರ, ಸೆಪ್ಟೆಂಬರ್ 25, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಮಕ್ಕಳ ದಸರಾ
ಮೈಸೂರಿನ ಕಲಾಮಂದಿರದಲ್ಲಿ ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ ಪ್ರಿಸಂ ಅಕಾಡೆಮಿಯ ವಿದ್ಯಾರ್ಥಿಗಳು ಮೂಕಾಭಿನಯ ಪ್ರದರ್ಶಿಸಿದರು



ಮುದ್ದು ಶಾರದೆ
ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ದೇವಸ್ಥಾನದಲ್ಲಿ ಬುಧವಾರ ನಡೆದ ಮುದ್ದು ಶಾರದೆ ಸ್ಪರ್ಧೆಯಲ್ಲಿ ಬಾಲಕಿ ಸಾಕ್ಷಾ

ದ್ರಾಕ್ಷಿನಾಡಿನಲ್ಲಿ ಥಾಯ್ಲೆಂಡ್ ಮಾವಿನ ಘಮ 2
'ಇ–ಪರಿಶೀಲನಾ ವಿಧಾನ' ಜಾರಿ 3

'ಬೆಳಗಾವಿ ಸಂಜೀವಿನಿ ಶ್ಯಾವಿಗೆ'ಗೆ ಕಾಯಕಲ್ಪ



ಬೆಳಗಾವಿ ತಾಲ್ಲೂಕಿನ ಮುತಗಾದಲ್ಲಿ ಶ್ಯಾವಿಗೆ ತಯಾರಿಯಲ್ಲಿ ತೊಡಗಿದ್ದ ಜನನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯರು ಚಿತ್ರ: ಏಕನಾಥ ಅಗಸಿಮನಿ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಜಿಲ್ಲೆಯ ವಿವಿಧೆಡೆ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು ತಯಾರಿಸುವ ಶ್ಯಾವಿಗೆಗೆ 'ಬೆಳಗಾವಿ ಸಂಜೀವಿನಿ ಶ್ಯಾವಿಗೆ' ಹೆಸರಿನಲ್ಲಿ ಮಾರುಕಟ್ಟೆ ಕಲ್ಪಿಸಲು ಜಿಲ್ಲಾ ಪಂಚಾಯಿತಿ ಮುಂದಾಗಿದೆ.

ಜಿಲ್ಲೆಯಲ್ಲಿ 26 ಸಾವಿರ ಮಹಿಳಾ ಸ್ವಸಹಾಯ ಸಂಘಗಳಿವೆ. ಬೆಳಗಾವಿ, ಬೈಲಹೊಂಗಲ, ಕಾಗವಾಡ, ಅಥಣಿ, ಚಿಕ್ಕೋಡಿ, ಸವದತ್ತಿ, ರಾಮದುರ್ಗ ತಾಲ್ಲೂಕುಗಳ 204 ಸಂಘಗಳ ಸದಸ್ಯೆಯರು ಶ್ಯಾವಿಗೆ ತಯಾರಿಸುತ್ತಾರೆ. ಅದರಲ್ಲೂ ಬೆಳಗಾವಿ ತಾಲ್ಲೂಕಿನ ಸಾಂಬ್ರಾ, ಶಿಂಧೊಳ್ಳಿ, ಮುತಗಾದಲ್ಲಿ ಹೆಚ್ಚಿದ್ದಾರೆ. ಶ್ಯಾವಿಗೆಯನ್ನು ಸ್ಥಳೀಯವಾಗಿಯೇ ಮಾರಲಾಗುತ್ತದೆ. ವಿವಿಧ ಸಂತೆಗಳಲ್ಲೂ ಮಾರಾಟಕ್ಕೆ ಲಭ್ಯವಿದೆ.



ಹಲವು ವರ್ಷಗಳಿಂದ ಈ ಕಾಯಕದಲ್ಲಿ ತೊಡಗಿದ್ದರೂ, ಅವರಿಗೆ ವ್ಯವಸ್ಥಿತ, ಸೂಕ್ತ ಮಾರುಕಟ್ಟೆ ಇಲ್ಲ. ತಯಾರಾದ ಶ್ಯಾವಿಗೆ ಸಾಗಣೆಗೆ ಕಷ್ಟವಾಗುತ್ತಿತ್ತು. ಕೆಲವೊಮ್ಮೆ ಶ್ಯಾವಿಗೆ ಮುರಿದು ಹಾಳಾಗುತ್ತಿತ್ತು.

ಇದನ್ನು ಮನಗಂಡ ಜಿಲ್ಲಾ ಪಂಚಾಯಿತಿ ಈಗ ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಶ್ಯಾವಿಗೆಗೆ ಮಾರುಕಟ್ಟೆ, ಇತರೆ ಸೌಲಭ್ಯ ಕಲ್ಪಿಸುವ ಮೂಲಕ ಕಾಯಕಲ್ಪ ನೀಡಲು ಮುಂದಾಗಿದೆ.

ಮೊದಲ ಹಂತದಲ್ಲಿ ಬೆಳಗಾವಿ ತಾಲ್ಲೂಕಿನಲ್ಲಿ ಸಿದ್ಧವಾದ ಶ್ಯಾವಿಗೆಯನ್ನು ಪ್ಯಾಕಿಂಗ್ ಮಾಡಲು 7 ಸಾವಿರ ಬಾಕ್ಸ್‌ಗಳನ್ನು ಮಹಿಳಾ ಸ್ವಸಹಾಯ ಸಂಘದವರಿಗೆ ನೀಡಿದೆ. ಇದರಲ್ಲಿ ಅರ್ಧ ಕೆ.ಜಿ ತೂಕದ ಶ್ಯಾವಿಗೆ ಹಾಕಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇರುವ 'ಅಕ್ಕ' ಕೆಫೆಗಳು, ಸಂಜೀವಿನಿ ಮಾರಾಟ ಮಳಿಗೆಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣಗಳು ಹಾಗೂ ಸರ್ಕಾರಿ ಕಟ್ಟಡಗಳಲ್ಲಿನ ಮಾರಾಟ ಮಳಿಗೆಗಳಲ್ಲಿ ಮಾರುಕಟ್ಟೆ ಸೌಲಭ್ಯ ಕಲ್ಪಿಸಲಿದೆ.

'ಮಹಿಳಾ ಸ್ವಸಹಾಯ ಸಂಘಗಳು ರುಚಿಯಾದ ಶ್ಯಾವಿಗೆ ತಯಾರಿಸಿದರೂ, ಮಾರುಕಟ್ಟೆ ಕೊರತೆಯಿಂದ ಹೆಚ್ಚಿನ ದರ ಸಿಗುತ್ತಿರಲಿಲ್ಲ. ಗುಡಿ ಕೈಗಾರಿಕೆಗೆ ಉತ್ತೇಜನ ನೀಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಲಹೆ ಆಧರಿಸಿ ಹೊಸ ಯೋಜನೆ ರೂಪಿಸಿದ್ದೇವೆ' ಎಂದು ಜಿಲ್ಲಾ ಪಂಚಾಯಿತಿಯ ಕೌಶಲ ಮತ್ತು ಉದ್ಯಮಶೀಲತೆ ವಿಭಾಗದ ಜಿಲ್ಲಾ ವ್ಯವಸ್ಥಾಪಕ ಕಿರಣ ಶಿಂಧೆ 'ಪ್ರಜಾವಾಣಿ'ಗೆ ತಿಳಿಸಿದರು.

'ಶ್ಯಾವಿಗೆಯನ್ನು ಸ್ಥಳೀಯವಾಗಿ ಖರೀದಿಸುವವರು ಅಮೆರಿಕ, ಲಂಡನ್, ಕೆನಡಾ ಸೇರಿ ವಿದೇಶಗಳ ಸಂಬಂಧಿಕರಿಗೆ ಕಳುಹಿಸುತ್ತಾರೆ' ಎಂದು ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯೊಬ್ಬರು ತಿಳಿಸಿದರು.

> **ಮಹಿಳಾ ಸಬಲೀಕರಣ ಮತ್ತು ಸ್ಥಳೀಯವಾಗಿ ಸಿದ್ಧವಾಗುವ ಶಾವಿಗೆಗೆ ಮಾರುಕಟ್ಟೆ ಸೌಕರ್ಯ ಕಲ್ಪಿಸುವ ದೃಷ್ಟಿಯಿಂದ ಬ್ರ್ಯಾಂಡಿಂಗ್ ಮಾಡುತ್ತಿದ್ದೇವೆ**
> **ರಾಹುಲ್ ಶಿಂಧೆ**
> ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ

> **ಬೆಳಗಾವಿ ಸಂಜೀವಿನಿ ಶಾವಿಗೆ ಹೆಸರಿನಲ್ಲಿ ಬ್ರ್ಯಾಂಡಿಂಗ್ ಮಾಡಿರುವುದರಿಂದ ಅನುಕೂಲಕರ. ಮಾರಾಟ ಪ್ರಮಾಣವೂ ಹೆಚ್ಚುವ ನಿರೀಕ್ಷೆ ಇದೆ**
> **ಗೀತಾ ಚೌಗುಲೆ,** ಸದಸ್ಯೆ
> ಜನನಿ ಮಹಿಳಾ ಸ್ವಸಹಾಯ ಸಂಘ, ಬೆಳಗಾವಿ ತಾಲ್ಲೂಕು

13,000 ನೌಕರರಿಗೆ ಕಾಯಂ ಭಾಗ್ಯ?

'ಸುಪ್ರೀಂ' ತೀರ್ಪಿನಿಂದ ಹೊರಗುತ್ತಿಗೆ ನೌಕರರಿಗೆ ತೆರೆದ ಅವಕಾಶ

ಎಷ್ಟು ಮಂದಿಗೆ ಅನುಕೂಲ?

6,300	5,000	1,800	350
ಸ್ಟೇಷನ್ ಆಪರೇಟರ್	ಸ್ಟೇಷನ್ ಸಹಾಯಕರು	ಗ್ಯಾಂಗ್ ಮನ್	ಮೀಟರ್ ರೀಡರ್

• ರಾಜೇಶ್ ರೈ ಚಟ್ಲ

ಬೆಂಗಳೂರು: ಇಂಧನ ಇಲಾಖೆಯಡಿಯಲ್ಲಿರುವ ಕೆಪಿಟಿಸಿಎಲ್ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ (ಎಸ್ಕಾಂ) 15–20 ವರ್ಷಗಳಿಂದ ಹೊರ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 13 ಸಾವಿರಕ್ಕೂ ಹೆಚ್ಚು ನೌಕರರ ಸೇವೆಯ ಕಾಯಂ ಅಥವಾ ಒಳ ಗುತ್ತಿಗೆಯಡಿ ನೇಮಕಾತಿಗೆ ಸಿದ್ಧತೆ ನಡೆದಿದೆ.

'ಹೊರಗುತ್ತಿಗೆ ಉದ್ಯೋಗಿಗಳನ್ನು ಶೋಷಣೆಗೆ ಒಳಪಡಿಸಬಾರದು. ಆರ್ಥಿಕ ದುಃಸ್ಥಿತಿ ಅಥವಾ ಹುದ್ದೆ ಖಾಲಿ ಇಲ್ಲ ಎಂಬ ಕಾರಣ ನೀಡಿ ದೀರ್ಘ ಅವಧಿಗೆ ಸೇವೆ ಕಾಯಮಾತಿ ನಿರಾಕರಿಸಬಾರದು' ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿತ್ತು. ಅದರ ಅನ್ವಯ, ಹೊರಗುತ್ತಿಗೆ ನೌಕರರ ಸೇವೆ ಕಾಯಂಗೊಳಿಸಲು ಅಥವಾ ಒಳ ಗುತ್ತಿಗೆಗೆ ಒಳಪಡಿಸಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿದೆ.

ಇಂಧನ, ಆರೋಗ್ಯ, ಗಣಿ ಮತ್ತು ಭೂ ವಿಜ್ಞಾನ ಸೇರಿದಂತೆ ಕೆಲವು ಇಲಾಖೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಹೊರ ಗುತ್ತಿಗೆ ನೌಕರರಿದ್ದಾರೆ. ಮೊದಲ ಹಂತದಲ್ಲಿ ಕೆಪಿಟಿಸಿಎಲ್ ಮತ್ತು ವಿವಿಧ ಎಸ್ಕಾಂಗಳಲ್ಲಿರುವ ಸ್ಟೇಷನ್ ಆಪರೇಟರ್, ಸ್ಟೇಷನ್ ಸಹಾಯಕ, ಗ್ಯಾಂಗ್ ಮನ್, ಮೀಟರ್ ರೀಡರ್, ಚಾಲಕರಿಗೆ ಸೇವಾ ಭದ್ರತೆ ಒದಗಿಸುವ ಉದ್ದೇಶದಿಂದ 'ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಲಿಮಿಟೆಡ್ (ಹೊರಗುತ್ತಿಗೆ ಸಿಬ್ಬಂದಿಯ ಕ್ರಮಬದ್ಧಗೊಳಿಸುವಿಕೆ) ಆದೇಶ– 2025'ರ ಕರಡು ಸಿದ್ಧಗೊಂಡಿದೆ. ರಾಜ್ಯ ಸರ್ಕಾರ ಅನುಮೋದನೆ ನೀಡಿದ ಬಳಿಕ ಕೆಪಿಟಿಸಿಎಲ್ ನಿರ್ದೇಶಕರ ಮಂಡಳಿಯು ಈ ಆದೇಶವನ್ನು ಹೊರಡಿಸಲಿದೆ ಎಂದು ಮೂಲಗಳು ತಿಳಿಸಿವೆ.

ಕರಡು ಅಧಿಸೂಚನೆಯಲ್ಲಿ ಏನಿದೆ?: ಕೆಪಿಟಿಸಿಎಲ್ ಮತ್ತು ಎಸ್ಕಾಂಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಅಪಾಯಕಾರಿ ಕೆಲಸಗಳನ್ನು ಮಾಡುತ್ತಿರುವ ಸ್ಟೇಷನ್ ಆಪರೇಟರ್, ಸ್ಟೇಷನ್ ಸಹಾಯಕ, ಗ್ಯಾಂಗ್ ಮನ್, ಮೀಟರ್ ರೀಡರ್ ಮತ್ತು ಚಾಲಕರು ಮತ್ತು ಕನಿಷ್ಠ ಐದು ವರ್ಷ ನಿರಂತರವಾಗಿ ಕೆಲಸದಲ್ಲಿದ್ದು ಏಕಾಏಕಿ ವಜಾಗೊಂಡವರ ಸೇವೆ ಕಾಯಂಗೊಳಿಸುವ ಪ್ರಸ್ತಾವ ಈ ಕರಡು ಅಧಿಸೂಚನೆಯಲ್ಲಿದೆ.

ಇಂಧನ ಇಲಾಖೆ, ಕಾನೂನು ಇಲಾಖೆ ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಯನ್ನು ಒಳಗೊಂಡ ಪರಿಶೀಲನಾ ಸಮಿತಿಯನ್ನು ರಚಿಸುವ ಪ್ರಸ್ತಾವವಿದ್ದು, ಈ ಸಮಿತಿಯು ವಿವಿಧ ವರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಯ ಜನ್ಮ ದಿನದ ದಾಖಲೆ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ವರ್ಗ, ಆ ಹುದ್ದೆಗೆ ನಿರ್ದಿಷ್ಟಪಡಿಸಿದ ಶೈಕ್ಷಣಿಕ ಅರ್ಹತೆಗಳ ಪ್ರಮಾಣಪತ್ರಗಳು, ಜಾತಿ ಪ್ರಮಾಣಪತ್ರ, ಉದ್ಯೋಗ ನೋಂದಣಿ ಕಾರ್ಡ್ (ಯಾವುದಾದರೂ ಇದ್ದರೆ), ಉದ್ಯೋಗಿ ಭವಿಷ್ಯ ನಿಧಿ ಖಾತೆ ಸಂಖ್ಯೆ, ದೈಹಿಕ ಸದೃಢತೆಯ ಪ್ರಮಾಣಪತ್ರ ಸೇರಿದಂತೆ ಅಗತ್ಯವಿರುವ ವಿವರ ಪಡೆದು ಪರಿಶೀಲಿಸಲಿದೆ.

▶ 2

'ಸೇವಾ ಭದ್ರತೆಗೆ ಕ್ರಮ'

ಕೆಪಿಟಿಸಿಎಲ್ ಮತ್ತು ಎಸ್ಕಾಂಗಳಲ್ಲಿ ಹಲವು ವರ್ಷಗಳಿಂದ ತಳಹಂತದಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ಕಾರ್ಮಿಕರಿಗೆ ಸೇವಾ ಭದ್ರತೆ ಒದಗಿಸುವ ವಿಷಯದ ಕುರಿತಂತೆ ಅಧ್ಯಯನ ಮಾಡಲು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ 2022ರ ಡಿ. 3ರಂದು ಸಮಿತಿ ರಚಿಸಲಾಗಿತ್ತು. ಈ ಸಮಿತಿಯು 2023ರ ಆಗಸ್ಟ್ 24ರಂದು ಮೊದಲ ಸಭೆ ನಡೆಸಿ, ವಿಷಯ ಕುರಿತಂತೆ ಕೆಪಿಟಿಸಿಲ್ ಮತ್ತು ಎಸ್ಕಾಂಗಳಿಗೆ ಹಲವು ಸೂಚನೆಗಳನ್ನು ನೀಡಿತ್ತು. ಆದರೆ, ಸೇವಾ ಭದ್ರತೆ ಒದಗಿಸುವ ವಿಚಾರವು ನನೆಗುದಿಗೆ ಬಿದ್ದಿತ್ತು. ಅಪಾಯಕಾರಿ ಕೆಲಸಗಳಿಗೆ ಹೊರಗುತ್ತಿಗೆಯಡಿ ನೇಮಕಗೊಳ್ಳುವ ಕೆಲಸಗಾರರಿಗೆ ಅಪಘಾತ ಸಂಭವಿಸಿದರೆ ವಿಮಾ ಸೌಲಭ್ಯವನ್ನು ಒದಗಿಸುವ ಬಗ್ಗೆ ಹೊರ ಗುತ್ತಿಗೆ ಸೇವೆ ಒದಗಿಸುವ ಏಜೆನ್ಸಿದಾರರಿಗೆ ಷರತ್ತು ವಿಧಿಸಲಾಗಿದೆ. ಆದರೆ, ಈ ಏಜೆನ್ಸಿಗಳು ಇದನ್ನು ಪಾಲಿಸುತ್ತಿಲ್ಲ ಎಂದು ಇಂಧನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.



ಲೇಹ್‌ನಲ್ಲಿರುವ ಬಿಜೆಪಿ ಕಚೇರಿ ಸಮೀಪ ನಿಂತಿದ್ದ ಪೊಲೀಸ್ ವಾಹನವೊಂದಕ್ಕೆ ಪ್ರತಿಭಟನಕಾರರು ಬೆಂಕಿ ಹಚ್ಚಿದರು –ಎಎಫ್‌ಪಿ ಚಿತ್ರ

ಲೇಹ್ ಹಿಂಸಾಚಾರ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಲೇಹ್: ಲೇಹ್ ಬಂದ್ ವೇಳೆ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ಮಧ್ಯೆ ಬುಧವಾರ ನಡೆದ ಸಂಘರ್ಷದಲ್ಲಿ ನಾಲ್ವರು ಮೃತಪಟ್ಟಿದ್ದು, 60 ಮಂದಿ ಗಾಯಗೊಂಡಿದ್ದಾರೆ.

ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಲೇಹ್‌ನಲ್ಲಿ ಬುಧವಾರ ಬಂದ್‌ಗೆ ಕರೆ ನೀಡಲಾಗಿತ್ತು. ಈ ಸಂದರ್ಭದಲ್ಲಿ ಪ್ರತಿಭಟನಕಾರರು ಬಿಜೆಪಿ ಕಚೇರಿ ಮೇಲೆ ದಾಳಿ ನಡೆಸಿದರು, ಹಲವು ವಾಹನಗಳನ್ನು ಜಖಂಗೊಳಿಸಿದರು. ಪರಿಸ್ಥಿತಿ ನಿಯಂತ್ರಣಕ್ಕಾಗಿ ಪೊಲೀಸರು ಗೋಲಿಬಾರ್ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಪೊಲೀಸರು ನಡೆಸಿದ ಗುಂಡಿನ ದಾಳಿಯಲ್ಲಿಯೇ ನಾಲ್ವರು ಮೃತಪಟ್ಟಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದ್ದಾರೆ.

ಮಳೆ: ಹಲವು ರೈಲು ವಿಳಂಬ, ಎರಡು ರದ್ದು

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಕಲಬುರಗಿಯಿಂದ ಮುಂಬೈ, ದೆಹಲಿಯತ್ತ ತೆರಳಬೇಕಿದ್ದ ಹಲವು ರೈಲುಗಳ ಸೇವೆಯಲ್ಲಿ ವ್ಯತ್ಯಯವಾಗಿದೆ.

ಎರಡು ರೈಲುಗಳು ರದ್ದಾಗಿದ್ದು, ನಾಲ್ಕು ಪ್ರಯಾಣಿಕ ರೈಲುಗಳು ಹಾಗೂ ಹಲವು ಸರಕು ಸಾಗಣೆ ರೈಲುಗಳು ವಿಳಂಬವಾಗಿ ಚಲಿಸಿದವು. ಎರಡು ರೈಲುಗಳ ಮಾರ್ಗ ಬದಲಿಸಲಾಯಿತು.

ಇದರಿಂದ ರೈಲು ಪ್ರಯಾಣಿಕರು ಪರದಾಡಿದರು. ಧಾರಾಕಾರ ಮಳೆಯಿಂದಾಗಿ ಮಹಾರಾಷ್ಟ್ರದ ಸೀನಾ ನದಿಯು ಸೊಲ್ಲಾಪುರ ಜಿಲ್ಲೆಯ ಪಾಕಣಿ–ಮುಂಡೇವಾಡಿ ನಡುವಣ ರೈಲ್ವೆ ಸೇತುವೆ ಬಳಿ ಅಪಾಯಕಾರಿ ಮಟ್ಟಮೀರಿ ಹರಿಯುತ್ತಿರುವುದು ರೈಲು ಸಂಚಾರ ವ್ಯತ್ಯಯವಾಗಲು ಕಾರಣವಾಗಿದೆ.

ಚೆನ್ನೈನಿಂದ ಮುಂಬೈನತ್ತ ಹೊರಟ್ಟಿದ್ದ ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲು (12164) ಎರಡು ಗಂಟೆ ತಡವಾಗಿ ಕಲಬುರಗಿ ನಿಲ್ದಾಣಕ್ಕೆ ಬೆಳಿಗ್ಗೆ 8.15ಕ್ಕೆ ತಲುಪಿತು.

▶ 2

ವಿಶೇಷ ವ್ಯಕ್ತಿಗಳ 'ಕಾವ್ಯ ಬೆಳಕು'

ದಸರಾ: ವಾಕ್, ಶ್ರವಣ, ದೃಷ್ಟಿದೋಷವುಳ್ಳವರ ಕವನವಾಚನ

• ಎಂ. ಮಹೇಶ್

ಮೈಸೂರು: ವಾಕ್ ಮತ್ತು ಶ್ರವಣ ದೋಷವುಳ್ಳವರು, ಅನಾಥಾಶ್ರಮ ವಾಸಿಗಳು, ದೃಷ್ಟಿದೋಷವುಳ್ಳವರ ಕಾವ್ಯ ಪ್ರತಿಭೆಗೆ, ಲಿಂಗತ್ವ ಅಲ್ಪಸಂಖ್ಯಾತರ ತವಕ–ತಲ್ಲಣಗಳಿಗೆ ಬುಧವಾರ ಇಲ್ಲಿ ನಡೆದ ದಸರಾ 'ಪ್ರಚುರ ಕವಿಗೋಷ್ಠಿ' ಸಾಕ್ಷಿಯಾಯಿತು. ಸಾಹಿತ್ಯಪ್ರಿಯರ ಮೆಚ್ಚುಗೆಗೂ ಪಾತ್ರವಾಯಿತು.

ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ನಡೆದ ಕವಿಗೋಷ್ಠಿಯಲ್ಲಿ ಹೋರಾಟಗಾರರು, ಅಧಿಕಾರಿಗಳು ಸೇರಿದಂತೆ ಸಮಾಜದ ವಿವಿಧ ಕ್ಷೇತ್ರದ ಕವಿಮನಸ್ಸಿನವರು ಕವನ ವಾಚಿಸಿದರು. ಅವಕಾಶವಂಚಿತರಿಗೆ ಇದೇ ಮೊದಲಿಗೆ ವೇದಿಕೆ ಸಿಕ್ಕಿತು.

ಕಳ್ಳಸಾಗಣೆ, ಲೈಂಗಿಕ ಶೋಷಣೆಗೆ ಒಳಗಾದ ಮಹಿಳೆಯರು, ಮಕ್ಕಳ ರಕ್ಷಣೆ ಸಬಲೀಕರಣಕ್ಕಾಗಿ ಶ್ರಮಿಸುತ್ತಿರುವ ಒಡನಾಡಿ ಸೇವಾ ಸಂಸ್ಥೆ ನಿವಾಸಿಯಾದ ದ್ವಿತೀಯ ಬಿ.ಕಾಂ. ವಿದ್ಯಾರ್ಥಿನಿ ಚೈತ್ರಾ ಆರ್. 'ಅಮ್ಮ' ಕವಿತೆ ವಾಚಿಸಿ ತಾಯಿಯನ್ನು ನೆನೆದರು.

ಇದೇ ಸಂಸ್ಥೆಯ ಸತ್ಯಾ ಡಿ. 'ಶ್ರೀ' ಕವನವಾಚಿಸಿದರು.

ಶ್ರವಣದೋಷವುಳ್ಳ ಹಾವೇರಿಯ ಮಧು ಕಾರಗಿ 'ಚೆಲುವ ಕನ್ನಡ ನಾಡು' ಕವನದ ಮೂಲಕ ರಾಜ್ಯದ ಚೆಲುವನ್ನು ವರ್ಣಿಸಿದರು.

ಒಪ್ಪಿಕೊಳ್ಳಿರಿ ನಮ್ಮನ್ನೂ ಮಾನವರೆಂದು: ಮೈಸೂರಿನಲ್ಲಿ ಪ್ರಸಾಧನ ಕಲಾವಿದೆಯಾಗಿರುವ ಲಿಂಗತ್ವ ಅಲ್ಪಸಂಖ್ಯಾತರಾದ ರಿಹಾನಾ ಇರ್ಫಾನ್ 'ಬದುಕಿನ ಬವಣೆ' ಕವನದಲ್ಲಿ, ಸಮುದಾಯದವರ ಸವಾಲುಗಳು, ಸಮಸ್ಯೆಗಳನ್ನು ಕಟ್ಟಿಕೊಟ್ಟರು.

'ಅಲ್ಲೂ ಇರಲಾರದ, ಇಲ್ಲೂ ಬರಲಾಗದ ಸಂಕಟ ನಮ್ಮದು' ಎಂದು ನೋವು ಬಿಚ್ಚಿಟ್ಟರು. 'ಬದುಕಿದ್ದರೂ ಬದುಕಿರದ ನಿರ್ಜೀವಿ ದುರ್ಭಾಗ್ಯರು ನಾವು, ತಿಳಿದುಕೊಳ್ಳಿರಿ ನಮ್ಮ ಅಂತರಾಳವ, ಒಪ್ಪಿಕೊಳ್ಳಿರಿ ನಮ್ಮನ್ನೂ ಮಾನವರೆಂದು' ಎಂದು ಕೋರಿದರು. ಇದಕ್ಕೆ ನೆರೆದಿದ್ದವರಿಂದ ಚಪ್ಪಾಳೆಗಳ ಸ್ಪಂದನೆಯ ಸುರಿಮಳೆಯಾಯಿತು.

▶ 2



ಮೈಸೂರಿನಲ್ಲಿ ನಡೆದ 'ಪ್ರಚುರ ಕವಿಗೋಷ್ಠಿ'ಯಲ್ಲಿ ಪಾಲ್ಗೊಂಡಿದ್ದ ಸಭಿಕರು –ಪ್ರಜಾವಾಣಿ ಚಿತ್ರ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಿದ್ಧಪಡಿಸಿದ ಇಂಗ್ಲಿಷ್ ಪಠ್ಯ ಉರ್ದು ಭಾಷೆಗೆ ಅನುವಾದ

ಕನ್ನಡ ಕಲಿಕೆಗೆ 180 ಮದರಸಾ ಸಿದ್ಧತೆ

• ವರುಣ ಹೆಗಡೆ

ಬೆಂಗಳೂರು: ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಜಂಟಿಯಾಗಿ ಮದರಸಾಗಳಲ್ಲಿ ಕನ್ನಡ ಕಲಿಕೆ ಯೋಜನೆ ಹಮ್ಮಿಕೊಂಡಿದ್ದು, ಈ ವರ್ಷ 180 ಮದರಸಾಗಳಲ್ಲಿ ಕನ್ನಡ ಕಲಿಕೆ ಪ್ರಾರಂಭಿಸುವ ಮೂಲಕ 1,500 ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಗುರಿ ಹೊಂದಿವೆ.

ರಾಜ್ಯದ ಆಡಳಿತ ಭಾಷೆಯಾದ ಕನ್ನಡವನ್ನು ಸೌಹಾರ್ದದ ಸೇತುವೆಯಾಗಿ ಬಳಸಿಕೊಳ್ಳುವುದು ಈ ಯೋಜನೆಯ ಆಶಯವಾಗಿದ್ದು, ಮದರಸಾಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಲಾಗುತ್ತದೆ. ಕನ್ನಡೇತರರಿಗೆ ಕನ್ನಡ ಕಲಿಸಲು ಪ್ರಾಧಿಕಾರ ಸಿದ್ಧಪಡಿಸಿರುವ 36 ಗಂಟೆಗಳ ಕಲಿಕೆ ಪಠ್ಯದಲ್ಲಿ ಕನ್ನಡಕ್ಕೆ ಸಂಬಂಧಿಸಿದ ವಿವರಗಳು ಇಂಗ್ಲಿಷ್‌ನಲ್ಲಿವೆ. ಇದು ಮದರಸಾಗಳಲ್ಲಿ ಕನ್ನಡ ಕಲಿಕೆಗೆ ತೊಡಕಾಗಿದ್ದು, ಇಂಗ್ಲಿಷ್ ಭಾಗವನ್ನು ಉರ್ದು ಭಾಷೆಗೆ ಅನುವಾದ ಮಾಡಲಾಗುತ್ತಿದೆ. ಈ ಕಾರ್ಯವನ್ನು ಉರ್ದು ಅಕಾಡೆಮಿ ಕೈಗೆತ್ತಿಕೊಂಡಿದೆ.


ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ ತಿಂಗಳಲ್ಲಿಯೇ ತರಗತಿಗಳನ್ನು ಪ್ರಾರಂಭಿಸಲು ಪ್ರಾಧಿಕಾರ ಯೋಜನೆ ರೂಪಿಸಿದೆ. ಮದರಸಾಗಳಲ್ಲಿನ ಶಿಕ್ಷಕರಾದ ಮೌಲ್ವಿಗಳ ಮೂಲಕವೇ ಮಕ್ಕಳಿಗೆ ಕನ್ನಡ ಬೋಧಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಈಗಾಗಲೆ ಮೌಲ್ವಿಗಳಿಗೆ ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ಕಾರ್ಯಾಗಾರವನ್ನೂ ನಡೆಸಲಾಗಿದೆ.

ಉರ್ದು ಬಾಹುಳ್ಯ ಪ್ರದೇಶ: ಮೈಸೂರು, ಬೆಂಗಳೂರು, ಕೋಲಾರ, ವಿಜಯಪುರ, ಕಲಬುರಗಿ ಸೇರಿ ವಿವಿಧ ಜಿಲ್ಲೆಗಳಲ್ಲಿ ಉರ್ದು ಬಾಹುಳ್ಯವಿರುವ ಪ್ರದೇಶಗಳಲ್ಲಿನ ಮದರಸಾಗಳಲ್ಲಿ ವಾರಕ್ಕೆ ಎರಡು ಅಥವಾ ಮೂರು ಗಂಟೆ ಕನ್ನಡ ಕಲಿಸಲಾಗುತ್ತದೆ. ಕಲಿಕೆಯ ಭಾಗವಾಗಿ ಕಿರು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಶೇ 90 ರಷ್ಟು ತರಗತಿಗಳಿಗೆ ಹಾಜರಾದವರಿಗೆ ಪ್ರಮಾಣ ಪತ್ರಗಳನ್ನು ನೀಡಲಾಗುತ್ತದೆ. ಸರಳ ಸಂವಹನ ಹಾಗೂ ಓದಲು ಬೇಕಾದಷ್ಟು ಕನ್ನಡವನ್ನು ಈ ತರಗತಿಯಲ್ಲಿ ಕಲಿಸಲಾಗುತ್ತದೆ. ಸುಮಾರು ಮೂರು ತಿಂಗಳು ಈ ತರಗತಿ ನಡೆಯಲಿದೆ.

'ಅಲ್ಪಸಂಖ್ಯಾತ ಸಮುದಾಯ ಕನ್ನಡ ಕಲಿಯುವುದರಿಂದ ಮುಖ್ಯವಾಹಿನಿಗೆ ಬರುವ ಜತೆಗೆ, ಎಲ್ಲರೊಳಗೆ ಒಂದಾಗಿ ಬದುಕಲು ಸಾಧ್ಯವಾಗುತ್ತದೆ. ಸೌಹಾರ್ದವೂ ಸಾಕಾರವಾಗುವ ನಂಬಿಕೆಯಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

2 ಸಾವಿರಕ್ಕೆ ವಿಸ್ತರಿಸುವ ಗುರಿ

ಕನ್ನಡ ಕಲಿಕೆಯನ್ನು ಮುಂದಿನ ದಿನಗಳಲ್ಲಿ 2 ಸಾವಿರ ಮದರಸಾಗಳಿಗೆ ವಿಸ್ತರಿಸಲು ಅಲ್ಪಸಂಖ್ಯಾತರ ಆಯೋಗ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಯೋಜನೆ ರೂಪಿಸಿದೆ. ಈಗಾಗಲೇ ಕನ್ನಡ ಬೋಧಿಸಲು ಆಯ್ಕೆಯಾಗಿರುವ ಮದರಸಾಗಳ ಮೌಲ್ವಿಗಳೆ, ವಲಯವಾರು ಉಳಿದ ಮದರಸಾಗಳ ಮೌಲ್ವಿಗಳಿಗೆ ಪ್ರಾಧಿಕಾರ ರೂಪಿಸಿದ ಕನ್ನಡ ಕಲಿಕಾ ಪಠ್ಯದ ಬಗ್ಗೆ ಕಾರ್ಯಾಗಾರ ನಡೆಸುತ್ತಾರೆ. ನಂತರ ಉಳಿದ ಮದರಸಾಗಳಲ್ಲಿಯೂ ಕನ್ನಡ ಕಲಿಕಾ ತರಗತಿಗಳು ನಡೆಯಲಿವೆ.



> **ರಾಜ್ಯ ಭಾಷೆಯನ್ನು ಕಲಿತ ಸಮುದಾಯ, ತಾನು ವಾಸಿಸುವ ನಾಡಿನಲ್ಲಿ ಸಾಮರಸ್ಯದಿಂದ ಜೀವಿಸಲು ತನ್ನದೇ ಆದ ಚೈತನ್ಯ ಪಡೆಯುತ್ತದೆ**
> **ಪುರುಷೋತ್ತಮ ಬಿಳಿಮಲೆ,** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ದ್ರಾಕ್ಷಿನಾಡಿನಲ್ಲಿ ಥಾಯ್ಲೆಂಡ್ ಮಾವಿನ ಘಮ

ವಿಜಯಪುರ ಜಿಲ್ಲೆಯ ರೈತ ನವೀನ ಯಶೋಗಾಥೆ

• ವರ್ಷಪೂರ್ತಿ ಇಳುವರಿ • ಡಜನ್ ಹಣ್ಣಿಗೆ ₹1200

• ಬಸವರಾಜ್ ಸಂಪಳ್ಳಿ

ವಿಜಯಪುರ: ಬೇಸಿಗೆಯಲ್ಲಿ ಮಾತ್ರ ಕಾಣಸಿಗುವ ಮಾವಿನ ಹಣ್ಣು ಇದೀಗ 'ದ್ರಾಕ್ಷಿ ನಾಡು' ವಿಜಯಪುರ ಜಿಲ್ಲೆಯ ಶಿವಣಗಿ ಗ್ರಾಮದ ರೈತ ನವೀನ ರಾವುತಪ್ಪ ಮಂಗಾನವರ ಅವರ ಏಳು ಎಕರೆ ತೋಟದಲ್ಲಿ ವರ್ಷಪೂರ್ತಿ ಸಿಗುತ್ತದೆ.

2011ರ ಡಿಸೆಂಬರ್‌ನಲ್ಲಿ ನವೀನ ಥಾಯ್ಲೆಂಡ್ ಪ್ರವಾಸಕ್ಕೆ ಹೋಗಿದ್ದರು. ಚಳಿಗಾಲದಲ್ಲಿ ವೈವಿಧ್ಯ ಗಾತ್ರ, ಬಣ್ಣ, ಸ್ವಾದದ ಮಾವಿನ ಹಣ್ಣು ಕಂಡು ಅಚ್ಚರಿಗೊಂಡಿದ್ದರು. ತಮ್ಮೂರಿಗೆ ತಂದು ಬೆಳೆಯಲು ಬಯಸಿದರು. ಅದಕ್ಕಾಗಿ ಸತತ 7 ವರ್ಷ ಬೇರೆ ಬೇರೆ ಋತುಮಾನದಲ್ಲಿ ಥಾಯ್ಲೆಂಡ್‌ಗೆ ಭೇಟಿ ನೀಡಿ, ರೈತರೊಂದಿಗೆ ಸಂವಾದ ನಡೆಸಿದರು. ವರ್ಷಪೂರ್ತಿ ಇಳುವರಿ ಕೊಡುವ ಮಾವಿನ ಕೃಷಿ ಪದ್ಧತಿ ಬಗ್ಗೆ ಮಾಹಿತಿ ಸಂಗ್ರಹಿಸಿ, ಇಲ್ಲಿ ಅನುಷ್ಠಾನಕ್ಕೆ ತಂದರು.

'ವರ್ಷಪೂರ್ತಿ ಇಳುವರಿ ಕೊಡುವ ಥಾಯ್ಲೆಂಡ್ ಮೂಲದ 3 ಸಾವಿರ ಮಾವಿನ ಸಸಿಗಳನ್ನು (ಪ್ರತಿ ಗಿಡಕ್ಕೆ ₹350) 2021ರಲ್ಲಿ ತಂದು ತೋಟದಲ್ಲಿ ನಾಟಿ ಮಾಡಿದೆ. ಹೊಸ ಮಣ್ಣು ಮತ್ತು ಹವಾಮಾನ ಸ್ಥಿತಿಗೆ ಹೊಂದಿಕೊಳ್ಳಲಾಗದೇ ಹಲವು ಸಸಿಗಳು ಒಣಗಿದವು. ಆದರೆ, ಧೈರ್ಯ ಕಳೆದುಕೊಳ್ಳಲಿಲ್ಲ. ರಾಸಾಯನಿಕ ಗೊಬ್ಬರದ ಬದಲು ಹಸುವಿನ ಸಗಣಿ ಮತ್ತು ಎರೆಹುಳು ಗೊಬ್ಬರವನ್ನು ಹಾಕಿದೆ. ಬದುಕುಳಿದ ಸಸಿಗಳನ್ನು ತಾಳ್ಮೆ ಮತ್ತು ಕಾಳಜಿಯಿಂದ ಪೋಷಿಸಿದೆ' ಎಂದು ರೈತ ನವೀನ ಮಂಗಾನವರ 'ಪ್ರಜಾವಾಣಿ'ಗೆ ತಿಳಿಸಿದರು.

'ಒಂದೂವರೆ ವರ್ಷದಲ್ಲಿ ಇಳುವರಿ ಆರಂಭಗೊಂಡಿತು. ಪ್ರತಿ ಗಿಡದಲ್ಲಿ ಹಣ್ಣುಗಳ ಬಣ್ಣ, ಗಾತ್ರ, ಸ್ವಾದವನ್ನು ಸತತ ಐದು ವರ್ಷ ಅವಲೋಕಿಸಿದೆ. ಗರಿಷ್ಠ ಗುಣಮಟ್ಟ ಹಾಗೂ ಆಕರ್ಷಣೆಯ ತಳಿಯನ್ನು ಉಳಿಸಿಕೊಂಡು ಬಂದೆ. ಸ್ವಾದರಹಿತ ಗಿಡಗಳನ್ನು ಕಿತ್ತು ಹಾಕಿ ಗುಣಮಟ್ಟದ ಉತ್ಕೃಷ್ಟತೆಗೆ ಆದ್ಯತೆ ನೀಡಿದೆ' ಎಂದು ತಿಳಿಸಿದರು.

> ವರ್ಷವಿಡೀ ಥಾಯ್ಲೆಂಡ್ ಮಾವಿನ ಹಣ್ಣಿನ ಇಳುವರಿ ಇದೆ. ಈ ವರ್ಷ ₹10 ಲಕ್ಷ ಆದಾಯ ಗಳಿಸಿದ್ದೇನೆ
> **ನವೀನ ರಾವುತಪ್ಪ ಮಂಗಾನವರ**
> ಯುವ ರೈತ, ಶಿವಣಗಿ ಗ್ರಾಮ

'ಸದ್ಯ 4–5 ಅಡಿ ಎತ್ತರದ ಪ್ರತಿ ಗಿಡವು ಕನಿಷ್ಠ ಎರಡು ಡಜನ್ ಹಣ್ಣು ನೀಡುತ್ತಿವೆ. ಅವು ಪಕ್ವ ಆದಂತೆ ಇಳುವರಿ ಪ್ರತಿ ಗಿಡಕ್ಕೆ 6–7 ಡಜನ್ ಹಣ್ಣು ಹೆಚ್ಚಾಗುತ್ತದೆ' ಎಂದರು.

'ಪ್ರತಿದಿನ 25 ಡಜನ್ ಮಾವಿನ ಹಣ್ಣಿನವರೆಗೂ ಕೊಯ್ಲು ಮಾಡುತ್ತಿದ್ದೇನೆ. ಮರದಲ್ಲೇ ನೈಸರ್ಗಿಕವಾಗಿ ಹಣ್ಣಾಗಲು ಬಿಡುತ್ತಿದ್ದು, ರುಚಿ, ಸುವಾಸನೆ ಹೆಚ್ಚಿದೆ. ಸಗಟು ಮಾರುಕಟ್ಟೆಗೆ ಬದಲಾಗಿ ಗ್ರಾಹಕರಿಗೆ ನೇರವಾಗಿ ಮಾರುತ್ತೇನೆ' ಎಂದರು.

'ಮಾವಿನ ಗಿಡಗಳಿಗೆ ಎರೆಹುಳು ಗೊಬ್ಬರ, ತಾಪಮಾನ ತಡೆಯಲು ಪಾಚಿ ಮುಚ್ಚಿಗೆ, ಚಳಿ ತಡೆಯಲು ಪಾರಿವಾಳದ ಹಿಕ್ಕೆ, ಸಾವಯವ ಬೆಲ್ಲ, ಕಡಲೆ ಹಿಟ್ಟನ್ನು ಗೋಮೂತ್ರದಲ್ಲಿ ಬೆರೆಸಿ ಹಾಕುತ್ತಿದ್ದೇನೆ' ಎಂದರು.



ತೋಟದಲ್ಲಿ ಬೆಳೆದಿರುವ ಥಾಯ್ಲೆಂಡ್ ಮಾವಿನ ಗಿಡದಲ್ಲಿ ಹಣ್ಣು ಬಿಟ್ಟಿರುವುದನ್ನು ಪ್ರಗತಿಪರ ಯುವ ರೈತ ನವೀನ ರಾವುತಪ್ಪ ಮಂಗಾನವರ ತೋರಿಸಿದರು

'ಮಾವು ಕೃಷಿ ಅಷ್ಟೇ ಅಲ್ಲ...'

ಥಾಯ್ಲೆಂಡ್ ಮಾವಿನ ಜೊತೆಗೆ ವಿಯೆಟ್ನಾಂ ಹಲಸು (100 ಗಿಡ), ಜಪಾನಿನ ಮಿಯಾ ಜಾಕಿ ಮಾವು (40), ಗೇರು ಹಣ್ಣಿನ ಗಿಡಗಳು (5), ಹಿಮಾಚಲ ಪ್ರದೇಶದ ಎಚ್‌ಆರ್‌ಎಂಎನ್ 99 ತಳಿಯ ಮಾವು (15), ನೇರಳೆ (100), ಸಂತ್ರ (25), ಥಾಯ್ಲೆಂಡ್ ಚಿಕ್ಕು (25), ಆ್ಯಪಲ್ ಪೇರು (10) ಸೇರಿದಂತೆ ವಿವಿಧ ಹಣ್ಣಿನ ಗಿಡಗಳನ್ನು ರೈತ ನವೀನ ಬೆಳೆಸಿದ್ದಾರೆ.


ಮಾಹಿತಿಗೆ ನವೀನ ಅವರ ಮೊಬೈಲ್ ನಂ. 9538234899 ಸಂಪರ್ಕಿಸಿ.

ಸುದ್ದಿ 2 ನಿಮಿಷ

'ಟ್ರಸ್ಟ್, ಪೀಠಕ್ಕೂ ಸಂಬಂಧವಿಲ್ಲ'

ವಿಜಯಪುರ: 'ಟ್ರಸ್ಟ್‌ಗೂ ಮತ್ತು ಕೂಡಲಸಂಗಮ ಪಂಚಮಸಾಲಿ ಪೀಠಕ್ಕೂ ಸಂಬಂಧವೇ ಇಲ್ಲ. ಪೀಠ ಸ್ಥಾಪಿಸಿದ್ದು ಭಕ್ತರು. ಹೀಗಾಗಿ ಉಚ್ಚಾಟಿಸುವ ಅಧಿಕಾರ ಟ್ರಸ್ಟ್‌ಗೆ ಇಲ್ಲ, ಈ ರೀತಿ ನೂರಾರು ಟ್ರಸ್ಟ್‌ಗಳಿವೆ' ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಕೂಡಲಸಂಗಮ ಪಂಚಮಸಾಲಿ ಪೀಠ ರಚಿಸಿದ್ದು ಸಮಸ್ತ ಭಕ್ತರು. ಲಿಂಗಾಯತ ಮಠಾಧೀಶರ ಒಕ್ಕೂಟ, ಸಹೃದಯಿ ಸಂತರ ಒಕ್ಕೂಟ ಸೇರಿ ಸಕಲ ಪೂಜ್ಯರ ಸಮಕ್ಷಮದಲ್ಲಿ ಪೀಠ ರಚನೆಯಾಗಿದೆ. ಪೀಠ ಸ್ವತಂತ್ರವಾಗಿದೆ. ಈ ಮೊದಲು ಟ್ರಸ್ಟ್ ಪದಾಧಿಕಾರಿಗಳು ಮಠಕ್ಕೆ ಜಾಗ ನೀಡುವುದಾಗಿ ವಾಗ್ದಾನ ಮಾಡಿದ್ದರು. ನಂತರ ನನ್ನನ್ನು ಟ್ರಸ್ಟ್ ಅಧ್ಯಕ್ಷರನ್ನಾಗಿ ಮಾಡುವುದಾಗಿ ಹೇಳಿದ್ದರೂ ಇದುವರೆಗೂ ಮಾಡಲಿಲ್ಲ' ಎಂದು ಬುಧವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.



'ಇದು ವೈಯುಕ್ತಿಕವಾಗಿ ರಚನೆಯಾದ ಟ್ರಸ್ಟ್. ಪೀಠಕ್ಕೆ ಭೂಮಿ ಕೊಡುವುದಾಗಿ ಹೇಳಿ ಸ್ವಂತಕ್ಕೆ ಜಮೀನು ಮಾಡಿಕೊಂಡರು. ಸಮಾಜ ಶಾಶ್ವತ ಎಂದು ಸಮಾಜ ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವೆ. ಕೂಡಲಸಂಗಮವನ್ನು ಮೂಲಪೀಠವಾಗಿಸಿ, ಭಕ್ತರ ಸಭೆ ನಡೆಸಿ, ಶಾಖಾ ಮಠ ರಚಿಸಲಾಗುವುದು. ಗುಡಿಸಲಲ್ಲೂ ಸಮಾಜ ಸಂಘಟನೆ ಕಾರ್ಯ ನಡೆಸಲು ಬದ್ಧ. ಭಕ್ತರ ನಿರ್ಧಾರವೇ ಅಂತಿಮ' ಎಂದರು.

ಕಾವಿಧಾರಿಗಳೇ ನಿಮ್ಮ ದೇವರು ಯಾವುದು?: ಪ್ರತಾಪಸಿಂಹ

ಚನ್ನಗಿರಿ (ದಾವಣಗೆರೆ): 'ಪ್ರತ್ಯೇಕ ಧರ್ಮದ ಬಗ್ಗೆ ಪ್ರತಿಪಾದಿಸುವ ಕಾವಿಧಾರಿಗಳೇ, ನಿಮ್ಮ ದೇವರು ಯಾವುದು ಎಂದು ಮೊದಲು ಸ್ಪಷ್ಟಪಡಿಸಿ' ಎಂದು ಮಾಜಿ ಸಂಸದ ಪ್ರತಾಪ ಸಿಂಹ ಆಗ್ರಹಿಸಿದರು.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಧರ್ಮದ ಕಾಲಂನಲ್ಲಿ 'ಲಿಂಗಾಯತ' ಅಥವಾ 'ವೀರಶೈವ ಲಿಂಗಾಯತ' ಎಂದು ಬರೆಯಿಸಿ ಎಂದು ಸೂಚಿಸುತ್ತಿರುವ ಮಠಾಧೀಶರ ವಿರುದ್ಧ ಇಲ್ಲಿ ಹರಿಹಾಯ್ದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕ್ರಿಶ್ಚಿಯನ್, ಇಸ್ಲಾಂ ಸೇರಿ ಎಲ್ಲ ಧರ್ಮಗಳಿಗೆ ಒಂದೊಂದು ದೇವರಿದೆ. ಬಸವಣ್ಣನ ವಚನಗಳಲ್ಲಿರುವ ಕೂಡಲಸಂಗಮ ಎಂದರೆ ಶಿವ ಹಿಂದೂ ದೇವರು. ಕಾವಿ, ರುದ್ರಾಕ್ಷಿ, ವಿಭೂತಿ ಹಿಂದೂ ಧರ್ಮದವು. ನಿಮ್ಮದು ಪ್ರತ್ಯೇಕ ಧರ್ಮವಾಗಲು ಹೇಗೆ ಸಾಧ್ಯ' ಎಂದರು.

'ಪ್ರತ್ಯೇಕ ಧರ್ಮ ಪ್ರತಿಪಾದನೆ ವಿವೇಚನಾರಹಿತ ವಿಚಾರ. ಹಿಂದೂ ಧರ್ಮ ಇಲ್ಲಿಯವರೆಗೆ ಒಡೆದದ್ದು ಸಾಕು. ಹೊಸ ವ್ಯಾಖ್ಯಾನ ನೀಡಿ ಗೊಂದಲ ಸೃಷ್ಟಿಸಬೇಡಿ. ಸಿದ್ದರಾಮಯ್ಯ ಅವರ ಕುತಂತ್ರಕ್ಕೆ ಬಲಿಯಾಗಬೇಡಿ' ಎಂದು ಕೋರಿದರು.



ಕಲರವ...

ಪ್ರಜಾವಾಣಿ ಚಿತ್ರ: ಸಿ. ಶಿವಾನಂದ

ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರ ಪಕ್ಷಿಧಾಮದಲ್ಲಿ ಮರವೊಂದರ ಮೇಲೆ ಕುಳಿತಿರುವ ಕಪ್ಪು ತಲೆ ಬಿಳಿ ಬಣ್ಣದ ಕೆಂಬರಲು (ಬ್ಲ್ಯಾಕ್ ಹೆಡ್ಡೆಡ್ ಐಬಿಸ್) ಪಕ್ಷಿಗಳು

ಸರ್ಕಾರವೇ 'ಮಹಿಷ ದಸರಾ' ನಡೆಸಲಿ

'ನಿಷೇಧಾಜ್ಞೆ' ನೆರಳಿನಲ್ಲಿ ಮಹಿಷ ಮಂಡಲೋತ್ಸವ ಆಚರಣೆ, ಪ್ರಮುಖರ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: ಮಹಿಷ ಮಂಡಲೋತ್ಸವ ಆಚರಣಾ ಸಮಿತಿ ಬುಧವಾರ ಇಲ್ಲಿ ಹಮ್ಮಿಕೊಂಡಿದ್ದ 'ಮಹಿಷ ಮಂಡಲೋತ್ಸವ'ವು ನಿಷೇಧಾಜ್ಞೆಯಿಂದಾಗಿ ಸಭೆ ಹಾಗೂ ಚಾಮುಂಡಿ ಬೆಟ್ಟದಲ್ಲಿ ಮಹಿಷಾಸುರ ಮೂರ್ತಿಯ ಪುಷ್ಪಾರ್ಚನೆಗೆ ಸೀಮಿತವಾಯಿತು.

ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖಂಡರು, 'ಚಾಮುಂಡಿ ಬೆಟ್ಟ ಹಾಗೂ ಪುರಭವನ ಆವರಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಡಳಿತ ಧಾರ್ಮಿಕ ಹಕ್ಕಿಗೆ ಚ್ಯುತಿ ತಂದಿದೆ. ಮುಂದಿನ ಬಾರಿ ಮುಕ್ತವಾಗಿ ಆಚರಣೆಗೆ ಅವಕಾಶ ನೀಡಬೇಕು' ಎಂದು ಒತ್ತಾಯಿಸಿದರು.

ಪುರಭವನ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ದ್ರಾವಿಡ ಲಿಬರೇಷನ್ ಮೂವ್‌ಮೆಂಟ್‌ನ ಕೊಳತ್ತೂರು ಟಿ.ಎಸ್.ಮಣಿ, 'ಆರ್ಯರ ವ್ಯವಸ್ಥೆಯು ಸ್ಥಳೀಯ ಮೂಲ ನಿವಾಸಿಗಳನ್ನು ರಕ್ಷಿಸಲು ಬಂದವರನ್ನು ರಾಕ್ಷಸರನ್ನಾಗಿ ನಿರೂಪಿಸಿತು' ಎಂದು ಟೀಕಿಸಿದರು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರು, 'ನಮ್ಮ ತೆರಿಗೆ ಹಣದಲ್ಲಿ ದಸರಾ ಮಾಡುತ್ತಿದ್ದೀರಿ. ನಮ್ಮ ಭಾವನೆಗೂ ಬೆಲೆ ನೀಡಿ. ಒಂದೆರಡು ಕೋಟಿ ರೂಪಾಯಿ ನೀಡಿದರೆ, ಜನ ಸೇರಿಸಿ ಕಾರ್ಯಕ್ರಮ ಮಾಡುತ್ತೇವೆ. ಸಾಧ್ಯವಾಗದಿದ್ದರೆ ಸರ್ಕಾರದಿಂದಲೇ ನಡೆಸಿ' ಎಂದು ಒತ್ತಾಯಿಸಿದರು.

ಚಾಮುಂಡಿ ಬೆಟ್ಟದಲ್ಲಿ ಮಹಿಷಾಸುರ ಪ್ರತಿಮೆಯನ್ನು ಟಾರ್ಪಲ್‌ನಿಂದ ಮುಚ್ಚಲಾಗಿತ್ತು. ಬೆಟ್ಟಕ್ಕೆ ಆಯೋಜಿಸಿದ್ದ ಬೈಕ್ ರ‍್ಯಾಲಿಗೂ ಪೊಲೀಸರು ಅನುಮತಿ ನೀಡಲಿಲ್ಲ. ಸಂಜೆ 4ರ ಸುಮಾರಿಗೆ ಮಾಜಿ ಮೇಯರ್ ಪುರುಷೋತ್ತಮ್, ಜ್ಞಾನಪ್ರಕಾಶ ಸ್ವಾಮೀಜಿ, ಪ್ರೊ.ಕೆ.ಎಸ್. ಭಗವಾನ್ ಇತರ ಪ್ರಮುಖರನ್ನು ಬೆಟ್ಟಕ್ಕೆ ಕರೆದೊಯ್ದ ಪೊಲೀಸರು ಪ್ರತಿಮೆಗೆ ಪುಷ್ಪಾರ್ಚನೆಗೆ ಅವಕಾಶ ಮಾಡಿಕೊಟ್ಟರು.



ಮೈಸೂರಿನಲ್ಲಿ ಬುಧವಾರ 'ಮಹಿಷ ಮಂಡಲೋತ್ಸವ'ದಲ್ಲಿ ಮಾಜಿ ಮೇಯರ್ ಪುರುಷೋತ್ತಮ, ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಸಾಹಿತಿ ಕೆ.ಎಸ್. ಭಗವಾನ್, ದ್ರಾವಿಡ ಲಿಬರೇಷನ್ ಮೂವ್‌ಮೆಂಟ್‌ನ ಕೊಳತ್ತೂರು ಟಿ.ಎಸ್.ಮಣಿ, ನಿವೃತ್ತ ಡಿವೈಎಸ್‌ಪಿ ಎಸ್. ಸಿದ್ದರಾಜು, ಲೇಖಕ ಸಿದ್ಧಸ್ವಾಮಿ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.52	6,028	6,455
ಹಾರಂಗಿ	2,859	2,857.22	1,197	1,600
ಕಬಿನಿ	2,284.00	2,282.09	1,534	1,850
ಹೇಮಾವತಿ	2,922	2,919.23	4,000	6,335
ಲಿಂಗನಮಕ್ಕಿ	1,819	1,816.15	3,008	6,634
ಸೂಪಾ (ಮೀ)	564	559.70	2,342.14	4,663.77
ಮಾಣಿ	595	594.01	660	660
ತುಂಗಭದ್ರಾ	1,633	1,626.06	10,551	10,346
ಮಲಪ್ರಭಾ	2,079.5	2,079.50	1,494	1,494
ಘಟಪ್ರಭಾ	2175	2,174.75	1,699	1,370
ಭದ್ರಾ *	186	185.1	2,533	4,351
ಆಲಮಟ್ಟಿ (ಮೀ)	519.6	519.52	37,098	39,135
ನಾರಾಯಣಪುರ (ಮೀ)	492.25	492.20	32,000	31,560

* ನೆಲಮಟ್ಟದಿಂದ

ಪ್ರವಾಹ: ಜಮೀನು ಜಲಾವೃತ, ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ವಿಜಯಪುರ: ಭೀಮಾ ಮತ್ತು ಸೀನಾ ನದಿಗಳ ಪ್ರವಾಹದಿಂದ ಬುಧವಾರ ಬೆಳಿಗ್ಗೆಯಿಂದ ವಿಜಯಪುರ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ–52ರಲ್ಲಿ ನೀರು ಆವರಿಸಿ, ವಾಹನಗಳ ಸಂಚಾರ ಸ್ಥಗಿತಗೊಂಡಿದೆ.

ಮಹಾರಾಷ್ಟ್ರದ ಉಜನಿ ಹಾಗೂ ವೀರಾ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡುತ್ತಿರುವುದು ಇದಕ್ಕೆ ಕಾರಣ. ಪರಿಣಾಮ ಭೀಮಾ ಹಾಗೂ ಅದರ ಉಪನದಿ ಸೀನಾದಲ್ಲಿ ಪ್ರವಾಹ ಉಂಟಾಗಿದೆ. ವಿಜಯಪುರ ಜಿಲ್ಲೆಯ ಚಡಚಣ, ಇಂಡಿ, ಆಲಮೇಲ ತಾಲ್ಲೂಕಿನ ಸಾವಿರಾರು ಹೆಕ್ಟೇರ್ ಪ್ರದೇಶದ ಜಮೀನಿನಲ್ಲಿ ನೀರು ಆವರಿಸಿದೆ. ಭೀಮಾ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ.

ಭೀಮಾ ನದಿ ತಟದ ವಿವಿಧ ಗ್ರಾಮಗಳಲ್ಲಿ ಜಮೀನು ಜಲಾವೃತವಾಗಿದೆ. ಚಡಚಣ, ಇಂಡಿ, ಆಲಮೇಲ ತಾಲ್ಲೂಕಿನ ಹಲವಾರು ಹಳ್ಳ-ಕೊಳ್ಳಗಳು, ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿವೆ.

ಭೀಮಾ ನದಿ ಪ್ರವಾಹದಿಂದ ಇಂಡಿ ತಾಲ್ಲೂಕಿನ ಹಿಂಗಣಿ-ಬರಗೂಡಿ ಗ್ರಾಮಗಳ ಮಧ್ಯದ ರಸ್ತೆ ಬಂದ್ ಆಗಿದೆ. ಪಡನೂರ ಗ್ರಾಮದಲ್ಲಿಯ 30 ಕುಟುಂಬಗಳಿಗೆ ಸ್ಥಳಾಂತರಗೊಳಲು ಸೂಚಿಸಲಾಗಿದೆ. ಶಿರಗೂರ ಗ್ರಾಮದ ಶಾಲೆಗೆ ನೀರು ತಲುಪಿದೆ. ಶಿರಗೂರ ಇನಾಂ ಗ್ರಾಮ ಸ್ಥಳಾಂತರ ಮಾಡಲು ಗ್ರಾಮಸ್ಥರು ಮನವಿ ಮಾಡಿಕೊಂಡಿದ್ದಾರೆ. ಚಿಕ್ಕಮಣ್ಣೂರ, ಖೇಡಗಿ, ನಾಗರಳ್ಳಿ, ಭುಯ್ಯಾರ, ಅಗರಖೇಡ, ಮಿರಗಿ ಮಣ್ಣೂರ ಗ್ರಾಮಗಳಲ್ಲಿ ಸುರಕ್ಷತೆ ಕುರಿತು ನಿಗಾ ವಹಿಸಲಾಗಿದೆ.

'ಭೀಮಾ ನದಿಗೆ 2.80 ಲಕ್ಷ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಸೊನ್ನ ಬ್ಯಾರೇಜಿನಿಂದ 25 ಗೇಟ್‌ಗಳ ಮೂಲಕ ನೀರು ಹೊರ ಬಿಡಲಾಗುತ್ತಿದೆ. ಇನ್ನೂ ಎರಡು ದಿನ ಹೀಗೆ ಮುಂದುವರೆಯಲಿದೆ' ಎಂದು ಕೃಷ್ಣಾ ಮೇಲ್ದಂಡೆ ಯೋಜನೆ ಎಂಜಿನಿಯರ್ ಮನೋಜಕುಮಾರ ಗಡಬಳ್ಳಿ ಪ್ರತಿಕ್ರಿಯಿಸಿದ್ದಾರೆ.

'ವಿಜಯಪುರ ಜಿಲ್ಲೆಯಲ್ಲಿ ಸತತ ಮಳೆಯಿಂದ 1 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದೆ' ಎಂದು ಜಿಲ್ಲಾಧಿಕಾರಿ ಡಾ.ಕೆ.ಆನಂದ್ ತಿಳಿಸಿದ್ದಾರೆ.



ವಿಜಯಪುರ – ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ 52 ಟಾಕಳಿ ಒಡಕಬಾಳ ನಡುವೆ ಜಲಾವೃತಗೊಂಡಿತ್ತು

ಎಸ್‌ಟಿ ಪಟ್ಟಿಗೆ ಕುರುಬ: ವಿರೋಧ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಕುರುಬ ಸಮುದಾಯವನ್ನು ಸೇರಿಸುವ ಪ್ರಸ್ತಾವ ವಿರೋಧಿಸಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದಿಂದ ಬುಧವಾರ ಇಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು.

ಸಮಾಜದ ಅಧ್ಯಕ್ಷ ವೈ.ಡಿ.ಅಣ್ಣಪ್ಪ ಅವರು, 'ಸಮಾಜವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಿದಲ್ಲಿ ವಾಲ್ಮೀಕಿ ನಾಯಕ ಸಮಾಜಕ್ಕೆ ಅನ್ಯಾಯವಾಗುತ್ತದೆ. ಸೇರ್ಪಡೆ ಮಾಡಿದರೆ, ಉಗ್ರಸ್ವರೂಪದ ಹೋರಾಟ ಮಾಡುತ್ತೇವೆ' ಎಂದರು.

ಗೌರವ ಅಧ್ಯಕ್ಷ ಎಚ್.ಕೆ.ಹಾಲೇಶ್ ಮಾತನಾಡಿ, 'ಎಲ್.ಜಿ. ಹಾವನೂರು ವರದಿಯಂತೆ ಶೇ 7.5 ಮೀಸಲಾತಿ ಕೊಡುವುದಾಗಿ ಹೇಳಿದ್ದ ಸರ್ಕಾರ ಈವರೆಗೂ ಈಡೇರಿಸಿಲ್ಲ. ಆದರೆ, ಇತರ ಜಾತಿಗಳನ್ನು ಎಸ್‌ಟಿಗೆ ಸೇರಿಸುವ ಹುನ್ನಾರ ಮಾತ್ರ ನಡೆಸುತ್ತಿದೆ ಎಂದರು.

ಹಿರಿಯ ಮುಖಂಡ ಕೋಡಿಹಳ್ಳಿ ಭೀಮಪ್ಪ ಮಾತನಾಡಿ, 'ಶೋಷಿತರ ಪರವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಅನ್ಯ ಜಾತಿಗಳನ್ನು ಪರಿಶಿಷ್ಟ ಪಂಗಡ ಮೀಸಲಾತಿಗೆ ಸೇರಿಸಿದರೆ ಶೋಷಿತ ಸಮುದಾಯಗಳ ಧ್ವನಿ ದಮನ ಮಾಡಿದಂತಾಗುತ್ತದೆ' ಎಂದರು.

ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ವನಜಾಕ್ಷಮ್ಮ, ಮುಖಂಡರಾದ ಕೆ.ಉಚ್ಚಂಗೆಪ್ಪ, ಶಿರಹಟ್ಟಿ ದಂಡೆಪ್ಪ, ಎಚ್.ಹನುಮಂತಪ್ಪ ಸೇರಿ ಹಲವರಿದ್ದರು.

ಸರ್ಕಾರದ ವಿರುದ್ಧ ಧಿಕ್ಕಾರ: ಹೂವಿನಹಡಗಲಿಯಲ್ಲಿ ವಾಲ್ಮೀಕಿ ಮಹಾಸಭಾದಿಂದ ಪ್ರತಿಭಟನೆ ನಡೆಯಿತು. ಪ್ರತಿಭಟನಾಕಾರರು ಮೆರವಣಿಗೆ ನಡೆಸಿ, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.



ವಿಜಯನಗರ ಜಿಲ್ಲೆಯ ಹರಪನಹಳ್ಳಿಯಲ್ಲಿ ವಾಲ್ಮೀಕಿ ನಾಯಕ ಸಮಾಜದಿಂದ ಬುಧವಾರ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

ವಿಶೇಷ ವ್ಯಕ್ತಿಗಳ 'ಕಾವ್ಯ ಬೆಳಕು'

ಒಂದನೇ ಪುಟದಿಂದ...

ದೃಷ್ಟಿದೋಷವುಳ್ಳ ಡಿಪ್ಲೊಮಾ ವಿದ್ಯಾರ್ಥಿ ಲಿಖಿತ್ ಎ. 'ಕೈಗೆಟುಕದ ನಕ್ಷತ್ರ', ಮೈಸೂರಿನ ಕಿವುಡ ಮಕ್ಕಳ ಸರ್ಕಾರಿ ಶಾಲೆಯ ವಿದ್ಯಾರ್ಥಿ ಹೇಮಂತ್ 'ಬಾಂಧವ್ಯ' ಶೀರ್ಷಿಕೆ ಕವನ ವಾಚಿಸಿದರು. ಶ್ರವಣದೋಷವುಳ್ಳ ವಿದ್ಯಾರ್ಥಿ ಲಿಖಿತ್ ಅವರ 'ನಮ್ಮ ಭಾಷೆ' ಕವನವನ್ನು ಅವರ ಶಿಕ್ಷಕರು ವಾಚಿಸಿದರು. 'ಸಂಜ್ಞೆ'ಯಲ್ಲಿ ಅದನ್ನು ಲಿಖಿತ್ ಪ್ರದರ್ಶಿಸಿದರು. ಪಾಲ್ಗೊಂಡಿದ್ದವರು ಎದ್ದುನಿಂತು ಕೈಗಳನ್ನು ಮೇಲೆತ್ತಿ ಸಂಜ್ಞೆಯಲ್ಲೇ ಅಭಿನಂದನೆ ಸಲ್ಲಿಸಿದ್ದು ವಿಶೇಷವಾಗಿತ್ತು.

ವಾಕ್ ದೋಷವುಳ್ಳ ವಿದ್ಯಾರ್ಥಿನಿ ಶೈಲಾ ಬಿ.ಕೊಣ್ಣೂರು 'ಶಿಕ್ಷಣ' ಕವನದ ಮೂಲಕ ಜ್ಞಾನಾರ್ಜನೆಯ ಮಹತ್ವವನ್ನು ತೊದಲು ಮಾತುಗಳಲ್ಲೇ ಮಂಡಿಸಿ ಮೆಚ್ಚುಗೆಗೆ ಪಾತ್ರವಾದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕವಯತ್ರಿ ಸುಕನ್ಯಾ ಮಾರುತಿ, 'ದೇಹಕ್ಕೆ ವೈಕಲ್ಯ ಇರಬಹುದು. ಆದರೆ, ಭಾವಕ್ಕಲ್ಲ ಎಂಬ ಸಂದೇಶವನ್ನು ವಿಶೇಷ ವ್ಯಕ್ತಿಗಳು ಇಲ್ಲಿ ಪ್ರತಿಪಾದಿಸಿದ್ದಾರೆ. ಇದೊಂದು ವಿಶಿಷ್ಟ ಕವಿಗೋಷ್ಠಿ. ಭಾಗವಹಿಸಿದ್ದವರಿಂದ ಕಲಿಯಬೇಕಾದುದು ಬಹಳಷ್ಟಿದೆ' ಎಂದು ಶ್ಲಾಘಿಸಿದರು.

13 ಸಾವಿರ ನೌಕರರಿಗೆ 'ಕಾಯಂ' ಭಾಗ್ಯ?

ಒಂದನೇ ಪುಟದಿಂದ...

ನಂತರ ಸಮಿತಿಯು, ವಿವಿಧ ವರ್ಗಗಳ ಹುದ್ದೆಗಳ ಅಡಿ ವಿವರಗಳನ್ನು ಸಲ್ಲಿಸಿದ ಹೊರಗುತ್ತಿಗೆ ಸಿಬ್ಬಂದಿಯ ಹೆಸರುಗಳನ್ನು ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪಟ್ಟಿ ಮಾಡಿ ನೇಮಕಾತಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಈ ಪಟ್ಟಿಯಲ್ಲಿರುವ ವಿವರಗಳು ತೃಪ್ತಿಕರವೆನಿಸಿದರೆ ನೇಮಕಾತಿ ಪ್ರಾಧಿಕಾರವು ನೌಕರರನ್ನು ಕ್ರಮಬದ್ಧಗೊಳಿಸುವ ಆದೇಶ ಹೊರಡಿಸಬಹುದು ಎಂದು ಕರಡು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಹೊರಗುತ್ತಿಗೆ ಕಾರ್ಮಿಕರ ಕಾಯಂಗೆ ಕೆಲ ಷರತ್ತುಗಳನ್ನು ಪ್ರಸ್ತಾಪಿಸಲಾಗಿದೆ. ಕಾಯಂಗೆ ಪರಿಗಣಿಸುವ ಹೊರಗುತ್ತಿಗೆ ಸಿಬ್ಬಂದಿ ವಯಸ್ಸು 58 ವರ್ಷ ಮೀರಬಾರದು. ಅಂತಹ ಸಿಬ್ಬಂದಿ ನೇಮಕಾತಿ ಪ್ರಾಧಿಕಾರದ ಅಡಿಯಲ್ಲಿ ನಿರಂತರ ಅವಧಿಯಿಂದ ಉದ್ಯೋಗದಲ್ಲಿರಬೇಕು. ಹುದ್ದೆಗಳ ವರ್ಗಗಳು, ಶೈಕ್ಷಣಿಕ ಅರ್ಹತೆ ಮತ್ತು ವೇತನ ಶ್ರೇಣಿಯನ್ನು ನಿಗಮ ಅಥವಾ ಸಂಬಂಧಿತ ಕಂಪನಿಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಕಾಲಕಾಲಕ್ಕೆ ಪರಿಷ್ಕರಿಸಲಾಗುವುದು. ಅಂತಹ ಸಿಬ್ಬಂದಿಯನ್ನು ಅವರು ಈಗಿರುವ ಸ್ಥಳದಲ್ಲಿಯೇ 'ಇರುವಂತೆಯೇ' ಕಾಯಂಗೊಳಿಸಲಾಗುವುದು ಎಂದೂ ಕರಡಿನಲ್ಲಿದೆ

ಹೀಗೆ ಕಾಯಂಗೊಂಡ ಹೊರಗುತ್ತಿಗೆ ಸಿಬ್ಬಂದಿಗೆ ಕಾಲಕ್ಕೆ ಕಾಲಕ್ಕೆ ಹೊರಡಿಸುವ ಆದೇಶಗಳ ಪ್ರಕಾರ ರಜೆ ಮತ್ತು ಇತರ ಸೇವಾ ಪ್ರಯೋಜನಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ, ಕಾಯಂಗೊಳಿಸುವ ಮೊದಲು ಹೊರಗುತ್ತಿಗೆ ಆಧಾರದಲ್ಲಿ ಮಾಡಿದ ಕೆಲಸಕ್ಕೆ ಯಾವುದೇ ಪ್ರಯೋಜನಗಳನ್ನು ಪಡೆಯಲು ಅವಕಾಶ ಇಲ್ಲ ಎಂದೂ ಸ್ಪಷ್ಟಪಡಿಸಲಾಗಿದೆ.

ಮಳೆ: ಕುಸಿದ ಗೋಡೆ

ಪ್ರಜಾವಾಣಿ ವಾರ್ತೆ

ಬೀದರ್: ಸತತ ಮಳೆಗೆ ನಗರದ ಬಹಮನಿ ಕೋಟೆ ಗೋಡೆ ಕುಸಿದಿದೆ. ಎಂದು ಎಎಸ್‌ಐ ಅಧಿಕಾರಿಗಳು ತಿಳಿಸಿದ್ದಾರೆ. ಆಗಸ್ಟ್ 28ರಂದು ಭಾಗಶಃ ಬಿದ್ದಿತ್ತು.

ಮಹಾರಾಷ್ಟ್ರ ಜಲಾಶಯದಿಂದ ಅಧಿಕ ಪ್ರಮಾಣದಲ್ಲಿ ನೀರು ನದಿಗೆ ಹರಿಸುತ್ತಿದ್ದು, ಮಾಂಜ್ರಾ ನದಿಯಲ್ಲಿ ಪ್ರವಾಹ ಬಂದಿದೆ. ಕಮಲನಗರ ತಾಲ್ಲೂಕಿನ ಖೇಡ್-ಸಂಗಮ, ಸಂಗಮ–ಠಾಣಾಕುಶನೂರ ಸೇತುವೆ ಜಲಾವೃತವಾಗಿದೆ.

ಕಲಬುರಗಿ ವರದಿ: 'ಅಫಜಲಪುರ ತಾಲ್ಲೂಕಿನ ಸೊನ್ನ ಬಳಿ ಭೀಮಾ ನದಿಗೆ ನಿರ್ಮಿಸಿರುವ ಬ್ಯಾರೇಜ್‌ನಲ್ಲಿ ಬುಧವಾರ ಸಂಜೆ 2.80 ಲಕ್ಷ ಕ್ಯೂಸೆಕ್ ಒಳಹರಿವು ಹಾಗೂ ಅಷ್ಟೇ ಪ್ರಮಾಣದ ಹೊರ ಹರಿವು ದಾಖಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಲವು ರೈಲು ವಿಳಂಬ, ಎರಡು ರದ್ದು

ಒಂದನೇ ಪುಟದಿಂದ...

ಲೈನ್ ಕ್ಲಿಯರೆನ್ಸ್ ಸಿಗದೆ ಮಧ್ಯಾಹ್ನದ ತನಕ ಕಲಬುರಗಿಯಲ್ಲೇ ನಿಂತಿತ್ತು. ಬಳಿಕ ಬೀದರ್–ಲಾತೂರ್–ಕುರ್ದವಾಡಿ ಮಾರ್ಗವಾಗಿ ಮುಂಬೈನತ್ತ ಮಧ್ಯಾಹ್ನ 2.15ಕ್ಕೆ ಪ್ರಯಾಣಿಸಿತು.

ಬೆಂಗಳೂರಿನಿಂದ ಮುಂಬೈನತ್ತ ಹೊರಟಿದ್ದ ಉದ್ಯಾನ್ ಎಕ್ಸ್‌ಪ್ರೆಸ್ ರೈಲು ಬೆಳಿಗ್ಗೆ 9.17ಕ್ಕೆ ಕಲಬುರಗಿ ನಿಲ್ದಾಣಕ್ಕೆ ತಲುಪಿತು. ಅದೂ ಕೂಡ 8 ಗಂಟೆಯಷ್ಟು ವಿಳಂಬದೊಂದಿಗೆ ಸಂಜೆ 4.08 ನಿಮಿಷಕ್ಕೆ ಕಲಬುರಗಿಯಿಂದ ಬೀದರ್–ಲಾತೂರ್–ಕುರ್ದವಾಡಿ ಮಾರ್ಗವಾಗಿ ಮುಂಬೈನತ್ತ ಪ್ರಯಾಣ ಬೆಳೆಸಿತು.

ಈ ನಡುವೆ ಬೆಂಗಳೂರಿನಿಂದ ದೆಹಲಿಯತ್ತ ಹೊರಟಿದ್ದ ಕರ್ನಾಟಕ (ಕೆಕೆ) ಎಕ್ಸ್‌ಪ್ರೆಸ್ ರೈಲು ಕಲಬುರಗಿ ನಿಲ್ದಾಣಕ್ಕೆ ಬಹುತೇಕ ನಿಗದಿತ ಸಮಯಕ್ಕೆ (ಬೆಳಿಗ್ಗೆ 5.30) ತಲುಪಿದರೂ, ಮುಂದಿನ ಮಾರ್ಗದ ಕ್ಲಿಯರೆನ್ಸ್ ಸಿಗದೇ ಅದು ಬೆಳಿಗ್ಗೆ 9 ಗಂಟೆ ತನಕವೂ ಕಲಬುರಗಿಯಲ್ಲೇ ನಿಂತಿತ್ತು. ಬಳಿಕ ಅದು ಗಾಣಗಾಪುರ ನಿಲ್ದಾಣಕ್ಕೆ ತೆರಳಿ ನಿಂತಿತ್ತು.

ಇದರಿಂದ ಅಂತರರಾಜ್ಯ ಪ್ರಯಾಣಿಕರು ಪರದಾಡಿದರು. ಪಾಕಣಿ–ಮುಂಡೇವಾಡಿ ನಡುವೆ ಪ್ರವಾಹ ತಗ್ಗಿದ ಬಳಿಕ ಕೆಕೆ ಎಕ್ಸ್‌ಪ್ರೆಸ್ ರೈಲು ಐದೂವರೆ ಗಂಟೆಗಳ ವಿಳಂಬದೊಂದಿಗೆ ಮಧ್ಯಾಹ್ನ 1.30ರ ಹೊತ್ತಿಗೆ ಪ್ರಯಾಣ ಆರಂಭಿಸಿ ಸಂಜೆ 5.02ಕ್ಕೆ ಸೊಲ್ಲಾಪುರ ತಲುಪಿತು.

ಎರಡು ರೈಲುಗಳ ಸಂಚಾರ ರದ್ದು: ಬುಧವಾರ ಬೆಳಿಗ್ಗೆ 6.40ಕ್ಕೆ ಕಲಬುರಗಿಯಿಂದ ಕೊಲ್ಹಾಪುರಕ್ಕೆ ಹೊರಡಬೇಕಿದ್ದ 'ಕಲಬುರಗಿ–ಕೊಲ್ಹಾಪುರ ಎಕ್ಸ್‌ಪ್ರೆಸ್' ರೈಲು ಹಾಗೂ ಕಲಬುರಗಿ–ದೌಂಡ್ ನಡುವಣ ವಿಶೇಷ ರೈಲು ಸೇವೆಯನ್ನು ಬುಧವಾರದ ಮಟ್ಟಿಗೆ ಎರಡೂ ಕಡೆಯಿಂದ ರದ್ದುಗೊಳಿಸಲಾಯಿತು. ಈ ರೈಲುಗಳಿಗೆ ಬುಕಿಂಗ್ ಮಾಡಿದ್ದ ಪ್ರಯಾಣಿಕರಿಗೆ ಟಿಕೆಟ್ ದರ ಮರಳಿಸಲಾಯಿತು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.




ಕಲಬುರಗಿ ನಿಲ್ದಾಣದಲ್ಲಿ ಚೆನ್ನೈ–ಮುಂಬೈ ಎಕ್ಸ್‌ಪ್ರೆಸ್ ರೈಲಿನ ಪ್ರಯಾಣಿಕರು ಕಾಲ ಕಳೆದರು

ಸಿಗದ ಮಾಹಿತಿ ಪರದಾಟ

ಕಲಬುರಗಿಯಲ್ಲಿ ನಿಂತಿದ್ದ ಚೆನ್ನೈ ಹಾಗೂ ಉದ್ಯಾನ್ ಎಕ್ಸ್‌ಪ್ರೆಸ್ ರೈಲಿನಲ್ಲಿದ್ದ ಪ್ರಯಾಣಿಕರಿಗೆ ವಿಳಂಬಕ್ಕೆ ಕಾರಣ ತಿಳಿಯದೇ ಪರದಾಡಿದರು. ಪ್ರಮುಖವಾಗಿ ಸೊಲ್ಲಾಪುರದತ್ತ ಹೊರಟ್ಟಿದ್ದ ಪ್ರಯಾಣಿಕರು ತೊಂದರೆ ಅನುಭವಿಸಿದರು.

'ಬೆಳಿಗ್ಗೆಯಿಂದ ರೈಲು ನಿಂತಲ್ಲೇ ನಿಂತಿದೆ. ಹಲವು ಗಂಟೆಗಳ ಕಾಲ ರೈಲು ಏಕೆ ನಿಂತಿದೆ ಎಂಬುದೇ ಗೊತ್ತಾಗಲಿಲ್ಲ. ಬಳಿಕ ಸಮಸ್ಯೆ ಕುರಿತು ತಿಳಿಯಿತು' ಎಂದು ಮುಂಬೈಗೆ ಹೊರಟ್ಟಿದ್ದ ಚೆನ್ನೈ ಎಕ್ಸ್‌ಪ್ರೆಸ್ ರೈಲಿನ ಪ್ರಯಾಣಿಕ ತುಷಾರ್ ಹೇಳಿದರು.

‘ಕಾಣೆಯಾದ ಮಕ್ಕಳ ಮಾಹಿತಿಗೆ ಪ್ರತ್ಯೇಕ ಪೋರ್ಟಲ್ ರಚಿಸಿ’



ನವದೆಹಲಿ (ಪಿಟಿಐ): ‘ಕಾಣೆಯಾದ ಮಕ್ಕಳ ಕುರಿತ ಮಾಹಿತಿ ಮತ್ತು ಈ ಪ್ರಕರಣಗಳ ಸಂಬಂಧ ತನಿಖೆ ಯಾವ ಹಂತದಲ್ಲಿದೆ ಎನ್ನುವ ಮಾಹಿತಿಗಳಿರುವ ಪ್ರತ್ಯೇಕ ಆನ್‌ಲೈನ್ ಪೋರ್ಟಲ್‌ವೊಂದನ್ನು ಗೃಹ ಸಚಿವಾಲಯದ ಅಡಿ ರೂಪಿಸಿ’ ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ಬುಧವಾರ ನೀಡಿದೆ.

‘ಕಾಣೆಯಾದ ಮಕ್ಕಳನ್ನು ಪತ್ತೆ ಮಾಡುವ ಜವಾಬ್ದಾರಿ ಹೊತ್ತ ಪೊಲೀಸರ ಮಧ್ಯೆ ದೇಶದಲ್ಲಿ ಸಮನ್ವಯದ ಕೊರತೆ ಇದೆ’ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹದೇವನ್ ಅವರ ಪೀಠವು ಅಭಿಪ್ರಾಯಪಟ್ಟಿತು.

‘ಪೋರ್ಟಲ್ ನೋಡಿಕೊಳ್ಳಲು ಪ್ರತೀ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರತ್ಯೇಕ ಅಧಿಕಾರಿ ಇರಬೇಕು. ನಾಪತ್ತೆ ದೂರುಗಳ ಉಸ್ತುವಾರಿಯನ್ನು ಈ ಅಧಿಕಾರಿಯೇ ನೋಡಿಕೊಳ್ಳಬೇಕು’ ಎಂದೂ ಪೀಠ ಹೇಳಿತು.


ಪ್ರಕರಣವೇನು?

‘ಕಾಣೆಯಾದ ಮಕ್ಕಳ ಕುರಿತು ಕೇಂದ್ರ ಸರ್ಕಾರ ನಿರ್ವಹಿಸುವ ‘ಖೋಯಾ/ಪಾಯಾ ಪೋರ್ಟಲ್’ನಲ್ಲಿ ಮಾಹಿತಿ ಇದೆ. ಆದರೂ ಈ ಪ್ರಕರಣಗಳ ತನಿಖೆಯಲ್ಲಿ ಪ್ರಗತಿ ಇಲ್ಲ. ಯಾವುದೇ ಪ್ರಕರಣದ ತನಿಖೆಯೂ ಮುಕ್ತಾಯಗೊಂಡಿಲ್ಲ’ ಎಂದು ‘ಗುಡಿಯಾ ಸ್ವಯಂ ಸೇವಾ ಸಂಘಟನೆ’ ಎಂಬ ಎನ್‌ಜಿಒ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿಯ ವಿಚಾರಣೆಯನ್ನು ಕೋರ್ಟ್ ನಡೆಸುತ್ತಿದೆ. ಉತ್ತರ ಪ್ರದೇಶದಲ್ಲಿ ಕಳೆದ ವರ್ಷ ದಾಖಲಾದ ಐದು ಪ್ರಕರಣಗಳ ಬಗ್ಗೆ ಅರ್ಜಿಯಲ್ಲಿ ಉಲ್ಲೇಖ ಮಾಡಲಾಗಿದೆ. ಜಾರ್ಖಂಡ್, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿನ ಮಾನವ ಕಳ್ಳಸಾಗಣೆ ಜಾಲಕ್ಕೆ ಸಂಬಂಧಿಸಿದ ಮಧ್ಯವರ್ತಿಗಳು ಈ ಮಕ್ಕಳ ಅಪಹರಣ ಮಾಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ದಾಖಲಾಗಿದೆ.

‘ಇ–ಪರಿಶೀಲನಾ ವಿಧಾನ’ ಜಾರಿ

ಹೆಸರು ಅಳಿಸಿ ಹಾಕುವುದರ ದುರುಪಯೋಗ ತಪ್ಪಿಸಲು ಚುನಾವಣಾ ಆಯೋಗ ಕ್ರಮ



ನವದೆಹಲಿ (ಪಿಟಿಐ): ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹಾಕುವ ಸೌಲಭ್ಯದ ದುರುಪಯೋಗ ತಪ್ಪಿಸಲು ಚುನಾವಣಾ ಆಯೋಗವು ಮೊಬೈಲ್ ಒಟಿಪಿ ಆಧಾರಿತ ‘ಇ-ಪರಿಶೀಲನಾ ವಿಧಾನ’ವನ್ನು ಜಾರಿಗೊಳಿಸಿದೆ.

ಪಟ್ಟಿಯಿಂದ ಹೆಸರು ತೆಗೆದುಹಾಕಲು ಅಥವಾ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವುದಕ್ಕೆ ಆಕ್ಷೇಪಣೆ ಸಲ್ಲಿಸುವ ವ್ಯಕ್ತಿಗಳ ಮೊಬೈಲ್ ಸಂಖ್ಯೆಗೆ ಇನ್ನು ಮುಂದೆ ‘ಒಟಿಪಿ’ ಬರಲಿದೆ. ಈ ಒಟಿಪಿ ನಮೂದಿಸಿದ ಬಳಿಕವೇ ಮುಂದಿನ ಪ್ರಕ್ರಿಯೆ ನಡೆಯಲಿದೆ.

ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹಾಕಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ, ಬೇರೆ ವ್ಯಕ್ತಿಯ ಹೆಸರು ಮತ್ತು ಮೊಬೈಲ್ ಸಂಖ್ಯೆ ದುರ್ಬಳಕೆ ಆಗುವ ಸಾಧ್ಯತೆ ಇತ್ತು. ಇದನ್ನು ತಪ್ಪಿಸಲು ‘ಇ-ಪರಿಶೀಲನಾ ವಿಧಾನ ಜಾರಿಗೆ ತರಲಾಗಿದೆ.

ಮತದಾರರ ಪಟ್ಟಿಯಲ್ಲಿ ಏನೇ ಪರಿಷ್ಕರಣೆ ಆಗುವುದಿದ್ದರೂ ಅದಕ್ಕೂ ಮುನ್ನ ಮತದಾರನ ಮೊಬೈಲ್‌ಗೆ ಒಟಿಪಿ ಬರುತ್ತದೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

‘ಮತದಾರರು ಸಂಬಂಧಿಸಿದ ಕ್ಷೇತ್ರದ ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ಅಳಿಸಿ ಹಾಕುವಂತೆ ಕೋರಿ ಆನ್‌ಲೈನ್ ಮೂಲಕ ನಮೂನೆ –7 ಸಲ್ಲಿಸಬಹುದು. ಆದರೆ, ನಮೂನೆ–7 ಸಲ್ಲಿಕೆಯಾದ ಕೂಡಲೇ ಸ್ವಯಂಚಾಲಿತವಾಗಿ ತಮ್ಮ ಹೆಸರು ಅಳಿಸಿ ಹೋಗುತ್ತದೆ ಎಂದರ್ಥವಲ್ಲ’ ಎಂದು ಆಯೋಗ ಸ್ಪಷ್ಟಪಡಿಸಿದೆ.

ಕರ್ನಾಟಕದ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 5,994 ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲು ಯತ್ನಿಸಲಾಗಿತ್ತು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಈಚೆಗೆ ಆರೋಪಿಸಿದ್ದರು. ಅದರ ಬೆನ್ನಲ್ಲೇ ಚುನಾವಣಾ ಆಯೋಗ ‘ಇ–ಪರಿಶೀಲನಾ ವಿಧಾನ’ ಜಾರಿಗೊಳಿಸಿದೆ.

‘ಜ್ಞಾನೇಶ್‌ಜೀ ನಾವು ಮತಕಳ್ಳತನ ಕಂಡುಹಿಡಿದೆವು. ಆನಂತರ ನಿಮಗೆ ಬೀಗ ಹಾಕಲು ನೆನಪಾಯಿತು. ಈಗ ನಾವು ಇದರ ಹಿಂದಿನ ಕಳ್ಳರನ್ನೂ ಹಿಡಿಯುತ್ತೇವೆ’ ಎಂದು ರಾಹುಲ್ ಗಾಂಧಿ ಪೋಸ್ಟ್ ಮಾಡಿದ್ದಾರೆ.


5,994 ಅರ್ಜಿ ತಿರಸ್ಕೃತ

‘ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಹೆಸರು ಅಳಿಸಿ ಹಾಕಲು 6,018 ಜನರು ಆನ್‌ಲೈನ್ ಮೂಲಕ ನಮೂನೆ–7 ಸಲ್ಲಿಸಿದ್ದರು. ಪರಿಶೀಲಿಸಿದಾಗ ಇದರಲ್ಲಿ 24 ಅರ್ಜಿಗಳು ಮಾತ್ರ ನೈಜವಾಗಿದ್ದವು. ಉಳಿದ 5,994 ಅರ್ಜಿಗಳು ತಪ್ಪಾಗಿದ್ದು, ಅವುಗಳನ್ನು ತಿರಸ್ಕರಿಸಲಾಯಿತು’ ಎಂದು ಚುನಾವಣಾ ಆಯೋಗ ಹೇಳಿದೆ.

‘ಇ–ಪರಿಶೀಲನಾ ವಿಧಾನ‘ವನ್ನು ನಾವು ವಾರದ ಹಿಂದೆಯೇ ಜಾರಿಗೊಳಿಸಿದ್ದೇವೆ. ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲು ಯತ್ನಿಸಲಾಗಿತ್ತು ಎಂಬ ಆರೋಪಕ್ಕೆ ಚುನಾವಣಾ ಆಯೊಗದ ಪ್ರತಿಕ್ರಿಯೆ ಇದಲ್ಲ’ ಎಂದು ಅಧಿಕಾರಿಗಳು ಹೇಳಿದ್ದಾರೆ.

> ನಾವು ಮತಕಳ್ಳತನದ ವಿಷಯ ಪ್ರಸ್ತಾಪಿಸಿದ ನಂತರವಷ್ಟೇ ಚುನಾವಣಾ ಆಯೋಗ ಇದಕ್ಕೆ ಬೀಗ ಹಾಕಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಎಸ್‌ಐಟಿಗೆ ಯಾವಾಗ ಆಳಂದ ಕ್ಷೇತ್ರದ ದಾಖಲೆಗಳನ್ನು ಹಸ್ತಾಂತರಿಸುತ್ತಾರೆ?
> **ರಾಹುಲ್ ಗಾಂಧಿ,** ಲೋಕಸಭೆ ವಿರೋಧ ಪಕ್ಷದ ನಾಯಕ, ‘ಎಕ್ಸ್’ನಲ್ಲಿ ಮಾಡಿರುವ ಪೋಸ್ಟ್

ಮತ್ತೆ ವಿದೇಶದಿಂದ ಭಾರತಕ್ಕೆ ಚೀತಾಗಳು?



ನವದೆಹಲಿ (ಪಿಟಿಐ): ಮತ್ತೊಮ್ಮೆ ಚೀತಾಗಳನ್ನು ದೇಶಕ್ಕೆ ತರುವ ವಿಚಾರವಾಗಿ ಆಫ್ರಿಕಾದ ಕೆಲವು ದೇಶಗಳೊಂದಿಗೆ ಭಾರತ ಮಾತುಕತೆ ನಡೆಸುತ್ತಿದೆ. ಬೋಟ್ಸ್‌ವಾನಾದಿಂದ ಡಿಸೆಂಬರ್‌ನಲ್ಲಿ 8–10 ಚೀತಾಗಳನ್ನು ತರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಅಳಿದುಹೋಗಿದ್ದ ಚೀತಾಗಳನ್ನು ಭಾರತದಲ್ಲಿ ಮರುಪರಿಚಯಿಸುವ ಮಹತ್ವದ ಯೋಜನೆಯು ‘ಅತ್ಯುತ್ತಮ ಯಶಸ್ಸು’ ಕಂಡಿದೆ. ಆರಂಭಿಕ ಸವಾಲುಗಳನ್ನು ಮೀರಿ ಯೋಜನೆಯು ಯಶಸ್ವಿಯಾಗಿದೆ ಎಂದು ‘ಪ್ರಾಜೆಕ್ಟ್ ಚೀತಾ’ಕ್ಕೆ ಸಂಬಂಧಿಸಿದ ಅಧಿಕಾರಿಗಳು ತಿಳಿಸಿದರು.

ಸದ್ಯ ಭಾರತದಲ್ಲಿಯೇ ಜನಿಸಿರುವ 16 ಚೀತಾಗಳು ಸೇರಿ ಒಟ್ಟು 27 ಚೀತಾಗಳಿವೆ ಎಂದು ಮೂಲಗಳು ತಿಳಿಸಿವೆ.

ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾ ಮರಿಗಳ ಬದುಕುಳಿಯುವಿಕೆ ದರವು ಶೇಕಡ 61ರಷ್ಟಿದೆ. ಇದಕ್ಕೆ ಪ್ರತಿಯಾಗಿ ಜಾಗತಿಕವಾಗಿ ಚೀತಾ ಮರಿಗಳ ಬದುಕುಳಿಯುವಿಕೆ ದರವು ಶೇ 40ರಷ್ಟಿದೆ ಎಂದು ತಿಳಿಸಿವೆ.

‘ಮಸೀದಿ ಕಿತ್ತುಕೊಳ್ಳಲು ವಕ್ಫ್ ಮಸೂದೆ’



ಅಸಾದುದ್ದೀನ್ ಒವೈಸಿ

ಕಿಶನ್‌ಗಂಜ್ (ಬಿಹಾರ): ಮುಸ್ಲಿಮರ ಮಸೀದಿ, ಪವಿತ್ರ ಸ್ಥಳಗಳನ್ನು ಕಿತ್ತುಕೊಳ್ಳಲಿಕ್ಕಾಗಿಯೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ವಕ್ಫ್ (ತಿದ್ದುಪಡಿ) ಕಾಯ್ದೆ ಜಾರಿಗೊಳಿಸಿದೆ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಬುಧವಾರ ಕಿಡಿಕಾರಿದರು.

ಬಿಹಾರದ ಕಿಶನ್‌ಗಂಜ್ ಜಿಲ್ಲೆಯ ಕೋಚಾಧಾಮನ್ ವಿಧಾನಸಭಾ ಕ್ಷೇತ್ರದಲ್ಲಿ ಸೀಮಾಂಚಲ ನ್ಯಾಯಯಾತ್ರೆಗೆ ಚಾಲನೆ ನೀಡಿದ ಅವರು, ‘ಸದುದ್ದೇಶದಿಂದ ವಕ್ಫ್ ಕಾಯ್ದೆ ಜಾರಿಗೊಳಿಸಿಲ್ಲ. ಮುಸ್ಲಿಮರ ಮಸೀದಿ, ಈದ್ಗಾ ಮೈದಾನ, ಖಬರ್‌ಸ್ತಾನಗಳು ಯಾರೊಬ್ಬರ ಸ್ವತ್ತಲ್ಲ. ಅವೆಲ್ಲವೂ ಅಲ್ಲಾಹುವಿಗೆ ಸೇರಿದವು’ ಎಂದರು.

‘ಮೋದಿ ಅವರ ಅಪವಿತ್ರ ಉದ್ದೇಶವು ದೇವರ ಇಚ್ಛೆಯಿಂದ ಎಂದಿಗೂ ಈಡೇರಲ್ಲ. ಮುಸ್ಲಿಮರು ತಮ್ಮ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸುವುದನ್ನು ಜಗತ್ತು ಅಸ್ತಿತ್ವದಲ್ಲಿರುವವರೆಗೂ ಮುಂದುವರಿಸುತ್ತಾರೆ. ಅಲ್ಲಾಹುವನ್ನು ನಂಬಿದವರು ಪವಿತ್ರವೆಂದು ಭಾವಿಸುವ ಸ್ಥಳಗಳು ಎಂದೆಂದಿಗೂ ಬಿಜೆಪಿ- ಆರ್‌ಎಸ್‌ಎಸ್ ವಶವಾಗಲ್ಲ’ ಎಂದು ಅವರು ಹೇಳಿದರು.

‘ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಬಳಿಕ ಮುಸ್ಲಿಮರು ಜಾತ್ಯತೀತ ಎಂದು ಹೇಳಿಕೊಂಡ ಪಕ್ಷಗಳನ್ನೆಲ್ಲಾ ಬೆಂಬಲಿಸಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯಲಿಕ್ಕಾಗಿ ಮತ ಹಾಕಿದ್ದಾರೆ. ಆದರೆ ಈ ಹೊರೆಯನ್ನು ಕೂಲಿಗಳಂತೆ ಇನ್ನಷ್ಟು ದಿನ ನಮ್ಮ ಹೆಗಲುಗಳ ಮೇಲೆ ಹೊರಲು ಸಾಧ್ಯವಿಲ್ಲ ಎಂಬುದನ್ನು ಅರಿತುಕೊಳ್ಳುವ ಸಮಯ ಬಂದಿದೆ’ ಎಂದರು.

‘ನಮ್ಮ ಯೋಗಕ್ಷೇಮಕ್ಕೆ ಅಗತ್ಯವಾದದ್ದನ್ನು ನಾವು ಮಾಡಬೇಕಿದೆ. ಕೆಲವು ಪಕ್ಷಗಳು ಅಧಿಕಾರ ಅನುಭವಿಸಲು ಸಹಾಯ ಮಾಡಲು ಇನ್ನು ಮುಂದೆ ನಮ್ಮ ಆಕಾಂಕ್ಷೆಗಳನ್ನು ತ್ಯಾಗ ಮಾಡುವುದಿಲ್ಲ’ ಎಂದು ಆರ್‌ಜೆಡಿ, ಕಾಂಗ್ರೆಸ್, ಎಡಪಕ್ಷಗಳ ಹೆಸರನ್ನು ಪ್ರಸ್ತಾಪಿಸದೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ದಂತೇವಾಡ: 71 ನಕ್ಸಲರ ಶರಣಾಗತಿ

ದಂತೇವಾಡ (ಪಿಟಿಐ): 21 ಮಹಿಳೆಯರು ಸೇರಿದಂತೆ ಒಟ್ಟು 71 ನಕ್ಸಲರು ಛತ್ತೀಸಗಢದ ದಂತೇವಾಡ ಜಿಲ್ಲಾಡಳಿತದ ಮುಂದೆ ಬುಧವಾರ ಶರಣಾಗಿದ್ದಾರೆ.

ಶರಣಾದವರಲ್ಲಿ 17 ವರ್ಷದ ಬಾಲಕ, 16 ಹಾಗೂ 17 ವರ್ಷದ ಇಬ್ಬರು ಬಾಲಕಿಯರಿದ್ದಾರೆ ಎಂದು ದಂತೇವಾಡ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರಾಯ್ ತಿಳಿಸಿದ್ದಾರೆ.



ಶರಣಾದ ಬಮನ್ ಮಡ್ಕಮ್ (30), ಮಂಕಿ ಅಲಿಯಾಸ್ ಸಮಿಲಾ ಮಾಂಡವೀಯ (20) ಅವರ ಸುಳಿವು ನೀಡಿದವರಿಗೆ ತಲಾ ₹8 ಲಕ್ಷ, ಶಮಿಲಾ ಅಲಿಯಾಸ್ ಸೋಮ್ಲಿ ಕವಾಸಿ (25), ಗಂಗಿ ಅಲಿಯಾಸ್ ರೊಹ್ನಿ ಬಾರ್ಸೆ (25), ದೇವ್ ಅಲಿಯಾಸ್ ಕವಿತಾ ಮಾಡ್ವಿ (25) ಮತ್ತು ಸಂತೋಷ್ ಮಾಂಡವಿ (30) ಅವರ ಸುಳಿವು ನೀಡಿದವರಿಗೆ ತಲಾ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಅವರು ಹೇಳಿದರು.

ಭದ್ರತಾ ಸಿಬ್ಬಂದಿ ಮೇಲೆ ನಡೆಸಿದ ಹಲವು ದಾಳಿಗಳಲ್ಲಿ ಬಮನ್, ಶಮಿಲಾ, ಗಂಗಿ, ದೇವ್ ಭಾಗಿಯಾಗಿದ್ದಾರೆ. ಉಳಿದವರು ರಸ್ತೆ ಸಂಪರ್ಕ ಕಡಿತ, ಮರ ಕಡಿಯುವಿಕೆ, ನಕ್ಸಲ್ ಬ್ಯಾನರ್, ಪೋಸ್ಟರ್, ಕರಪತ್ರಗಳನ್ನು ಹಂಚಿದ ಆರೋಪದಲ್ಲಿ ಭಾಗಿಯಾಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜುಬೀನ್ ಸಾವು ಎಸ್‌ಐಟಿ ರಚನೆಗೆ ಸಿ.ಎಂ ಆದೇಶ

ಗುವಾಹಟಿ (ಪಿಟಿಐ): ಜನಪ್ರಿಯ ಗಾಯಕ ಜುಬೀನ್ ಗರ್ಗ್ ಅವರ ಸಾವಿನ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಆದೇಶ ನೀಡಿದ್ದಾರೆ.

ಸಿಂಗಪುರದಲ್ಲಿ ನಡೆದಿದ್ದ ಈಶಾನ್ಯ ಭಾರತ ಉತ್ಸವದ ಆಯೋಜಕರ ವಿರುದ್ಧ ಅಸ್ಸಾಂನಲ್ಲಿ 60ಕ್ಕೂ ಅಧಿಕ ದೂರುಗಳು ದಾಖಲಾಗಿರುವ ಕಾರಣ ಪ್ರಕರಣದ ಬಗ್ಗೆ ಸಿಐಡಿ ತನಿಖೆ ನಡೆಸುತ್ತಿದೆ. ಈ ನಡುವೆ ಎಸ್‌ಐಟಿ ರಚನೆಗೆ ಆದೇಶಿಸಿರುವ ಬಗ್ಗೆ ಬಿಸ್ವ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಈಶಾನ್ಯ ಹಬ್ಬ’ ಆಯೋಜಕರಿಗೆ ಅಸ್ಸಾಂನಲ್ಲಿ ನಿಷೇಧ: ‘ಈಶಾನ್ಯ ಹಬ್ಬ’ ಕಾರ್ಯಕ್ರಮ ಆಯೋಜಿಸುವ ಮುಖ್ಯ ಆಯೋಜಕ ಶ್ಯಾಮ್‌ಕಾನು ಮಹಂತ, ಮತ್ತವರ ಕಂಪನಿಯು ರಾಜ್ಯದಲ್ಲಿ ಯಾವುದೇ ಕಾರ್ಯಕ್ರಮ ಆಯೋಜಿಸುವುದಿಕ್ಕೆ ನಿಷೇಧ ಹೇರಿ ಅಸ್ಸಾಂ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ಕಾರ್ಯಕ್ರಮಗಳನ್ನು ಆಯೋಜಿಸಲು ಮಹಂತ ಅವರ ಕಂಪನಿಗೆ ಅಸ್ಸಾಂ ಸರ್ಕಾರ ಹಲವು ಅನುದಾನಗಳನ್ನು ನೀಡುತ್ತಿತ್ತು. ಇದನ್ನು ಕಡಿತ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ.

ಇಂದೋರ್: ಪ್ರಯಾಣಿಕನಿಗೆ ಇಲಿ ಕಡಿತ



ಇಂದೋರ್ (ಪಿಟಿಐ): ಇಂದೋರ್‌ನಿಂದ ಬೆಂಗಳೂರಿಗೆ ಹೊರಟಿದ್ದ ವ್ಯಕ್ತಿಯೊಬ್ಬರಿಗೆ ಇಂದೋರ್ ವಿಮಾನ ನಿಲ್ದಾಣದ ನಿರ್ಗಮನ ಪ್ರದೇಶದ ಬಳಿ ಮಂಗಳವಾರ ಇಲಿ ಕಚ್ಚಿದ್ದು, ಅವರು ಗಾಯಗೊಂಡಿದ್ದಾರೆ.

ವ್ಯಕ್ತಿಗೆ ವಿಮಾನ ನಿಲ್ದಾಣದ ವೈದ್ಯರು ಚಿಕಿತ್ಸೆ ನೀಡಿದ್ದಾರೆ. ಘಟನೆ ಬಳಿಕ ವಿಮಾನ ನಿಲ್ದಾಣ ಆವರಣದಲ್ಲಿ ಮತ್ತೊಮ್ಮೆ ಕ್ರಿಮಿನಾಶಕ ಸಿಂಪಡಣೆ ಮಾಡಲಾಗಿದೆ ಎಂದು ದೇವಿ ಅಹಲ್ಯಾಬಾಯಿ ಹೋಳ್ಕರ್ ವಿಮಾನ ನಿಲ್ದಾಣದ ನಿರ್ದೇಶಕ ವಿಪಿನ್‌ಕಾಂತ್ ಸೇಠ್ ಅವರು ಬುಧವಾರ ತಿಳಿಸಿದ್ದಾರೆ.

ಇಂದೋರ್‌ನ ಆಸ್ಪತ್ರೆಯೊಂದರಲ್ಲಿ ಇಲಿಗಳು ಕಚ್ಚಿದ್ದರಿಂದ ಎರಡು ನವಜಾತ ಹೆಣ್ಣುಶಿಶುಗಳು ಮೃತಪಟ್ಟಿದ್ದ ಘಟನೆ ಇತ್ತೀಚೆಗೆ ನಡೆದಿತ್ತು.

ಇ.ಡಿ ವಿಚಾರಣೆಗೆ ನಟ ಸೋನು



ಸೋನು ಸೂದ್

ನವದೆಹಲಿ (ಪಿಟಿಐ): ಆನ್‌ಲೈನ್ ಬೆಟ್ಟಿಂಗ್ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ, ನಟ ಸೋನು ಸೂದ್ ಅವರು ವಿಚಾರಣೆಗಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಹಾಜರಾದರು.

ಕೇಂದ್ರ ದೆಹಲಿಯಲ್ಲಿರುವ ಇ.ಡಿ ಕಚೇರಿಗೆ ಬುಧವಾರ ಮಧ್ಯಾಹ್ನ 12 ಗಂಟೆ ಆಸುಪಾಸಿನಲ್ಲಿ ವಿಚಾರಣೆಗಾಗಿ ಸೋನು ಬಂದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1Xಬೆಟ್ ಆ್ಯಪ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಅವರನ್ನು ಪ್ರಶ್ನಿಸಿದ ಇ.ಡಿ.ಯು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಅವರ ಹೇಳಿಕೆ ದಾಖಲಿಸಿಕೊಂಡಿದೆ ಎಂದಿದ್ದಾರೆ.

26ಕ್ಕೆ ಮಿಗ್–21ಗೆ ವಿದಾಯ

ಚಂಡೀಗಢ (ಪಿಟಿಐ): ಭಾರತದ ಕೀರ್ತಿಯನ್ನು ಬಾನೆತ್ತರದಲ್ಲಿ ಹಾರಿಸಿದ, ದೇಶದ ವಾಯುಪಡೆಯ ಸಾಮರ್ಥ್ಯವನ್ನು ಜಗತ್ತಿಗೆ ಸಾರಿದ ರಷ್ಯಾ ನಿರ್ಮಿತ ಮಿಗ್–21 ಯುದ್ಧ ವಿಮಾನವು ಇದೇ 26ರಿಂದ ನಿವೃತ್ತಿ ಪಡೆಯಲಿದೆ.

ಚಂಡೀಗಢದ ವಾಯುನೆಲೆಯಲ್ಲಿ 23 ಸ್ಕ್ವಾಡ್ರನ್‌ಗೆ ಸೇರಿದ ‘ಪ್ಯಾಂಥರ್ಸ್’ ಹೆಸರಿನ ಮಿಗ್–21 ಯುದ್ಧ ವಿಮಾನಕ್ಕೆ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಗಿದೆ.

ರಕ್ಷಣಾ ಸಚಿವ ರಾಜನಾಥ ಸಿಂಗ್, ಸೇನಾಪಡೆಗಳ ಮುಖ್ಯಸ್ಥ (ಸಿಡಿಎಸ್) ಅನಿಲ್ ಚೌಹಾಣ್, ಸೇನೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್, ನೌಕಾಪಡೆಯ ಮುಖಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಮತ್ತಿತರರು ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಭಾರತೀಯ ವಾಯುಪಡೆಯ ವಾಯುನೆಲೆಯಲ್ಲಿ ಬುಧವಾರ ಸಮವಸ್ತ್ರ ಧರಿಸಿ ತಾಲೀಮು ನಡೆಸಲಾಯಿತು.

ಆರು ದಶಕ ವಾಯುಪಡೆಯ ಬೆನ್ನೆಲುಬಾಗಿದ್ದ ಮಿಗ್–21 ಯುದ್ಧ ವಿಮಾನಗಳು ಪಾಕಿಸ್ತಾನದೊಂದಿಗಿನ 1965 ಮತ್ತು 1971ರ ಯುದ್ಧದಲ್ಲಿ ಹಾಗೂ 1999ರ ಕಾರ್ಗಿಲ್ ಯುದ್ಧದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದವು. 2019ರ ಬಾಲಾಕೋಟ್ ವಾಯುದಾಳಿಯಲ್ಲಿಯೂ ಮಹತ್ವದ ಮಾತ್ರ ವಹಿಸಿದ್ದವು.

ಜಮ್ಮು–ಕಾಶ್ಮೀರ: ರಾಜ್ಯಸಭಾ ಚುನಾವಣೆ ಅ.24ಕ್ಕೆ

ನವದೆಹಲಿ (ಪಿಟಿಐ): 2021ರಿಂದ ತೆರವಾಗಿರುವ ಜಮ್ಮು ಮತ್ತು ಕಾಶ್ಮೀರದ ನಾಲ್ಕು ರಾಜ್ಯಸಭಾ ಸ್ಥಾನಗಳನ್ನು ಭರ್ತಿ ಮಾಡಲು ದ್ವೈವಾರ್ಷಿಕ ಚುನಾವಣೆಗಳು ಅಕ್ಟೋಬರ್ 24ರಂದು ನಡೆಯಲಿವೆ ಎಂದು ಕೇಂದ್ರ ಚುನಾವಣಾ ಆಯೋಗ ಬುಧವಾರ ತಿಳಿಸಿದೆ.

ಪಂಜಾಬ್‌ನ ಎಎಪಿ ಸದಸ್ಯ ಸಂಜೀವ್ ಅರೋರ ಅವರ ರಾಜೀನಾಮೆಯಿಂದ ತೆರವಾದ ರಾಜ್ಯಸಭಾ ಸ್ಥಾನಕ್ಕೆ ಕೂಡಾ ಅಕ್ಟೋಬರ್ 24ರಂದು ಉಪ ಚುನಾವಣೆ ನಡೆಯಲಿದೆ.

ಪಂಜಾಬ್ ವಿಧಾನಸಭೆಗೆ ಆಯ್ಕೆಯಾದ ನಂತರ ಅವರು ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಇಲ್ಲದಿದ್ದರೆ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ 2028ರ ಏಪ್ರಿಲ್ 9ರಂದು ಕೊನೆಗೊಳ್ಳಬೇಕಿತ್ತು.

ಮತದಾನ ಮುಗಿದ ಒಂದು ಗಂಟೆಯ ನಂತರ ಮತ ಎಣಿಕೆ ನಡೆಯಲಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ನಾವು ನಂಬುವ ತತ್ತ್ವಗಳಿಗಿಂತ, ದೇವರಿಗಿಂತ, ನಾವು ಬದುಕುವ ರೀತಿ ಮುಖ್ಯ.

-ಎ.ಎನ್. ಮೂರ್ತಿರಾವ್

ಸಂಪಾದಕೀಯ

ಸರ್ಕಾರದ ಮಹತ್ವಾಕಾಂಕ್ಷೆಯ ಸಮೀಕ್ಷೆ ತರಾತುರಿ ಬೇಡ, ಗೊಂದಲ ಬಗೆಹರಿಸಿ

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ರಾಜ್ಯದಲ್ಲಿ ನಡೆಯುತ್ತಿರುವ ಬಹು ನಿರೀಕ್ಷಿತ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ಆರಂಭದಲ್ಲೇ ಹಲವು ತೊಡಕುಗಳನ್ನು ಎದುರಿಸಿದೆ. ಆಡಳಿತಾತ್ಮಕ ತೊಡಕುಗಳು ಹಾಗೂ ತರಬೇತಿಯ ಕೊರತೆ ಸೇರಿದಂತೆ, ರಾಜ್ಯದ ಬಹುತೇಕ ಕಡೆಗಳಲ್ಲಿ ಸಮೀಕ್ಷೆಯಲ್ಲಿ ತೊಡಗಿರುವ ಸಮೀಕ್ಷಕರು ಬೇರೆ ಬೇರೆ ರೂಪದ ಸಮಸ್ಯೆಗಳನ್ನು ಎದುರಿಸಿದ್ದಾರೆ. ಸಮೀಕ್ಷೆ ನಡೆಸಲು ಅಗತ್ಯವಾದ ಆ್ಯಪ್ ಡೌನ್‌ಲೋಡ್ ಆಗದಿರುವುದು, ಸರ್ವರ್ ಸ್ಥಗಿತಗೊಳ್ಳುವಿಕೆ, 'ಒಟಿಪಿ' ಬಾರದಿರುವುದು ಸೇರಿದಂತೆ ಹಲವು ತೊಡರುಗಳು ಸಮೀಕ್ಷೆ ಸಮಯದಲ್ಲಿ ಕಾಣಿಸಿಕೊಂಡಿವೆ. ಕೆಲವೆಡೆ ಸಮೀಕ್ಷೆ ಇನ್ನೂ ಆರಂಭಗೊಂಡಿಲ್ಲ. ಇವೆಲ್ಲ ಸಮಸ್ಯೆಗಳು ಮಹತ್ವದ ಸಮೀಕ್ಷೆ ನಡೆಸಲು ಅಗತ್ಯವಾದ ಕಾರ್ಯಯೋಜನೆಯ ದೌರ್ಬಲ್ಯ ಹಾಗೂ ಪೂರ್ವಸಿದ್ಧತೆಯಲ್ಲಿನ ಕೊರತೆಯತ್ತ ಬೆರಳುಮಾಡುವಂತಿವೆ. ಸುಮಾರು ಎರಡು ಲಕ್ಷ ಸಮೀಕ್ಷಕರನ್ನು ಬಳಸಿಕೊಂಡು, ಎರಡು ಕೋಟಿ ಕುಟುಂಬಗಳ ಸಮೀಕ್ಷೆ ನಡೆಸುವ ಬೃಹತ್ ಯೋಜನೆಯನ್ನು ಸರ್ಕಾರ ತರಾತುರಿಯಲ್ಲಿ ಆರಂಭಿಸಿದಂತಿದೆ. ಇಂಥದೊಂದು ಸಮೀಕ್ಷೆ ಆರಂಭಿಸುವ ಮುನ್ನ ಆ್ಯಪ್ ಹಾಗೂ ಪೂರಕ ವ್ಯವಸ್ಥೆಯನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕ ಪರಿಶೀಲನೆಗೆ ಒಳಪಡಿಸಬೇಕಾಗಿತ್ತು. ಸಮೀಕ್ಷೆಯ ಆರಂಭದಲ್ಲಿ ಸಮೀಕ್ಷಕರು ಎದುರಿಸಿರುವ ಗೊಂದಲಗಳನ್ನು ಗಮನಿಸಿದರೆ, ಅವರಿಗೆ ತರಬೇತಿಯ ಕೊರತೆ ಇರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನಡೆಯುವ ಸಮೀಕ್ಷೆಯನ್ನು ಸುರಳೀತವಾಗಿ ಆರಂಭಗೊಳ್ಳುವಂತೆ ಸರ್ಕಾರ ಎಲ್ಲ ರೀತಿಯ ಎಚ್ಚರಿಕೆ ವಹಿಸಬೇಕಾಗಿತ್ತು.



ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ತರಾತುರಿಯಲ್ಲಿ ನಡೆಸುವುದರಿಂದ ಸಮಸ್ಯೆಗಳೇ ಹೆಚ್ಚು, ಸರ್ಕಾರ ಗೊಂದಲಗಳನ್ನು ಬಗೆಹರಿಸಿ, ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಲಿ.

ತಾಂತ್ರಿಕ ಅಡಚಣೆಯ ಜೊತೆಗೆ, ಸಮೀಕ್ಷೆಯ ಬಗ್ಗೆ ಸಾರ್ವಜನಿಕರಿಗೆ ಇರುವ ತಿಳಿವಳಿಕೆಯ ಕೊರತೆಯೂ ಗಂಭೀರ ಸಮಸ್ಯೆಯಾಗಿದೆ. ಪುನರಾವರ್ತಿತ ಸ್ಪಷ್ಟೀಕರಣಗಳ ನಡುವೆಯೂ, ಈ ಸಮೀಕ್ಷೆಯನ್ನು 'ಜಾತಿಗಣತಿ' ಎಂದೇ ಹಲವರು ನಂಬಿದ್ದಾರೆ. ಸಮೀಕ್ಷೆಯು ಒಳಗೊಂಡಿರುವ ಬಹುಮುಖಿ ಉದ್ದೇಶಗಳಲ್ಲಿ ಜಾತಿ ಒಂದು ಉಪ ಉತ್ಪನ್ನವಷ್ಟೇ ಆಗಿದ್ದು, ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ಗುರ್ತಿಸಿ, ಅರ್ಹರಿಗೆ ಸವಲತ್ತುಗಳನ್ನು ತಲುಪಿಸುವುದು ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ. ಆದರೆ, ಈ ಉದ್ದೇಶವನ್ನು ಸಾರ್ವಜನಿಕರಿಗೆ ಮನವರಿಕೆ ಮಾಡುವ ವ್ಯಾಪಕ ಪ್ರಯತ್ನಗಳು ನಡೆದಿಲ್ಲ. 'ಧರ್ಮ'ದ ಜಾಗದಲ್ಲಿ ಏನನ್ನು ಬರೆಸಬೇಕು ಎನ್ನುವುದರ ಬಗ್ಗೆಯೇ ಲಿಂಗಾಯತ, ಒಕ್ಕಲಿಗ, ಕೊಡವರು ಸೇರಿದಂತೆ ಕೆಲವು ಸಮುದಾಯಗಳಲ್ಲಿ ಗೊಂದಲಗಳಿವೆ. ಇಂಥ ಗೊಂದಲಗಳು ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆಯೂ ಇವೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯಕ್ ಅವರು, ಧರ್ಮವನ್ನು ಒಂದು ಅಂಶವನ್ನಾಗಿ ಪರಿಗಣಿಸುವುದಿಲ್ಲ ಎಂದು ಸ್ಪಷ್ಟೀಕರಣ ನೀಡಿದ ನಂತರವೂ ಗೊಂದಲಗಳು ಮುಂದುವರಿದಿವೆ.

ಸಮೀಕ್ಷೆಯ ಉದ್ದೇಶವನ್ನು ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಆಗಿರುವ ವೈಫಲ್ಯವನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಶಾಸಕರು ಹಾಗೂ ಸ್ಥಳೀಯ ಮುಖಂಡರಲ್ಲಿ ಸಮೀಕ್ಷೆಯ ಉದ್ದೇಶಗಳ ಬಗ್ಗೆ ಅರಿವು ಮೂಡಿಸುವುದು ಆಗಬೇಕಾಗಿದ್ದ ಮೊದಲ ಕೆಲಸ. ಅದಕ್ಕೆ ಬದಲಾಗಿ, ರಾಜಕೀಯ ಹಿತಾಸಕ್ತಿಗಳು ಹಾಗೂ ಜಾತಿಗಳ ನಡುವಿನ ಪೈಪೋಟಿಯ ಸಂಕಥನಗಳು ತಪ್ಪುಗ್ರಹಿಕೆಗಳಿಗೆ ಅಗತ್ಯವಾದ ಭೂಮಿಕೆಯನ್ನು ಸೃಷ್ಟಿಸಿವೆ. ಈ ತಪ್ಪುಗ್ರಹಿಕೆಗಳನ್ನು ನಿವಾರಿಸಲು ಪತ್ರಿಕೆಗಳೂ ಒಳಗೊಂಡಂತೆ ಎಲ್ಲ ಮಾಧ್ಯಮಗಳನ್ನು ಆಂದೋಲನದ ರೂಪದಲ್ಲಿ ಸರ್ಕಾರ ಬಳಸಿಕೊಳ್ಳಬೇಕಾಗಿದೆ ಹಾಗೂ ಸಮುದಾಯಗಳನ್ನು ನೇರವಾಗಿ ಸಂಪರ್ಕಿಸಬೇಕಾಗಿದೆ. ಜಯಪ್ರಕಾಶ್ ಹೆಗ್ಡೆ ವರದಿಯನ್ನು ವಿರೋಧಿಸಿದ್ದ ಪ್ರಬಲ ಜಾತಿಗಳು ಈಗಿನ ಸಮೀಕ್ಷೆಯನ್ನೂ ಹಳಿತಪ್ಪಿಸಲು ಪ್ರಯತ್ನಿಸುತ್ತಿವೆ. ಅವರ ಪ್ರತಿಭಟನೆಗಳು ಸಾಂದರ್ಭಿಕವಾಗಿರದೆ, ಸಾಮಾಜಿಕ ಹಾಗೂ ರಾಜಕೀಯ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಪ್ರಯತ್ನಗಳಾಗಿವೆ. ಈ ಒತ್ತಡಗಳಿಗೆ ಮಣಿದು, ಅಂಚಿನ ಸಮುದಾಯಗಳ ಹಿತಾಸಕ್ತಿಯನ್ನು ಸರ್ಕಾರ ಬಲಿಕೊಡಬಾರದು. ಸಮೀಕ್ಷೆಗಾಗಿ ಈಗಾಗಲೇ ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಿರುವ ಸರ್ಕಾರ, ಸಮೀಕ್ಷೆಯ ಕಾಲಮಿತಿಯನ್ನು ವಿಸ್ತರಿಸಬೇಕು, ತಿದ್ದುಪಡಿಗಳಿಗೆ ಅವಕಾಶ ಕಲ್ಪಿಸಬೇಕು ಹಾಗೂ ಇಡೀ ಪ್ರಕ್ರಿಯೆ ವೈಜ್ಞಾನಿಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಈ ಸಮೀಕ್ಷೆ ಸಾಮಾಜಿಕ ನ್ಯಾಯದ ಉದ್ದೇಶವನ್ನು ಒಳಗೊಂಡಿದೆಯೇ ಹೊರತು ಪ್ರತಿಷ್ಠೆಯನ್ನಲ್ಲ. ತರಾತುರಿಯಲ್ಲಿ ಸಮೀಕ್ಷೆ ನಡೆಸುವುದರ ಬದಲಾಗಿ, ತಪ್ಪುಗಳನ್ನು ಸರಿಪಡಿಸಿಕೊಂಡು ಸ್ಪಷ್ಟತೆ ಮತ್ತು ದಿಟ್ಟತನದಿಂದ ಸರ್ಕಾರ ಮುಂದುವರಿಯಬೇಕಾಗಿದೆ. ಆಗಷ್ಟೇ ಸಮೀಕ್ಷೆಯ ನೈಜ ಉದ್ದೇಶ ಈಡೇರುವುದು ಸಾಧ್ಯ.

ಪತ್ರಿಕೋದ್ಯಮ: ಜಾಗತಿಕ ಪಾಠಗಳು



ವಿಶ್ಲೇಷಣೆ

ಮಾರ್ಟಿನ್ ಬೇರನ್

ಅರ್ಧ ಶತಮಾನದ ಪತ್ರಕರ್ತ ಜೀವನದಲ್ಲಿ ಪ್ರತಿವರ್ಷವೂ ನಾನು ಅಮೆರಿಕದಲ್ಲಿ ಮುಕ್ತ ಮತ್ತು ಸ್ವತಂತ್ರ ಪತ್ರಿಕೋದ್ಯಮವನ್ನು ಮಾತ್ರವೇ ಕಂಡಿದ್ದೇನೆ. ನಾನು ವೃತ್ತಿ ಆರಂಭಿಸಿದ್ದು 1970ರಲ್ಲಿ; ಮಾಧ್ಯಮವು ಪ್ರಜಾಪ್ರಭುತ್ವಕ್ಕೆ ಹೇಗೆ ಪೂರಕವಾಗಿತ್ತು ಎನ್ನುವುದನ್ನು ಅಮೆರಿಕದ ಜನರು ಆಗ ಸ್ಪಷ್ಟವಾಗಿ ಕಾಣಬಹುದಿತ್ತು: ಮೊದಲು, ದೇಶದ ಅನೇಕರ ಸಾವುಗಳಿಗೆ ಕಾರಣವಾದ ವಿಯೆಟ್ನಾಂನಲ್ಲಿನ ಸುದೀರ್ಘ ಯುದ್ಧದ ವಿಚಾರದಲ್ಲಿ ಅಮೆರಿಕ ಸರ್ಕಾರವು ಮುಚ್ಚಿಹಾಕಿದ್ದ ವೈಫಲ್ಯಗಳು 'ದಿ ನ್ಯೂಯಾರ್ಕ್ ಟೈಮ್ಸ್'ನಲ್ಲಿ ಪ್ರಕಟವಾಗಿದ್ದ ಪೆಂಟಗನ್ ದಾಖಲೆಗಳಿಂದ (ಪೆಂಟಗನ್ ಪೇಪರ್ಸ್) ಜನರಿಗೆ ಗೊತ್ತಾಗಿದ್ದವು. ತದನಂತರ, ಅಮೆರಿಕದ ಅಧ್ಯಕ್ಷರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು, ಸಂವಿಧಾನವನ್ನು ಧಿಕ್ಕರಿಸಿ, ರಾಜಕೀಯ ಎದುರಾಳಿಗಳ ವಿರುದ್ಧ ಸರ್ಕಾರವನ್ನೇ ಹೇಗೆ ದಾಳವಾಗಿ ಬಳಸಿದರು ಎನ್ನುವುದು 'ದಿ ವಾಷಿಂಗ್ಟನ್ ಪೋಸ್ಟ್'ನಲ್ಲಿ ಪ್ರಕಟವಾದ 'ವಾಟರ್‌ಗೇಟ್' ಹಗರಣದ ಬಗೆಗಿನ ತನಿಖಾ ವರದಿಯಿಂದ ಜನರ ಅರಿವಿಗೆ ಬಂತು.

ನನ್ನ ದೇಶವು ಸದಾ ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತದೆ ಮತ್ತು ನಮ್ಮ ಸಂವಿಧಾನದ ಮೊದಲ ತಿದ್ದುಪಡಿಯು ಅದನ್ನು ಖಾತರಿಪಡಿಸುತ್ತದೆ ಎಂದು ದಶಕಗಳವರೆಗೆ ನಾನು ಭಾವಿಸಿದ್ದೆ. ಇನ್ನು ಮುಂದೆ ನಾನು, ದೇಶದಲ್ಲಿ ಸಂವಿಧಾನದ ನಿಯಮಗಳು, ಕಾನೂನು ಚಾಲ್ತಿಯಲ್ಲಿರುತ್ತದೆ ಎಂದಾಗಲಿ, ಮುಕ್ತ ಅಭಿವ್ಯಕ್ತಿಯು–ಕೇವಲ ಮಾಧ್ಯಮಗಳಿಗಷ್ಟೇ ಅಲ್ಲ, ಅಮೆರಿಕದ ಎಲ್ಲರಿಗೂ–ಉಳಿಯುತ್ತದೆ ಎಂದಾಗಲಿ ಭಾವಿಸಲಾರೆ.

ತಮ್ಮ ಅಧಿಕಾರದ ಬಗೆಗಿನ ಸಾಂಪ್ರದಾಯಿಕ ನಿರ್ಬಂಧಗಳ ಬಗ್ಗೆ ತಿರಸ್ಕಾರವುಳ್ಳ ಅಧ್ಯಕ್ಷರನ್ನು ನಾವು ಹೊಂದಿದ್ದೇವೆ. ನಮ್ಮ ಸಂಸತ್ತಿನಲ್ಲಿರುವ ಬಹುತೇಕರು ಗುಲಾಮ ಮನಃಸ್ಥಿತಿಯುಳ್ಳವರಾಗಿದ್ದಾರೆ. ಅಧ್ಯಕ್ಷರು ಪ್ರಜಾಪ್ರಭುತ್ವದ ಪ್ರಮುಖ ಆಧಾರಸ್ತಂಭಗಳನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಲು ನಿರ್ಧರಿಸಿದ್ದು, ಅವುಗಳ ಪೈಕಿ ಸ್ವತಂತ್ರ ಪತ್ರಿಕೋದ್ಯಮವು ಮುಖ್ಯ ಗುರಿಯಾಗಿದೆ; ಆ ಸಂಸ್ಥೆಗಳು ನಮ್ಮ ಊಹೆಗಿಂತಲೂ ದುರ್ಬಲವಾಗಿವೆ, ಅಳ್ಳೆದೆಯಿಂದ ಕೂಡಿವೆ.

ಕಳವಳ ಹುಟ್ಟಿಸುವ ವಿಚಾರವೆಂದರೆ, ಜನರಿಗೆ ಸತ್ಯ ಮತ್ತು ಮಿಥ್ಯೆಗಳ ನಡುವಿನ ವ್ಯತ್ಯಾಸ ಗುರ್ತಿಸುವ ಆಸಕ್ತಿಯಾಗಲಿ, ಸಾಮರ್ಥ್ಯವಾಗಲಿ ಇಲ್ಲದ ಕಾಲಮಾನದಲ್ಲಿ ನಾವು ಬದುಕುತ್ತಿದ್ದೇವೆ. ಯಾವ ನೀತಿಗಳು ಉತ್ತಮ ಎನ್ನುವುದರ ಬಗ್ಗೆ ಭಿನ್ನ ಅಭಿಪ್ರಾಯಗಳಿರುವುದು ಸ್ವಾಭಾವಿಕವೂ, ಪ್ರಜಾಪ್ರಭುತ್ವದಲ್ಲಿ ನಿರೀಕ್ಷಿತವೂ ಆಗಿದೆ. ಸತ್ಯವನ್ನು ಹೇಗೆ ಕಂಡುಕೊಳ್ಳಬೇಕು ಎನ್ನುವುದರ ಬಗ್ಗೆಯೇ ಇಂದು ನಮ್ಮಲ್ಲಿ ಸಹಮತ ಇಲ್ಲ. ಚಾರಿತ್ರಿಕವಾಗಿ ಯಾವ ಅಂಶಗಳ ಆಧಾರದಲ್ಲಿ ವಾಸ್ತವಾಂಶಗಳನ್ನು ನಿರ್ಧರಿಸಲಾಗುತ್ತಿತ್ತೋ– ಶಿಕ್ಷಣ, ಪರಿಣತಿ, ಅನುಭವ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಪುರಾವೆ– ಅವುಗಳನ್ನು ಅಪ್ರಸ್ತುತಗೊಳಿಸಲಾಗಿದೆ, ಕೈಬಿಡಲಾಗಿದೆ ಮತ್ತು ನಿರಾಕರಿಸಲಾಗಿದೆ.

ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದರೆ, ಸ್ವತಂತ್ರ ಪತ್ರಿಕೋದ್ಯಮ ಅದಕ್ಕೆ ಹೊರತಲ್ಲ. ಪ್ರಜಾಪ್ರಭುತ್ವ ಇಲ್ಲದೇ ಸ್ವತಂತ್ರ ಪತ್ರಿಕೋದ್ಯಮ ಉಳಿಯಲು ಸಾಧ್ಯವಿಲ್ಲ. ಸ್ವತಂತ್ರ ಪತ್ರಿಕೋದ್ಯಮವಿಲ್ಲದೇ ಪ್ರಜಾಪ್ರಭುತ್ವವೂ ಉಳಿಯಲಾರದು.

ನಿರಂಕುಶಾಧಿಕಾರ ಬಯಸುವವರ ಆದ್ಯತೆಗಳಲ್ಲಿ ಪ್ರಮುಖವಾದದ್ದು, ರಾಜಕೀಯ ನಾಯಕರು ಏನು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಬೆಳಕು ಚೆಲ್ಲುವ ಮತ್ತು ಅವರನ್ನು ಹೊಣೆಗಾರರನ್ನಾಗಿ ಮಾಡುವ ಮಾಧ್ಯಮಗಳನ್ನು ಬಗ್ಗುಬಡಿಯುವುದು. ಅವರು ಮುಕ್ತ ಅಭಿವ್ಯಕ್ತಿಯನ್ನು ಸಂಪೂರ್ಣವಾಗಿ ಇಲ್ಲವಾಗಿಸಲು ಪ್ರಯತ್ನಿಸುತ್ತಾರೆ: ಸಂಗೀತಗಾರರು, ಬರಹಗಾರರು, ಕಲಾವಿದರು, ನಾಟಕಕಾರರು, ಚಿತ್ರಕಥೆಗಾರರು ತಾವು ಬಯಸಿದಂತೆ ಅಭಿವ್ಯಕ್ತಿಸುವ ಹಕ್ಕು. ಸಾರ್ವಜನಿಕರು ತಾವು ಬಯಸಿದ್ದನ್ನು ಕೇಳುವ, ನೋಡುವ ಮತ್ತು ಓದುವ ಹಕ್ಕು. ವ್ಯಾಪಾರಿ ಸಂಸ್ಥೆಗಳ ಕಾರ್ಯನಿರ್ವಾಹಕರು, ಶಿಕ್ಷಣ ತಜ್ಞರು, ಸಾಮಾಜಿಕ

'ಪ್ರಜಾವಾಣಿ'ಯು ಸೆಪ್ಟೆಂಬರ್ 28ರ 'ವಿಶ್ವ ಸುದ್ದಿ ದಿನ'ದ ಅಂಗವಾಗಿ ನಡೆಯುತ್ತಿರುವ ಜಾಗತಿಕ ಅಭಿಯಾನದ ಪಾಲುದಾರ ಆಗಿದೆ. ಇದರ ಭಾಗವಾಗಿ 'ಪ್ರಜಾವಾಣಿ'ಯಲ್ಲಿ ಮಾಲಿಕೆಯಾಗಿ ಪ್ರಕಟಗೊಳ್ಳುತ್ತಿರುವ ಲೇಖನಗಳಲ್ಲಿ ಇದು ಮೊದಲನೆಯದು.

ವಿಶ್ವ ಸುದ್ದಿ ದಿನ
28 ಸೆಪ್ಟೆಂಬರ್ 2025

ಕಾರ್ಯಕರ್ತರು ಮತ್ತು ರಾಜಕೀಯ ನಾಯಕರು ತಾವು ನಂಬುವ ನೀತಿಗಳನ್ನು ಪ್ರತಿಪಾದಿಸುವ ಹಕ್ಕು. ಕಣ್ಗಾವಲು ಮತ್ತು ಪ್ರತೀಕಾರದ ಭಯವಿಲ್ಲದೆ ಕುಟುಂಬ, ಸ್ನೇಹಿತರು, ನೆರೆಹೊರೆಯವರು ಮತ್ತು ಸಹೋದ್ಯೋಗಿಗಳೊಂದಿಗೆ ಮುಕ್ತವಾಗಿ ಮಾತನಾಡುವ ನಮ್ಮೆಲ್ಲರ ಹಕ್ಕು.

ಪತ್ರಿಕೋದ್ಯಮವು ರಕ್ಷಿಸಲು ಯತ್ನಿಸುತ್ತಿರುವ ಹಕ್ಕುಗಳು, ಹೆಚ್ಚಿನ ಜನರು ತಮಗಾಗಿ ಬಯಸುವ ಹಕ್ಕುಗಳೇ ಆಗಿವೆ. ಅವುಗಳೆಂದರೆ, ಸತ್ಯಾಂಶಗಳನ್ನು ತನಿಖೆ ಮಾಡುವ ಸ್ವಾತಂತ್ರ್ಯ, ತಿಳಿದದ್ದನ್ನು ಹಂಚಿಕೊಳ್ಳುವ ಮತ್ತು ತಾವು ನಂಬಿದ್ದನ್ನು ಸಂವಹನ ಮಾಡುವ ಸ್ವಾತಂತ್ರ್ಯ.

ನಿರಂಕುಶಾಧಿಕಾರಿಗಳ ನಿಜವಾದ ಗುರಿ ಸತ್ಯವೇ ಆಗಿದೆ. ಎಲ್ಲ ರೀತಿಯ ಸತ್ಯ ಪ್ರತಿಪಾದಕರನ್ನು– ಅವರು ನ್ಯಾಯಾಧೀಶರು, ವಿದ್ವಾಂಸರು, ವಿಜ್ಞಾನಿಗಳು, ಸಂಖ್ಯಾಶಾಸ್ತ್ರಜ್ಞರು ಅಥವಾ ಪತ್ರಕರ್ತರಾಗಿರಲಿ– ಅಂತ್ಯಗೊಳಿಸುವ ಗುರಿಯನ್ನು ಅವರು ಹೊಂದಿರುತ್ತಾರೆ. ಸರ್ವಾಧಿಕಾರದ ಕಡೆಗೆ ವಾಲುತ್ತಿರುವ ರಾಷ್ಟ್ರಗಳಲ್ಲಿ, ರಾಷ್ಟ್ರದ ಮುಖ್ಯಸ್ಥರು ಸತ್ಯದ ಏಕೈಕ ವಾರಸುದಾರರಾಗಿರುತ್ತಾರೆ. ಅವರು ತಮ್ಮ ಸುಳ್ಳುಗಳನ್ನು ಮುಂದುವರಿಸಲು ದತ್ತಾಂಶವನ್ನು ಅಳಿಸುತ್ತಾರೆ, ತಿರುಚುತ್ತಾರೆ ಮತ್ತು ನಿಗ್ರಹಿಸುತ್ತಾರೆ.

ಈಗ ಅಮೆರಿಕದಲ್ಲಿ ನಡೆಯುತ್ತಿರುವುದು ಇದೇ. ಸರ್ಕಾರವು ತನ್ನ ಕಟ್ಟುಕಥೆಗಳು ಪ್ರಶ್ನಾತೀತವಾಗಿ ಪುನರಾವರ್ತನೆಗೊಳ್ಳಬೇಕೆಂದು ಒತ್ತಾಯಿಸುತ್ತಿದ್ದು, ಸತ್ಯಗಳು ದಾಳಿಗೊಳಗಾಗಿವೆ. ಸಾಂವಿಧಾನಿಕ ರಕ್ಷಣೆಯ ಮುಸುಕಿನಲ್ಲಿ ದಶಕಗಳಿಂದ ಅಮೆರಿಕ ಎಲ್ಲ ರೀತಿಯ ಮುಕ್ತ ಅಭಿವ್ಯಕ್ತಿಯ ಭದ್ರಕೋಟೆಯಾಗಿತ್ತು. ಇದೇ ರೀತಿಯ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದ ಇತರ ರಾಷ್ಟ್ರಗಳ ನಾಗರಿಕರಿಗೆ ನಾವು ಮಾದರಿ ಆಗಿದ್ದೆವು. ಅದು ಈಗ ಮುಗಿದ ಕಥೆ.

ಅಮೆರಿಕದ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರು, 1941ರಲ್ಲಿ ಮನುಷ್ಯನಿಗೆ ಅಗತ್ಯವಾದ ನಾಲ್ಕು ಸ್ವಾತಂತ್ರ್ಯಗಳ ಬಗ್ಗೆ ಮಾತನಾಡಿದ್ದರು. ಅವುಗಳಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಥಮ ಸ್ಥಾನ ನೀಡಿದ್ದ ಅವರು, 'ಜಗತ್ತಿನ ಎಲ್ಲೆಡೆಯೂ' ಎನ್ನುವ ಪದ ಸೇರಿಸಿದ್ದರು. ಇಂದು, ನಿರಂಕುಶಾಧಿಕಾರದ ಬಯಕೆ ಇರುವ ವ್ಯಕ್ತಿ ಅಧ್ಯಕ್ಷರಾಗುವುದರೊಂದಿಗೆ ಅಮೆರಿಕವು ರೂಸ್‌ವೆಲ್ಟ್ ಉತ್ತಮ ಜಗತ್ತಿಗೆ ಅನಿವಾರ್ಯವೆಂದು ಪ್ರತಿಪಾದಿಸಿದ್ದ ಸ್ವಾತಂತ್ರ್ಯಗಳನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ.

ಪ್ರಜಾಪ್ರಭುತ್ವದ ಬಗ್ಗೆ ಕುಂದಿದ ವಿಶ್ವಾಸ ಮತ್ತು ಹೊಸ ಪೀಳಿಗೆಯ ಸರ್ವಾಧಿಕಾರಿಗಳ ಉದಯದಿಂದ ಸ್ವತಂತ್ರ ಮಾಧ್ಯಮವು ಈಗಾಗಲೇ ಜಾಗತಿಕವಾಗಿ ಅಪಾಯದಲ್ಲಿದೆ. ನಮ್ಮ ಅಧ್ಯಕ್ಷರು ವಿಶ್ವದಾದ್ಯಂತ ಪತ್ರಿಕಾ ಸ್ವಾತಂತ್ರ್ಯವನ್ನು- ಜತೆಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು- ಇನ್ನೂ ಹೆಚ್ಚಿನ ಗಂಡಾಂತರಕ್ಕೆ ಸಿಲುಕಿಸಿದ್ದಾರೆ.

ಅಮೆರಿಕ ಸಂವಿಧಾನದ ಮೊದಲ ತಿದ್ದುಪಡಿಯ ಬಗ್ಗೆ ಅಮೆರಿಕದ ಅಧ್ಯಕ್ಷರು ಮತ್ತು ಅವರ ಮಿತ್ರರು ತಿರಸ್ಕಾರಯುಕ್ತ ನಿರ್ಲಕ್ಷ್ಯ ತೋರುತ್ತಿದ್ದಾರೆ. ಆ ತಿದ್ದುಪಡಿಯಲ್ಲಿ ಮುಕ್ತ ಮಾಧ್ಯಮ ಮತ್ತು ಮುಕ್ತ ಅಭಿವ್ಯಕ್ತಿ ಬಗ್ಗೆ ವಿವರಿಸಲಾಗಿದೆ. 'ಸಾರ್ವಜನಿಕ ವ್ಯಕ್ತಿ ಮತ್ತು ಕ್ರಿಯೆಗಳನ್ನು ಮುಕ್ತವಾಗಿ ಪರಿಶೀಲಿಸುವ ಹಕ್ಕು' ಅದರಲ್ಲಿ ಉಲ್ಲೇಖಗೊಂಡಿದೆ. ಪತ್ರಕರ್ತರಿಗೂ ಇದು ಅನ್ವಯವಾಗುತ್ತದೆ. ನಾವು ಸ್ಟೆನೋಗ್ರಾಫರ್‌ಗಳಲ್ಲ; ಹಾಗೆ ಇರಲೂ ಬಾರದು. ನೇಪಥ್ಯದಲ್ಲಿ ಏನು ನಡೆಯುತ್ತಿದೆ, ಕಣ್ಣಿಗೆ ಕಾಣುವುದರ ಆಳದಲ್ಲಿ ಏನು ಅಡಗಿದೆ ಎನ್ನುವುದನ್ನು ಪತ್ತೆ ಹಚ್ಚುವ ಮೂಲಕ ಯಾರು ಏನು ಮಾಡಿದರು, ಏಕೆ ಮಾಡಿದರು; ಅದರಿಂದ ಯಾರ ಮೇಲೆ, ಯಾವ ರೀತಿಯ ಪರಿಣಾಮ ಉಂಟಾಗುತ್ತದೆ; ಯಾರು, ಯಾವ ಉದ್ದೇಶದಿಂದ ಈ ನಿರ್ಧಾರಗಳನ್ನು ಕೈಗೊಂಡರು ಎನ್ನುವುದನ್ನು ತಿಳಿಯಬೇಕಾಗುತ್ತದೆ.

ಪತ್ರಿಕೋದ್ಯಮದ ಉದ್ದೇಶ, ಸಾರ್ವಜನಿಕರಿಗೆ ಅಗತ್ಯವಿರುವ ಮತ್ತು ತಿಳಿಯಲು ಅರ್ಹವಾದ ಮಾಹಿತಿಯನ್ನು ಒದಗಿಸುವುದು. ಇದರಿಂದ ಜನರು ತಮ್ಮನ್ನು ತಾವು ರೂಪಿಸಿಕೊಳ್ಳಬಹುದು. ಆ ಧ್ಯೇಯದೊಳಗೆ ಒಂದು ನಿರ್ದಿಷ್ಟವಾದ, ಉನ್ನತ ಉದ್ದೇಶವೂ ಅಡಗಿದೆ: ಪ್ರಬಲ ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಹೊಣೆಗಾರರನ್ನಾಗಿ ಮಾಡುವುದು.

ಅಧಿಕಾರಸ್ಥರು ಅಗಾಧ ಪ್ರಮಾಣದಲ್ಲಿ ಒಳಿತು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅವರು ಒಳಿತು ಮಾಡಿದರೆ, ಸಾಮಾನ್ಯ ಜನ ಒಳಿತು ಮಾಡಿದರೆ, ಪತ್ರಕರ್ತರು ಅದನ್ನು ಪ್ರಚಾರ ಮಾಡಬೇಕು. ಸಮಾಜವನ್ನು ಸುಧಾರಿಸುವ ಶ್ಲಾಘನೀಯ ಪ್ರಯತ್ನಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕು.

ಅದೇ ಸಮಯದಲ್ಲಿ, ಅಧಿಕಾರಸ್ಥರು ತಪ್ಪುಗಳನ್ನೂ ಅಸಾಧಾರಣ ಪ್ರಮಾಣದಲ್ಲಿ ಮಾಡಬಹುದು. ತಮ್ಮ ದುಷ್ಕೃತ್ಯಗಳನ್ನು ಮುಚ್ಚಿಕೊಳ್ಳುವಷ್ಟು, ಯಥೋಚಿತವಲ್ಲದ ಅಧಿಕಾರವನ್ನು ಅವರು ಹೊಂದಿರುವುದೇ ತಪ್ಪಾಗುತ್ತದೆ. ಅನೈತಿಕ ಅಥವಾ ಕಾನೂನುಬಾಹಿರ ನಡತೆಯು ವರ್ಷ ಅಥವಾ ದಶಕಗಳವರೆಗೆ ಪತ್ತೆಯಾಗದಿರಬಹುದು. ಅದರಿಂದ ಸಾಮಾನ್ಯ ಜನರಿಗೆ ತೀವ್ರ ಹಾನಿ ಉಂಟಾಗಬಹುದು.

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ವತಂತ್ರ ಪತ್ರಿಕೋದ್ಯಮಕ್ಕಾಗಿ ಜನರು ಜಿದ್ದಾಜಿದ್ದಿನಿಂದ ಹೋರಾಡಬೇಕಿದೆ. ತಮ್ಮ ಕುಂದುಕೊರತೆಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿರಬೇಕು. ಮಾಧ್ಯಮಗಳು ಅವುಗಳನ್ನು ಕೇಳಲು, ತನಿಖೆ ಮಾಡಲು ಸಿದ್ಧವಾಗಿರಬೇಕು.

ಭ್ರಷ್ಟಾಚಾರದ ಬಗ್ಗೆ ವರದಿ ಮಾಡಲು ಪತ್ರಕರ್ತರು ಇಲ್ಲದಿದ್ದಾಗ, ಅದು ಮತ್ತಷ್ಟು ಹೆಚ್ಚಾಗಿ, ಸಾಮಾನ್ಯ ಜನ ಅದಕ್ಕೆ ಬೆಲೆ ತೆರುತ್ತಾರೆ. ಸ್ವತಂತ್ರ ಮಾಧ್ಯಮಗಳು ಅಸ್ತಿತ್ವದಲ್ಲಿ ಇಲ್ಲದಿದ್ದಾಗ ಅಪಾರ ಶಕ್ತಿಯನ್ನು ಹೊಂದಿರುವವರು ಇನ್ನೂ ಹೆಚ್ಚು ಅಧಿಕಾರ ದಕ್ಕಿಸಿಕೊಳ್ಳಲು ಆ ಅವಕಾಶ ಬಳಸಿಕೊಳ್ಳುತ್ತಾರೆ.

ತಮ್ಮ ಸ್ವಾತಂತ್ರ್ಯದ ಬಗ್ಗೆಯೂ ಕಾಳಜಿ ತೋರದ ಅಮೆರಿಕದ ಜನರಿಗೆ ಈಗ ಇತರೆ ದೇಶಗಳ ಜನರು ಮಾದರಿಯಾಗುತ್ತಾರೆ ಎಂಬುದು ನನ್ನ ಭರವಸೆಯಾಗಿದೆ. ದಮನಕಾರಿ ಸರ್ಕಾರದ ವಿರುದ್ಧ ಹೇಗೆ ಉತ್ತಮ ಹೋರಾಟ ರೂಪಿಸಬೇಕು ಎನ್ನುವುದನ್ನು ಅವರು ನಮಗೆ ತೋರಿಸಬಹುದು. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ವತಂತ್ರ ಪತ್ರಿಕೋದ್ಯಮದ ಪ್ರಜಾತಾಂತ್ರಿಕ ತತ್ವಗಳನ್ನು ಎತ್ತಿಹಿಡಿಯುವ ಕಠಿಣ ಹೋರಾಟಕ್ಕೆ ಅವರು ಸ್ಫೂರ್ತಿಯಾಗಬಹುದು.

(ಲೇಖಕ: 'ದಿ ವಾಷಿಂಗ್ಟನ್ ಪೋಸ್ಟ್'ನ ಕಾರ್ಯನಿರ್ವಾಹಕ ಸಂಪಾದಕರಾಗಿದ್ದರು. 'ಬೋಸ್ಟನ್ ಗ್ಲೋಬ್' ಮತ್ತು 'ಮಿಯಾಮಿ ಹೆರಾಲ್ಡ್' ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.)



ವಾಚಕರ ವಾಣಿ

ಬೌದ್ಧ ಧರ್ಮ ಮತ್ತು ಅಂಬೇಡ್ಕರ್

ದಲಿತರು ಅಸಮಾನತೆಯಿಂದ ಹೊರಬರಲು ಬೌದ್ಧ ಧರ್ಮದಿಂದಷ್ಟೇ ಸಾಧ್ಯ ಎಂದು ಬಿ.ಆರ್. ಅಂಬೇಡ್ಕರ್ ನಂಬಿದ್ದರು. ಹಾಗಾಗಿಯೇ, ಹಿಂದೂ ಧರ್ಮ ತ್ಯಜಿಸಿ ಲಕ್ಷಾಂತರ ದಲಿತರೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದರು. ಬಾಬಾ ಸಾಹೇಬರು ಕಲ್ಪಿಸಿದ ಮೀಸಲಾತಿ ಸೌಲಭ್ಯ ಉಂಡ ಫಲಾನುಭವಿಗಳೇ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ 'ಹಿಂದೂ' ಎಂದು ಬರೆಸುವಂತೆ ಹೇಳುತ್ತಿರುವುದು ವ್ಯಂಗ್ಯವೇ ಸರಿ.

ಸುರೇಶ್ ವಡಗಲಪುರ, ಬೆಂಗಳೂರು

'ಬೌದ್ಧರುದ್ಯಾನ'ದಿಂದ ಗೌರವ ಇಮ್ಮಡಿ

ಕುವೆಂಪು ವಿರಚಿತ ನಾಡಗೀತೆಗೆ ಈಗ ನೂರರ ಸಂಭ್ರಮ. ಇದೇ ಸಂದರ್ಭದಲ್ಲಿ ಲೇಖಕ ಅರವಿಂದ ಮಾಲಗತ್ತಿ ಅವರು, ನಾಡಗೀತೆಯಲ್ಲಿದ್ದ 'ಬೌದ್ಧರುದ್ಯಾನ' ಪದದ ಬಗ್ಗೆ ಪ್ರಸ್ತಾಪಿಸಿದ್ದಾರೆ. 70ರ ದಶಕದಲ್ಲಿ ಈ ಪದ ತಪ್ಪಿಹೋಗಿದ್ದು, ಮತ್ತೆ ಅದನ್ನು ಸೇರಿಸುವಂತೆ ಸರ್ಕಾರಕ್ಕೆ ಕೋರಿರುವುದು ಸಮಂಜಸ. ಅದನ್ನು ಯಾವುದೇ ಕಾರಣಕ್ಕೆ ತೆಗೆದುಹಾಕಿದ್ದರೂ ಮತ್ತೆ ಸೇರಿಸಬೇಕಿದೆ. ಕುವೆಂಪು ಅವರೇ, 'ಸರ್ವಜನಾಂಗದ ಶಾಂತಿಯ ತೋಟ' ಎಂದು ಬಣ್ಣಿಸಿದ್ದಾರೆ. 'ಜೈನ ಬೌದ್ಧರುದ್ಯಾನ' ಅಥವಾ 'ಬೌದ್ಧ ಜೈನರುದ್ಯಾನ' ಎಂದು ಸೇರಿಸಿ ಹಾಡುವುದರಿಂದ ನಾಡಿನ ಗೌರವ ಇಮ್ಮಡಿಯಾಗುತ್ತದೆ.

ಮಹಾಂತೇಶ್ ಬಿ. ನಿಟ್ಟೂರು, ದಾವಣಗೆರೆ

ಮುಧೋಳ ದೊರೆಯ ಆದರ್ಶ ನಡೆ

ಮುಧೋಳ ಸಂಸ್ಥಾನದ ಘೋರ್ಪಡೆ ದೊರೆಯು ಅರಮನೆ ಪಕ್ಕದಲ್ಲಿ ಹರಿಯುವ ಘಟಪ್ರಭಾ ನದಿಯಲ್ಲಿ ಸ್ನಾನ ಮಾಡಿ ಪೂಜೆಗೆ ತೆರಳುತ್ತಿದ್ದರು. ಅವರು ಹೋಗುವ ರಸ್ತೆಯ ಎರಡೂ ಬದಿಗಳಲ್ಲಿ ತಳ ಸಮುದಾಯದವರ ಗುಡಿಸಲುಗಳಿದ್ದವು. ದೊರೆಯ ಪೂಜೆಯ ಪಾವಿತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಭಾವಿಸಿ, ಅವರನ್ನು ಸ್ಥಳಾಂತರಿಸಲು ಅಧಿಕಾರಿಗಳು ಮುಂದಾದರು. ವಿಷಯ ತಿಳಿದ ದೊರೆ ಅಧಿಕಾರಿಗಳನ್ನು ಕರೆದು, 'ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದರು. ನನಗೆ ಮೊಲೆ ಉಣಿಸಿ ಪೊರೆದವರು ಗುಡಿಸಲ ತಾಯಂದಿರು. ಅವರನ್ನು ಸ್ಥಳಾಂತರಿಸುವುದೇ ಆದರೆ ಅರಮನೆಯ ಒಳಗಡೆ ಸ್ಥಳ ಕೊಡಿ' ಎಂದು ಹೇಳಿದ್ದರು.

ದೇಗುಲದ ಪಕ್ಕದಲ್ಲಿ ಕೊಳೆಗೇರಿ ನಿವಾಸಿಗಳ ಪುನರ್ವಸತಿ ಕೇಂದ್ರ ನಿರ್ಮಿಸಬಾರದು. ಇದರಿಂದ ದೇಗುಲದ ಪಾವಿತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಕೆಲವರು ಹೈಕೋರ್ಟ್ ಮೊರೆ ಹೋಗಿರುವ ಸುದ್ದಿ ಓದಿದಾಗ ಈ ಘಟನೆ ನೆನಪಾಯಿತು.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಜಾತಿವಾದಿಗಳಿಗೆ ಲಗಾಮು ಹಾಕಬೇಕು

'ಜಾತಿ ತಾರತಮ್ಯ: ನೆಲದಲ್ಲಿ ಕುಳಿತೇ ಕೆಲಸ' ವರದಿ (ಪ್ರ.ವಾ., ಸೆ. 24) ಓದಿ ಬೇಸರವಾಯಿತು. ತುಮುಲ್‌ನ ಹಣಕಾಸು ವಿಭಾಗದ ಆಡಳಿತ ಅಧೀಕ್ಷಕ ಆರ್.ಎಸ್. ವಿನಯ್, 'ದಲಿತ' ಎಂಬ ಕಾರಣಕ್ಕೆ ಈ ರೀತಿ ನಡೆಸಿಕೊಳ್ಳುತ್ತಿರುವುದು ಸರಿಯಲ್ಲ. ಸಮಾಜದಲ್ಲಿ ದಲಿತರ ಬಗೆಗಿನ ಅಸಹನೆ ಇನ್ನೂ ಜೀವಂತವಾಗಿದೆ ಎನ್ನುವುದಕ್ಕೆ ಈ ಘಟನೆ ಸಾಕ್ಷಿ. ಕುರ್ಚಿ ಕೊಡದಿರುವುದು ವ್ಯಕ್ತಿಯ ಘನತೆಗೆ ಧಕ್ಕೆ ತರುತ್ತದೆ. ಜಾತಿಯ ಕಬಂಧಬಾಹುಗಳಿಗೆ ಮೂಗುದಾರ ಹಾಕಬೇಕಿದೆ.

ಎಫ್.ಡಿ. ರಾಮಾಪೂರ, ಧಾರವಾಡ

ಇನ್ನೂ ದಕ್ಕದ ಜಿಎಸ್‌ಟಿ ಲಾಭ

ಇತ್ತೀಚೆಗೆ ನಾನು ಬೆಣ್ಣೆ ಖರೀದಿಸಲು ನಂದಿನಿ ಪಾರ್ಲರ್‌ಗೆ ಹೋಗಿದ್ದೆ. ಅರ್ಧ ಕೆ.ಜಿ.ಗೆ ಹಳೆಯ ಬೆಲೆ ₹305 ಕೊಡಬೇಕು ಎಂದು ಅಂಗಡಿಯಾತ ಹೇಳಿದ. ನಾನು ಹೊಸ ಬೆಲೆ ₹286 ಅಲ್ಲವೆ? ಎಂದೆ. ಅದಕ್ಕೆ ಆತ ನಮಗಿನ್ನೂ ಆ ಹೊಸ ಸ್ಟಾಕ್ ಬಂದಿಲ್ಲ ಎಂದು ಉತ್ತರಿಸಿದ. ಎಲ್ಲಾ ಅಂಗಡಿಗಳದ್ದೂ ಇದೇ ಸ್ಥಿತಿ.

ಕೇಂದ್ರ ಸರ್ಕಾರವು ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಸೆಪ್ಟೆಂಬರ್ 22ರಿಂದ ಜಿಎಸ್‌ಟಿ ತೆರಿಗೆ ಹಂತಗಳನ್ನು ಪರಿಷ್ಕರಿಸಿರುವುದು ಸರಿಯಷ್ಟೆ. ಆದರೆ, ಜನರಿಗೆ ಇನ್ನೂ ಈ ಪರಿಷ್ಕರಣೆಯ ಲಾಭ ಸಿಗುತ್ತಿಲ್ಲ. ದಾಸ್ತಾನಿರುವ ಹಳೆಯ ಸರಕುಗಳು ಮುಗಿಯುವ ತನಕ ನಾವು ನಷ್ಟ ಮಾಡಿಕೊಂಡು ಹೊಸ ಬೆಲೆಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಅಂಗಡಿಯವರು ಹೇಳುತ್ತಾರೆ. ಇದಕ್ಕೆ ಪರಿಹಾರವಾದರೂ ಏನು?

ಪುಷ್ಪಾ ಶ್ರೀರಾಮರಾಜು, ಬೆಂಗಳೂರು

ದೂರ ಸರಿದರು

ಓದುಗರಿಗೆ
ಸಾಹಿತ್ಯ ಪ್ರೇಮ 'ಭಿತ್ತಿ'
ಓದಿನ 'ದಾಟು' ಹೆಚ್ಚಿಸಿ
ರಾಷ್ಟ್ರ ಮಟ್ಟದ ಖ್ಯಾತಿಗೆ
'ಸಾಕ್ಷಿ'ಯಾದ 'ಭೀಮಕಾಯ'ರು
ಈ 'ಆವರಣ' ಬಿಟ್ಟು
'ದೂರ ಸರಿದರು'
ನಮ್ಮೆಲ್ಲರ ಮೆಚ್ಚಿನ
ಎಸ್.ಎಲ್. ಭೈರಪ್ಪನವರು!

ಆರ್. ನಾಗರಾಜ್, ಗೊರೂರು

ಯೋಜನೆ ಜಾರಿಗೆ ಹಟ ಮಾಡಬೇಡಿ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯು ಪಶ್ಚಿಮಘಟ್ಟದ ಪಾಲಿಗೆ ಅತಿದೊಡ್ಡ ಕಂಟಕ. ಆದರೂ, ಇದರ ಸಾಧಕ–ಬಾಧಕದ ಬಗ್ಗೆ ಚರ್ಚಿಸದೆ ಸರ್ಕಾರವು ಯೋಜನೆ ಜಾರಿಗೆ ಹಟ ಹಿಡಿದಿರುವುದು ಅಕ್ಷಮ್ಯ. ಸಿಂಹಬಾಲದ ಸಿಂಗಳೀಕ ಸೇರಿ ಅಪರೂಪದ ವನ್ಯಜೀವಿಗಳ ಗೋಣು ಮುರಿಯುವ ಯೋಜನೆ ಇದು.

ವಿದ್ಯುತ್ ಉತ್ಪಾದನೆಗೆ ಹಲವು ಮಾದರಿಗಳಿವೆ. ಸಮುದ್ರದ ದಡದಲ್ಲಿ ಅಥವಾ ಸಮುದ್ರದೊಳಗೆ ಪವನ ಯಂತ್ರ ಅಳವಡಿಸಿ; ಕೆರೆಗಳಲ್ಲಿ ತೇಲುವ ಸೌರಫಲಕ ಅಳವಡಿಸಿಯೂ ವಿದ್ಯುತ್ ಉತ್ಪಾದಿಸಬಹುದು. ಇಂತಹ ಪರ್ಯಾಯ ಮಾರ್ಗಗಳತ್ತ ಸರ್ಕಾರದ ಚಿತ್ತ ಹರಿಯಬೇಕಿದೆ.

ಹರೀಶ ಎಸ್., ತುಮಕೂರು

ಚಾಟಿ



ಆತ್ಮಗೌರವ–ಸಾಮರಸ್ಯ

ಸಾಮರಸ್ಯ ಎನ್ನುವುದು ಯಜಮಾನಿಕೆ ಮತ್ತು ಅಧೀನತೆಗಳ ನಡುವಿನ ಒಪ್ಪಿತ ಸಾಧನೆಯಲ್ಲ. ಅದು ಪರಸ್ಪರ ಆತ್ಮಗೌರವದ ಮೂಲಕ ರೂಪುಗೊಳ್ಳುವಿಕೆ. ಆತ್ಮಗೌರವರಹಿತ ಸಹಬಾಳ್ವೆ, ಯಜಮಾನಿಕೆಯ ಸಾತ್ವಿಕ ಸಮ್ಮತಿ ಅಥವಾ ಶರಣಾಗತಿಯೇ ಆಗಿರುತ್ತದೆ.

ಬಿ. ಪೀರ್‌ಬಾಷಾ, ಸಾಮಾಜಿಕ ಕಾರ್ಯಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರಾಜತಾಂತ್ರಿಕ ವೈಫಲ್ಯ ಕಂಡಿದೆ. ಹಾಗಾಗಿಯೇ, ಭಾರತವು ಸದ್ಯ ಜಾಗತಿಕ ಮಟ್ಟದಲ್ಲಿ ಸಮಸ್ಯೆಗಳನ್ನು ಎದುರಿಸುವಂತಾಗಿದೆ.

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ಚುರುಮುರಿ



ನೀವೂ ಗಿಫ್ಟ್ ಕೊಡಿ

• ಗುರು ಪಿ.ಎಸ್.

'ಉತ್ಸವ, ಉತ್ಸವ, ಉಳಿತಾಯ ಉತ್ಸವ'– ನ್ಯೂಸ್ ಪೇಪರ್ ಕೈಯಲ್ಲಿ ಹಿಡಿದು ಉತ್ಸಾಹದಿಂದ ಬಂದಳು ಹೆಂಡತಿ.

'ನೋಡ್ರಿ, ನಮ್ ಬಿಜೆಪಿಯವರು ಜಿಎಸ್ಟಿ ಸ್ಲ್ಯಾಬ್ ಎಲ್ಲ ಇಳಿಸಿದ್ದಾರೆ. ನಮ್ ಮೋದಿ ಇಡೀ ದೇಶದ ಜನಕ್ಕೆ ದಸರಾ ಗಿಫ್ಟ್ ಕೊಟ್ಟದ್ದಾರೆ' ಹೆಮ್ಮೆಯಿಂದ ಹೇಳಿದಳು.

ಏನೂ ಪ್ರತಿಕ್ರಿಯೆ ಕೊಡದೆ ಸುಮ್ಮನೆ ನಕ್ಕೆ.

'ಯಾಕೆ ಈ ವ್ಯಂಗ್ಯ ನಗು?'

'ನಗದೆ ಇನ್ನೇನ್ ಮಾಡೋಕಾಗುತ್ತೆ. ಜಿಎಸ್ಟಿನ ಅಷ್ಟೊಂದ್ ಜಾಸ್ತಿ ಮಾಡಿದ್ದು ನಾನಾ? ಅವರೇ ಏರಿಸಿ ಇಷ್ಟು ದಿನ ಅಷ್ಟು ತೆರಿಗೆ ವಸೂಲಿ ಮಾಡಿ, ಈಗ ಅವರೇ ಇಳಿಸಿ ಏನೋ ಸಾಧನೆ ಮಾಡಿದವರ ಥರ ಪ್ರಚಾರ ಪಡ್ಕೊತಿದಾರಲ್ಲ, ಅದಕ್ಕೆ ಉಳಿತಾಯ ಉತ್ಸವ ಅಂತ ಹೆಸರು ಬೇರೆ' ತಲೆ ಚಚ್ಚಿಕೊಂಡು ಹೇಳಿದೆ.

'ನೀವೊಂದ್ ರೀತಿ ಅತೃಪ್ತ ಆತ್ಮ ರೀ... ತೆರಿಗೆ ಜಾಸ್ತಿ ಮಾಡಿದರೆ ಬಾಯಿ ಬಡ್ಕೊತೀರ, ಕಡಿಮೆ ಮಾಡಿದರೂ ಕೊಂಕು ಮಾತಾಡ್ತೀರಾ' ಎಂದು ಮುಖಕ್ಕೆ ತಿವಿದ ಹೆಂಡತಿ, 'ಆಯ್ತು, ನಿಮ್ಮ ಸಿದ್ದರಾಮಯ್ಯ ಅವರೂ ಏನೇನ್ ಜಾಸ್ತಿ ಮಾಡಿದಾರೋ, ಅದನ್ನೆಲ್ಲ ಇಳಿಸಿ, ರಾಜ್ಯದ ಜನರಿಗೆ ದೀಪಾವಳಿ ಗಿಫ್ಟ್ ಕೊಡೋಕೆ ಹೇಳಿ' ಸವಾಲೆಸೆಯುವಂತೆ ಹೇಳಿದಳು.

'ಇನ್ನೂ ಏನ್ ಗಿಫ್ಟ್ ಬೇಕು, ಕೊಟ್ಟಿಲ್ವ ಐದು ಗ್ಯಾರಂಟಿನಾ... ನೀನೇ ತಿಂಗಳಿಗೆ ಎರಡು ಸಾವಿರ ತಗೊಂಡು, ಫ್ರೀಯಾಗಿ ಬಸ್‌ನಲ್ಲಿ ಓಡಾಡ್ತಿಲ್ವ...'

ಜೋರಾಗಿ ನಕ್ಕ ಹೆಂಡತಿ, 'ಹಾಲಿನಿಂದ ಆಲ್ಕೊಹಾಲ್‌ವರೆಗೂ, ಬರ್ತ್–ಡೆತ್ ಸರ್ಟಿಫಿಕೇಟ್‌ನಿಂದ ಸ್ಟ್ಯಾಂಪ್ ಡ್ಯೂಟಿವರೆಗೂ ನೀವೇ ನಾಲ್ಕು ಪಟ್ಟು ಜಾಸ್ತಿ ದುಡ್ಡು ಕೊಡ್ತಿದ್ರೂ ಹೀಗ್ ವಾದ ಮಾಡ್ತಿದೀರಲ್ರೀ, ಅಕ್ಕಿ ಫ್ರೀ ಆಗಿ ಕೊಟ್ಟು ಬೇಳೇನ ಮುಟ್ಟದೇ ಇರೋ ರೀತಿ ಮಾಡಿದಾರೆ, ಆದರೂ ನಿಮಗೆ ಬುದ್ಧಿ ಬರ್ತಿಲ್ಲ'.

'ಹೋಗಲಿ ಬಿಡು, ನಿನ್ನ ಉಳಿತಾಯ ಉತ್ಸವದಲ್ಲಿ ನನಗೊಂದು ಕಾರು ಕೊಡಿಸು ನಡಿ' ಎಂದೆ.

'ನನ್ನ ಉಳಿತಾಯದಲ್ಲಿ ಪ್ಲಾಸ್ಟಿಕ್ ಕಾರ್ ತಗೋಬಹುದಷ್ಟೇ' ಎಂದು ನಕ್ಕಳು.

'ಉಳಿತಾಯ' ಮಾಡುವ ಸಂಕಲ್ಪದಲ್ಲಿ ಇಬ್ಬರೂ ಕೆಲಸಕ್ಕೆ ಹೊರಟು ನಿಂತೆವು.

25 ವರ್ಷಗಳ ಹಿಂದೆ

ಸೋಮವಾರ, 25-9-2000

• **ಮಾರಾಟ ತೆರಿಗೆ ಇಳಿಸಲು ರಾಜ್ಯಗಳಿಗೆ ಕೇಂದ್ರ ಮನವಿ**

ನವದೆಹಲಿ, ಸೆಪ್ಟೆಂಬರ್ 24 (ಪಿಟಿಐ, ಯುಎನ್‌ಐ)– ತೈಲ ಬೆಲೆ ಏರಿಕೆಯಿಂದಾಗಿ ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಬೀಳದಂತೆ ನೋಡಿಕೊಳ್ಳಲು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಮಾರಾಟ ತೆರಿಗೆಯನ್ನು ಶೇ 5ರಷ್ಟು ಕಡಿತಗೊಳಿಸುವಂತೆ ಮನವಿ ಮಾಡಿ ರಾಜ್ಯಗಳಿಗೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಸಚಿವ ರಾಂ ನಾಯಕ್ ಪತ್ರ ಬರೆದಿದ್ದಾರೆ.

'ಜನಸಾಮಾನ್ಯರ ಮೇಲಿನ ಹೊರೆ ತಗ್ಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳು ಮಾರಾಟ ತೆರಿಗೆಯನ್ನು ಕಡಿಮೆ ಮಾಡುವುದು ಅನಿವಾರ್ಯವಾಗಿದೆ. ಈ ಸಂಬಂಧ ಎಲ್ಲಾ ಮುಖ್ಯಮಂತ್ರಿಗಳಿಗೂ ಪತ್ರ ಬರೆಯುತ್ತೇನೆ' ಎಂದು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

• **ಅಬಕಾರಿ ಸಿಬ್ಬಂದಿ ದೌರ್ಜನ್ಯ: ಗ್ರಾಮಸ್ಥರಿಂದ ಕಲ್ಲು**

ಚಿಕ್ಕಜಾಜೂರು, ಸೆಪ್ಟೆಂಬರ್ 24– ಕಳ್ಳಬಟ್ಟಿ ತಪಾಸಣೆಯ ನೆಪದಲ್ಲಿ ಗ್ರಾಮಕ್ಕೆ ಬಂದು ಮಹಿಳೆಯೊಬ್ಬರ ಜತೆ ಅನುಚಿತವಾಗಿ ವರ್ತಿಸಿದ್ದಲ್ಲದೆ ಅಮಾಯಕನೊಬ್ಬನನ್ನು ಪ್ರಜ್ಞೆ ತಪ್ಪುವಂತೆ ಥಳಿಸಿದ ಅಬಕಾರಿ ಸಿಬ್ಬಂದಿಯ ವರ್ತನೆಯಿಂದ ರೊಚ್ಚಿಗೆದ್ದ ಜನ ಕಲ್ಲುತೂರಾಟ ನಡೆಸಿ, ನಾಲ್ವರನ್ನು ಕೂಡಿ ಹಾಕಿದ ಘಟನೆ ಇಲ್ಲಿಗೆ ಸಮೀಪದ ದಂಡಿಗನಹಳ್ಳಿಯಲ್ಲಿ ನಡೆದಿದೆ.

75 ವರ್ಷಗಳ ಹಿಂದೆ

ಸೋಮವಾರ, 25-9-1950

• **ಕಾರ್ಮಿಕರ ಸಂಘದ ಕಾರ್ಯದರ್ಶಿ ವಜಾ**

ಬೆಂಗಳೂರು, ಸೆಪ್ಟೆಂಬರ್ 24– ಹಿಂದೂಸ್ತಾನ್ ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಎಂ.ಬಿ. ಸಿಂಗ್ ಅವರನ್ನು, ಭಾನುವಾರದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿದೆ.

ಆಡಳಿತ ಮಂಡಳಿಯ ಈ ಕ್ರಮವನ್ನು ಕಂಪನಿಯಲ್ಲಿರುವ 6 ಸಾವಿರಕ್ಕೂ ಹೆಚ್ಚು ನೌಕರರು ಖಂಡಿಸಿದ್ದು, ಎಂ.ಬಿ. ಸಿಂಗ್ ಅವರನ್ನು ಮರಳಿ ಸೇವೆಗೆ ಸೇರ್ಪಡೆ ಮಾಡಿಕೊಳ್ಳುವವರೆಗೂ ಕೆಲಸಕ್ಕೆ ಹಾಜರಾಗದಿರಲು ನಿರ್ಧರಿಸಿದ್ದಾರೆ.

ಸಂಗತ

ಜಾತಿವಿನಾಶ ಚಳವಳಿ: ಜಾತಿವಿಕಾಸಕ್ಕೆ ಬಲಿ!


'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ಸಾಮಾಜಿಕ ನ್ಯಾಯದ ಜೊತೆಗೆ, ಜಾತಿರೋಗದಿಂದ ಮುಕ್ತರಾಗಲು ಬಯಸುವವರಿಗೆ ಬೆಳಕಿಂಡಿ ಆಗುವ ಸಾಧ್ಯತೆಯೂ ಇದೆ.

• ಚಂದ್ರಕಾಂತ ವಡ್ಡು

ಜಾತಿ ಈ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಕಟು ವಾಸ್ತವ. ಹಾಗಾಗಿ, ಅದರ ಇರುವಿಕೆಯನ್ನು ಗಮನದಲ್ಲಿಟ್ಟುಕೊಂಡೇ ಮೀರುವಿಕೆಯ ಗುರಿಯತ್ತ ಸಮತೋಲನದ ಹೆಜ್ಜೆ ರೂಢಿಸಿಕೊಳ್ಳುವುದು ಸಮಕಾಲೀನ ಸಂದರ್ಭದ ಅಗತ್ಯ ಮತ್ತು ಅನಿವಾರ್ಯತೆ. ಈ ಬೆಳಕಿನಲ್ಲಿ ಪ್ರಸಕ್ತ ಸಂದರ್ಭ ಎದುರಿಗಿರಿಸಿರುವ ಜಾತಿ ಬಿಕ್ಕಟ್ಟುಗಳನ್ನು ಅವಲೋಕಿಸಬೇಕಿದೆ.

ಎಚ್. ಕಾಂತರಾಜು ಅವರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯು ಅಂತಿಮ ಹಂತದಲ್ಲಿ ತೆರೆಮರೆಗೆ ಸರಿದ ನಂತರ ಇದೀಗ ಮತ್ತೊಂದು ಸುತ್ತಿನ ಸಮೀಕ್ಷೆಗೆ ಚಾಲನೆ ಸಿಕ್ಕಿದೆ. ಜಾತಿ ಮಾಹಿತಿಯ ಜೊತೆಗೆ ಜನರ ಬದುಕಿನ ಸ್ಥಿತಿಗತಿಯ ವಿವರಗಳನ್ನು ಸಂಗ್ರಹಿಸಿ, ಅವಕಾಶ ವಂಚಿತರಿಗೆ ನೆರವಾಗುವುದು ಸಮೀಕ್ಷೆಯ ಉದ್ದೇಶ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸಮೀಕ್ಷೆಯ ನಿರ್ಧಾರ ಹೊರಬಿದ್ದದ್ದೇ ತಡ, ಸಮಾಜದ ಸಕಲ ಜಾತಿ–ಧರ್ಮಗಳೂ ಜಾಗೃತಗೊಂಡು ಪೈಪೋಟಿಗಿಳಿದಿವೆ. ಈ ಜಂಜಾಟದಲ್ಲಿ ರಾಜಕೀಯ ಪಕ್ಷಗಳೇನೂ ಹಿಂದೆ ಬಿದ್ದಿಲ್ಲ. ವರ್ತಮಾನದ ವಿದ್ಯಮಾನಗಳ ವಿಕಾರಗಳನ್ನು ನೋಡಿದರೆ ಭವಿಷ್ಯದ ಸಮಾಜದಲ್ಲಿ ಅನಾವರಣಗೊಳ್ಳಲಿರುವ ಅರಾಜಕತೆಯ ಸುಳಿವು ಸುಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ನಾಡು ಕನಸಿದ ಜಾತಿವಿನಾಶ ಚಳವಳಿ, ಪ್ರಸಕ್ತ ಜಾತಿಜಾಗೃತಿ ಅವಿವೇಕಕ್ಕೆ ಬಲಿಯಾಯಿತೇ ಎಂಬ ಸಂಶಯ ಕಾಡುತ್ತದೆ.



ಸಮಾನತೆಯ ಸಾಧನೆಗಾಗಿ ಶೋಷಿತ ಸಮುದಾಯಗಳು ಸಂಘಟಿತವಾಗುವುದಕ್ಕೆ ಅರ್ಥ, ಅಗತ್ಯ ಮತ್ತು ಸಮರ್ಥನೆ ಖಂಡಿತಾ ಇದೆ. ಆದರೆ, ಶೋಷಕ ಚರಿತ್ರೆಯ ಪ್ರಬಲ ಸಮುದಾಯಗಳು ಜಾತಿಯ ಅಸ್ಮಿತೆ, ಸಂಸ್ಕೃತಿ ಅಥವಾ ಇನ್ನಾವುದೇ ನೆಪದಲ್ಲಿ ಒಗ್ಗೂಡುವ ಪ್ರಯತ್ನಗಳು ಸಾಮಾಜಿಕ ಸಾಮರಸ್ಯಕ್ಕೆ ತಂದೊಡ್ಡುವ ಅಪಾಯ ಸಣ್ಣದಲ್ಲ. ಈ ವ್ಯತ್ಯಾಸ ಅರಿಯುವ ಗುಣಸ್ವಭಾವ ಸಾಮಾಜಿಕ ಪ್ರಜ್ಞೆಯ ಭಾಗವಾಗಬೇಕಿದೆ.

ಸಾಮಾಜಿಕ ನ್ಯಾಯ ಪರಿಕಲ್ಪನೆಯ ಬುನಾದಿ ಮೇಲೆ ಮೀಸಲಾತಿ ಕಲ್ಪಿಸುವಾಗ ಪರಿಗಣಿಸಬೇಕಾದ ಅನೇಕ ಪ್ರಶ್ನೆಗಳು ಇನ್ನೂ ಸಮರ್ಪಕ ಉತ್ತರ ಕಂಡುಕೊಳ್ಳದೇ ಉಳಿದಿವೆ. ವಿಶಾಲವಾಗಿ ಅಬಲ ಮತ್ತು ಸಬಲ ಜಾತಿ ಸಮುದಾಯಗಳನ್ನು ಪ್ರತ್ಯೇಕಿಸುವ ನಿಟ್ಟಿನಲ್ಲಿ ದೊಡ್ಡ ಬಿಕ್ಕಟ್ಟೇನೂ ಉದ್ಭವಿಸಲಾರದು. ಆದರೆ, ಅಬಲರೊಳಗಿನ ಒಳವಿಂಗಡಣೆಯ ಹಲವು ಸ್ತರಗಳಲ್ಲಿ ಪ್ರಕಟವಾಗುವ ಸಮುದಾಯಗಳ ಹಿತಾಸಕ್ತಿಗಳು ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿವೆ. ನಿದರ್ಶನಕ್ಕಾಗಿ ಒಂದೇ ಗುಂಪಿನಲ್ಲಿ ಸೇರಿಸಲಾದ ಸ್ಪೃಶ್ಯ ಮತ್ತು ಅಸ್ಪೃಶ್ಯ ಸಮುದಾಯಗಳ ತಾಕಲಾಟವನ್ನು ಗಮನಿಸಬಹುದು. ಕಟ್ಟಕಡೆಯ ಸ್ತರದ ಅಲೆಮಾರಿ ಸಮುದಾಯಗಳ ಅತಂತ್ರ ಸ್ಥಿತಿಯಂತೂ ದಾರುಣವಾಗಿದೆ. ಜೊತೆಗೆ, ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡದಲ್ಲಿ ಜೋಡಿಸುವ ಪ್ರಸ್ತಾವಕ್ಕೆ ವ್ಯಕ್ತವಾಗುತ್ತಿರುವ ಪರ–ವಿರೋಧದ ವಾದಗಳು, ವೀರಶೈವ–ಲಿಂಗಾಯತ ಸಂಘರ್ಷ ತಾರಕಕ್ಕೇರಿವೆ.

ಹಿಂದುಳಿದ ವರ್ಗಗಳ ಆಯೋಗದ ಪ್ರಕಟಣೆಯ ಪ್ರಕಾರ, ಕುಟುಂಬವನ್ನು ಒಂದು ಘಟಕವಾಗಿ ಪರಿಗಣಿಸಿ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಆದರೆ, ಹುಟ್ಟಿನಿಂದ ಒಂದು ಧರ್ಮ ಮತ್ತು ಜಾತಿಗೆ ಸೇರಿದ ಕುಟುಂಬದ ಯಾರಾದರೂ ಸದಸ್ಯರು ಸಮೀಕ್ಷೆಯಲ್ಲಿ ಬೇರೆಯದೇ ಧರ್ಮ–ಜಾತಿ ಅಥವಾ ನಾಸ್ತಿಕ ಎಂದು ಗುರುತಿಸಿಕೊಳ್ಳುವ ಅವಕಾಶ ನೀಡಿರುವುದು ಸಮೀಕ್ಷೆಯ ವಿಶೇಷ. ಈ ಅವಕಾಶ ಬಳಸಿಕೊಂಡು ಮೂಲ ಜಾತಿಯಿಂದ ಬೇರ್ಪಡುವ ವ್ಯಕ್ತಿಗತ ನಿರ್ಧಾರದಿಂದ ಆ ಕುಟುಂಬ ಒಳಪಡುವ ಜಾತಿಯ ಜನಸಂಖ್ಯೆಗೆ ಕಡಿತವಾಗುತ್ತದೆ. ಇದರಿಂದ ಜಾತಿ ಆಧಾರಿತವಾಗಿ ಕುಟುಂಬದ ಹಿಂದುಳಿಯುವಿಕೆಯನ್ನು ಗುರುತಿಸುವ ಸಮೀಕ್ಷೆಯ ಮೂಲ ಆಶಯಕ್ಕೆ ಹಿನ್ನಡೆಯಾಗಬಹುದೇ ಎಂಬ ಸಂಶಯ ಸಹಜ.

ಸಮಾಜದಲ್ಲಿ ಜಾತಿ–ಧರ್ಮ ನಿರ್ಧಾರವಾಗುವುದು ಹುಟ್ಟಿನಿಂದ; ಆಚರಣೆಯಿಂದಲ್ಲ. ಆಚರಣೆ ವಿಚಾರದಲ್ಲಿ ಜಾತಿ–ಧರ್ಮ ತೊರೆದ, ಬದಲಾಯಿಸಿದ ಮಾತ್ರಕ್ಕೆ ಹುಟ್ಟಿನಿಂದ ಪ್ರಾಪ್ತವಾದ ಸಾಮಾಜಿಕ ಸ್ಥಾನಮಾನದಲ್ಲಿ ಗಮನಾರ್ಹ ವ್ಯತ್ಯಾಸವಾಗುವುದಿಲ್ಲ. ಇದರಿಂದ ಬಹುಸಂಖ್ಯಾತ ಧರ್ಮ ಮತ್ತು ಬಲಾಢ್ಯ ಜಾತಿಗಳಿಗೆ ಸಂಬಂಧಿಸಿದಂತೆ ಸಮೀಕ್ಷೆಯ ಮೂಲೋದ್ದೇಶಕ್ಕೆ ಸಹಜವಾಗಿ ವ್ಯತ್ಯಯವಾಗುವುದಿಲ್ಲ. ಆದರೆ, ದುರ್ಬಲ ಜಾತಿಗಳ ಸಂಖ್ಯೆಯಲ್ಲಾಗುವ ಈ ರೀತಿಯ ಕಡಿತದ ಪರಿಣಾಮವಾಗಿ, ಜನಸಂಖ್ಯಾಧಾರಿತ ಸೌಲಭ್ಯಗಳ ನಿರ್ಧಾರದಲ್ಲಿ ಸಾಮಾಜಿಕ ನ್ಯಾಯಕ್ಕೆ ಧಕ್ಕೆಯಾಗುವ ಸಾಧ್ಯತೆಯಿದೆ. ಈ ಸಮಸ್ಯೆ ನಿವಾರಣೆಯ ದಿಸೆಯಲ್ಲಿ ಚೌಕಟ್ಟಿನಿಂದ ಹೊರಬಂದು ಮುಕ್ತವಾಗಿ ಯೋಚಿಸುವುದು ಅನಿವಾರ್ಯ.

ಜಾತಿ ಮತ್ತು ಧರ್ಮ ನಮೂದಿಸುವ ಅಂಕಣದಲ್ಲಿ ಹುಟ್ಟಿನಿಂದ ಮತ್ತು ಆಚರಣೆಯಿಂದ ಎಂದು ಎರಡು ವಿಧದಲ್ಲಿ ವಿಭಾಗಿಸಿ ಮಾಹಿತಿ ಪಡೆಯಬಹುದು. ಹುಟ್ಟಿನಿಂದಲೇ ಗುರುತಿಸಲಾಗುವ ಜಾತಿ–ಧರ್ಮಗಳನ್ನು ಉಲ್ಲೇಖಿಸುವುದರ ಜೊತೆಗೆ, ಬದಲಾಯಿಸಿದ/ತೊರೆದ ದಾಖಲೆಯನ್ನೂ ಸಂಗ್ರಹಿಸುವ ಅವಕಾಶವಿದು. ಇದರಿಂದ ಜಾತಿ ವ್ಯವಸ್ಥೆಯ ಸಿಕ್ಕುಗಳಿಂದ ಬಿಡುಗಡೆಯಾಗುವ ಪ್ರಯತ್ನದಲ್ಲಿರುವ ವೈಚಾರಿಕ ಮನಸ್ಸುಗಳಿಗೆ ಆ ದಿಕ್ಕಿನಲ್ಲಿ ಅಧಿಕೃತವಾಗಿ ಹೆಜ್ಜೆಯೂರುವ ಐತಿಹಾಸಿಕ ಆಯ್ಕೆ ಒದಗಿಸಿದಂತಾಗುತ್ತದೆ. ಧರ್ಮ–ಜಾತಿ ತೊರೆದು ಮನುಷ್ಯರೆಂದಷ್ಟೇ ಮೊದಲ ಬಾರಿಗೆ ಗುರುತಿಸಿಕೊಂಡವರ ಮುಂದಿನ ಪೀಳಿಗೆಯು, ಹುಟ್ಟಿನಿಂದ ತಗಲುವ ಜಾತಿರೋಗದಿಂದ ಮುಕ್ತವಾಗಲೂ ಸಾಧ್ಯ.

ಅಂತಿಮವಾಗಿ, ವೈಜ್ಞಾನಿಕವಾಗಿ ರೂಪುಗೊಂಡ ಸಮೀಕ್ಷೆ ಹೊರಬರುತ್ತದೆ ಎಂದುಕೊಳ್ಳೋಣ. ಅದಕ್ಕೆ ಕಾಂತರಾಜು ಆಯೋಗದ ವರದಿಯ ಗತಿ ಒದಗುವುದಿಲ್ಲ ಎಂಬ ಭರವಸೆ ಯಾರಿಗಾದರೂ ಇದೆಯೇ?

ದುಡಿಯುವವರ ಸಂಖ್ಯೆ: ದೇಶದಲ್ಲಿ ಹೆಚ್ಚಳ

ಮಾದರಿ ನೋಂದಣಿ ವ್ಯವಸ್ಥೆಯ ಸಾಂಖ್ಯಿಕ ವರದಿಯಲ್ಲಿ ಉಲ್ಲೇಖ



ದೇಶದ 18 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟಾರೆ ಫಲವಂತಿಕೆ ದರವು (ಟಿಎಫ್‌ಆರ್) ಜನಸಂಖ್ಯೆಯ ಮಟ್ಟ ಕಾಯ್ದುಕೊಳ್ಳಲು ಅಗತ್ಯವಾದ ಪ್ರಮಾಣಕ್ಕಿಂತ (2.1) ಕಡಿಮೆ ಇದೆ ಎಂದೂ ವರದಿ ಹೇಳಿದೆ. ಶಿಶು ಮರಣ ಪ್ರಮಾಣವು (2023ರಲ್ಲಿ) 25 ಇದ್ದು, ಕಳೆದ ಐದು ವರ್ಷಗಳಲ್ಲಿ ಏಳು ಅಂಶಗಳಷ್ಟು ಕಡಿಮೆಯಾಗಿದೆ ಎಂದು ವರದಿ ತಿಳಿಸಿದೆ.

ಪ್ರಜಾವಾಣಿ ವಾರ್ತೆ

ದೇಶದಲ್ಲಿ ದುಡಿಯುವವರ ಸಂಖ್ಯೆ ಹೆಚ್ಚಾಗಿದೆ ಎಂದು ಮಾದರಿ ನೋಂದಣಿ ವ್ಯವಸ್ಥೆಯ (ಎಸ್‌ಆರ್‌ಎಸ್) ಸಾಂಖ್ಯಿಕ ವರದಿ (2023) ತಿಳಿಸಿದೆ. 15–59 ವರ್ಷ ವಯಸ್ಸಿನವರ ಪ್ರಮಾಣ 1971ರಲ್ಲಿ ಶೇ 53.4 ಇದ್ದದ್ದು 2023ರಲ್ಲಿ ಶೇ 66.1ಕ್ಕೆ ಏರಿಕೆಯಾಗಿದೆ ಎಂದು ವರದಿ ಉಲ್ಲೇಖಿಸಿದೆ. 1981ರಲ್ಲಿ ಈ ಪ್ರಮಾಣ ಶೇ 56.3 ಮತ್ತು 1991ರಲ್ಲಿ ಶೇ 57.7ರಷ್ಟಿತ್ತು.


ಒಟ್ಟು 88 ಲಕ್ಷ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದ್ದು, ಇದು ದೇಶದ ಅತಿ ದೊಡ್ಡ ಸಮೀಕ್ಷೆ ಎನ್ನಿಸಿಕೊಂಡಿದೆ.

ಗಮನಾರ್ಹ ವಿಚಾರವೆಂದರೆ, ಆರ್ಥಿಕವಾಗಿ ಕ್ರಿಯಾಶೀಲರಾಗಿರುವವರ ಪೈಕಿ ಮಹಿಳೆಯರ ಪ್ರಮಾಣವು (ಶೇ 66) ಪುರುಷರ ಪ್ರಮಾಣಕ್ಕಿಂತಲೂ (ಶೇ 65.9) ಹೆಚ್ಚಿದೆ. 15–59 ವರ್ಷ ವಯೋಮಾನದ ಜನರಲ್ಲಿ ಕರ್ನಾಟಕವು ಏಳನೇ ಸ್ಥಾನ ಪಡೆದಿದ್ದು, ರಾಜ್ಯದಲ್ಲಿ ದುಡಿಯುವವರ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ (ಶೇ 68). ಈ ಪಟ್ಟಿಯಲ್ಲಿ ಬಿಹಾರವು (ಶೇ 60.1) ಕೊನೆಯ ಸ್ಥಾನ ಪಡೆದಿದೆ. ಈ ವಯೋಮಾನದವರು ನಗರ ಪ್ರದೇಶಗಳಲ್ಲಿ (ಶೇ 68.6) ಗ್ರಾಮೀಣ ಪ್ರದೇಶಗಳಿಗಿಂತ (ಶೇ 64.6) ಹೆಚ್ಚು.


ದೇಶ ಹಾಗೂ ವಿವಿಧ ರಾಜ್ಯಗಳಲ್ಲಿನ ವಿವಿಧ ವಯೋಮಾನದ (0–4, 5–9, 15–59, 60 + ವರ್ಷ) ಜನಸಂಖ್ಯೆಯ ಪ್ರಮಾಣವನ್ನು ವರದಿಯು ಒಳಗೊಂಡಿದೆ.

ದೇಶದ ದಕ್ಷಿಣ ರಾಜ್ಯಗಳೂ ಒಳಗೊಂಡಂತೆ ಹಲವು ರಾಜ್ಯಗಳಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗಿರುವುದನ್ನೂ ವರದಿ ಉಲ್ಲೇಖಿಸಿದೆ. 2023ರಲ್ಲಿ ದೇಶದಲ್ಲಿ 60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯೋಮಾನದವರ ಪ್ರಮಾಣವು ಶೇ 9.7ರಷ್ಟಿತ್ತು. ಅದರಲ್ಲಿ ಮಹಿಳೆಯರ ಪ್ರಮಾಣವು ಶೇ 10.2 ಆಗಿದ್ದರೆ, ಪುರುಷರ ಪ್ರಮಾಣವು ಶೇ 9.2 ಆಗಿದೆ. ಕೇರಳದಲ್ಲಿ ಅತಿ ಹೆಚ್ಚು ಅಂದರೆ ಶೇ 15.1ರಷ್ಟು ಈ ವಯೋಮಾನದವರಿದ್ದಾರೆ. ತಮಿಳುನಾಡು (ಶೇ 14) ಮತ್ತು ಹಿಮಾಚಲ ಪ್ರದೇಶಗಳು (ಶೇ 13.2) ನಂತರದ ಸ್ಥಾನದಲ್ಲಿವೆ. ಜಾರ್ಖಂಡ್ ಮತ್ತು ಅಸ್ಸಾಂನಲ್ಲಿ ಅತಿ ಕಡಿಮೆ ಅಂದರೆ ತಲಾ ಶೇ 7.6ರಷ್ಟು ಮತ್ತು ದೆಹಲಿಯಲ್ಲಿ ಶೇ 7.7ರಷ್ಟು 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಿದ್ದಾರೆ.


ದೇಶದಲ್ಲಿ ವಯೋಮಾನವಾರು ಜನಸಂಖ್ಯೆಯ ಹಂಚಿಕೆ




ಉದ್ಯೋಗ ನಿರತ ಜನಸಂಖ್ಯೆಯ (15–59 ವರ್ಷ) ಪ್ರಮಾಣ ಹೆಚ್ಚಿರುವ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು (%)



14 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಪ್ರಮಾಣ: ಎಲ್ಲಿ, ಎಷ್ಟು? (%)



ಕರ್ನಾಟಕ: ವರದಿ ಹೇಳುವುದೇನು?





ರಾಜ್ಯದಲ್ಲಿ 15–59 ವರ್ಷ ವಯೋಮಾನದವರು

ಪ್ರದೇಶ	ಒಟ್ಟು	ಪುರುಷ	ಮಹಿಳೆ
ರಾಜ್ಯ	68.0	68.4	67.6
ಗ್ರಾಮೀಣ	67.1	68.1	66.0
ನಗರ	69.3	68.8	69.7

ರಾಜ್ಯದಲ್ಲಿ 15ರಿಂದ 59 ವರ್ಷದವರೆಗಿನ ದುಡಿಯುವವರ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿದೆ. ಶೇ 68ರಷ್ಟು ಮಂದಿ ಈ ವಯೋಮಾನದವರು ಕರ್ನಾಟಕದಲ್ಲಿದ್ದಾರೆ. ಪುರುಷರು ಶೇ 68.4ರಷ್ಟಿದ್ದರೆ, ಮಹಿಳೆಯರ ಪ್ರಮಾಣ ಶೇ 67.4ರಷ್ಟಿದೆ.

ರಾಜ್ಯದ ಗ್ರಾಮೀಣ ಭಾಗದಲ್ಲಿ ದುಡಿಯುವ ಪುರುಷರ ಸಂಖ್ಯೆ (ಶೇ 68.4) ಕಡಿಮೆ ಇದ್ದರೆ, ನಗರ ಪ್ರದೇಶಗಳಲ್ಲಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ (ಶೇ 69.7).

14 ವರ್ಷದೊಳಗಿನ ಮಕ್ಕಳ ಪ್ರಮಾಣವು ರಾಜ್ಯದಲ್ಲಿ ರಾಷ್ಟ್ರೀಯ ಸರಾಸರಿಗಿಂತ (ಶೇ 24.2) ಕಡಿಮೆ ಇದೆ. ರಾಜ್ಯದಲ್ಲಿ ಈ ಪ್ರಾಯದ ಮಕ್ಕಳು ಶೇ 21.9ರಷ್ಟಿದ್ದಾರೆ. ಬಾಲಕರು ಶೇ 22.4ರಷ್ಟಿದ್ದರೆ, ಬಾಲಕಿಯರ ಪ್ರಮಾಣ ಶೇ 21.3ರಷ್ಟು.

ನಗರಗಳಿಗೆ ಹೋಲಿಸಿದರೆ (ಶೇ 21.4), ಗ್ರಾಮೀಣ ಭಾಗದಲ್ಲಿ ಮಕ್ಕಳ ಪ್ರಮಾಣ (ಶೇ 22.2) ಹೆಚ್ಚಿದೆ.


ವೃದ್ಧರು ಹೆಚ್ಚು: ರಾಜ್ಯದಲ್ಲಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಪ್ರಮಾಣ ಶೇ 10.1ರಷ್ಟಿದೆ. ಇದು ದೇಶದ ಒಟ್ಟು ಸರಾಸರಿಗಿಂತ (ಶೇ 9.7) ಹೆಚ್ಚು. ವೃದ್ಧರಿಗಿಂತ (ಶೇ 9.1) ವೃದ್ಧೆಯವರ ಪ್ರಮಾಣ ಜಾಸ್ತಿ (ಶೇ 11.1) ಇದೆ.

60 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಗ್ರಾಮೀಣ ಭಾಗದಲ್ಲಿ ಶೇ 10.7ರಷ್ಟಿದ್ದರೆ, ನಗರ ವ್ಯಾಪ್ತಿಯಲ್ಲಿ ಶೇ 9.3ರಷ್ಟು ಇದ್ದಾರೆ. ಎರಡೂ ಕಡೆಗಳಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಿದೆ.

ರಾಷ್ಟ್ರೀಯ

ದೀಪಕ್ ವಿರುದ್ಧ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಕರ್ನಾಟಕದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಮೇಲ್ವಿಚಾರಣಾ ಸಮಿತಿ ಮುಖ್ಯಸ್ಥ ದೀಪಕ್ ಶರ್ಮಾ ಅವರ ವಿರುದ್ಧದ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

50 ವರ್ಷಗಳ ಹಿಂದೆ ಭೂಕಬಳಿಕೆ ಮಾಡಿ, ಮನೆ ನಿರ್ಮಿಸಿಕೊಂಡ ಆರೋಪ ದೀಪಕ್ ಅವರ ಮೇಲಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಅವರ ಪೀಠ ವಿಚಾರಣೆ ನಡೆಸಿತು.

ಈ ಸಂಬಂಧ ಕೇಂದ್ರೀಯ ಉನ್ನತಾಧಿಕಾರ ಸಮಿತಿ (ಸಿಇಸಿ) ನೀಡಿದ ವರದಿಯ ಕುರಿತು ಪ್ರತಿಕ್ರಿಯಿಸುವಂತೆ ಕರ್ನಾಟಕದ ಮುಖ್ಯ ಕಾರ್ಯದರ್ಶಿ ಮತ್ತು ಬಿಬಿಎಂಪಿ (ಈಗಿನ ಹೆಸರು ಜಿಬಿಜಿಬಿ) ಆಯುಕ್ತರಿಗೆ ನ್ಯಾಯಾಲಯ ನೋಟಿಸ್ ನೀಡಿದೆ.

‘ಮೇಲ್ವಿಚಾರಣೆ ಸಮಿತಿಯ ಮೂಲಕ ದೀಪಕ್ ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಅವರ ಮೇಲೆ ಹಲವರಿಗೆ ದ್ವೇಷ ಭಾವನೆ ಇದೆ’ ಎಂದು ದೀಪಕ್ ಪರ ವಕೀಲರು ವಾದಿಸಿದರು. ನಾಲ್ಕು ವಾರಗಳ ಬಳಿಕ ವಿಚಾರಣೆ ನಡೆಸುವುದಾಗಿ ಪೀಠ ಹೇಳಿತು.

ಶಾಬಿರ್ ಬಂಧನ: ಬಾಕಿ ಪ್ರಕರಣಗಳ ಮಾಹಿತಿ ನೀಡಲು ಸೂಚನೆ



ನವದೆಹಲಿ (ಪಿಟಿಐ): ‘ಉಗ್ರರಿಗೆ ಹಣಕಾಸಿನ ನೆರವು ನೀಡಿದ ಪ್ರಕರಣದಲ್ಲಿ ಬಂಧಿಸಲಾಗಿರುವ ಕಾಶ್ಮೀರದ ಪ್ರತ್ಯೇಕತಾವಾದಿ ಶಾಬಿರ್ ಅಹಮದ್ ಶಾ ಅವರು ಮೇಲೆ ಇನ್ನೂ 24 ಪ್ರಕರಣಗಳಿವೆ. ಈ ಪ್ರಕರಣಗಳಲ್ಲಿ ಇವರನ್ನು ಯಾಕೆ ಬಂಧಿಸಲಾಗಿದೆ ಎಂಬ ಮಾಹಿತಿ ನೀಡಿ’ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆಗೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿತು.

ಜೂನ್ 12ರಂದು ಶಾ ಅವರಿಗೆ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಶಾ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಮೂರ್ತಿಗಳಾದ ವಿಕ್ರಂ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿತು.

ಮಣಿಪುರ: ದಾಳಿಕೋರನ ಬಂಧನ



ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಅಸ್ಸಾಂ ರೈಫಲ್ಸ್ ಬೆಂಗಾವಲು ಪಡೆಯ ಮೇಲೆ ದಾಳಿ ನಡೆಸಿ ಇಬ್ಬರು ಸಿಬ್ಬಂದಿ ಸಾವಿಗೆ ಕಾರಣವಾದ ಪ್ರಮುಖ ಆರೋಪಿಯನ್ನು ಬಂಧಿಸಲಾಗಿದೆ.

ಶಸ್ತ್ರಸಜ್ಜಿತ ಉಗ್ರರು ಇರುವ ಮಾಹಿತಿ ಮೇರೆಗೆ ಕಾಮೆಂಗ್ ಪ್ರದೇಶದಲ್ಲಿ ಜಿಲ್ಲಾ ಪೊಲೀಸ್ ಮತ್ತು ಭದ್ರತಾ ಪಡೆಗಳು ಮಂಗಳವಾರ ತಡರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿವೆ. ಈ ವೇಳೆ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ಮಾಜಿ ಸದಸ್ಯ ಖೋಮ್‌ಡ್ರಾಮ್ ಓಜಿತ್ ಸಿಂಗ್ (47) ಅನ್ನು ಬಂಧಿಸಲಾಗಿದೆ ಎಂದು ಮಣಿಪುರದ ಪೊಲೀಸ್ ಮಹಾನಿರ್ದೇಶಕ ರಾಜೀವ್ ಸಿಂಗ್ ಅವರು ಬುಧವಾರ ತಿಳಿಸಿದ್ದಾರೆ.

ಆರೋಪಿ ನೀಡಿದ ಮಾಹಿತಿ ಆಧರಿಸಿ, ದಾಳಿಯಲ್ಲಿ ಬಳಸಿದ್ದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಪಹಲ್ಗಾಮ್ ಉಗ್ರರಿಗೆ ನೆರವು: ಸೆರೆ



ಶ್ರೀನಗರ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಬೆಂಬಲ ನೀಡಿದ್ದ ಆರೋಪದಡಿ ಉತ್ತರ ಕಾಶ್ಮೀರದ ವ್ಯಕ್ತಿಯೊಬ್ಬನನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.


‘ಗುಪ್ತಚರ ಮಾಹಿತಿಯ ಆಧಾರದಲ್ಲಿ ಶ್ರೀನಗರ ಪೊಲೀಸರು ಮೊಹದ್ ಯೂಸುಫ್ ಕಟಾರಿ(26) ಎಂಬಾತನನ್ನು ಬಂಧಿಸಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಭಯೋತ್ಪಾದಕರಿಗೆ ಯೂಸುಫ್ ಸಂಚಾರಕ್ಕೆ ನೆರವು ಒದಗಿಸಿದ್ದ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಿಂಗಪುರದಲ್ಲಿ ಸ್ಕೂಬಾ ಡೈವಿಂಗ್ ವೇಳೆ ಮೃತಪಟ್ಟ ಅಸ್ಸಾಂ ಗಾಯಕ ಜುಬಿನ್ ಗರ್ಗ್ ಅವರ ಕೊನೆಯ ಕ್ಷಣಗಳು ಎಂದು ಪ್ರತಿಪಾದಿಸುತ್ತಾ, ಸ್ಕೂಬಾ ಡೈವಿಂಗ್ ಮಾಡುವ ವ್ಯಕ್ತಿಯೊಬ್ಬರು ನೀರಿನೊಳಗೆ ಅಸ್ವಸ್ಥರಾಗುವ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಈ ವಿಡಿಯೊವನ್ನು ಸೆ.19ರಂದು ಪೋಸ್ಟ್ ಮಾಡಲಾಗಿದೆ. ಅದೇ ದಿನ ಜುಬಿನ್ ಅವರು ಮೃತಪಟ್ಟಿದ್ದರು. ಆದರೆ, ಇದು ಸುಳ್ಳು.



ಈ ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ‘ಸಾಲ್ಟಿಮ್ಯಾಮಲ್ಸ್’ (saltymammals) ಎಂಬ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ ವಿಡಿಯೊ ಕಂಡು ಬಂತು. ವಿಡಿಯೊವನ್ನು ಈ ವರ್ಷದ ಜೂನ್ 13ರಂದು ಪೋಸ್ಟ್ ಮಾಡಲಾಗಿತ್ತು. ಆ ವಿಡಿಯೊದಲ್ಲಿ @stop.the.sun ಎಂಬ ಇನ್‌ಸ್ಟಾಗ್ರಾಂ ಖಾತೆಯ ವಿವರ ಇತ್ತು. ಆ ಖಾತೆಗೆ ಭೇಟಿ ನೀಡಿದಾಗ, ಮೇ 14ರಂದು ಇದೇ ವಿಡಿಯೊ ತುಣುಕನ್ನು ಪೋಸ್ಟ್ ಮಾಡಲಾಗಿತ್ತು. ಡೈವರ್ ಒಬ್ಬರು ನೀರಿನ ಆಳಕ್ಕೆ ಹೋದಾಗ ಪ್ರಜ್ಞೆ ತಪ್ಪಿದ ಬಗ್ಗೆ ಅದರಲ್ಲಿ ಉಲ್ಲೇಖಿಸಲಾಗಿತ್ತು. ರಕ್ಷಣೆಗಾಗಿ ಇದ್ದ ಡೈವರ್ ಅವರನ್ನು ರಕ್ಷಿಸಿದ್ದರು. ಜುಬಿನ್ ಗರ್ಗ್ ಅವರು ಸಾವು ಹೇಗಾಯಿತು ಎಂಬುದನ್ನು ತಿಳಿಯುವುದಕ್ಕಾಗಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾದ ವರದಿ ಸಿಕ್ಕಿತು. ‘ಆರಂಭದಲ್ಲಿ ಜುಬಿನ್ ಅವರು ಸ್ಕೂಬಾ ಡೈವಿಂಗ್ ಮಾಡುವ ಸಂದರ್ಭದಲ್ಲಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿತ್ತು. ಆದರೆ, ಗರ್ಗ್ ಅವರು ಜೀವ ರಕ್ಷಕ ಜಾಕೆಟ್ ಧರಿಸದೇ ಈಜಲು ಹೋಗಿದ್ದರಿಂದ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ ಅವರು ಹೇಳಿದ್ದಾರೆ’ ಎಂದು ಆ ವರದಿಯಲ್ಲಿತ್ತು. ಬೇರೆ ಯಾರಿಗೋ ಸಂಬಂಧಿಸಿದ ವಿಡಿಯೊವನ್ನು ಜುಬಿನ್ ಅವರ ಸಾವಿಗೆ ತಳಕು ಹಾಕಿ ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಮನೆ ಎಂದರೆ ಚಾವಣಿ ಅಲ್ಲ

ನುಡಿ ಬೆಳಗು



ಪಿ.ಚಂದ್ರಿಕಾ


ದೊಡ್ಡ ಮನೆ, ಕೈತುಂಬಾ ಹಣ, ಮನೆತುಂಬಾ ಆಳು-ಕಾಳು, ಓಡಾಡಲಿಕ್ಕೆ ದೊಡ್ಡ ಕಾರು... ಬೇಕಾದ್ದನ್ನು ಕೊಳ್ಳಲು ಯಾರ ಅಡ್ಡಿಯೂ ಇಲ್ಲ. ಆ ಗಂಡ ಹೆಂಡತಿ ಇಬ್ಬರೂ ತುಂಬಾ ಸಾಮಾನ್ಯ ಸ್ಥಿತಿಯಿಂದ ಕಷ್ಟಪಟ್ಟು ಈ ಮಟ್ಟಿಗೆ ಬೆಳೆದದ್ದರ ಬಗ್ಗೆ ಕೆಲವರಿಗೆ ಅಸೂಯೆ; ಇನ್ನು ಕೆಲವರಿಗೆ ಮೆಚ್ಚುಗೆ. ಸ್ವತಃ ಆ ಇಬ್ಬರಿಗೂ ಇದು ಅಚ್ಚರಿಯೇ. ಬಡತನದ ಕಾಲದಲ್ಲಿ ಒಂದು ಪುಟ್ಟ ಗುಡಿಸಲ ಮುಂದೆ ಹೋಗುವಾಗ ಹೆಂಡತಿ ಹೇಳುತ್ತಿದ್ದಳು, ನನಗೆ ಇಂಥಾ ಒಂದು ಪುಟ್ಟ ಗುಡಿಸಲು ಸ್ವಂತದ್ದಾಗಿಬಿಟ್ಟರೆ ಬೇರೆ ಏನು ಬೇಡ ಎಂದು. ಒಂದು ಹೊತ್ತಿನ ಊಟಕ್ಕೂ ಇಲ್ಲದ ದಿನಗಳಲ್ಲಿ ಇಬ್ಬರೂ ಎಷ್ಟು ಕನಸನ್ನು ಕಂಡರು. ನನಸು ಮಾಡಲು ಹಗಲು ರಾತ್ರಿ ದುಡಿದು ಒಂದು ಮನೆ ಕಟ್ಟಿದರು. ಇನ್ನು ನಮಗೆ ಕಷ್ಟ ಇಲ್ಲ ಅಂದುಕೊಂಡರು.

ಆದರೆ, ದಿನ ಕಳೆದ ಹಾಗೆ ದುಡಿಮೆಯಲ್ಲಿ ಮನನೆಟ್ಟ ಗಂಡ, ಮಕ್ಕಳ ಪಾಲನೆಯಲ್ಲಿ ತೊಡಗಿದ ಹೆಂಡತಿ– ಇಬ್ಬರ ನಡುವೆ ಕನಸುಗಳನ್ನು ಹಂಚಿಕೊಳ್ಳಲಿಕ್ಕೆ ಏನೂ ಇರಲಿಲ್ಲ. ಹೆಂಡತಿಗೆ ಇದು ಶೂನ್ಯವಾಗಿ ಕಾಡತೊಡಗಿತ್ತು. ಮಕ್ಕಳು ಶಾಲೆ, ಗಂಡ ಕೆಲಸ ಎಂದು ಹೋದರೆ ಹೆಂಡತಿ ಒಬ್ಬಳೇ ಮನೆಯಲ್ಲಿ. ಕೊನೆಗೆ ಗಂಡನಲ್ಲಿ ಜಗಳ ಕೂಡಾ ಆಡಲಿಕ್ಕೆ ಕಾರಣಗಳೇ ಇರಲಿಲ್ಲ.

ಮೊದಮೊದಲು ತನ್ನ ಬಂಧುವರ್ಗ ಸ್ನೇಹಿತರೆದುರು ಜಂಭ ಕೊಚ್ಚುತ್ತಿದ್ದಳು. ಆದರೆ ಒಳಗೆ ಎಲ್ಲವನ್ನೂ ಕಳಕೊಂಡ ಭಾವ. ನನಗಿನ್ನು ಮಾಡಲಿಕ್ಕೆ ಏನಿದೆ? ಗಂಡನ ಜೊತೆ ಸಣ್ಣದಾಗಿ ಜಗಳ, ಅಸಮಾಧಾನ ಶುರುವಾಯಿತು. ಗಂಡ ಹೇಳಿದ: ‘ನೀನು ಕಷ್ಟವಿಲ್ಲದೆ ಆರಾಮಾಗಿ ಇರಬೇಕೆಂದಲ್ಲವೇ ಇಷ್ಟೆಲ್ಲಾ ಮಾಡುತ್ತಿರುವುದು?’ ‘ಅಂದರೇನು, ನೀವು ಕಷ್ಟ ಪಡುತ್ತಿದ್ದರೆ ನಾನು ಆರಾಮಾಗಿದ್ದೇನೆ ಎಂದೇ. ಈ ಎಲ್ಲಾ ದುಡಿಮೆಯಲ್ಲಿ ನನ್ನ ಪಾಲಿಲ್ಲವೇ’ ಎಂದಳು ಹೆಂಡತಿ. ಗಂಡನಿಗೆ ಅಚ್ಚರಿ: ‘ನಾನು ಹಾಗೆ ಹೇಳಿದೆನೇ?’ ಹೀಗೆ ಶುರುವಾದ ಜಗಳ ಅಂತ್ಯ ತಲುಪುವಾಗ ಅವಳು ಹೇಳಿದಳು: ‘ನೆಮ್ಮದಿಯೇ ಇಲ್ಲದ ಮೇಲೆ ಈ ಮನೆ ಯಾಕೆ? ನೀನು ಹೀಗೆ ನನ್ನ ಕಡೆಗೂ ಗಮನ ಕೊಡದೆ ಹೋದರೆ ನಾನು ನಿನ್ನನ್ನು ಬಿಟ್ಟು ಹೋಗುವೆ’. ಗಂಡನಿಗೆ ಗಾಬರಿಯಾಯಿತು, ‘ನೀನು ಕಷ್ಟ ಪಡಲು ಹೇಳಿಕೊಟ್ಟೆ. ಈಗ ಅದು ಅಭ್ಯಾಸವಾಗಿದೆ. ನನಗೆ ಇದನ್ನು ಬಿಟ್ಟು ಇರಲು ಇನ್ನು ಸಾಧ್ಯವೇ ಇಲ್ಲ’ ಎಂದ. ಹೆಂಡತಿಗೆ ಮತ್ತಷ್ಟು ಕೋಪಬಂದು ಕೂಗಿದಳು: ‘ನನಗಿಂತ ಅದು ಹೆಚ್ಚಾಯಿತೇ?’

ಮನೆ ಎಂದರೆ ಬರಿಯ ಚಾವಣಿಯಲ್ಲ, ಇಟ್ಟಿಗೆಗಳಿಂದ ಮಾಡಿದ ಕಟ್ಟಡವೂ ಅಲ್ಲ. ಅದು ಆಸೆಯೂ ಅಲ್ಲ, ಗಳಿಕೆಯ ಸೂತ್ರವೂ ಅಲ್ಲ. ಅದು ನಿಮಿತ್ತ ಮಾತ್ರ. ಅಲ್ಲಿ ಸಂಬಂಧಗಳು ಶುರುವಾಗುತ್ತವೆ. ಅದು ಮನಸ್ಸುಗಳ ಮಿಲನ, ಅಂತಃಕರಣದ ಬೆಳಕು. ಕೂಡಿ ಬದುಕುವ ಭರವಸೆ. ಮುಂದಿನ ಜನಾಂಗದ ಆಧಾರಸ್ತಂಭ. ಭಾರತದ ನಮ್ಮ ತಾತ್ವಿಕತೆ ಒಟ್ಟಾಗಿ ಬಾಳುವುದು. ಅದು ಇಡಿಗಾಳಿನಂತೆ. ಅದಕ್ಕೇ ಮೊಳೆಯುವ, ಬೆಳೆಯುವ ಶಕ್ತಿ ಇರುವುದು. ❖

ಗುಂಡಣ್ಣ



ಪದಬಂಧ 6175

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅದಲು ಬದಲು ಅಥವಾ ವಿರೋಧ (3)
3.ಸಂದಣಿಯನ್ನು ಸೇರಲು ಸೂಕ್ತ ಕಾಲವಿದು (3)
5.ಗರುಡನ ಹತ್ತಿರ ಕಾಣುತ್ತಿರುವ ಚರ್ಮವಾದ್ಯ (4)
7.ಭಜನೆ ಮಾಡುತ್ತಲೇ ಬೇರೆಯಾಗುವಿಕೆ! (4)
9.ನಿಜವಾಗಿಯೂ ರಾತ್ರಿಯಿದು (3)
11.ಪೂಜ್ಯಳಾದ ಹೆಂಗಸು (2)
12.ಲಡಾಯಿ ನಡೆಯುವಾಗ ಕಾಣಿಸಿದ ದಾರದ ಉಂಡೆ (2)
13.ವಸತಿ ಹತ್ತಿರ ಉಪಪತ್ನಿ ಬಂದಿದ್ದಾಳೆ (3)
15.ಇದಿನ್ನೂ ಎಳೆ ಮಗು (4)
19.ಕೊಬ್ಬಿದ ಆನೆಯಿದು (4)
20.ಬಣ್ಣಹಚ್ಚಿ ಮಾಡಿರುವ ವಿಸ್ತಾರ ನಿರೂಪಣೆ (3)
21.ಲೀಲಾಜಾಲವಾಗಿ ನಡೆದ ಏಲಂ (3)

ಮೇಲಿಂದ ಕೆಳಕ್ಕೆ

1.ಜನರ ಬಳಿಯಿರುವ ಬೀಸಣಿಕೆ (3)
2.ಸರ ತಂದದ್ದಕ್ಕೇ ಈ ಸಂಭ್ರಮ! (4)
4.ಅನುಜನ ಬಳಿಯಿರುವ ರಾಕ್ಷಸ (3)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ಎಲ್ಲೆ ಬಳಿ ತಲೆದೋರಿದ ಶೀತ (3)
10.ವಾಸಸ್ಥಾನ ಇಲ್ಲಿದೆ (3)
11.ಆರೋಹಣದಲ್ಲಿರುವ ಸವಾರ ಕಾಣುತ್ತಿದ್ದಾನೆಯೇ? (3)
14.ಎಳ್ಳು ನೀರು ಬಿಡುವಿಕೆ (4)
16.ಪರ್ಣಶಾಲೆಯ ಹತ್ತಿರವಿರುವ ಗರುಡ (3)
17.ಸುಗಮವಾಗಿ ಕಿತ್ತಿರುವ ಹೂ (2)
18.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)



6174ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭ್ಯಾಗತ 4.ಭಯಂಕರ 5.ಗುಲಾಮ 7.ಜವ 9.ಮಕರಸಂಕ್ರಮಣ 11.ದಣಿ 12.ಣಯಪ 14.ಕಾರವಾರ 16.ಹರಿದಾರಿ

ಮೇಲಿಂದ ಕೆಳಕ್ಕೆ:
1.ಅಲಗು 2.ತಕ್ರ 3.ಚಾಕರಿ 4.ಭವ 6.ಮಧುಕರಿ 7.ಜನಸಂದಣಿ 8.ಸುಮಬಾಣ 10.ಹರಣ 11.ದರ 13.ಪರಾರಿ 15.ದಾಹ

ಸುಡೊಕು 6559

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	2			3		4		6
4		1	5		2			
				4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

6558 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಸೆಪ್ಟೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ತೃತೀಯ ಗಂ. 7-07 **ನಕ್ಷತ್ರ:** ಸ್ವಾತಿ ಗಂ. 19-09 **ಯೋಗ:** ವೈಧೃತಿ ಗಂ. 21-54 **ಕರಣ:** ಗರ ಗಂ. 7-07 ಕನ್ಯಾ ಮಾಸದ 08 ನೇ ದಿನ. **ಮಳೆ ನಕ್ಷತ್ರ :** ಉತ್ತರಾ 4 ನೇ ಪಾದ. **ರಾಹುಕಾಲ :** ಮಧ್ಯಾಹ್ನ 1-30 -3.00, **ಸೂರ್ಯೋದಯ :** 06-23 **ಸೂರ್ಯಾಸ್ತ :** 06-21 ಮುಸ್ಲಿಂ ದಿನಾಂಕ : 02 ರಬಿಯುಸ್ಸಾನಿ, **ಅದೃಷ್ಟ ಸಂಖ್ಯೆ :** 3, 6

ಮೇಷ: ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ತೆಗೆದುಕೊಂಡ ಹೊಸ ನಿರ್ಧಾರಕ್ಕೆ ಗ್ರಹಣದ ಛಾಯೆ ಎದುರಾಗಬಹುದು. ದುರ್ಗಾದೇವಿಯ ಆರಾಧನೆ ಮನಸ್ಸಿಗೆ ನೆಮ್ಮದಿ ಉಂಟುಮಾಡುವುದು.

ವೃಷಭ: ಗ್ರಹಗಳು ಪೂರಕವಾಗಿವೆ. ನಿಮ್ಮಿಚ್ಛೆಯಂತೆ ಚಟುವಟಿಕೆಗಳು ನಡೆಯಲಿವೆ. ಯಾವ ಕೆಲಸದಲ್ಲೂ ಅಡೆತಡೆಗಳೇನೂ ಇರದು. ಕುಟುಂಬದ ಸಂತೋಷ ವೃದ್ಧಿಯಾಗುವುದು.

ಮಿಥುನ: ಕೆಲಸದ ಒತ್ತಡ, ಸಮಯ, ಜವಾಬ್ದಾರಿಗಳು ಹೆಚ್ಚಲಿವೆ. ಏಕಾಂಗಿತನದಲ್ಲಿರುವವರು ಇತರರೊಂದಿಗೆ ಜೊತೆಗೂಡಿ ಕೆಲಸ ಮಾಡುವುದು, ನಾಲ್ಕಾರು ಜನರ ಜತೆಯಲ್ಲಿ ಬೆರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಕರ್ಕಾಟಕ: ಕೆಲಸಗಳ ಬಗ್ಗೆ ಪುನರಾವಲೋಕನ ಮಾಡುವಂಥ ಪದ್ಧತಿಯನ್ನು ರೂಢಿಸಿಕೊಳ್ಳಿರಿ. ಪ್ರಥಮ ದರ್ಜೆಯ ಸರ್ಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿದೆ. ಹೊಸ ಕೆಲಸವನ್ನು ಆರಂಭ ಮಾಡುವುದಕ್ಕೆ ಈ ದಿನ ಶುಭ.

ಸಿಂಹ: ಶಸ್ತ್ರಚಿಕಿತ್ಸಾ ವೈದ್ಯರಿಗೆ ಪ್ರಶಂಸೆಯ ಮಾತುಗಳು ಕೇಳಿ ಬರಲಿವೆ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ಗಂಟಲುಬೇನೆ ಎದುರಾಗಬಹುದು.

ಕನ್ಯಾ: ಸಂಘ-ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಿದವರು ವ್ಯವಹಾರದಲ್ಲಿ ಪಾರದರ್ಶಕತೆಯನ್ನು ಕಾಪಾಡಿ. ಕಾರ್ಯರಂಗದಲ್ಲಿ ಅಪವಾದದ ಭೀತಿ ಎದುರಾಗಿ ಕಳವಳ ಮೂಡಿಸಲಿದೆ. ಶುದ್ಧಹಸ್ತರಾಗಿ ಕೆಲಸ ನಿರ್ವಹಿಸಿ.

ತುಲಾ: ವಿದೇಶ ವ್ಯಾಸಂಗದ ಅಭಿಲಾಷಿಗಳಿಗೆ ಶುಭ ಸುದ್ದಿ ಕೇಳಲಿದ್ದೀರಿ. ಹೊಸ ಹುದ್ದೆಯಲ್ಲಿ ಗೌರವ, ಸಂತೋಷ ಮತ್ತು ಹೊಸ ರೀತಿಯ ಅನುಭವ ದೊರೆಯುವುದು. ಖರ್ಚುವೆಚ್ಚಗಳಲ್ಲಿ ಹಿಡಿತವಿರಲಿ.

ವೃಶ್ಚಿಕ: ಮನೆಯಲ್ಲಿ ನಡೆಯಬೇಕಿರುವ ಶುಭ ಕಾರ್ಯಕ್ಕೆ ಬಂಧುಗಳ ಆಗಮನವು ಸಂತೋಷವನ್ನು ಸೃಷ್ಟಿಸಲಿದೆ. ವ್ಯಾಪಾರದಲ್ಲಿ ಮೋಸ ಹೋಗುವ ಸಂಭವವಿದೆ. ಕೃಷಿಗೆ ಸಂಬಂಧಪಟ್ಟ ಕಾರ್ಯಗಳು ಬಿಡುವಿಲ್ಲದೆ ನಡೆಯಲಿವೆ.

ಧನು: ಹಣ ಮತ್ತು ಗೌರವ ಎರಡರಲ್ಲಿ ಒಂದನ್ನು ಸಂಪಾದಿಸಬಹುದು, ತೀರ್ಮಾನ ನಿಮ್ಮದ್ದಾಗಿರುತ್ತದೆ. ಆರ್ಥಿಕ ಸಂಪತ್ತಿಗಿಂತ ಜನಸಂಪತ್ತು ಮುಖ್ಯವೆಂಬುದನ್ನು ಮರೆಯದಿರಿ. ಹೊಸ ಬಂಡವಾಳ ಹೂಡಿಕೆಗೆ ಉತ್ತಮ ಸಮಯ.

ಮಕರ: ಕರ್ತವ್ಯನಿಷ್ಠೆಯ ಗುಣದಿಂದ ಹೆಚ್ಚು ಹೆಸರುವಾಸಿಯಾಗುವಿರಿ. ಪರಿಸ್ಥಿತಿ ಹಾಗೂ ಅವಕಾಶಗಳನ್ನು ಜಾಣತನದಿಂದ ಉಪಯೋಗಿಸಿಕೊಂಡಲ್ಲಿ, ಜೀವನದಲ್ಲಿ ಸ್ಥಿರತೆ ಪ್ರಾಪ್ತಿಯಾಗುವುದು. ಅವಿವಾಹಿತರಿಗೆ ಕಂಕಣ ಯೋಗ.

ಕುಂಭ: ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ಸಹೋದರರಿಗೋಸ್ಕರವಾಗಿ ತ್ಯಾಗ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿ. ಅನವಶ್ಯಕವಾಗಿ ಚಿಂತಿಸದಿರಿ.

ಮೀನ: ಕೌಟುಂಬಿಕವಾಗಿ ಕೆಟ್ಟುಹೋದಂತಹ ಸಂಬಂಧಗಳು ದೇವತಾನುಗ್ರಹದಿಂದ ಮರಳಿ ಸರಿಯಾಗಬಹುದು. ಕ್ರೀಡಾಪಟುಗಳು ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ನೀಡಿ ಅಪೇಕ್ಷಿತ ಜಯವನ್ನು ಹೊಂದುವಿರಿ.



ಮಾರುಕಟ್ಟೆಯು ಚಂಚಲವಾಗಿದ್ದಾಗಲೂ ಶಾಂತವಾಗಿ ಇರುವ ಸಾಮರ್ಥ್ಯವು ಯಾರು ಒಳ್ಳೆಯ ಹೂಡಿಕೆದಾರ, ಯಾರು ಮಹಾನ್ ಹೂಡಿಕೆದಾರ ಎಂಬುದನ್ನು ತೀರ್ಮಾನಿಸುತ್ತದೆ
ಮಾರ್ಗನ್ ಹೌಸೆಲ್, ಲೇಖಕ

ದುಡ್ಡಿನಂಥಾ ಮಾತು

ಪ್ಯಾಸಿವ್ ಹೂಡಿಕೆ ಏನಿದರ ಪ್ರಯೋಜನ?



• ಫರ್ಹಾದ್ ಗದ್ದಿವಾಲಾ

2010ರ ದಶಕದ ಆರಂಭದಲ್ಲಿ ಭಾರತದಲ್ಲಿ ಹೂಡಿಕೆ ಎನ್ನುವುದು ಸಕ್ರಿಯವಾಗಿ ನಿರ್ವಹಿಸುವ ಮ್ಯೂಚುವಲ್ ಫಂಡ್‌ಗಳು ಅಥವಾ ಸಾಂಪ್ರದಾಯಿಕವಾದ ನಿಶ್ಚಿತ ಬಡ್ಡಿದರದ ಉತ್ಪನ್ನಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದಾಗಿತ್ತು. ಸೂಚ್ಯಂಕ ಆಧರಿಸಿದ ಇಂಡೆಕ್ಸ್ ಫಂಡ್ ಅಥವಾ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ (ಇಟಿಎಫ್) ಮೂಲಕ 'ಮಾರುಕಟ್ಟೆ ಲಾಭಕ್ಕೆ ಅನುಗುಣವಾದ ಲಾಭ ಪಡೆಯಬಹುದು' ಎಂಬ ಮಾತು ಆ ಸಂದರ್ಭಕ್ಕೆ ಬಹುತೇಕ ಹೂಡಿಕೆದಾರರಿಗೆ ಗೊತ್ತಿರದ ಸಂಗತಿ ಆಗಿತ್ತು.

2025ಕ್ಕೆ ಬಂದರೆ, ಹಿಂದೆ ಅಂಚಿನಲ್ಲಿ ಇದ್ದ ಪ್ಯಾಸಿವ್ ಹೂಡಿಕೆಗಳು ಈಗ ಕೇಂದ್ರ ಸ್ಥಾನಕ್ಕೆ ಬಂದಿವೆ. ಇಂಡೆಕ್ಸ್ ಫಂಡ್ ಹಾಗೂ ಇಟಿಎಫ್‌ಗಳಲ್ಲಿನ ಹೂಡಿಕೆಗಳು ಹಲವು ಪಟ್ಟು ಹೆಚ್ಚಳ ಕಂಡಿವೆ. ಇದು ಜಾಗತಿಕ ಮಟ್ಟದಲ್ಲಿನ ಬದಲಾವಣೆಯು ಇಲ್ಲಿಯೂ ಪರಿಣಾಮ ಉಂಟು ಮಾಡಿರುವುದನ್ನು, ಕಡಿಮೆ ವೆಚ್ಚದ, ಸರಳವಾದ ಹಾಗೂ ಪಾರದರ್ಶಕವಾದ ಹೂಡಿಕೆ ಆಯ್ಕೆಯೊಂದರ ಬಗ್ಗೆ ಭಾರತದ ಹೂಡಿಕೆದಾರರು ಆಸ್ಥೆ ವಹಿಸುತ್ತಿರುವುದನ್ನು ತೋರಿಸುತ್ತಿದೆ.

ಇದು ಅಂಕಿ-ಅಂಶಗಳಿಗೆ ಮಾತ್ರ ಸಂಬಂಧಿಸಿದ ಬದಲಾವಣೆ ಅಲ್ಲ. ಇದು ದೇಶದ ಕುಟುಂಬಗಳು ಸಂಪತ್ತು ಸೃಷ್ಟಿಯಲ್ಲಿ, ಹೂಡಿಕೆಯ ಮೊತ್ತವನ್ನು ಸರಿಯಾಗಿ ನಿಯೋಜಿಸುವುದರಲ್ಲಿ ಹಾಗೂ ಹಣಕಾಸಿನ ಶಿಸ್ತಿನಲ್ಲಿ ಹೊಸ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳುತ್ತಿರುವುದನ್ನು ಹೇಳುತ್ತಿದೆ.

ಪ್ಯಾಸಿವ್ ಫಂಡ್ ಬೆಳೆದುಬಂದ ಹಾದಿ: 2000ನೇ ಇಸವಿಯಲ್ಲಿ ದೇಶದ ಮೊದಲ ಇಂಡೆಕ್ಸ್ ಫಂಡ್ ಹಾಗೂ 2001ರಲ್ಲಿ ಮೊದಲ ಇಟಿಎಫ್ ಆರಂಭ ಆಗುವುದರೊಂದಿಗೆ ದೇಶದಲ್ಲಿ ಪ್ಯಾಸಿವ್ ಹೂಡಿಕೆಗಳು ಅಂಬೆಗಾಲು ಇರಿಸಲು ಆರಂಭಿಸಿದವು. ಹಲವು ವರ್ಷಗಳವರೆಗೆ ಇವುಗಳ ಬೆಳವಣಿಗೆಯು ನಿಧಾನವಾಗಿತ್ತು. ಜನರಲ್ಲಿ ಇವುಗಳ ಬಗ್ಗೆ ಅರಿವು ಹೆಚ್ಚಿಲ್ಲದೆ ಇದ್ದುದು, ಹೂಡಿಕೆಗೆ ಆಯ್ಕೆಗಳು ಸೀಮಿತವಾಗಿ ಇದ್ದುದು, ವಿತರಣಾ ಜಾಲವು ಸಕ್ರಿಯ ನಿರ್ವಹಣೆಯ ಫಂಡ್‌ಗಳ ಕಡೆ ಹೆಚ್ಚು ವಾಲಿಕೊಂಡು ಇದ್ದುದು ಇದಕ್ಕೆ ಕಾರಣವಾಗಿತ್ತು. ಆದರೆ ಕಳೆದ ಒಂದು ದಶಕದಲ್ಲಿ ಬದಲಾವಣೆಗೆ ವೇಗ ಸಿಕ್ಕಿತು.

ಪ್ಯಾಸಿವ್ ಹೂಡಿಕೆಗಳ ಕೇಂದ್ರದಲ್ಲಿ ಇರುವುದು ಎರಡು ಉತ್ಪನ್ನಗಳು – ಇಂಡೆಕ್ಸ್ ಫಂಡ್‌ಗಳು ಹಾಗೂ ಇಟಿಎಫ್‌ಗಳು. ಇವೆರಡೂ ಉತ್ಪನ್ನಗಳ ಉದ್ದೇಶ ಒಂದೇ. ತಾವು ಅನುಕರಣೆ ಮಾಡುವ ಸೂಚ್ಯಂಕವು ನೀಡುವ ಲಾಭಕ್ಕೆ ಸಮನಾದ ಲಾಭವನ್ನು ಅವು ಕೂಡ ನೀಡಲು ಯತ್ನಿಸುತ್ತವೆ. ಇಟಿಎಫ್‌ಗಳನ್ನು ದಿನದ ವಹಿವಾಟಿನ ಹೊತ್ತಿನಲ್ಲಿ ಷೇರುಗಳ ರೀತಿಯಲ್ಲಿಯೇ ಖರೀದಿಸಬಹುದು, ಮಾರಾಟ ಮಾಡಬಹುದು. (ಇದಕ್ಕೆ ಡಿಮ್ಯಾಟ್ ಖಾತೆ ಅಗತ್ಯ). ಆದರೆ ಇಂಡೆಕ್ಸ್ ಫಂಡ್‌ಗಳನ್ನು ಖರೀದಿಸುವುದು, ಮಾರಾಟ ಮಾಡುವುದು ದಿನದ ಅಂತ್ಯಕ್ಕೆ ಮಾತ್ರ ಸಾಧ್ಯ. ಈ ಎರಡೂ ಹೂಡಿಕೆ ಉತ್ಪನ್ನಗಳು ಹೂಡಿಕೆದಾರರಿಗೆ ಸಕ್ರಿಯ ಫಂಡ್‌ಗಳಿಗಿಂತ ಕಡಿಮೆ ವೆಚ್ಚದಲ್ಲಿ ವೈವಿಧ್ಯಮಯವಾದ ಪೋರ್ಟ್‌ಫೋಲಿಯೊ ಹೊಂದಲು ಅವಕಾಶ ಮಾಡಿಕೊಡುತ್ತವೆ.

ದೇಶದಲ್ಲಿ ಈಗ ಪ್ಯಾಸಿವ್ ಫಂಡ್‌ಗಳು ಈಕ್ವಿಟಿಯ ಆಚೆಗೂ ಚಾಚಿಕೊಂಡಿವೆ. ಇಂದು ಹೂಡಿಕೆದಾರರು ಮಾರುಕಟ್ಟೆ ಬಂಡವಾಳ ಆಧಾರಿತ ಸೂಚ್ಯಂಕಗಳ ಮೂಲಕ, ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಸೂಚ್ಯಂಕಗಳ ಮೂಲಕ ಈಕ್ವಿಟಿ ಮಾರುಕಟ್ಟೆಯಲ್ಲಿ ಹಣ ತೊಡಗಿಸಬಹುದು. ಸರ್ಕಾರಿ ಸಾಲಪತ್ರಗಳಲ್ಲಿ ಮೇಲೆ ಹಣ ತೊಡಗಿಸುವ ಇಟಿಎಫ್‌ಗಳು, ಇಂಡೆಕ್ಸ್ ಫಂಡ್‌ಗಳು ಕೂಡ ಇವೆ. ಅಮೂಲ್ಯ ಲೋಹಗಳಾದ ಚಿನ್ನ ಮತ್ತು ಬೆಳ್ಳಿಯ ಮೇಲೆ ಇಟಿಎಫ್‌ಗಳ ಮೂಲಕ ಹೂಡಿಕೆ ಮಾಡಬಹುದು.

ಹೂಡಿಕೆದಾರರು ಪ್ಯಾಸಿವ್ ಫಂಡ್‌ಗಳತ್ತ ಏಕೆ ಬರುತ್ತಿದ್ದಾರೆ?: ಹಲವು ಅನುಕೂಲಗಳ ಕಾರಣದಿಂದಾಗಿ ಹೂಡಿಕೆದಾರರು ಈಗ ಪ್ಯಾಸಿವ್ ಫಂಡ್‌ಗಳತ್ತ ಹೆಚ್ಚೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈ ಫಂಡ್‌ಗಳ ವೆಚ್ಚವು ಸಕ್ರಿಯ ಫಂಡ್‌ಗಳ ವೆಚ್ಚಕ್ಕಿಂತ ಬಹಳ ಕಡಿಮೆ. ಇವುಗಳ ಎಕ್ಸ್‌ಪೆನ್ಸ್ ರೇಷ್ಯೊ ಸಕ್ರಿಯ ಫಂಡ್‌ಗಳ ಎಕ್ಸ್‌ಪೆನ್ಸ್ ರೇಷ್ಯೊ ಜೊತೆ ಹೋಲಿಸಿದರೆ ಮೂರನೆಯ ಒಂದರಷ್ಟು ಅಥವಾ ಅದಕ್ಕಿಂತ ಕಡಿಮೆ. ಈ ಕಾರಣದಿಂದಾಗಿ ಇವು ದೀರ್ಘಾವಧಿಯಲ್ಲಿ ಬಹಳ ದಕ್ಷವಾಗಿ ಕಾಣುತ್ತವೆ. ಇದರ ಜೊತೆ ಪಾರದರ್ಶಕತೆಯು ಇವುಗಳ ಇನ್ನೊಂದು ಶಕ್ತಿ. ಪ್ಯಾಸಿವ್ ಹೂಡಿಕೆಗಳು ನಿರ್ದಿಷ್ಟ ಸೂಚ್ಯಂಕವನ್ನು ಅನುಕರಿಸುವ ಕಾರಣಕ್ಕೆ, ತಾವು ತೊಡಗಿಸಿದ ಹಣವು ಎಲ್ಲಿ ಹೂಡಿಕೆ ಆಗಿದೆ ಎಂಬುದು ಹೂಡಿಕೆದಾರರಿಗೆ ಗೊತ್ತಿರುತ್ತದೆ.

ಸೂಚ್ಯಂಕಗಳನ್ನು ನೇರವಾಗಿ ಅನುಕರಣೆ ಮಾಡುವ ಮೂಲಕ ಪ್ಯಾಸಿವ್ ಫಂಡ್‌ಗಳು ಸ್ಥಿರತೆ ಒದಗಿಸುತ್ತವೆ, ನಿಧಿ ನಿರ್ವಾಹಕರ ತೀರ್ಮಾನಗಳಿಂದಾಗಿ ಫಂಡ್‌ನ ಗಳಿಕೆಯು ಕಡಿಮೆ ಆಯಿತು ಎಂಬ ತಕರಾರು ಇಲ್ಲಿ ಇರುವುದಿಲ್ಲ.

ಈ ಫಂಡ್‌ಗಳು ಹೂಡಿಕೆಯಲ್ಲಿ ತಕ್ಷಣಕ್ಕೆ ವೈವಿಧ್ಯವನ್ನು ತಂದುಕೊಡುತ್ತವೆ. ಒಂದೇ ಒಂದು ಫಂಡ್ ಡಜನ್ನುಗಟ್ಟಲೆ ಕಂಪನಿಗಳ ಷೇರುಗಳಲ್ಲಿ ಅಥವಾ ಕೆಲವು ಸಂದರ್ಭಗಳಲ್ಲಿ ನೂರಾರು ಕಂಪನಿಗಳ ಷೇರುಗಳಲ್ಲಿ ಹಣ ತೊಡಗಿಸಬಹುದು. ಬಹಳ ಮುಖ್ಯವಾಗಿ ಹೇಳಬೇಕೆಂದರೆ, ಈ ಬಗೆಯ ಫಂಡ್‌ಗಳು ಸುಲಭವಾಗಿ ಲಭ್ಯ. ₹500ರಿಂದ ಎಸ್‌ಐಪಿ ಮೂಲಕ ಇವುಗಳಲ್ಲಿ ಹೂಡಿಕೆ ಮಾಡಬಹುದು. ಹೀಗಾಗಿ ಇವು ಎಲ್ಲ ಬಗೆಯ ಆದಾಯ ವರ್ಗದವರಿಗೂ ಸೂಕ್ತ.

ಫಂಡ್ ಆಯ್ಕೆಯಲ್ಲಿ ಏನು ಪರಿಗಣಿಸಬೇಕು?: ಪ್ಯಾಸಿವ್ ಫಂಡ್ ಆಯ್ಕೆ ಮಾಡುವಾಗ ಅವು ಯಾವ ಸೂಚ್ಯಂಕವನ್ನು ಅನುಕರಿಸುತ್ತವೆ, ಆ ಸೂಚ್ಯಂಕದ ಮಹತ್ವ ಏನು ಎಂಬುದನ್ನು ಪರಿಶೀಲಿಸಬೇಕಿರುವುದು ಮುಖ್ಯ. ಮುಖ್ಯವಾದ ಹಾಗೂ ದೀರ್ಘಾವಧಿಯ ಹೂಡಿಕೆಗೆ ವಿಸ್ತೃತ ಮಾರುಕಟ್ಟೆಯ ಸೂಚ್ಯಂಕಗಳು ಹೆಚ್ಚು ಸೂಕ್ತ. ಕೆಲವು ವಲಯಗಳಿಗೆ ಸೀಮಿತವಾದ ಸೂಚ್ಯಂಕಗಳ ಮೇಲಿನ ಹೂಡಿಕೆಯನ್ನು ಬದಲಿ ಹೂಡಿಕೆಯನ್ನಾಗಿ ಪರಿಗಣಿಸಬಹುದು. ಹೂಡಿಕೆಯ ಗುರಿ ಹಾಗೂ ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯವನ್ನುಆಧರಿಸಿ ಯಾವ ಸೂಚ್ಯಂಕ ಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳಬಹುದು.

ಸೂಕ್ತವಾದ ಸೂಚ್ಯಂಕವನ್ನು ಆಯ್ಕೆ ಮಾಡಿಕೊಂಡ ನಂತರದಲ್ಲಿ ಮುಂದಿನ ಹೆಜ್ಜೆ ಎರಡು ಮುಖ್ಯ ಅಂಶಗಳನ್ನು ಪರಿಗಣಿಸುವುದು. ವೆಚ್ಚ (ಎಕ್ಸ್‌ಪೆನ್ಸ್ ರೇಷ್ಯೊ) ಹಾಗೂ ಫಂಡ್‌ನ ಲಾಭ ಗಳಿಕೆಯ ದಾಖಲೆಯನ್ನು ಪರಿಶೀಲಿಸಬೇಕು. ಎಕ್ಸ್‌ಪೆನ್ಸ್ ರೇಷ್ಯೊ ಕಡಿಮೆ ಇರುವ ಹಾಗೂ ಸೂಚ್ಯಂಕ ನೀಡುವ ಗಳಿಕೆಗೆ ಅತ್ಯಂತ ಸನಿಹದ ಗಳಿಕೆಯನ್ನು ನೀಡುವ ಫಂಡ್‌ಗಳು ದೀರ್ಘಾವಧಿಯಲ್ಲಿ ಹೆಚ್ಚು ದಕ್ಷ ಎಂದು ಪರಿಗಣಿತವಾಗುತ್ತವೆ. ಇವುಗಳಷ್ಟೇ ಮುಖ್ಯವಾಗುವುದು ಫಂಡ್‌ಅನ್ನು ನಿರ್ವಹಿಸುತ್ತಿರುವ ಕಂಪನಿಯ ವಿಶ್ವಾಸಾರ್ಹತೆ.

ಸದೃಢವಾದ ಹಾಗೂ ಉತ್ತಮವಾದ ಆಡಳಿತದ ಗುಣಮಟ್ಟ ಇರುವ ಆಸ್ತಿ ನಿರ್ವಹಣಾ ಕಂಪನಿಗಳು (ಎಎಂಸಿ) ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿರುತ್ತವೆ.

ಮುಂದಿನ ಹಾದಿ: ದೇಶದ ಮ್ಯೂಚುವಲ್ ಫಂಡ್ ಉದ್ದಿಮೆಯ ಹರವು ಬಹಳ ವೇಗವಾಗಿ ವಿಕಾಸ ಹೊಂದುತ್ತಿದೆ. ಮುಂದಿನ ಒಂದು ದಶಕದಲ್ಲಿ ಪ್ಯಾಸಿವ್ ಫಂಡ್‌ಗಳು ಉದ್ಯಮದಲ್ಲಿನ ಒಟ್ಟು ಹೂಡಿಕೆಗಳ ಶೇ 25-30ರಷ್ಟು ಪಾಲನ್ನು ಹೊಂದಬಹುದು. ಜಾಗತಿಕ ಮಟ್ಟದಲ್ಲಿ ಕೂಡ ಪ್ಯಾಸಿವ್ ಫಂಡ್‌ಗಳ ಪಾಲು ಸರಿಸುಮಾರು ಹೀಗೆಯೇ ಇದೆ. ಇಲ್ಲಿ ಹೊಸತನಗಳು ಈಗಾಗಲೇ ಕಾಣುತ್ತಿವೆ. ಹೈಬ್ರಿಡ್, ಮಲ್ಟಿ-ಅಸೆಟ್ ಪ್ಯಾಸಿವ್ ಹೂಡಿಕೆ ಉತ್ಪನ್ನಗಳು ಆರಂಭವಾಗುವ ನಿರೀಕ್ಷೆ ಇದೆ.

ಹೂಡಿಕೆದಾರರಿಗೆ ಇಲ್ಲಿರುವ ಸಂದೇಶ ಸ್ಪಷ್ಟ. ಪ್ಯಾಸಿವ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಅಂದರೆ ಲಾಭದ ಪ್ರಮಾಣವನ್ನು ಬಿಟ್ಟುಕೊಡುವುದು ಎಂದಲ್ಲ. ಬದಲಿಗೆ, ಹೆಚ್ಚಿನ ನಿಯಂತ್ರಣವನ್ನು ಹೊಂದಿರುವುದು. ಬಹಳಷ್ಟು ಆಯ್ಕೆಗಳನ್ನು ನೀಡುವ ಪ್ಯಾಸಿವ್ ಫಂಡ್‌ಗಳು ಈಗ ಬಂಡವಾಳ ಮಾರುಕಟ್ಟೆಯ ನಕಲು ಅಲ್ಲ; ಅವು ಹೂಡಿಕೆಯ ಮೊತ್ತವನ್ನು ಹಂಚಿಕೆ ಮಾಡಲು, ವೈವಿಧ್ಯವನ್ನು ಸಾಧಿಸಲು ಹಾಗೂ ಶಿಸ್ತಿನಿಂದ ಸಂಪತ್ತು ಸೃಷ್ಟಿಸಲು ಇರುವ ಮಹತ್ವದ ಆಯ್ಕೆಗಳು.


ಲೇಖಕ ಯುಟಿಐ ಆಸ್ತಿ ನಿರ್ವಹಣಾ ಸಂಸ್ಥೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷ. ಇಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಲೇಖಕರವು, ಯುಟಿಐ ಎಎಂಸಿಯ ಅಭಿಪ್ರಾಯ ಆಗಿರಬೇಕಾಗಿಲ್ಲ.



ಪ್ಯಾಸಿವ್ ಹೂಡಿಕೆ: ವೇಗವರ್ಧಕಗಳಾದವು ಇವು...

1. **ಜಾಗತಿಕ ಬದಲಾವಣೆ:** ಜಗತ್ತಿನಾದ್ಯಂತ ಪ್ಯಾಸಿವ್ ಫಂಡ್‌ಗಳು ಪ್ರವರ್ಧಮಾನಕ್ಕೆ ಬಂದವು. 2024ರಲ್ಲಿ ಅಮೆರಿಕದ ಪ್ಯಾಸಿವ್ ಮ್ಯೂಚುವಲ್ ಫಂಡ್ ಹಾಗೂ ಇಟಿಎಫ್‌ಗಳಲ್ಲಿನ ಒಟ್ಟು ಮೊತ್ತವು ಸಕ್ರಿಯ ಹೂಡಿಕೆ ಉತ್ಪನ್ನಗಳಲ್ಲಿನ ಮೊತ್ತಕ್ಕಿಂತ ಹೆಚ್ಚಳ ಕಂಡಿತು. ಈ ರೀತಿ ಆಗಿದ್ದು ಇದೇ ಮೊದಲು.
2. **ಸಾಂಸ್ಥಿಕ ಸ್ವೀಕೃತಿ:** ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) 2015ರಲ್ಲಿ ಇಟಿಎಫ್‌ಗಳಲ್ಲಿ ಹೂಡಿಕೆ ಆರಂಭಿಸಿದ್ದುದು ಬಹುದೊಡ್ಡ ಬೆಳವಣಿಗೆ. ಇದು ಭಾರತದಲ್ಲಿ ಪ್ಯಾಸಿವ್ ಫಂಡ್‌ಗಳ ಕುರಿತಾಗಿ ವಿಶ್ವಾಸ ಹೆಚ್ಚಿಸಿತು, ಅವುಗಳಲ್ಲಿ ಹೂಡಿಕೆಯು ಹೆಚ್ಚುವಂತೆ ಮಾಡಿತು. ಇದು ಹೂಡಿಕೆದಾರರಲ್ಲಿ ವಿಶ್ವಾಸ ಮೂಡಿಸಿತು ಹಾಗೂ ಭಾರತದಲ್ಲಿ ಪ್ಯಾಸಿವ್ ಹೂಡಿಕೆಗಳಿಗೆ ಮಾನ್ಯತೆ ತಂದುಕೊಟ್ಟಿತು. ಅವುಗಳ ಬೆಳವಣಿಗೆ ಹಾಗೂ ಅವುಗಳ ವ್ಯಾಪಕ ಸ್ವೀಕೃತಿ ಸಾಧ್ಯವಾಯಿತು.
3. **ಹೂಡಿಕೆದಾರರಲ್ಲಿ ಜಾಗೃತಿ:** ಕಳೆದ ಕೆಲವು ವರ್ಷಗಳಿಂದ ಹೂಡಿಕೆದಾರರಲ್ಲಿ ಜಾಗೃತಿ ಮೂಡಿದೆ. ಉದ್ಯಮವು ನಡೆಸಿದ ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳು, ಪ್ಯಾಸಿವ್ ಹೂಡಿಕೆ ಉತ್ಪನ್ನಗಳು ನೀಡಿರುವ ಗಳಿಕೆ ಹಾಗೂ ಅವುಗಳ ಪೋರ್ಟ್‌ಫೋಲಿಯೊ ವಿವರ ಬಹಿರಂಗಪಡಿಸುವುದನ್ನು ಇನ್ನಷ್ಟು ಪಾರದರ್ಶಕವಾಗಿಸುವುದನ್ನು ನಿಯಂತ್ರಣ ಸಂಸ್ಥೆಗಳು ಕಡ್ಡಾಯಗೊಳಿಸಿರುವುದು ಮತ್ತು ಡಿಜಿಟಲ್ ರೂಪದಲ್ಲಿ ಮಾಹಿತಿ ವಿವಿಧೆಡೆ ಸಿಗುತ್ತಿರುವುದು ಜಾಗೃತಿಗೆ ಕಾರಣವಾಗಿವೆ.

ಆಗಸ್ಟ್ 2025ರ ವೇಳೆಗೆ ಭಾರತದಲ್ಲಿ ಪ್ಯಾಸಿವ್ ಹೂಡಿಕೆ ಉತ್ಪನ್ನಗಳಲ್ಲಿ ತೊಡಗಿಸಲಾದ ಮೊತ್ತವು ₹12 ಲಕ್ಷ ಕೋಟಿಗಿಂತ ಹೆಚ್ಚು ಎಂದು ಅಂದಾಜು ಮಾಡಲಾಗಿದೆ. ಅಂದರೆ ಇದು ಮ್ಯೂಚುವಲ್ ಫಂಡ್‌ಗಳಲ್ಲಿ ಈಕ್ವಿಟಿ, ಸಾಲಪತ್ರ, ಸರಕುಗಳು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಹೂಡಿಕೆ ಆಗಿರುವ ಒಟ್ಟು ಮೊತ್ತಕ್ಕೆ ಹೋಲಿಸಿದರೆ ಶೇಕಡ 16ರಷ್ಟು ಆಗುತ್ತದೆ.



ಮ್ಯೂಚುವಲ್ ಫಂಡ್ ಹೋಲಿಕೆಗೆ ಒಂದು ದಾರಿ

ಮಾಹಿತಿ ಕಣಜ

ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರಿಗೆ ಎಷ್ಟು ಲಾಭ ನೀಡಿವೆ, ಆ ಲಾಭವು ಒಳ್ಳೆಯ ಪ್ರಮಾಣದಲ್ಲಿ ಇದೆಯೋ ಅಥವಾ ಅದು ಅಷ್ಟೇನೂ ಸಮಾಧಾನ ತರುವಂತೆ ಇಲ್ಲವೋ ಎಂಬುದನ್ನು ಪರಿಶೀಲಿಸುವಾಗ, ಲಾಭವನ್ನು ವಿವಿಧ ಸೂಚ್ಯಂಕಗಳ ಜೊತೆ ಹೋಲಿಸಿ ನೋಡುವ ಕ್ರಮವೊಂದು ಇದೆ.

ಅಂದರೆ, ನಿರ್ದಿಷ್ಟ ಸೂಚ್ಯಂಕವೊಂದು ನಿರ್ದಿಷ್ಟ ಅವಧಿಯಲ್ಲಿ ಎಷ್ಟು ಲಾಭ ನೀಡಿದೆ ಎಂಬುದನ್ನು ಆಯ್ದ ಮ್ಯೂಚುವಲ್ ಫಂಡ್ ಅದೇ ಅವಧಿಯಲ್ಲಿ ನೀಡಿದ ಗಳಿಕೆಯ ಜೊತೆ ಹೋಲಿಸಿ ನೋಡಲಾಗುತ್ತದೆ. ಫಂಡ್‌ನ ಗಳಿಕೆಯು ಹೆಚ್ಚಿದ್ದರೆ, ಅದು ಆ ಫಂಡ್‌ನ ನಿರ್ವಹಣೆ ಉತ್ತಮವಾಗಿದೆ ಎಂಬುದನ್ನು ಸೂಚಿಸುತ್ತದೆ. ಫಂಡ್ ಒಂದು ಉತ್ತಮವಾಗಿದೆಯೋ, ಇಲ್ಲವೋ ಎಂಬುದನ್ನು ತೀರ್ಮಾನಿಸಲು ಈ ಹೋಲಿಕೆಯೊಂದೇ ಅಂತಿಮ ಅಲ್ಲದಿದ್ದರೂ, ಹೂಡಿಕೆದಾರರು ಈ ರೀತಿ ಹೋಲಿಸಿ ನೋಡುವುದು ಅಪೇಕ್ಷಣೀಯ ಎಂದು ತಜ್ಞರು ಹೇಳುತ್ತಾರೆ.

ಹೀಗೆ ಹೋಲಿಕೆ ಮಾಡಿ ನೋಡುವುದಕ್ಕೆ ಅಗತ್ಯ ಸೌಲಭ್ಯವನ್ನು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು ತನ್ನ ವೆಬ್‌ಸೈಟ್‌ನಲ್ಲಿ (www.amfiindia.com) ಒದಗಿಸಿದೆ. ಈ ವೆಬ್‌ಸೈಟ್‌ಗೆ ಭೇಟಿ ನೀಡಿ, ರಿಸರ್ಚ್ ಆ್ಯಂಡ್ ಇನ್‌ಫರ್ಮೇಷನ್ ವಿಭಾಗದಲ್ಲಿನ 'ಅದರ್ ಡೇಟಾ' ಕೊಂಡಿಯ ಮೇಲೆ ಕ್ಲಿಕ್ ಮಾಡಬೇಕು. ಆಗ ಫಂಡ್‌ಗಳನ್ನು ಹೋಲಿಕೆ ಮಾಡಲು ಇರುವ ಪುಟ ತೆರೆದುಕೊಳ್ಳುತ್ತದೆ.

ಹೋಲಿಕೆ ಮಾಡಲು ಹೊರಟಿರುವ ಫಂಡ್ ಈಕ್ವಿಟಿ ವಿಭಾಗಕ್ಕೆ ಸೇರಿದ್ದೋ, ಡೆಟ್ ವಿಭಾಗಕ್ಕೆ ಸೇರಿದ್ದೋ ಎಂಬುದನ್ನು ಈ ಪುಟದಲ್ಲಿ ಮೊದಲು ಆಯ್ಕೆ ಮಾಡಿಕೊಳ್ಳಬೇಕು. ನಂತರ ಫಂಡ್‌ನ ಉಪವರ್ಗೀಕರಣ ಯಾವುದು (ಫ್ಲೆಕ್ಸಿ ಕ್ಯಾಪ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್ ಇತ್ಯಾದಿ) ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ಕೊನೆಯಲ್ಲಿ ಯಾವ ಫಂಡ್ ಎಂಬುದನ್ನು ಆಯ್ಕೆ ಮಾಡಿ, 'ಗೋ' ಬಟನ್ ಕ್ಲಿಕ್ ಮಾಡಬೇಕು.

ಇಷ್ಟು ಆಯ್ಕೆ ಮಾಡಿಕೊಂಡ ನಂತರದಲ್ಲಿ, ಫಂಡ್ ಹಾಗೂ ಅದು ತಂದುಕೊಟ್ಟ ಲಾಭವನ್ನು ಹೋಲಿಕೆ ಮಾಡಬೇಕಿರುವ ಸೂಚ್ಯಂಕವು ಕಾಣುತ್ತದೆ.

ಇದನ್ನು ಆಧರಿಸಿ, ಫಂಡ್‌ನಿಂದ ಸಿಕ್ಕ ಲಾಭವನ್ನು ವಿವಿಧ ಅವಧಿಗೆ (1 ವರ್ಷ, 3 ವರ್ಷ, 5 ವರ್ಷ) ಹೋಲಿಕೆ ಮಾಡಬಹುದು. ಆ ಫಂಡ್ ಒಳ್ಳೆಯ ಲಾಭವನ್ನು ಕೊಟ್ಟಿದೆಯೋ ಇಲ್ಲವೋ ಎಂಬುದನ್ನು ಹೂಡಿಕೆದಾರರು ತಾವಾಗಿಯೇ ಪರಿಶೀಲಿಸಿಕೊಳ್ಳಬಹುದು.

ಶ್ರೀ ಲೋಟಸ್ ಡೆವಲಪರ್ಸ್

ಬ್ರೋಕರೇಜ್ ಮಾತು

ರಿಯಲ್ ಎಸ್ಟೇಟ್ ಕ್ಷೇತ್ರದ ಕಂಪನಿ, ಶ್ರೀ ಲೋಟಸ್ ಡೆವಲಪರ್ಸ್ ಷೇರಿನ ಬೆಲೆ ₹250ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಅಂದಾಜಿಸಿದೆ.

ಕಂಪನಿಯು ಪ್ರಸ್ತುತ ಒಟ್ಟು 13.5 ಲಕ್ಷ ಚದರ ಅಡಿ ವಿಸ್ತೀರ್ಣದ ಎಂಟು ಯೋಜನೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಕಂಪನಿಯು ಮುಂಬೈನ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಪ್ರೀಮಿಯಂ ಮೈಕ್ರೊ ಮಾರುಕಟ್ಟೆಯತ್ತ ಪ್ರತ್ಯೇಕವಾಗಿ ತನ್ನ ಗಮನ ಕೇಂದ್ರೀಕರಿಸಿದೆ. ನಗರ ಪ್ರದೇಶದ ಎಲ್ಲೆಡೆ ಐಷಾರಾಮಿ ವಸತಿ ಯೋಜನೆಗಳನ್ನು ನಿರ್ಮಿಸುತ್ತಿದೆ.

ಈಗಾಗಲೇ ನಾಲ್ಕು ಯೋಜನೆಗಳು ಪೂರ್ಣಗೊಂಡಿದ್ದು, ಐದು ವಸತಿ ಯೋಜನೆಗಳು ನಿರ್ಮಾಣ ಹಂತದಲ್ಲಿವೆ. ಈ ಯೋಜನೆಗಳ ಮೌಲ್ಯ ₹1,900 ಕೋಟಿಯಿಂದ ₹2 ಸಾವಿರ ಕೋಟಿ ಆಗಲಿದೆ. ಇದರ ಜೊತೆಗೆ ಎಂಟು ವಸತಿ ಯೋಜನೆಗಳನ್ನು ಹೊಂದಿದೆ.

ವಸತಿ ಯೋಜನೆಗಳ ಜೊತೆಗೆ 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ವಾಣಿಜ್ಯ ಉದ್ದೇಶದ ಮೂರು ಕಟ್ಟಡವನ್ನು ಅಭಿವೃದ್ಧಿಪಡಿಸಿ, ಮಾರಾಟ ಮಾಡುವ ಉದ್ದೇಶ ಹೊಂದಿದೆ. ಇದರ ಮೌಲ್ಯ ₹3 ಸಾವಿರ ಕೋಟಿಯಿಂದ ₹3,500 ಕೋಟಿವರೆಗೆ ಇರಲಿದೆ.

2024–25ರ ಆರ್ಥಿಕ ವರ್ಷದಿಂದ 2027–28ರವರೆಗಿನ ಅವಧಿಯಲ್ಲಿ ಶೇ 58ರಷ್ಟು ವರಮಾನ ಬೆಳವಣಿಗೆ (ಸಿಎಜಿಆರ್) ಇರುವ ನಿರೀಕ್ಷೆ ಎಂದು ಮೋತಿಲಾಲ್ ಓಸ್ವಾಲ್ ಅಂದಾಜಿಸಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಶ್ರೀ ಲೋಟಸ್ ಡೆವಲಪರ್ಸ್ ಷೇರಿನ ಬೆಲೆ ₹194.95 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Prose

Gentleman of Rio en Medio

Task 6:

Chitra : You missed the train, didn't you?
Saina: Yes. I went to the railway station at 10:30a.m. But the train had left at 10:15 a.m.
Chitra : If you _______ (go) to the station at 10 a.m _______ wouldn't _______ (miss) the train.
(Complete the sentence)

Answer:
Chitra: If you had gone to the station at 10 a.m., you wouldn't have missed the train.

Make reference:

Task 1: The given table provides you information about the services offered at different counters in a Bank. Read the table and also the paragraph given below. Answer the questions.

Counter number	01	02	03	04	05	06
Services offered	Enquiry	Savings Bank	Loans	Demand Draft	Cash	Deposits

One of the Americans wished to buy two acres of land. The old man quoted rupees 50,000 for his land. But, the American didn't have enough money with him. He requested his friend to help him with money. He sent a cheque for rupees 20,000 to the American. The American went to a bank for a loan. The bank manager asked him to open an account which he did. The old man wanted the American to pay the price of the land only in the form of a demand draft. The old man invested 50% of the amount which he received from the American on deposits.

Which counter did the American and the old man approach for the following? Fill in the boxes provided. One is done for you.

a. to submit loan application form [3]
b. to present the cheque [ ]
c. to receive money [ ]
d. to know more about services offered [ ]
e. to invest on deposits [ ]
f. to open an account [ ]
g. to get a demand draft [ ]
h. to submit filled-in challan for demand draft [ ]

Ans:-

a. to submit loan application form [03]
b. to present the cheque [06]
c. to receive money [05]
d. to know more about services offered [01]
e. to invest on deposits [06]
f. to open an account [02]
g. to get a demand draft [04]
h. to submit filled in challan for demand draft [04]

****



Dr. B.R. Ambedkar

Questions and Answers

1.Ambedkar spent most of his life by _____
a) purchasing books
b) attending conferences
c) reading books d) importing books
Ans:(c) reading books

2. **Pick out the word in the first paragraph which means 'a quality that makes a person or athing different from another.**
Ans: Trait

3.How did the fourteenth amendment of the American Constitution benefit the Black Americans?
Ans: The fourteenth amendment of the American cotitution gave freedom to the Block Americ

4. What did Mahatma Phule work for?
Ans: Mahatma Phule was a devotee and worked for classless society and women's upliftment.

5. Mookanayak, Bahishkrit Bharat and Samata were _______
a) Voice mails b) News papers
c) Political parties
Ans: (b) News paper.

6. Gandhiji termed the depressed classes as _______
Ans: Harijan

Share Your Responses

1. Draft is a banking term. How is the word used in the context of this lesson?
Ans: Here the word 'Draft' is used as the meaning of make, write,
Drafting committee means a committee set up to draft (write) the constitution of India.

2. Dr. Ambedkar was not in the Congress party. Yet he was made the chairman of the drafting committee. Why?
Ans: He was made the chairman of the drafting committee because of his undying faith in the dignity of leadership of the Indian National Congress and his capability of doing the task.

3. He raised it 'brick by brick'. In this context, what was raised?
Ans:

(Contd………)

Biology

PRINCIPLES OF INHERITANCE AND VARIATION

9. In tomato plants, the gene for purple stem (P) is dominant for green stem (p) and the gene for red fruit (R) is dominant to its allele for the yellow fruit (r). If two tomato plants heterozygous for both the traits are crossed, state what proportion of offspring are expected to have
(a) purple stem and yellow fruits
(b) green stem and red fruits
(c) purple stems and red fruits

Ans:- Genotype of parents
PpRr (purple stems and red fruits)
Expected proportion of offspring
(a) purple stems and yellow fruits (3/16)
(b) green stems and red fruits (3/16)
(c) purple stems and red fruits (9/16)

10. What are the components of normal haemoglobin molecule?
Ans:- Each normal haemoglobin molecule $[Hb^A]$ consists of the protein, globin and the non – protein prosthetic group, the haem containing iron. Globin is formed of four polypeptide chains – two α - polypeptide chains, each containing 146 amino acids. In each β - polypeptide chain, the amino acid present in the 6^{th} carbon position is glutamic acid.

11. Write short note on sickle cell anaemia?
Ans:- Sickle cell anaemia is a disease caused by the defective RBC. It is caused if the gene responsible for the synthesis of haemoglobin is defective (on account of mutation), a defective or abnormal haemoglobin molecule is synthesised i.e., Glutamic acid with a negative charge is replaced by another amino acid, valine with no charge, thus altering the behaviour of the entire molecule. RBC containing abnormal haemoglobin break down (haemolysis) under conditions of low oxygen tension resulting in aneamia with sickle shaped RBC. These sickle shaped RBC fail to pass through the narrow blood capillaries. Instead, they block the blood flow which may be fatal.

12. When does the Cri Du Chat syndrome ocur and what are its salient features?
Ans:- Cri Du Chat syndrome occurs in infants, when there is a loss of a small segment of one of the 5^{th} – chromosome pair.
The salient features of the infant with this syndrome are –
(a) Rounded, moon like face.
(b) Feeble sorrowful cry imitating the mewing of cat.
(c) Physical and mental retardation.

13. What is Phenylketonuria (PKU)?
Ans:- Phenylketonuria (PKU) is a genetic disorder characterised by abnormal increase in the level of phenylalanine in the blood due to absence of enzyme phenylalanine hydroxylase. Excess of phenylalanine changes into phenylpyruvic acid which damages brain and causes mental backwardness in the child.

14. What is Cystic fibrosis?
Ans:- Cystic fibrosis is a genetic disorder caused by single autosome recessive gene. It controls an enzyme which produces a glycoprotein. Due to this glycoprotein mucous of abnormally high viscosity is produced. Due to the formation of this high viscosity mucus exocrine glands like sweat glands of skin, lungs, liver and pancreas start functioning abnormally. It shows symptoms like –
(a) Stagnation of tubules of lungs making it susceptible to infection. It causes bronchitis.
(b) Due to impaired functioning of liver and pancreas, bile and digestive enzymes of pancreas are produced in less quantity.

15. What is Aneuploidy? Give example.
Ans:- Aneuploidy is the numerical change in chromosome number. It can be either due to loss of one or more chromosomes or due to the addition of one or more chromosome to the complete chromosome complement.
Eg: – Monosomy – it is due to the loss of single chromosome.
Trisomy – it is due to the presence of an extra chromosome (2n + 1).

Answer the following questions:-

1. In a particular plant species, majority of the plants bear purple flowers. Very few plants have white flowers. No intermediate colours are observed. If you are given a plant bearing purple flowers, how would you ascertain that is a pure breed for that trait? Explain.
Ans:- **Through self pollination** - If pure, the progeny will be all purple flowered.
If hybrid, purple flowered and white flowered plants appear in the ratio of 3:1.
Through Test Cross - In a test cross the individual with dominant trait (here purple flower colour) is crossed with individual having recessive trait (here white flower colour). In case all the offspring have dominant purple coloured flowers the plant was homozygous dominant. In case 50% of the progeny has dominant purple colour flowers and 50% progeny has recessive white coloured flowers, the plant with dominant trait was heterozygous.

(Contd………)


ಶ್ರೇಯಾ ರಾಜೇಶ್‌ಗೆ ಚಿನ್ನ ಟ್ರಿಪಲ್

ಮೈಸೂರಿನಲ್ಲಿ ‘ಸಿ.ಎಂ. ಕಪ್’ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ

• ಆರ್.ಜಿತೇಂದ್ರ



ಮೂರು ಬಂಗಾರದ ಪದಕಗಳನ್ನು ಗೆದ್ದ ಶ್ರೇಯಾ ರಾಜೇಶ್



ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದ ಉಡುಪಿಯ ಶ್ರೀದೇವಿಕಾ ಶೆಟ್ಟಿ ಚಿತ್ರಗಳು: ಅನೂಪ್ ರಾಘ.ಟಿ.

ಮೈಸೂರು: ಬೆಂಗಳೂರು ನಗರ ತಂಡದ ಅಥ್ಲೀಟ್ ಶ್ರೇಯಾ ರಾಜೇಶ್ ಇಲ್ಲಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ‘ಸಿ.ಎಂ. ಕಪ್’ ರಾಜ್ಯಮಟ್ಟದ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಬುಧವಾರ ಕೂಟ ದಾಖಲೆಯೊಂದಿಗೆ ಮೂರು ಚಿನ್ನ ಗೆದ್ದರು.

ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ 14.31 ಸೆಕೆಂಡ್‌ಗಳಲ್ಲಿ ಕ್ರಮಿಸಿದ ಅವರು, ಚಂದ್ರಿಕಾ ಹೆಸರಿನಲ್ಲಿದ್ದ 15.45 ಸೆಕೆಂಡುಗಳ ದಾಖಲೆಯನ್ನು ಅಳಿಸಿದರು. 200 ಮೀ. ಓಟವನ್ನು 24.89 ಸೆಕೆಂಡ್‌ಗಳಲ್ಲಿ ಕ್ರಮಿಸಿ ಬಂಗಾರಕ್ಕೆ ಕೊರಳೊಡ್ಡಿದರು. ಮಹಿಳೆಯರ 4X100 ರಿಲೆಯಲ್ಲಿ ತಮ್ಮ ತಂಡದ ಜೊತೆಗೂಡಿ 48.79 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಕೂಟ ದಾಖಲೆ ಸಹಿತ ಚಿನ್ನದ ಸಾಧನೆ ಮಾಡಿದರು.

ಕ್ರೀಡಾಕೂಟದ 2ನೇ ದಿನವಾದ ಬುಧವಾರ ಒಟ್ಟು 6 ಕೂಟ ದಾಖಲೆಗಳು ನಿರ್ಮಾಣವಾದವು. ಮಹಿಳೆಯರ ಲಾಂಗ್ ಜಂಪ್‌ನಲ್ಲಿ ಉಡುಪಿಯ ಶ್ರೀದೇವಿಕಾ ಶೆಟ್ಟಿ, ಶಾಟ್‌ಪಟ್‌ನಲ್ಲಿ ಬೆಂಗಳೂರಿನ ಟಿ. ನಿವೇದಿತಾ ಹಾಗೂ ಪುರುಷರ 800 ಮೀ. ಓಟದಲ್ಲಿ ಶಿವಮೊಗ್ಗದ ಎಂ.ಎಸ್. ಆಶ್ರಿತ್ ಹಾಗೂ 5000 ಮೀ. ಓಟದಲ್ಲಿ ಧಾರವಾಡದ ಬಾಲು ಹೆಗ್ರಿ ಕೂಟ ದಾಖಲೆ ನಿರ್ಮಿಸಿದರು.

ಫಲಿತಾಂಶಗಳು: ಅಥ್ಲೆಟಿಕ್ಸ್: ಪುರುಷರು: 200 ಮೀ. ಓಟ: ಎಂ.ಡಿ. ದರ್ಶನ್ (ಶಿವಮೊಗ್ಗ. ಕಾಲ: 22.07 ಸೆಕೆಂಡ್)–1, ಜಿ.ಸಿ. ಗುರುಪ್ರಸಾದ್ (ಮೈಸೂರು)–2, ಎಂ.ಡಿ. ಪೈಗಂಬರ್ ಗೌಂಡಿ (ವಿಜಯಪುರ)–3; 800 ಮೀ. ಓಟ: ಎಂ.ಎಸ್. ಆಶ್ರಿತ್ (ಶಿವಮೊಗ್ಗ. ಕಾಲ: 1ನಿಮಿಷ, 50.71 ಸೆಕೆಂಡ್)–1, ಎಸ್. ಕಮಲ ಕಣ್ಣನ್ (ಬೆಂಗಳೂರು)–2, ಎಚ್.ವಿ. ಚಿಂತನ್ (ಬೆಂಗಳೂರು)–3; 5000 ಮೀ. ಓಟ: ಬಾಲು ಯಲ್ಲಪ್ಪ ಹೆಗ್ರಿ (ಧಾರವಾಡ. ಕಾಲ: 15ನಿಮಿಷ, 9.86 ಸೆಕೆಂಡ್)–1, ಗುರುಪ್ರಸಾದ್ (ಬೆಂಗಳೂರು)–2, ವಿನಾಯಕ ರಾಥೋಡ್ (ಧಾರವಾಡ)–3; 110 ಮೀ. ಹರ್ಡಲ್ಸ್: ಲಬೆಕ್ ಎಸ್. ನಾಲಬಂದ (ಬೆಳಗಾವಿ. ಕಾಲ: 16.25 ಸೆಕೆಂಡ್)–1, ರತನ್‌ಗೌಡ ಪಾಟೀಲ (ಬೆಂಗಳೂರು)–2, ಎಚ್.ಎಂ. ಹರೀಶ್ (ಮೈಸೂರು)–3.

ಲಾಂಗ್ ಜಂಪ್: ಪುರುಷೋತ್ತಮ್ (ಬೆಂಗಳೂರು. ಉದ್ದ: 7.37 ಮೀಟರ್)–1, ಬಿ. ನವೀನ್ (ಬೆಂಗಳೂರು)–2, ಜಫರ್‌ಖಾನ್ (ಬೆಳಗಾವಿ)–3; ಶಾಟ್‌ಪಟ್: ಪ್ರಜ್ವಲ್ ಶೆಟ್ಟಿ (ಉಡುಪಿ. ದೂರ: 16.16 ಮೀಟರ್)–1, ಎನ್. ಗಣೇಶ್ (ಉತ್ತರ ಕನ್ನಡ)–2, ಅಜಯ್ ಅಶೋಕ್ ಮುಜಾವರ್ (ಬೆಂಗಳೂರು)–3; 4X100 ರಿಲೇ: ಬೆಳಗಾವಿ ವಿಭಾಗ (ಕಾಲ: 44.08 ಸೆಕೆಂಡ್)–1, ಬೆಂಗಳೂರು ಗ್ರಾಮಾಂತರ ವಿಭಾಗ–2, ಕಲಬುರಗಿ ವಿಭಾಗ–3.

ಸೈಕ್ಲಿಂಗ್: 70 ಕಿ.ಮೀ. ಮಾಸ್ ಸ್ಟಾರ್ಟ್ ರೇಸ್: ಶ್ರೀನಿವಾಸ ರಜಪೂತ್ (ವಿಜಯಪುರ: ಕಾಲ: 1ಗಂಟೆ, 56 ನಿಮಿಷ)–1, ಯಲಗೂರಪ್ಪ ಗದ್ದಿ (ವಿಜಯಪುರ)–2, ರಾಜು ಸೊನ್ನದ (ವಿಜಯಪುರ)–3.

ಮಹಿಳೆಯರು: ಅಥ್ಲೆಟಿಕ್ಸ್: 200 ಮೀ. ಓಟ: ಶ್ರೇಯಾ ರಾಜೇಶ್ (ಬೆಂಗಳೂರು ನಗರ. ಕಾಲ: 24.89 ಸೆಕೆಂಡ್)–1, ಜ್ಯೋತಿಕಾ (ಬೆಂಗಳೂರು)–2, ಶ್ರಾವಣಿ (ದಕ್ಷಿಣ ಕನ್ನಡ)–3; 800 ಮೀ. ಓಟ: ರೇಖಾ ಪಿರೋಜಿ (ದಕ್ಷಿಣ ಕನ್ನಡ. ಕಾಲ: 2ನಿಮಿಷ, 15.69 ಸೆಕೆಂಡ್)–1, ಶಿಲ್ಪಾ ಹೊಸಮನಿ (ಬೆಳಗಾವಿ)–2, ಅಕ್ಷರಾ (ಬೆಳಗಾವಿ)–3; 100 ಮೀ. ಹರ್ಡಲ್ಸ್: ಶ್ರೇಯಾ ರಾಜೇಶ್ (ಬೆಂಗಳೂರು ನಗರ. ಕಾಲ: 14.31 ಸೆಕೆಂಡ್)–1, ಆರ್.ಜಿ. ದೀಕ್ಷಿತಾ (ದಕ್ಷಿಣ ಕನ್ನಡ)–2, ಅಕ್ಷತಾ (ಉಡುಪಿ)–3; 4X100 ರಿಲೇ: ಬೆಂಗಳೂರು ನಗರ ವಿಭಾಗ (ಕಾಲ: 48.79 ಸೆಕೆಂಡ್)–1, ಬೆಳಗಾವಿ ವಿಭಾಗ–2, ಕಲಬುರಗಿ ವಿಭಾಗ–3.

ಲಾಂಗ್ ಜಂಪ್: ಶ್ರೀದೇವಿಕಾ ಶೆಟ್ಟಿ (ಉಡುಪಿ. ಉದ್ದ: 5.72 ಮೀ)–1, ಐಶ್ವರ್ಯ ಪಾಟೀಲ (ಉಡುಪಿ)–2, ಜಿ. ಮೋನಿಕಾ (ಬೆಂಗಳೂರು)–3; ಶಾಟ್‌ಟಪ್: ಟಿ. ನಿವೇದಿತಾ (ಬೆಂಗಳೂರು. ದೂರ: 14.15 ಮೀ.)–1, ಎಂ. ಸಂಜನಾ ರೆಡ್ಡಿ (ಬೆಂಗಳೂರು)–2, ಬಿ. ಸುಷ್ಮಾ (ದಕ್ಷಿಣ ಕನ್ನಡ)–3.

ಸೈಕ್ಲಿಂಗ್: 30 ಕಿ.ಮೀ. ರೇಸ್: ಗ್ಲಿಯೊನಾ ಏಂಜಲ್ ಡಿಸೋಜ (ಉಡುಪಿ. ಕಾಲ: 1ಗಂಟೆ, 4 ನಿಮಿಷ, 35 ಸೆಕೆಂಡ್)–1, ಕೀರ್ತಿ ನಾಯಕ್ (ಬಾಗಲಕೋಟೆ)–2, ಕಿಯಾನ (ಬೆಂಗಳೂರು)–3.

ಈಜು ಸ್ಪರ್ಧೆಯಲ್ಲಿ ಬೆಂಗಳೂರು ಪಾರಮ್ಯ

ಧೋನೀಶ್, ಲಕ್ಷ್ಯಾ–ಹಿತೈಷಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಮಹಿಳೆಯರ 200 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನ ಗೆದ್ದ ಬೆಂಗಳೂರಿನ ಲಕ್ಷ್ಯಾ ಶಿವಾನಂದ್ ಪ್ರಜಾವಾಣಿ ಚಿತ್ರ

ಮೈಸೂರು: ಬೆಂಗಳೂರಿನ ಧೋನೀಶ್ ಅವರು ಬುಧವಾರ ಇಲ್ಲಿ ನಡೆದ ದಸರಾ ಕ್ರೀಡಾಕೂಟದ ಈಜು ಸ್ಪರ್ಧೆಯ ಪುರುಷರ ವಿಭಾಗದಲ್ಲಿ 15 ಅಂಕಗಳೊಂದಿಗೆ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಲಕ್ಷ್ಯಾ ಶಿವಾನಂದ್ ಹಾಗೂ ವಿ. ಹಿತೈಷಿ ತಲಾ 16 ಅಂಕಗಳೊಂದಿಗೆ ಚಾಂಪಿಯನ್ ಪ್ರಶಸ್ತಿ ಹಂಚಿಕೊಂಡರು.

2ನೇ ದಿನದ ಫಲಿತಾಂಶ: ಪುರುಷರು: 100 ಮೀ. ಫ್ರೀಸ್ಟೈಲ್: ಧೋನೀಶ್ (ಬೆಂಗಳೂರು. ಕಾಲ: 54.28 ಸೆಕೆಂಡ್)–1, ಅನೀಶ್ ಕೋರೆ (ಬೆಂಗಳೂರು)–2, ವಿ.ಎಸ್. ದಿಗಂತ್ (ದಕ್ಷಿಣ ಕನ್ನಡ)–3; 200 ಮೀ. ಫ್ರೀಸ್ಟೈಲ್: ಧೋನೀಶ್ (ಬೆಂಗಳೂರು. ಕಾಲ: 1ನಿಮಿಷ, 59.95 ಸೆಕೆಂಡ್)–2, ಅನೀಶ್ ಕೋರೆ (ಬೆಂಗಳೂರು)–2, ದರ್ಶನ್ ವರೂರು (ಬೆಳಗಾವಿ)–3; 200 ಮೀ. ಬ್ರೆಸ್ಟ್‌ಸ್ಟ್ರೋಕ್: ಸಾಯಿಷ್ ಕಿಣಿ (ಬೆಂಗಳೂರು. ಕಾಲ: 2ನಿಮಿಷ, 35.85 ಸೆಕೆಂಡ್)–1, ಸೂರ್ಯ ಜೋಯೆಪ್ಪ (ಬೆಂಗಳೂರು)–2, ತನುಜ್ ಸಿಂಗ್ (ಬೆಳಗಾವಿ)–3.

ಮಹಿಳೆಯರು: 100 ಮೀ. ಫ್ರೀಸ್ಟೈಲ್: ಪಿ. ಚರಿತಾ (ಬೆಂಗಳೂರು. ಕಾಲ: 1 ನಿಮಿಷ, 1.87 ಸೆಕೆಂಡ್)–1, ತಿಸ್ಯೆಯ ಸೋನಾರ್ (ಬೆಂಗಳೂರು)–2, ಜಿ.ಜೆ. ಲಿಪಿಕಾ ದೇವ್ (ಬೆಂಗಳೂರು ಗ್ರಾಮಾಂತರ)–3; 200 ಮೀ. ಫ್ರೀ ಸ್ಟೈಲ್ : ತಿಸ್ಯೆಯ ಸೋನಾರ್ (ಬೆಂಗಳೂರು. ಕಾಲ: 2ನಿಮಿಷ, 17.95 ಸೆಕೆಂಡ್)–1, ಪಿ. ಚರಿತಾ (ಬೆಂಗಳೂರು)–2, ಜಿ.ಜೆ. ಲಿಪಿಕಾ ದೇವ್ (ಬೆಂಗಳೂರು ಗ್ರಾಮಾಂತರ)–3; 100 ಮೀ. ಬ್ಯಾಕ್‌ಸ್ಟ್ರೋಕ್: ಕೆ.ಆರ್. ಶ್ರುತಿ (ಬೆಂಗಳೂರು. ಕಾಲ: 1ನಿಮಿಷ, 10.60 ಸೆಕೆಂಡ್)–1, ತನ್ಮಯಿ ಧರ್ಮೇಶ್ (ಬೆಂಗಳೂರು)–2, ವೇದಾ ವೈಭವ್ (ಬೆಳಗಾವಿ)–3. 200 ಮೀ. ಬ್ರೆಸ್ಟ್‌ಸ್ಟ್ರೋಕ್: ಲಕ್ಷ್ಯಾ ಶಿವಾನಂದ (ಬೆಂಗಳೂರು. ಕಾಲ: 2ನಿಮಿಷ, 50.28 ಸೆಕೆಂಡ್)–1, ವಿ. ಹಿತೈಷಿ (ಬೆಂಗಳೂರು)–2, ಸಿದ್ಧಿ ಶೆಟ್ಟಿ (ದಕ್ಷಿಣ ಕನ್ನಡ)–3.

ಗ್ಲೋಬಲ್ ಚೆಸ್ ಲೀಗ್: ಆಟಗಾರರ ಆಯ್ಕೆ ನಾಳೆ



ಮುಂಬೈ (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಗ್ಲೋಬಲ್ ಚೆಸ್ ಲೀಗ್ ಮೂರನೇ ಆವೃತ್ತಿಯಲ್ಲಿ ಐಕಾನ್ ಆಟಗಾರರ ಪಟ್ಟಿಯಲ್ಲಿದ್ದಾರೆ. ಇದೇ ಶುಕ್ರವಾರ ಫ್ರಾಂಚೈಸಿಗಳಿಂದ ಆಟಗಾರರ ಆಯ್ಕೆ ನಡೆಯಲಿದೆ. ವಿಶ್ವನಾಥನ್ ಆನಂದ್, ಆರ್. ಪ್ರಜ್ಞಾನಂದ ಅವರೂ ಪಟ್ಟಿಯಲ್ಲಿದ್ದಾರೆ.

ಈ ಹಿಂದಿನ ಎರಡು ಆವೃತ್ತಿಗಳಲ್ಲಿ ಭಾಗವಹಿಸಿದ್ದ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಈ ಬಾರಿ ಹಿಂದೆಸರಿದಿದ್ದಾರೆ. ಮೂರನೇ ವರ್ಷದ ಗ್ಲೋಬಲ್ ಚೆಸ್ ಲೀಗ್ (ಜಿಸಿಎಲ್) ಚೆನ್ನೈನಲ್ಲಿ ಡಿಸೆಂಬರ್ 13 ರಿಂದ 24ರವರೆಗೆ ನಡೆಯಲಿದೆ. ಆರು ಫ್ರಾಂಚೈಸಿಗಳಿವೆ.

ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ (ಹಾಲಿ ಚಾಂಪಿಯನ್), ಪಿಬಿಜಿ ಅಲಾಸ್ಕನ್ ನೈಟ್ಸ್, ಅಪ್‌ಗ್ರಾಡ್ ಮುಂಬಾ ಮಾಸ್ಟರ್ಸ್, ಗಂಗಾಸ್ ಗ್ರ್ಯಾಂಡ್‌ಮಾಸ್ಟರ್ಸ್, ಅಲ್ಪೈನ್ ಎಸ್‌ಜಿ ಪೈಪರ್ಸ್ ಮತ್ತು ಅಮೆರಿಕನ್ ಗ್ಯಾಂಬಿಟ್ಸ್ ಕಣದಲ್ಲಿವೆ.

ಟೆಕ್ ಮಹಿಂದ್ರ ಮತ್ತು ಫಿಡೆ ಸೇರಿಕೊಂಡು ಜಿಸಿಎಲ್‌ನ ನಡೆಸುತ್ತಿವೆ.

ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್: ಧ್ರುವ ಅಜೇಯ ಅರ್ಧಶತಕ

ಕರುಣ್ ಶತಕ; ಫೈನಲ್‌ಗೆ ಕೆಎಸ್‌ಸಿಎ

ಪ್ರಜಾವಾಣಿ ವಾರ್ತೆ



ಗೋವಾ ತಂಡದ ವಿರುದ್ಧ ಶತಕ ಗಳಿಸಿದ ಕರ್ನಾಟಕ ಸೆಕ್ರೆಟರೀಸ್ ತಂಡದ ಕರುಣ್ ನಾಯರ್ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಆಲೂರು (ಬೆಂಗಳೂರು): ಮುಂದಿನ ತಿಂಗಳು ಆರಂಭವಾಗುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ತಂಡದಲ್ಲಿ ಕಣಕ್ಕಿಳಿಯಲಿರುವ ಕರುಣ್ ನಾಯರ್ ಕ್ಯಾಪ್ಟನ್ ತಿಮ್ಮಪ್ಪಯ್ಯ ಟೂರ್ನಿಯ ಸೆಮಿಫೈನಲ್‌ನಲ್ಲಿ ಅಜೇಯ ಶತಕ ಬಾರಿಸಿದರು. ಅದರೊಂದಿಗೆ ಅವರು ತಮ್ಮ ಲಯಕ್ಕೆ ಮರಳಿದ್ದಾರೆ.

ನಗರದ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕ ಕಾರ್ಯದರ್ಶಿ ಇಲೆವನ್ ತಂಡವು 6 ವಿಕೆಟ್‌ಗಳಿಂದ ಜಯಿಸಲು ಕೂಡ ಕರುಣ್ (ಅಜೇಯ 151; 169ಎ, 4X12, 6X2) ಅವರ ಶತಕ ಕಾರಣವಾಯಿತು. ಅವರಿಗೆ ಪಿ.ಧ್ರುವ (ಅಜೇಯ 65; 102ಎ, 4X5) ಉತ್ತಮ ಜೊತೆ ನೀಡಿದರು.

ಪಂದ್ಯದ ಕೊನೆಯ ದಿನವಾದ ಬುಧವಾರ ಗೋವಾ ತಂಡವು ಕೆಎಸ್‌ಸಿಎಗೆ 265 ರನ್‌ಗಳ ಗುರಿಯೊಡ್ಡಿತು. ಆದರೆ ಆತಿಥೇಯ ತಂಡದ ಆರಂಭ ಚೆನ್ನಾಗಿರಲಿಲ್ಲ. ಆರಂಭಿಕ ಓವರ್‌ಗಳಲ್ಲಿ ರನ್ ಗಳಿಸಲೂ ಬ್ಯಾಟರ್‌ಗಳು ಪರದಾಡಿದರು. ಇದರಿಂದಾಗಿ 85 ರನ್‌ಗಳೀಗೆ 4 ವಿಕೆಟ್ ಪತನವಾದವು.ಗೋವಾ ತಂಡದ ದರ್ಶನ್ ಮಿಶಾಲ್ 3 ವಿಕೆಟ್ ಮತ್ತು ಮೋಹಿತ್ ರೇಡಕರ್ ಒಂದು ವಿಕೆಟ್ ಗಳಿಸಿದರು.


ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಅನುಭವಿ ಕರುಣ್ ಮತ್ತು ಧ್ರುವ ತಂಡವನ್ನು ಸೋಲಿನ ದವಡೆಯಿಂದ ಪಾರು ಮಾಡಿದರು. ಗೋವಾ ಬೌಲರ್‌ಗಳು ಇವರಿಬ್ಬರ ಆಟಕ್ಕೆ ನಿರುತ್ತರರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗೋವಾ: 94.4 ಓವರ್‌ಗಳಲ್ಲಿ 338. ಕರ್ನಾಟಕ: 97.1 ಓವರ್‌ಗಳಲ್ಲಿ 276. ಎರಡನೇ ಇನಿಂಗ್ಸ್: ಗೋವಾ: 89.2 ಓವರ್‌ಗಳಲ್ಲಿ 202. ಕರ್ನಾಟಕ ಕಾರ್ಯದರ್ಶಿಗಳ ಇಲೆವನ್: 66.4 ಓವರ್‌ಗಳಲ್ಲಿ 4ಕ್ಕೆ266 (ಕರುಣ್ ನಾಯರ್ ಅಜೇಯ 151, ಪಿ. ಧ್ರುವ ಅಜೇಯ 65,ದರ್ಶನ್ ಮಿಶಾಲ್ 106ಕ್ಕೆ3)

ಫಲಿತಾಂಶ: ಕೆಎಸ್‌ಸಿಎ ಕಾರ್ಯದರ್ಶಿ ಇಲವೆನ್ ತಂಡಕ್ಕೆ 6 ವಿಕೆಟ್‌ಗಳ ಜಯ ಮತ್ತು ಫೈನಲ್‌ಗೆ ಅರ್ಹತೆ.

ಯೂತ್ ಏಕದಿನ ಸರಣಿ: ಕೈವಶ ಮಾಡಿಕೊಂಡ ಭಾರತ ಯುವಪಡೆ

ಬೆಳಗಿದ ಸೂರ್ಯವಂಶಿ; ಮಿಂಚಿದ ಮ್ಹಾತ್ರೆ



ಆಯುಷ್ ಮ್ಹಾತ್ರೆ



ವೈಭವ್ ಸೂರ್ಯವಂಶಿ

ಬ್ರಿಸ್ಬೇನ್ (ಪಿಟಿಐ): ಉದಯೋನ್ಮುಖ ಪ್ರತಿಭೆ ವೈಭವ್ ಸೂರ್ಯವಂಶಿ ಅವರ ಅಮೋಘ ಅರ್ಧಶತಕ ಹಾಗೂ ಆಯುಷ್ ಮ್ಹಾತ್ರೆ ಅವರ ಆಫ್‌ಸ್ಪಿನ್ ದಾಳಿಯಿಂದ ಭಾರತ 19 ವರ್ಷದೊಳಗಿನವರ ತಂಡವು ‘ಯೂತ್ ಏಕದಿನ ಕ್ರಿಕೆಟ್’ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಜಯಿಸಿತು.

ಬುಧವಾರ ಇಯಾನ್ ಹೀಲಿ ಓವಲ್ ಕ್ರೀಡಾಂಗಣದಲ್ಲಿ ನಡೆದ ಎರಡನೇ ಪಂದ್ಯದಲ್ಲಿ 51 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 2–0ಯಿಂದ ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ಯುವ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತದ ಆರಂಭಿಕ ಬ್ಯಾಟರ್ ವೈಭವ್ (70; 68ಎ) ಮತ್ತು ವಿಹಾನ್ ಮಲ್ಹೋತ್ರಾ (70; 74ಎ) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 117 ರನ್ ಸೇರಿಸಿದರು. ಅವರಲ್ಲದೇ ಅಭಿಗ್ಯಾನ್ ಕುಂದು (71; 64ಎ) ಕೂಡ ಅರ್ಧಶತಕ ಗಳಿಸಿದರು. ಇದರಿಂದಾಗಿ ಭಾರತ ಯುವ ತಂಡವು 49.4 ಓವರ್‌ಗಳಲ್ಲಿ 300 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಯುವ ಬಳಗವನ್ನು 47.2 ಓವರ್‌ಗಳಲ್ಲಿ 249 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಭಾರತ 19 ವರ್ಷದೊಳಗಿನವರು ಯಶಸ್ವಿಯಾದರು. ಮಧ್ಯಮ ಕ್ರಮಾಂಕದ ಬ್ಯಾಟರ್ ಜೈಡನ್ ಡ್ರೇಪರ್ (102; 72ಎ, 4X8, 6X5) ಅವರು ಶತಕ ಹೊಡೆದರೂ ಆಸ್ಟ್ರೇಲಿಯಾ ತಂಡಕ್ಕೆ ಜಯಿಸಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಭಾರತ 19 ವರ್ಷದೊಳಗಿನವರು: 49.4 ಓವರ್‌ಗಳಲ್ಲಿ 300 (ವೈಭವ್ ಸೂರ್ಯವಂಶಿ 70, ವಿಹಾನ್ ಮಲ್ಹೋತ್ರಾ 70, ವೇದಾಂತ್ ತ್ರಿವೇದಿ 26, ಅಭಿಗ್ಯಾನ್ ಕುಂದು 71, ವಿಲ್ ಬೈರೊಮ್ 47ಕ್ಕೆ3, ಯಶ್ ದೇಶಮುಖ 31ಕ್ಕೆ2) ಆಸ್ಟ್ರೇಲಿಯಾ 19ವರ್ಷದೊಳಗಿನವರು: 47.2 ಓವರ್‌ಗಳಲ್ಲಿ 249 (ಅಲೆಕ್ಸ್ ಟರ್ನರ್ 24, ಜೈಡನ್ ಡ್ರೇಪರ್ 107, ಆರ್ಯನ್ ಶರ್ಮಾ 38, ಕನಿಷ್ಕ ಚೌಹಾಣ್ 50ಕ್ಕೆ2, ಆಯುಷ್ ಮ್ಹಾತ್ರೆ 27ಕ್ಕೆ3)

ಫಲಿತಾಂಶ: ಭಾರತ 19 ವರ್ಷದೊಳಗಿನವರ ತಂಡಕ್ಕೆ 51 ರನ್ ಜಯ. ಸರಣಿಯಲ್ಲಿ 2–0 ಮುನ್ನಡೆ.